f prajavani.net prajavani | ಬುಧವಾರ, ಏಪ್ರಿಲ್ 8, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 97 | ಪುಟ 16 | www.prajavani.net

ಫೈನಲ್‌ಗೆ ಮೀನಾಕ್ಷಿ

ಭಾರತದ ಮೀನಾಕ್ಷಿ ಹೂಡಾ ಅವರು ಏಷ್ಯಾ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ ಮಹಿಳೆಯರ 48 ಕೆ.ಜಿ. ವಿಭಾಗದಲ್ಲಿ ಮಂಗಳವಾರ ಫೈನಲ್ ಪ್ರವೇಶಿಸಿದರು

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 74,616 | ನಿಫ್ಟಿ 23,123 | $/₹ 93.06 | ಚಿನ್ನ (Std. 10g) ₹1,54,300 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,47,000 (ಬೆಂಗಳೂರು)

ಇರಾನ್ ಸಂಹಾರ: ಟ್ರಂಪ್ ಅಬ್ಬರ

ಹೊರ್ಮುಜ್ ಮುಕ್ತ: ವಿಶ್ವಸಂಸ್ಥೆ ನಿರ್ಣಯಕ್ಕೆ ಸೋಲು • ಖಾರ್ಗ್ ದ್ವೀಪದ ಮೇಲೆ ದಾಳಿ • ನಾಗರಿಕತೆಯ ನಾಶ: ಟ್ರಂಪ್ ಎಚ್ಚರಿಕೆ

ಟೆಹರಾನ್ ಮೇಲೆ ಅಮೆರಿಕ ಪಡೆಗಳು ಮಂಗಳವಾರ ದಾಳಿ ನಡೆಸಿದ ವೇಳೆ ದಟ್ಟ ಹೊಗೆ ಕಾಣಿಸಿಕೊಂಡಿತ್ತು ಎಎಫ್‌ಪಿ ಚಿತ್ರ

ದುಬೈ/ವಾಷಿಂಗ್ಟನ್ (ಎಪಿ/ರಾಯಿಟರ್ಸ್): ಒಪ್ಪಂದ ಮಾಡಿಕೊಳ್ಳಲು ಇರಾನ್‌ಗೆ ನೀಡಿದ್ದ ಗಡುವು ಸಮೀಪಿಸುತ್ತಿದ್ದಂತೆಯೇ 'ಇರಾನ್ ನಾಗರಿಕತೆಯನ್ನೇ ವಿನಾಶ ಮಾಡುತ್ತೇವೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಬ್ಬರಿಸಿದ್ದಾರೆ. ಇದರ ಬೆನ್ನಿಗೆ ತೈಲ ಘಟಕಗಳಿರುವ ಇರಾನ್‌ನ ಖಾರ್ಗ್ ದ್ವೀಪದ ಮೇಲೆ ಅಮೆರಿಕ-ಇಸ್ರೇಲ್ ಪಡೆಗಳು ದಾಳಿ ನಡೆಸಿವೆ.

ಟೆಹರಾನ್ ಹೊರವಲಯದ ವಸತಿ-ಪ್ರದೇಶಗಳನ್ನು ಗುರಿಯಾಗಿಸಿ ಅಮೆರಿಕ-ಇಸ್ರೇಲ್ ಪಡೆಗಳು ನಡೆಸಿದ ದಾಳಿಗಳಲ್ಲಿ 18 ಮಂದಿ ಮೃತಪಟ್ಟಿರುವುದಾಗಿ ಇರಾನ್ ಮಾಧ್ಯಮಗಳು ಮಂಗಳವಾರ ವರದಿ ಮಾಡಿವೆ. ಇರಾನ್‌ನ ರೆವಲ್ಯೂಷನರಿ ಗಾರ್ಡ್ ಕೋರ್ (ಐಆರ್‌ಜಿಸಿ) ಬಳಸುತ್ತಿದ್ದ ರೈಲು ಮಾರ್ಗ ಹಾಗೂ ಸೇತುವೆಗಳ ಮೇಲೂ ಬಾಂಬ್ ಸ್ಫೋಟಿಸಲಾಗಿದೆ.

ಈ ನಡುವೆ, ಹೊರ್ಮುಜ್ ಜಲಸಂಧಿಯನ್ನು ಮತ್ತೆ ತೆರೆಯುವ ಉದ್ದೇಶದಿಂದ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಕೈಗೊಂಡಿದ್ದ ನಿರ್ಣಯಕ್ಕೆ ಸೋಲಾಗಿದೆ. ಮಂಡಳಿಯ ಸದಸ್ಯ ರಾಷ್ಟ್ರಗಳಾದ ರಷ್ಯಾ ಹಾಗೂ ಚೀನಾ ತಮ್ಮ ವಿಟೊ ಅಧಿಕಾರ ಬಳಸಿ, ಈ ನಿರ್ಣಯ ಅಂಗೀಕಾರವಾಗದಂತೆ ನೋಡಿಕೊಂಡವು.

'ಒಪ್ಪಂದಕ್ಕೆ ಇರಾನ್ ಸಹಿ ಹಾಕಿ ಹೊರ್ಮುಜ್ ಜಲಸಂಧಿಯನ್ನು ಹಡಗುಗಳ ಸಂಚಾರಕ್ಕೆ ಮುಕ್ತಗೊಳಿಸಬೇಕು. ಇಲ್ಲದೇ ಹೋದಲ್ಲಿ ಮತ್ತೆ ಸುಧಾರಿಸಿಕೊಳ್ಳಲು ಸಾಧ್ಯವಾಗದ ರೀತಿಯಲ್ಲಿ ಇರಾನ್ ಅನ್ನು ನಾಶ ಮಾಡಲಾಗುವುದು. ಈ ರೀತಿ ಸಂಭವಿಸುವುದನ್ನು ನಾನು ಬಯಸುವುದಿಲ್ಲ. ಆದರೆ, ಬಹುಶಃ ಇದು ಘಟಿಸಲಿದೆ' ಎಂದು ಟ್ರಂಪ್ ಅವರು ತಮ್ಮ ಒಡೆತನದ ಸಾಮಾಜಿಕ ಮಾಧ್ಯಮ 'ಟ್ರೂತ್ ಸೋಷಿಯಲ್'ನಲ್ಲಿ ಬರೆದು-ಕೊಂಡಿದ್ದಾರೆ.

▶12

ದಿನದ ಪ್ರಮುಖ ಬೆಳವಣಿಗೆಗಳು

ಆತಂಕ ಹೆಚ್ಚಿಸಿದ ಕೊನೆಯ ಕ್ಷಣಗಳು

- ಸೌದಿ ಅರೇಬಿಯಾದ ಜುಬೇಲ್ ಕೈಗಾರಿಕಾ ನಗರದಲ್ಲಿರುವ ಪೆಟ್ರೋಕೆಮಿಕಲ್ ಸಂಕೀರ್ಣದ ಮೇಲೆ ಇರಾನ್ ಪಡೆಗಳು ವಾಯು ದಾಳಿ ನಡೆಸಿವೆ ಎಂದು ಇರಾನ್‌ನ ಫಾರ್ಸ್ ಸುದ್ದಿಸಂಸ್ಥೆ ವರದಿ ಮಾಡಿದೆ. ಈ ಕುರಿತು ಸೌದಿ ಅರೇಬಿಯಾ ಸರ್ಕಾರ ಪ್ರತಿಕ್ರಿಯಿಸಿಲ್ಲ
- ಯುದ್ಧ ಆರಂಭಗೊಂಡಾಗಿನಿಂದ ಇರಾನ್ ಪಡೆಗಳು 20ಕ್ಕೂ ಹೆಚ್ಚು ಹಡಗುಗಳ ಮೇಲೆ ದಾಳಿ ನಡೆಸಿವೆ ಎಂದು ಬ್ರಿಟನ್ ಹೇಳಿದೆ
- ಟರ್ಕಿಯ ಇಸ್ತಾನ್‌ಬುಲ್‌ನಲ್ಲಿರುವ ಇಸ್ರೇಲ್ ಕಾನ್ಸುಲೇಟ್ ಕಚೇರಿ ಬಳಿ ಸಂಭವಿಸಿದ ಸಂಘರ್ಷದಲ್ಲಿ ಇಬ್ಬರು ಮೃತಪಟ್ಟಿದ್ದಾರೆ
- ಇಸ್ರೇಲ್‌ನ ಕರಾವಳಿ ಪಟ್ಟಣ ನಹಾರಿಯಾ ಮೇಲೆ ಇರಾನ್ ಕ್ಷಿಪಣಿ ದಾಳಿ ನಡೆಸಿದ್ದು, ಮಹಿಳೆ ಸೇರಿ ಮೂವರು ಗಾಯಗೊಂಡಿದ್ದಾರೆ

'ಇಂಧನ ಸಿಗದಂತೆ ಮಾಡುತ್ತೇವೆ'

'ದೇಶದ ವಿದ್ಯುತ್ ಸ್ಥಾವರಗಳು ಹಾಗೂ ಸೇತುವೆಗಳ ಮೇಲೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ದಾಳಿ ನಡೆಸಿದಲ್ಲಿ, ಅಮೆರಿಕ ಹಾಗೂ ಈ ಭಾಗದಲ್ಲಿನ ಅದರ ಮಿತ್ರ ರಾಷ್ಟ್ರಗಳಿಗೆ ಹಲವು ವರ್ಷ ತೈಲ ಹಾಗೂ ಅನಿಲ ಸಿಗದಂತೆ ಮಾಡುತ್ತೇವೆ' ಎಂದು ಇರಾನ್‌ನ ರೆವಲ್ಯೂಷನರಿ ಗಾರ್ಡ್ (ಐಆರ್‌ಜಿಸಿ) ಮಂಗಳವಾರ ಎಚ್ಚರಿಸಿದೆ.

ಇದೇ ವೇಳೆ ಕೊಲ್ಲಿ ರಾಷ್ಟ್ರಗಳಿಗೂ ಐಆರ್‌ಜಿಸಿ ಎಚ್ಚರಿಕೆ ನೀಡಿದೆ.

'ಈವರೆಗೆ ನಾವು ಬಹಳ ಸಂಯಮ ಕಾಯ್ದುಕೊಂಡಿದ್ದೇವೆ. ಆಯ್ದ ತಾಣಗಳ ಮೇಲೆ ಮಾತ್ರ ಪ್ರತಿ ದಾಳಿ ನಡೆಸಲಾಗುತ್ತಿತ್ತು. ಇನ್ನು ಮುಂದೆ ಇಂತಹ ಯಾವುದೇ ಪರಿಗಣನೆಗಳು ಇರುವುದಿಲ್ಲ' ಎನ್ನುವ ಮೂಲಕ ಐಆರ್‌ಜಿಸಿ ತಕ್ಕ ಪ್ರತ್ಯುತ್ತರದ ಎಚ್ಚರಿಕೆ ನೀಡಿದೆ ಎಂದು ಇರಾನ್ ಮಾಧ್ಯಮಗಳು ವರದಿ ಮಾಡಿವೆ.

ಎಚ್ಚರಿಕೆ: 'ಇರಾನ್‌ನ ವಿದ್ಯುತ್ ಸ್ಥಾವರಗಳ ಮೇಲೆ ಅಮೆರಿಕ ದಾಳಿ ನಡೆಸಿದಲ್ಲಿ, ಇರಾನ್ ಕೂಡ ಪ್ರತಿದಾಳಿಗಳನ್ನು ನಡೆಸಲಿದೆ. ಇದರಿಂದ ಸೌದಿ ಅರೇಬಿಯಾ ಸೇರಿ ಇಡೀ ಪ್ರದೇಶವೇ ಕತ್ತಲಲ್ಲಿ ಮುಳುಗಲಿದೆ ಎಂಬ ಇರಾನ್‌ನ ಸಂದೇಶವನ್ನು ಅಮೆರಿಕಕ್ಕೆ ಕತಾರ್ ತಿಳಿಸಿದೆ' ಎಂದು ಇರಾನ್‌ನ ಹಿರಿಯ ಅಧಿಕಾರಿಗಳು ಹೇಳಿದ್ದಾರೆ.

'ಅಣ್ವಸ್ತ್ರ ಬಳಕೆ ಇಲ್ಲ'

'ಇರಾನ್ ವಿರುದ್ಧ ಅಮೆರಿಕ ನಡೆಸುತ್ತಿರುವ ಸೇನಾ ಕಾರ್ಯಾಚರಣೆ ವೇಳೆ ಅಣ್ವಸ್ತ್ರಗಳನ್ನು ಬಳಸುವ ಯಾವುದೇ ಯೋಜನೆ ಇಲ್ಲ' ಎಂದು ಶ್ವೇತಭವನ ಹೇಳಿದೆ.

'ಈ ವರೆಗೆ ಕೆಲ ಶಸ್ತ್ರಾಸ್ತ್ರಗಳನ್ನು ಅಮೆರಿಕ ಬಳಸಿಲ್ಲ. ಇವುಗಳನ್ನು ಬಳಕೆ ಮಾಡುವ ಕುರಿತು ಈ ವರೆಗೆ ನಿರ್ಧರಿಸಿಲ್ಲ' ಎಂದು ಅಮೆರಿಕ ಉಪಾಧ್ಯಕ್ಷ ಜೆ.ಡಿ.ವಾನ್ಸ್ ಹೇಳಿದ್ದರು. ವಾನ್ಸ್ ಹೇಳಿಕೆ ಉಲ್ಲೇಖಿಸಿದ್ದ ಮಾಜಿ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್, 'ಟ್ರಂಪ್ ಅವರು ಅಣ್ವಸ್ತ್ರ ಬಳಸಬಹುದು ಎಂಬುದನ್ನು ವಾನ್ಸ್ ಹೇಳಿಕೆ ಸೂಚಿಸುತ್ತದೆ' ಎಂದು ಸಾಮಾಜಿಕ ಮಾಧ್ಯಮದಲ್ಲಿ ಬರೆದುಕೊಂಡಿದ್ದರು. ಇದಕ್ಕೆ ಈ ರೀತಿ ಹೇಳಿದೆ.

ದಾವಣಗೆರೆ ದಕ್ಷಿಣ, ಬಾಗಲಕೋಟೆ: ಏ.9ರಂದು ಮತದಾನ

ಬಹಿರಂಗ ಪ್ರಚಾರ ಅಂತ್ಯ

ಪ್ರಜಾವಾಣಿ ವಾರ್ತೆ

ದಾವಣಗೆರೆ/ಬಾಗಲಕೋಟೆ: ಉಪ ಚುನಾವಣೆ ನಡೆಯುತ್ತಿರುವ ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಕ್ಷೇತ್ರದಲ್ಲಿ ಬಹಿರಂಗ ಪ್ರಚಾರಕ್ಕೆ ಮಂಗಳವಾರ ಸಂಜೆ ತೆರೆಬಿದ್ದಿತು.

ಉಭಯ ಕ್ಷೇತ್ರಗಳಲ್ಲಿ ಗುರುವಾರ (ಏ. 9) ಮತದಾನ ನಡೆಯಲಿದೆ. ಅದಕ್ಕೆ ಮುನ್ನಾದಿನವಾದ ಬುಧವಾರ ಅಭ್ಯರ್ಥಿಗಳು, ಬೆಂಬಲಿಗರು ಮತದಾರರ ಮನವೊಲಿಸಲು ಮನೆ ಮನೆಗೆ ತೆರಳಿ ಪ್ರಚಾರ ನಡೆಸುವ ಕಸರತ್ತು ಮಾಡುತ್ತಿದ್ದಾರೆ.

ಆಡಳಿತಾರೂಢ ಕಾಂಗ್ರೆಸ್ ಮತ್ತು ವಿರೋಧಪಕ್ಷ ಬಿಜೆಪಿಗೆ ಈ ಚುನಾವಣೆ ಪ್ರತಿಷ್ಠೆಯ ಪ್ರಶ್ನೆಯಾಗಿದೆ. ಕಾಂಗ್ರೆಸ್‌ಗೆ ಎರಡೂ ಕ್ಷೇತ್ರ ಉಳಿಸಿಕೊಳ್ಳುವ ಸವಾಲು ಇದೆ. ಉಭಯ ಪಕ್ಷಗಳು ಮುಖಂಡರು 10 ದಿನಗಳಿಂದ ಕ್ಷೇತ್ರದಲ್ಲಿ ಬೀಡುಬಿಟ್ಟಿದ್ದು, ಅಬ್ಬರದ ಪ್ರಚಾರ ನಡೆಸಿದ್ದರು.

ದಕ್ಷಿಣ ವಿಧಾನಸಭಾ ಕ್ಷೇತ್ರದ ಕಣದಲ್ಲಿ 25 ಅಭ್ಯರ್ಥಿಗಳು ಇದ್ದಾರೆ. ಕಾಂಗ್ರೆಸ್ –ಬಿಜೆಪಿ ನಡುವೆ ನೇರ ಸ್ಪರ್ಧೆ ಇದೆ. ಬಹಿರಂಗ ಪ್ರಚಾರದ ಕೊನೆಯ ದಿನ ಕಾಂಗ್ರೆಸ್ ಭರಾಟೆ ಜೋರಾಗಿತ್ತು.

ಮಾಜಿ ಕ್ರಿಕೆಟಿಗ ಹಾಗೂ ತೆಲಂಗಾಣ ಸಚಿವ ಮೊಹಮ್ಮದ್ ಅಜರುದ್ದೀನ್ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಸಚಿವರಾದ ಕೆ.ಎಚ್.ಮುನಿಯಪ್ಪ, ಮಂಕಾಳ ವೈದ್ಯ, ಎಂ.ಸಿ.ಸುಧಾಕರ್ ಅವರೊಂದಿಗೆ ರೋಡ್ ಶೋ ನಡೆಸಿ ಮತಯಾಚನೆ ಮಾಡಿದರು.

ಪ್ರಚಾರದ ಕಾವು ಹೆಚ್ಚಿಸಿದ ನಾಯಕರು: ಬಾಗಲಕೋಟೆ ಕ್ಷೇತ್ರದಲ್ಲಿ ಕಾಂಗ್ರೆಸ್, ಬಿಜೆಪಿ ನಡುವೆ ತುರುಸಿನ ಸ್ಪರ್ಧೆ ಇದೆ. ಎರಡೂ ಪಕ್ಷಗಳ ನಾಯಕರ ದಂಡೇ ಪ್ರಚಾರಕ್ಕಾಗಿ ಬಂದಿತ್ತು.

▶8

ಕೇರಳ, ಅಸ್ಸಾಂ, ಪುದುಚೆರಿಯಲ್ಲೂ ತೆರೆ

ನವದೆಹಲಿ (ಪಿಟಿಐ): ಕೇರಳ, ಅಸ್ಸಾಂ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶ ಪುದುಚೆರಿಯಲ್ಲಿ ವಿಧಾನಸಭಾ ಚುನಾವಣೆಯ ಬಹಿರಂಗ ಪ್ರಚಾರಕ್ಕೆ ಮಂಗಳವಾರ ತೆರೆಬಿದ್ದಿದೆ.

ಚುನಾವಣಾ ನೀತಿ ಸಂಹಿತೆಯ ಅನ್ವಯ ಕೇರಳ ಮತ್ತು ಪುದುಚೆರಿಯಲ್ಲಿ ಸಂಜೆ 6 ಗಂಟೆಗೆ ಬಹಿರಂಗ ಪ್ರಚಾರ ಕೊನೆಗೊಂಡರೆ, ಅಸ್ಸಾಂನಲ್ಲಿ ಸಂಜೆ 5 ಗಂಟೆಗೆ ಬಹಿರಂಗ ಪ್ರಚಾರ ಮುಕ್ತಾಯಗೊಂಡಿತು.

ಮೂರು ರಾಜ್ಯಗಳಲ್ಲಿ ಏಪ್ರಿಲ್ 9ರಂದು ಮತದಾನ ನಡೆಯಲಿದೆ.

ಮತದಾನೋತ್ತರ ಸಮೀಕ್ಷೆಗೆ ನಿರ್ಬಂಧ: ಏಪ್ರಿಲ್ 9ರ ಬೆಳಿಗ್ಗೆ 7 ಗಂಟೆಯಿಂದ ಏಪ್ರಿಲ್ 29ರ ಸಂಜೆ 6:30ರವರೆಗೆ 5 ವಿಧಾನಸಭೆಗಳ ಮತದಾನೋತ್ತರ ಸಮೀಕ್ಷೆಯನ್ನು ಮಾಡುವಂತಿಲ್ಲ ಮತ್ತು ಪ್ರಸಾರ ಮಾಡುವಂತಿಲ್ಲ ಎಂದು ಚುನಾವಣಾ ಆಯೋಗ ತಿಳಿಸಿದೆ.

ಈ ಅವಧಿಯಲ್ಲಿ ಸಮೀಕ್ಷೆ ನಡೆಸುವುದು ಅಥವಾ ಪ್ರಸಾರ ಮಾಡುವುದು ಕಾನೂನಿನ ಉಲ್ಲಂಘನೆಯಾಗಿದ್ದು, ಎರಡು ವರ್ಷಕ್ಕೂ ಅಧಿಕ ಜೈಲು ಶಿಕ್ಷೆ ಮತ್ತು ದಂಡ ವಿಧಿಸಲಾಗುವುದು ಎಂದು ಆಯೋಗ ಎಚ್ಚರಿಸಿದೆ.

ತಮಿಳುನಾಡಿನಲ್ಲಿ ಏ.23ರಂದು, ಪಶ್ಚಿಮಬಂಗಾಳದಲ್ಲಿ ಏ.23 ಮತ್ತು 29ರಂದು ಮತದಾನ ನಡೆಯಲಿದೆ.

ಪಂಚಮಸಾಲಿ ಶ್ರೀ ದೂರು-ಪ್ರತಿದೂರು

ಕೂಡಲಸಂಗಮ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಅವರು ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಿ ಮಹಿಳೆಯೊಬ್ಬರು ರಾಜ್ಯ ಮಹಿಳಾ ಆಯೋಗಕ್ಕೆ ದೂರು ಸಲ್ಲಿಸಿದ್ದಾರೆ. ಮಹಿಳೆ ಸೇರಿ ನಾಲ್ವರು ಹಣಕ್ಕಾಗಿ 'ಬ್ಲ್ಯಾಕ್‌ಮೇಲ್' ಮಾಡಿದ್ದಾರೆ ಎಂದು ಸ್ವಾಮೀಜಿಯವರು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಗೆ ದೂರು ಕೊಟ್ಟಿದ್ದಾರೆ.

ಲೈಂಗಿಕ ಕಿರುಕುಳದ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರು ನನಗೆ ದೈಹಿಕವಾಗಿ, ಮಾನಸಿಕವಾಗಿ ಹಾಗೂ ಲೈಂಗಿಕವಾಗಿ ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಿ ಬೆಂಗಳೂರಿನ ಮಹಿಳೆಯೊಬ್ಬರು ರಾಜ್ಯ ಮಹಿಳಾ ಆಯೋಗಕ್ಕೆ ಮಂಗಳವಾರ ದೂರು ನೀಡಿದ್ದಾರೆ.

'ಸ್ವಾಮೀಜಿ ಅವರು ನನ್ನ ಖಾಸಗಿ ವಿಡಿಯೊಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡುವುದಾಗಿ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದು, ಲೈಂಗಿಕವಾಗಿ ಸಹಕರಿಸುವಂತೆ ಒತ್ತಾಯಿಸುತ್ತಿದ್ದಾರೆ. ಆದ್ದರಿಂದ ಸ್ವಾಮೀಜಿಯ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ಸಂತ್ರಸ್ತೆಯು ಆಯೋಗಕ್ಕೆ ನೀಡಿರುವ ದೂರಿನಲ್ಲಿ ಮನವಿ ಮಾಡಿದ್ದಾರೆ.

ಈ ಪ್ರಕರಣ ಪರಿಶೀಲಿಸಿ, ಸಂತ್ರಸ್ತೆಗೆ ನ್ಯಾಯ ಹಾಗೂ ರಕ್ಷಣೆ ಒದಗಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ ಅವರು ಬೆಂಗಳೂರು ದಕ್ಷಿಣ ವಿಭಾಗದ ಡಿಸಿಪಿ ಹಾಗೂ ಬಾಗಲಕೋಟೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಪತ್ರ ಬರೆದಿದ್ದಾರೆ.

'₹3 ಕೋಟಿಗೆ ಬ್ಲ್ಯಾಕ್‌ಮೇಲ್'

ಪ್ರಜಾವಾಣಿ ವಾರ್ತೆ

ಬಸವ ಜಯ ಮೃತ್ಯುಂಜಯ ಸ್ವಾಮೀಜಿ

ವಿಜಯಪುರ: 'ಲೈಂಗಿಕ ದೌರ್ಜನ್ಯ ಆರೋಪ ಹೊರಿಸಿರುವ ಬೆಂಗಳೂರು ಮೂಲದ ಮಹಿಳೆ ಸೇರಿ ನಾಲ್ವರು ₹ 3 ಕೋಟಿ ಹಣಕ್ಕೆ ನನ್ನಲ್ಲಿ ಬೇಡಿಕೆ ಇಟ್ಟಿದ್ದರು' ಎಂದು ಆರೋಪಿಸಿ ಕೂಡಲಸಂಗಮ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಅವರು ಇಲ್ಲಿನ ಗ್ರಾಮೀಣ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

'ಹಣ ನೀಡದಿದ್ದರೆ ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಕೆಟ್ಟದಾಗಿ ಪ್ರಚಾರ ಮಾಡುತ್ತೇವೆ. ಅತ್ಯಾಚಾರದ ದೂರು ಹಾಕುವುದಾಗಿ ಬೆದರಿಕೆ ಹಾಕಿ, ನನ್ನ ತೇಜೋವಧೆ ಮಾಡಲಾಗಿದೆ' ಎಂದು ಏಪ್ರಿಲ್ 4ರಂದು ದಾಖಲಿಸಿರುವ ದೂರಿನಲ್ಲಿ ಸ್ವಾಮೀಜಿ ಆರೋಪಿಸಿದ್ದಾರೆ.

ದೂರಿನ ವಿವರ: '2 ರಿಂದ 3 ವರ್ಷಗಳ ಹಿಂದೆ ಬೆಂಗಳೂರಿನ ಮಹಿಳೆಯೊಬ್ಬರು ತನ್ನ ಸಹೋದರನ ಜೊತೆಗೂಡಿ ನನ್ನನ್ನು ಭೇಟಿ ಆಗಿದ್ದಳು. ತಾನೂ ಲಿಂಗಾಯತ ಸಮಾಜದವಳಾಗಿದ್ದು, ಪಂಚಮಸಾಲಿ ಹೋರಾಟ ಬೆಂಬಲಿಸುವುದಾಗಿ ಹೇಳಿದ್ದಳು. ಫೌಂಡೇಷನ್ ಮೂಲಕ ಬಡ ಹಾಗೂ ಅನಾಥ ಮಕ್ಕಳನ್ನು ನಾನು ಸಾಕುತ್ತಿದ್ದು, ಹಣ ನೀಡಬೇಕೆಂದು ಬೇಡಿಕೆ ಇಟ್ಟಿದ್ದಳು. ದಾನಿಗಳಿದ್ದರೆ ಸಹಾಯ ಮಾಡಿಸುವುದಾಗಿ ಹೇಳಿದ್ದೆ' ಎಂದು ದೂರಿನಲ್ಲಿ ವಿವರಿಸಿದ್ದಾರೆ.

▶7

ಚಿನಕುರುಳಿ ಪ್ರಕಾಶ್ ಶೆಟ್ಟಿ

₹31.28 ಕೋಟಿ ಅಕ್ರಮ ಆಸ್ತಿ 'ಲೋಕಾ' ದಾಳಿಯಲ್ಲಿ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಎಂಟು ಅಧಿಕಾರಿಗಳ ಮನೆಗಳ ಮೇಲೆ ಮಂಗಳವಾರ ದಾಳಿ ನಡೆಸಿರುವ ಲೋಕಾಯುಕ್ತ ಪೊಲೀಸರು ₹31.28 ಕೋಟಿ ಮೌಲ್ಯದ ಅಕ್ರಮ ಆಸ್ತಿಯನ್ನು ಪತ್ತೆ ಮಾಡಿದ್ದಾರೆ.

ಮೈಸೂರು, ಬೆಳಗಾವಿ, ಮಂಗಳೂರು, ಚಿತ್ರದುರ್ಗ, ಶಿವಮೊಗ್ಗ, ಬಳ್ಳಾರಿ, ಬೀದರ್ ಮತ್ತು ಕಲಬುರಗಿಯ ಒಟ್ಟು 35 ಸ್ಥಳಗಳಲ್ಲಿ ದಾಳಿ ನಡೆಸಿದ್ದರು. ಈ ವೇಳೆ ಒಟ್ಟು ₹36.92 ಕೋಟಿ ಮೌಲ್ಯದಷ್ಟು ಆಸ್ತಿ ಪತ್ತೆಯಾಗಿದ್ದು, ಈ ಪೈಕಿ ಅಕ್ರಮ ಆಸ್ತಿ ಮೊತ್ತವೇ ₹31.28 ಕೋಟಿಯಷ್ಟಿದೆ. ಚಿತ್ರದುರ್ಗ ನಿರ್ಮಿತಿ ಕೇಂದ್ರದ ಸಹಾಯಕ ಲೆಕ್ಕಾಧಿಕಾರಿ ಎಚ್.ಜಿ.ಸುಶೀಲಮ್ಮ ಮತ್ತು ಅವರ ಆಪ್ತರ ಮನೆಯ ಮೇಲೆ ನಡೆಸಿದ ದಾಳಿಯ ವೇಳೆ ₹8.20 ಕೋಟಿಯಷ್ಟು ಅಕ್ರಮ ಆಸ್ತಿ ಪತ್ತೆಯಾಗಿದೆ.

ಒಟ್ಟಾರೆಯಾಗಿ ಎಂಟೂ ಅಧಿಕಾರಿಗಳಿಗೆ ಸೇರಿದ ₹21.71 ಕೋಟಿ ಮೌಲ್ಯದಷ್ಟು ಸ್ಥಿರಾಸ್ತಿ ಮತ್ತು ₹15.21 ಕೋಟಿಯಷ್ಟು ಚರಾಸ್ತಿಯನ್ನು ಲೋಕಾಯುಕ್ತ ಪೊಲೀಸ್ ಮತ್ತು ಅಧಿಕಾರಿಗಳು ಪತ್ತೆ ಮಾಡಿದ್ದಾರೆ.

ವಿವರ ▶6

ಮಣಿಪುರ: ಬಾಂಬ್ ದಾಳಿಗೆ ಇಬ್ಬರು ಪುಟ್ಟ ಮಕ್ಕಳು ಬಲಿ

ಇಂಫಾಲ್, ಮಣಿಪುರ (ಪಿಟಿಐ): ಇಲ್ಲಿನ ವಿಷ್ಣುಪುರ ಜಿಲ್ಲೆಯಲ್ಲಿ ಸೋಮವಾರ ತಡರಾತ್ರಿ ಮನೆಯೊಂದರ ಮೇಲೆ ನಡೆದ ಬಾಂಬ್ ದಾಳಿಯಲ್ಲಿ ಇಬ್ಬರು ಮಕ್ಕಳು ಮೃತಪಟ್ಟಿದ್ದು, ತಾಯಿ ತೀವ್ರವಾಗಿ ಗಾಯಗೊಂಡಿದ್ದಾರೆ.

ಇದರ ಬೆನ್ನಲ್ಲೇ, ಸ್ಥಳೀಯರು ಬೀದಿಗಿಳಿದು ಪ್ರತಿಭಟನೆ ನಡೆಸಿದರು. ಪರಿಸ್ಥಿತಿ ನಿಯಂತ್ರಿಸಲು ಕೇಂದ್ರೀಯ ಮೀಸಲು ಪೊಲೀಸ್ ಪಡೆಯ (ಸಿಆರ್‌ಪಿಎಫ್) ಯೋಧರು ನಡೆಸಿದ ಗುಂಡಿನ ದಾಳಿಯಲ್ಲಿ ಇಬ್ಬರು ಪ್ರತಿಭಟನ-ಕಾರರು ಮೃತಪಟ್ಟಿದ್ದಾರೆ.

ಹತ್ಯೆ ಖಂಡಿಸಿ ಪ್ರತಿಭಟನಕಾರರು ಟ್ರಕ್‌ಗೆ ಬೆಂಕಿ ಹಚ್ಚಿದರು –ಪಿಟಿಐ ಚಿತ್ರ

ವಿವರ ▶7

ಕೇರಳದ ದೇಗುಲಗಳಿಗೆ ಅನಂತ್ ಅಂಬಾನಿ ₹18ಕೋಟಿ ದೇಣಿಗೆ

ರಾಜರಾಜೇಶ್ವರ ಮತ್ತು ಗುರುವಾಯೂರು ದೇವಸ್ಥಾನಗಳಿಗೆ ತಲಾ ₹3ಕೋಟಿ ಮೌಲ್ಯದ ಚೆಕ್ ಹಸ್ತಾಂತರ, ದೇಗುಲ ಜೀರ್ಣೋದ್ಧಾರ ಸೇರಿ ವಿವಿಧ ಅಭಿವೃದ್ಧಿಗೆ ₹12ಕೋಟಿ ನೆರವು

ಬೆಂಗಳೂರು : ದೇವರ ಸ್ವಂತ ನಾಡೆಂದು ಖ್ಯಾತಿ ಪಡೆದಿರುವ ಕೇರಳದ 2 ಪ್ರಮುಖ ದೇಗುಲಗಳ ಅಭಿವೃದ್ಧಿಗೆ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಕಾರ್ಯಕಾರಿ ನಿರ್ದೇಶಕ ಅನಂತ ಅಂಬಾನಿ 18ಕೋಟಿ ರೂ. ದೇಣಿಗೆ ಘೋಷಿಸಿದ್ದಾರೆ. ಪುರಾತನ ಕ್ಷೇತ್ರಗಳಾದ ರಾಜರಾಜೇಶ್ವರ ಮತ್ತು ಗುರುವಾಯೂರು ಕ್ಷೇತ್ರಗಳ ಅಭಿವೃದ್ಧಿಗೆ ತಲಾ 3ಕೋಟಿ ರೂ. ಚೆಕ್ ವಿತರಿಸಿದ್ದಲ್ಲದೇ, 12ಕೋಟಿ ರೂ. ವೆಚ್ಚದಲ್ಲಿ ಜೀರ್ಣೋದ್ಧಾರ ಸೇರಿ ವಿವಿಧ ಪ್ರಗತಿ ಕಾರ್ಯಗಳಿಗೆ ನೆರವು ಘೋಷಿಸಿದ್ದಾರೆ. ಆ ಮೂಲಕ ಧಾರ್ಮಿಕ ಕ್ಷೇತ್ರಗಳ ಅಭಿವೃದ್ಧಿಗೆ ತಮ್ಮ ಕೊಡುಗೆಯನ್ನು ದಾಖಲಿಸಿದ್ದಾರೆ. ದೇಗುಲಗಳಿಗೆ ಮಾತ್ರವಲ್ಲದೆ ವಂತಾರಾ ಮಾದರಿಯಲ್ಲಿ ಆನೆಗಳ ಆಶ್ರಯ ತಾಣ ಅಭಿವೃದ್ಧಿಗೂ ಕಾಯಕಲ್ಪ ರೂಪಿಸಿದ್ದಾರೆ. ಕಳೆದ ಏ.2ರಂದು ಕೈಗೊಂಡಿದ್ದ ಪ್ರವಾಸದ ವೇಳೆ ಅನಂತ್ ಅಂಬಾನಿ ದೇಗುಲಗಳಿಗೆ ಭೇಟಿ ನೀಡಿ ಅಭಿವೃದ್ಧಿ ಯೋಜನೆಗಳಿಗೆ ಧನಸಹಾಯ ಘೋಷಿಸಿದ್ದಾರೆ.

ರಾಜರಾಜೇಶ್ವರನ ಆಲಯದಲ್ಲಿ ಸಂಕಲ್ಪ: ಕೇರಳದ ಪುರಾತನ ರಾಜರಾಜೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿದ ಅನಂತ್ ಅಂಬಾನಿ ದೇವರ ದರ್ಶನ ಪಡೆದು ಸಾಂಪ್ರದಾಯಿಕ ವಿಧಿವಿಧಾನಗಳೊಂದಿಗೆ ಪೂಜೆ ಸಲ್ಲಿಸಿದರು. ಈ ವೇಳೆ ದೇವರಿಗೆ 'ಪೊನ್ನುಂಕುಡಂ' (ಚಿನ್ನದ ಕೊಡ), 'ಪಟ್ಟಂ', 'ತಾಳಿ', 'ನೆಯ್ಯಮೃತ' ಮತ್ತು 'ಅಶ್ವಮೇಧ ನಮಸ್ಕಾರ' ಎಂಬ ವಿಶೇಷ ಸೇವೆಗಳನ್ನು ಅರ್ಪಿಸಿದರು. ಜತೆಗೆ, ದೇವಸ್ಥಾನದ ಅಭಿವೃದ್ಧಿಗಾಗಿ ಅವರು ₹3 ಕೋಟಿ ಮೌಲ್ಯದ ಚೆಕ್‌ಅನ್ನು ದೇಣಿಗೆಯಾಗಿ ಹಸ್ತಾಂತರಿಸಿದರು. ಇದರೊಂದಿಗೆ, ದೇವಸ್ಥಾನದ ಸಮಗ್ರ ಜೀರ್ಣೋದ್ಧಾರಕ್ಕಾಗಿ ₹12 ಕೋಟಿಗಳ ಬೃಹತ್ ಯೋಜನೆಯನ್ನು ಕೈಗೆತ್ತಿಕೊಳ್ಳುವುದಾಗಿ ಭರವಸೆ ನೀಡಿದರು. ಈ ಯೋಜನೆಯ ಪ್ರಮುಖ ಭಾಗವೆಂದರೆ ದೇವಸ್ಥಾನದ ಪೂರ್ವ ಗೋಪುರದ ಪುನಶ್ಚೇತನ. ಈ ಗೋಪುರವು ವಾಸ್ತುಶಿಲ್ಪ ಮತ್ತು ಪುರಾತತ್ವ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿದ್ದು, ಸುಮಾರು ಎರಡು ಶತಮಾನಗಳಿಂದ ಶಿಥಿಲಾವಸ್ಥೆಯಲ್ಲಿತ್ತು. ಅಂಬಾನಿ ಅವರ ಈ ಕೊಡುಗೆಯಿಂದಾಗಿ, 200 ವರ್ಷಗಳ ನಂತರ ಈ ಐತಿಹಾಸಿಕ ಗೋಪುರಕ್ಕೆ ಕಾಯಕಲ್ಪ ದೊರೆಯಲಿದೆ. ಈ ಅಭಿವೃದ್ಧಿಗಳ ಜತೆಗೆ ಭಕ್ತಾದಿಗಳ ಅನುಕೂಲಕ್ಕಾಗಿ ಸುಸಜ್ಜಿತ ವಾಹನ ನಿಲುಗಡೆ ವ್ಯವಸ್ಥೆ, ದೇವಸ್ಥಾನದ ಆವರಣದ ಅಲಂಕೃತ ವ್ಯವಸ್ಥೆಗೆ ಆಧುನಿಕ ಸ್ಪರ್ಶ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಪೂರಕ ಯೋಜನೆ ಒಳಪಡಲಿದೆ. ಅನಂತ್ ಅಂಬಾನಿ ಭೇಟಿ ವೇಳೆ ದೇವಸ್ಥಾನದ ಆಡಳಿತ ಮಂಡಳಿಯಾದ ಟಿಟಿಕೆ ದೇವಸ್ವಂ ಅಧ್ಯಕ್ಷ ಟಿ.ಪಿ.ವಿನೋದ್ ಕುಮಾರ್ ಮತ್ತು ಮುಖ್ಯ ಅರ್ಚಕ ಇ.ಪಿ.ಕುಬೇರನ್ ನಂಬೂತಿರಿ ಸೇರಿದಂತೆ ದೇವಸ್ಥಾನ ಸಮಿತಿಯ ಸದಸ್ಯರು ಸ್ಥಳದಲ್ಲಿದ್ದರು.

ಗುರುವಾಯೂರಿಗೆ ದೇಣಿಗೆ : ಕೇರಳದ ಮತ್ತೊಂದು ಖ್ಯಾತ ಧಾರ್ಮಿಕ ಕ್ಷೇತ್ರವಾದ ಗುರುವಾಯೂರಿಗೂ ಅನಂತ್ ಅಂಬಾನಿ ದೇಣಿಗೆ ನೀಡಿದ್ದಾರೆ. ವಿಶೇಷವಾಗಿ ದೇವಸ್ಥಾನಕ್ಕೆ ಮಾತ್ರವಲ್ಲದೆ ಇಲ್ಲಿನ ಆನೆಗಳ ಸಂರಕ್ಷಣೆಗೆ ಪೂರಕ ಯೋಜನೆ ರೂಪಿಸಲು ಆರ್ಥಿಕ ನೆರವು ನೀಡುವುದಾಗಿ ಅಭಯ ನೀಡಿದ್ದಾರೆ. ಏ.2ರಂದು ಸಂಜೆ ಗುರುವಾಯೂರಿಗೆ ಭೇಟಿ ನೀಡಿದ ಅನಂತ್ ಅಂಬಾನಿ ವಿಶೇಷ ಪೂಜೆ ಸಲ್ಲಿಸಿದರು. ಗುರುವಾಯೂರಪ್ಪನ ದರ್ಶನ ಪಡೆದ ಬಳಿಕ ದೇವಸ್ಥಾನದ ಟ್ರಸ್ಟ್‌ಗೆ ₹3 ಕೋಟಿ ದೇಣಿಗೆಯನ್ನು ನೀಡಿದರು. ಇದೇ ವೇಳೆ ದೇವಸ್ವಂ ಮಂಡಳಿಯ ಅಧ್ಯಕ್ಷ ಎ.ವಿ.ಗೋಪಿನಾಥ್ ಅಂಬಾನಿ ಅವರಿಗೆ ಸ್ಮರಣಿಕೆ ಮತ್ತು ಪ್ರಸಾದ ನೀಡಿ ಗೌರವಿಸಿದರು. ಆ ನಂತರ ಅನಂತ್ ಅಂಬಾನಿ ಇಲ್ಲಿನ ಆನೆಗಳಿಗೆ ಹಣ್ಣುಗಳನ್ನು ತಿನ್ನಿಸಿದರು. ಜತೆಗೆ, 'ವಂತರಾ' ಮಾದರಿಯಲ್ಲಿ ಆನೆಗಳ ಸಂರಕ್ಷಣೆಗೆ ಅಗತ್ಯ ನೆರವು ನೀಡುವುದಾಗಿ ಘೋಷಿಸಿದರು. ಪ್ರಾಣಿ ಸಂರಕ್ಷಣೆಯಲ್ಲಿ ವಿಶೇಷ ಆಸಕ್ತಿ ಹೊಂದಿರುವ ಅನಂತ್ ಅಂಬಾನಿ ತಮ್ಮ ವಂತರಾ ಯೋಜನೆಯಡಿ ಗುರುವಾಯೂರು ದೇವಸ್ಥಾನದ ಆನೆಗಳ ಆರೈಕೆಗಾಗಿ ಆನೆಗಳ ಆಸ್ಪತ್ರೆ ನಿರ್ಮಾಣ ಮಾಡುವುದಾಗಿ ತಿಳಿಸಿದರು. ಆನೆಗಳಿಗೆ ಆಧುನಿಕ ವೈದ್ಯಕೀಯ ಚಿಕಿತ್ಸೆ ನೀಡಲು ಸುಸಜ್ಜಿತ ಆಸ್ಪತ್ರೆ ನಿರ್ಮಾಣಕ್ಕೆ ಅಗತ್ಯ ಆರ್ಥಿಕ ನೆರವು ನೀಡುವುದಾಗಿ ಘೋಷಿಸಿದರು. ಜತೆಗೆ, ಆನೆಗಳು ಮುಕ್ತವಾಗಿ ಓಡಾಡಲು 'ಚೈನ್-ಫ್ರೀ' ಶೆಲ್ಟರ್‌ಗಳ ವ್ಯವಸ್ಥೆ, ಆನೆಗಳಿಗೆ ಸಮರ್ಪಕ ರೂಪದಲ್ಲಿ ಆಹಾರ, ವಾಸ್ತವ್ಯಕ್ಕೆ ವ್ಯವಸ್ಥೆ ಕಲ್ಪಿಸಿಕೊಡುವುದಾಗಿ ತಿಳಿಸಿದರು. ಒಟ್ಟಾರೆ, ಕೇರಳ ಭೇಟಿ ಕುರಿತು ಮಾತನಾಡಿದ ಅವರು, 'ಭಾರತದ ಆಧ್ಯಾತ್ಮಿಕ ಸಂಪ್ರದಾಯಗಳು ಕೇವಲ ಪ್ರಾರ್ಥನಾ ಸ್ಥಳಗಳಲ್ಲ. ಅವು ನಮ್ಮ ನಂಬಿಕೆ, ಮಾನವೀಯತೆ ಮತ್ತು ಪ್ರಕೃತಿಯೊಂದಿಗಿನ ಸಂಬಂಧವನ್ನು ಬೆಸೆಯುವ ಜೀವಂತ ಸಂಸ್ಥೆಗಳಾಗಿವೆ. ಈ ಪವಿತ್ರ ಪರಂಪರೆಯನ್ನು ಮುಂದಿನ ಪೀಳಿಗೆಗೆ ಉಳಿಸಿಕೊಡುವುದು ನಮ್ಮೆಲ್ಲರ ಕರ್ತವ್ಯ. ನಮ್ಮ 'ವಂತರಾ' ಕಾರ್ಯದ ಮೂಲಕ ದೇವಸ್ಥಾನದ ಆನೆಗಳಿಗೂ ಅತ್ಯುತ್ತಮ ವೈದ್ಯಕೀಯ ಸೇವೆ ಸಿಗುವಂತೆ ಮಾಡುವುದು ನಮ್ಮ ಗುರಿ," ಎಂದು ತಿಳಿಸಿದರು.

⌘

ಹವಾಮಾನ ಮುನ್ಸೂಚನೆ: ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ದೃಷ್ಟಿದೋಷವುಳ್ಳ ವಿದ್ಯಾರ್ಥಿಗಳಿಗೆ ಕಿಬೋ ಒಸಿಆರ್ ರೀಡರ್ ಬಳಸುವ ಕುರಿತು ಕಾರ್ಯಾಗಾರ ಆಯೋಜಿಸಲಾಗಿತ್ತು

ದೃಷ್ಟಿದೋಷ: ಒಸಿಆರ್ ರೀಡರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೃಷ್ಟಿದೋಷ ಹೊಂದಿದ ವಿದ್ಯಾರ್ಥಿಗಳಿಗೆ ಸಮಾನ ಶಿಕ್ಷಣ ಒದಗಿಸುವ ದಿಸೆಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಮಹತ್ವದ ಹೆಜ್ಜೆ ಇಟ್ಟಿದೆ.

ಜ್ಞಾನಭಾರತಿ ಆವರಣದ ಬ್ರೈಲ್ ಸಂಪನ್ಮೂಲ ಕೇಂದ್ರ, ಬೋಧಿ ಟ್ರೀ ಫೌಂಡೇಷನ್ ಮತ್ತು ಸಿಟಿವಾ ಸಂಸ್ಥೆಯ ಸಹಯೋಗದೊಂದಿಗೆ ಕಿಬೋ ಒಸಿಆರ್ ರೀಡರ್ ಕುರಿತ ಒಂದು ದಿನದ ಕಾರ್ಯಾಗಾರ ಆಯೋಜಿಸಲಾಗಿತ್ತು.

'ಕಿಬೋ ಒಸಿಆರ್ ರೀಡರ್ ಸಾಧನ ಮುದ್ರಿತ ಪಠ್ಯಗಳನ್ನು ಧ್ವನಿಯಾಗಿ ಪರಿವರ್ತಿಸುವ ಅತ್ಯಾಧುನಿಕ ತಂತ್ರಜ್ಞಾನವಾಗಿದೆ. ದೃಷ್ಟಿದೋಷ ಹೊಂದಿದ ವಿದ್ಯಾರ್ಥಿಗಳು ಇದರ ಮೂಲಕ ಸ್ವತಂತ್ರವಾಗಿ ಅಧ್ಯಯನ ನಡೆಸಲು ಸಹಾಯಕವಾಗುತ್ತದೆ. ಜತೆಗೆ ವಿದ್ಯಾರ್ಥಿಗಳ ಕಲಿಕಾ ಅನುಭವ ಹೆಚ್ಚಾಗುತ್ತದೆ' ಎಂದು ಬ್ರೈಲ್ ಸಂಪನ್ಮೂಲ ಕೇಂದ್ರದ ಸಂಯೋಜಕ ಎಸ್.ಕುಂಬಿನರಸಯ್ಯ ತಿಳಿಸಿದರು.

'ಈ ಮೂಲಕ ದೃಷ್ಟಿದೋಷ ಹೊಂದಿದ ವಿದ್ಯಾರ್ಥಿಗಳನ್ನು ಸಬಲಗೊಳಿಸಿ ಸಮಾನ ಶಿಕ್ಷಣದ ಅವಕಾಶ ಸೃಷ್ಟಿಸಬಹುದು. ಈ ಸಾಧನ ಬಳಸಲು ತರಬೇತಿ ನೀಡಲಾಗಿದೆ' ಎಂದರು.

ಕಾರ್ಯಾಗಾರದಲ್ಲಿ ಬೋಧಿ ಟ್ರೀ ಫೌಂಡೇಷನ್ ವತಿಯಿಂದ ಬೆಂಗಳೂರು ವಿ.ವಿ ಬ್ರೈಲ್ ಸಂಪನ್ಮೂಲ ಕೇಂದ್ರಕ್ಕೆ ಕಿಬೋ ಒಸಿಆರ್ ರೀಡರ್ ಸಾಧನವನ್ನು ದೇಣಿಗೆಯಾಗಿ ನೀಡಲಾಯಿತು.

ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ಆಯೋಜಿಸಿರುವ ಆಧುನಿಕ ತಂತ್ರಜ್ಞಾನದ ವಸ್ತು ಪ್ರದರ್ಶನಕ್ಕೆ ಪೀಣ್ಯ ಕೈಗಾರಿಕಾ ಸಂಘದ ಅಧ್ಯಕ್ಷ ಡಿ.ಪಿ. ದಾನಪ್ಪ ಚಾಲನೆ ನೀಡಿದರು. ವೆಂಕಟೇಶ್, ಸುನಿಲ್, ಕೇತನ್ ಬಿ. ಶಾ, ಮೊಹಮ್ಮದ್ ಮುದಸ್ಸಿರ್, ರಾಮ್ ಸೌದಲ್ಕರ್ ಪಾಲ್ಗೊಂಡಿದ್ದರು

ಬಿಐಇಸಿನಲ್ಲಿ ಟ್ರೇಡ್ ಎಕ್ಸ್‌ಪೋ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಟೋಮೇಷನ್, ರೋಬೋಟಿಕ್ಸ್ ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ, ಸೈಬರ್ ಸುರಕ್ಷತೆ, ಸ್ಮಾರ್ಟ್ ಜೀವನ ಶೈಲಿ ಪರಿಹಾರ ಒಳಗೊಂಡ ಆರು ಪ್ರಮುಖ ಉದ್ಯಮ ವಲಯಗಳ ಪ್ರದರ್ಶನ ಮೇಳಕ್ಕೆ ಚಾಲನೆ ನೀಡಲಾಯಿತು.

ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ (ಬಿಐಇಸಿ) ಮೀಡಿಯಾ ಡೇ ಮಾರ್ಕೆಟಿಂಗ್ ಸಂಸ್ಥೆಯು ಏಪ್ರಿಲ್ 8ರವರೆಗೆ ಆರು ಪ್ರಮುಖ 'ಟ್ರೇಡ್ ಎಕ್ಸ್‌ಪೋ' ಆಯೋಜಿಸಿದೆ.

ಪ್ರದರ್ಶನಕ್ಕೆ ಚಾಲನೆ ನೀಡಿ ಮಾತನಾಡಿದ ಪೀಣ್ಯ ಇಂಡಸ್ಟ್ರೀಸ್ ಅಸೋಸಿಯೇಷನ್ ಅಧ್ಯಕ್ಷ ಡಿ.ಪಿ. ದಾನಪ್ಪ, 'ಪ್ಯಾನ್ ಇಂಡಿಯಾ ಉತ್ಪನ್ನಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ. ಹೊಸ ತಂತ್ರಜ್ಞಾನ, ನಾವೀನ್ಯತೆಯನ್ನು ಒಳಗೊಂಡಿರುವ ಪ್ರದರ್ಶನ ಕೈಗಾರಿಕಾ ವಲಯಕ್ಕೆ ಅತ್ಯಂತ ಅಗತ್ಯವಾಗಿದೆ. ಯುದ್ಧದ ಪರಿಣಾಮ ಕೈಗಾರಿಕಾ ವಲಯಕ್ಕೆ ಹಲವು ಸಮಸ್ಯೆಗಳಿದ್ದು, ಈ ಸಂದರ್ಭದಲ್ಲಿ ಕೈಗಾರಿಕೆಗಳಿಗೆ ಪುಷ್ಟಿ ನೀಡುವ ಕೆಲಸ ಆಗಬೇಕಾಗಿದೆ' ಎಂದು ಹೇಳಿದರು.

ಆಟೊಮೊಬೈಲ್ ಡೀಲರ್ ಅಸೋಸಿಯೇಷನ್ ಅಧ್ಯಕ್ಷ ವೆಂಕಟೇಶ್, 'ಹೊಸದಾಗಿ ಉದ್ಯಮ ಪ್ರವೇಶಿಸುವವರಿಗೆ ಅತ್ಯುತ್ತಮ ಅವಕಾಶಗಳಿವೆ' ಎಂದರು.

ಅಸೋಸಿಯೇಷನ್ ಆಫ್ ಇನ್ಫರ್ಮೇಷನ್ ಟೆಕ್ನಾಲಜಿಯ ಸುನಿಲ್, ಮಾಹಿತಿ ತಂತ್ರಜ್ಞಾನ ಸಂಘದ ಅಧ್ಯಕ್ಷ ಕೇತನ್ ಬಿ. ಶಾ, ಮೇಳದ ಆಯೋಜಕರಾದ ಮೀಡಿಯಾ ಡೇ ಮಾರ್ಕೆಟಿಂಗ್ ನಿರ್ದೇಶಕ ಮೊಹಮ್ಮದ್ ಮುದಸ್ಸಿರ್, ರಾಮ್ ಸೌದಲ್ಕರ್ ಪಾಲ್ಗೊಂಡಿದ್ದರು.

ಕ್ಷೇತ್ರ ವಿಂಗಡಣೆ ದಕ್ಷಿಣಕ್ಕೆ ಆರ್ಥಿಕ ನಷ್ಟ– ಸುರೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೋಕಸಭಾ, ವಿಧಾನಸಭಾ ಕ್ಷೇತ್ರಗಳ ಮರು ವಿಂಗಡಣೆಯಿಂದ ದಕ್ಷಿಣದ ರಾಜ್ಯಗಳಲ್ಲಿ ಕ್ಷೇತ್ರಗಳ ಸಂಖ್ಯೆ ಕಡಿಮೆ ಆಗುವುದರ ಜೊತೆಗೆ, ಆರ್ಥಿಕ ಮುಗ್ಗಟ್ಟು ಎದುರಿಸಬೇಕಾಗುತ್ತದೆ' ಎಂದು ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್ ಹೇಳಿದರು.

ಡಿ.ಕೆ. ಸುರೇಶ್

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ಕ್ಷೇತ್ರ ಮರು ವಿಂಗಡಣೆಯಿಂದ ಆಗಲಿರುವ ಅನ್ಯಾಯದ ವಿರುದ್ಧ ದಕ್ಷಿಣದ ರಾಜ್ಯಗಳು ಎಚ್ಚೆತ್ತುಕೊಳ್ಳಬೇಕು' ಎಂದರು.

'ಇದೇ 16ರಿಂದ ಲೋಕಸಭೆಯ ವಿಶೇಷ ಅಧಿವೇಶನ ಕರೆಯಲಾಗಿದೆ. ಕೇಂದ್ರ ಸರ್ಕಾರ ಯಾವ ರೀತಿಯಲ್ಲಿ ಮಸೂದೆ ಮಂಡಿಸಲಿದೆ ಎಂದು ನೋಡಬೇಕಿದೆ. ಒಟ್ಟಾರೆ ದಕ್ಷಿಣದ ಹಣವನ್ನು ಉತ್ತರದ ರಾಜ್ಯಗಳಿಗೆ ತೆಗೆದುಕೊಂಡು ಹೋಗುವ ಹುನ್ನಾರ ಇದು' ಎಂದು ಆರೋಪಿಸಿದರು.

'2011ರ ಜನಗಣತಿಯ ಅನ್ವಯ ಕ್ಷೇತ್ರ ಪುನರ್ ವಿಂಗಡಣೆ ಮಾಡಲಾಗುತ್ತಿದೆ ಎಂದು ಕೇಂದ್ರ ಸರ್ಕಾರ ಹೇಳುತ್ತಿದೆ. ಇದು ಇನ್ನೂ ಮಾರಕ. 2011ರ ಜನಗಣತಿ ಪ್ರಕಾರ ಬೆಂಗಳೂರಿನ ಜನಸಂಖ್ಯೆ 60 ಲಕ್ಷದಿಂದ 70 ಲಕ್ಷ. ಈಗ 1.40 ಕೋಟಿ. 5 ಕೋಟಿ ಇದ್ದ ಕರ್ನಾಟಕದ ಜನಸಂಖ್ಯೆ ಈಗ ಏಳು ಕೋಟಿ ಮೀರಿದೆ. ಜೊತೆಗೆ ಆರ್ಥಿಕ ಸವಾಲು ಸೇರಿದಂತೆ ಅನೇಕ ಸವಾಲುಗಳು ಎದುರಾಗುತ್ತವೆ. ಎಲ್ಲ ಪಕ್ಷಗಳು ಈ ಬಗ್ಗೆ ಚಿಂತನೆ ಮಾಡಬೇಕು' ಎಂದರು.

ಗೃಹ ಸಚಿವರ ಹೇಳಿಕೆ ಅಧಿಕೃತ: 'ಮುಂದಿನ ಎರಡು ವರ್ಷ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ ಆಗಲಿದ್ದಾರೆ' ಎನ್ನುವ ಗೃಹ ಸಚಿವ ಜಿ. ಪರಮೇಶ್ವರ ಅವರ ಹೇಳಿಕೆ ಬಗ್ಗೆ ಕೇಳಿದಾಗ, 'ಈ ಬಗ್ಗೆ ಅವರನ್ನೇ ಕೇಳಬೇಕು. ಗೃಹ ಸಚಿವರು ಅಧಿಕೃತವಾಗಿ ಹೇಳಿದ್ದಾರೆ. ಅವರು ಹೇಗೆ ಹೇಳುತ್ತಾರೋ ಹಾಗೆ ಕೇಳಬೇಕು' ಎಂದರು.

'ಸುಗಮ ಸಂಗೀತಕ್ಕೆ ದೊಡ್ಡರಂಗೇಗೌಡರ ಕೊಡುಗೆ ಹಿರಿದು'

ಬೆಂಗಳೂರು: 'ದೊಡ್ಡರಂಗೇಗೌಡ ಅವರು ಚಿತ್ರಸಾಹಿತಿಯಾಗಿ ಜನಪ್ರಿಯರಾದರೂ ಮಾವು–ಬೇವು ಸೇರಿದಂತೆ ಭಾವಗೀತೆಗಳ ಮೂಲಕ ಸುಗಮ ಸಂಗೀತ ಕ್ಷೇತ್ರಕ್ಕೂ ದೊಡ್ಡ ಕೊಡುಗೆ ನೀಡಿದ್ದಾರೆ' ಎಂದು ಕಲಾವಿದ ಕಿಕ್ಕೇರಿ ಕೃಷ್ಣಮೂರ್ತಿ ಹೇಳಿದರು.

ಚೋಳೇಶ್ವರಸ್ವಾಮಿ ಪ್ರಕಾಶನವು ಎನ್‌ಆರ್ ಕಾಲೊನಿಯ ಬಿಎಂಶ್ರೀ ಪ್ರತಿಷ್ಠಾನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ದೊಡ್ಡರಂಗೇಗೌಡ ಅವರ 'ಹೃದಯ ಸಮುದ್ರ' ಹಾಗೂ ಬಿ.ಭರತ್ ಅವರ 'ಅವಲೋಕನ' ಕೃತಿಗಳನ್ನು ಜನಾರ್ಪಣೆಗೊಳಿಸಿ ಮಾತನಾಡಿದರು.

'ಹೆಚ್ಚು ಚಿತ್ರಗೀತೆಗಳನ್ನು ಬರೆದಿದ್ದರಿಂದ ಅವರನ್ನು ಚಿತ್ರಸಾಹಿತಿ ಎಂದಷ್ಟೇ ಬಿಂಬಿಸುವ ಯತ್ನ ನಡೆದವು. ಆದರೆ ಅವರು ಟೀಕೆಗಳಿಂದ ವಿಚಲಿತರಾಗದೇ ಎರಡೂ ಕ್ಷೇತ್ರದಲ್ಲಿ ಉತ್ಕೃಷ್ಟವಾಗಿಯೇ ಕೆಲಸ ಮಾಡಿದರು' ಎಂದು ತಿಳಿಸಿದರು.

ದೊಡ್ಡರಂಗೇಗೌಡ ಮಾತನಾಡಿ, 'ಹಲವರ ಸಹಕಾರ, ಕುಟುಂಬದವರ ಬೆಂಬಲದಿಂದಲೇ ಸಾಧನೆ ಮಾಡಲು ಸಾಧ್ಯವಾಗಿದೆ. ಜೀವನ ಎನ್ನುವುದು ಹೂವಿನ ಹಾಸಿಗೆಯಲ್ಲ, ಮುಳ್ಳಿನ ಹಾಸಿಗೆಯೂ ಅಲ್ಲ. ಸಾಮರಸ್ಯವೇ ನಿಜವಾದ ಜೀವನ' ಎಂದು ಹೇಳಿದರು.

ಪುರಸಭಾ ಕಾರ್ಯಾಲಯ, ದೇವನಹಳ್ಳಿ

ದೇವನಹಳ್ಳಿ ಬೆಂಗಳೂರು ಗ್ರಾಮಾಂತರ ಜಿಲ್ಲೆ–562110

ದೂರವಾಣಿ : 080–27682221, Email : itstaff_ulb_devanahalli@yahoo.co.in

ನಂ.ದೇಪು/ತಾ.ಶಾ/ಟೆ.ಪ್ರ/ಸಿಆರ್/03/2026–27 ದಿನಾಂಕ:06.04.2026

ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್(ಕೆ.ಪಿ.ಪಿ.ಪಿ ಪೋರ್ಟಲ್) ಮೂಲಕ ಮಾತ್ರ)

(ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ KW-1&2 ರ ನಿಬಂಧನೆಗಳಂತೆ ಅರ್ಜಿ ಆಹ್ವಾನಿಸಲಾಗಿದೆ)

ಮೇಲ್ಕಂಡ ವಿಷಯ ಸಂಬಂಧಿಸಿದಂತೆ, ದೇವನಹಳ್ಳಿ ಪುರಸಭಾ ವ್ಯಾಪ್ತಿಯಲ್ಲಿ 2025–26 ನೇ ಸಾಲಿನ ಪುರಸಭಾ ಅನುದಾನದಡಿ ಪೈಪ್‌ಲೈನ್ ಕಾಮಗಾರಿ, ಪೇವರ್ ರಸ್ತೆ, ಡಾಂಬರ್ ರಸ್ತೆ, ಚರಂಡಿ ನಿರ್ಮಾಣ ಕಾಮಗಾರಿ, ಪೇವರ್ಸ್ ಕಾಮಗಾರಿ, ಕರ್ಬ್‌ಸ್ಟೋನ್ ಕಾಮಗಾರಿ, ಹೈಮಾಸ್ಟ್ ದೀಪ ಅಳವಡಿಸುವುದು, ಶೆಡ್ ನಿರ್ಮಾಣ ಕಾಮಗಾರಿ ಸೋಲಾರ್ ಅಳವಡಿಸುವುದು ಮತ್ತು ಇತ್ಯಾದಿ ಕಾಮಗಾರಿಗಳ ಒಟ್ಟು ಮೊತ್ತ ರೂ : **329.63 ಲಕ್ಷಗಳ ಒಟ್ಟು 22** ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಇ–ಪ್ರೊಕ್ಯೂರ್‌ಮೆಂಟ್‌ನ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಏಕ ಲಕೋಟೆ ಪದ್ಧತಿಯಲ್ಲಿ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **www.kppp.karnataka.gov.in** ಮೂಲಕ ಟೆಂಡರ್ ಸಲ್ಲಿಸುವುದು.

ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: (**As per KPPP Portal** ಘಂಟೆಯವರೆಗೆ) ಟೆಂಡರ್ ತೆರೆಯುವ ದಿನಾಂಕ:(**As per KPPP Portal**) ಹೆಚ್ಚಿನ ವಿವರಗಳಿಗಾಗಿ ಪುರಸಭೆಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸಹಿ/– ಶ್ರೀಮತಿ. ದುರ್ಗಾಶ್ರೀ
ಆಡಳಿತಾಧಿಕಾರಿಗಳು
ಪುರಸಭೆ, ದೇವನಹಳ್ಳಿ

ಸಹಿ/– ಶಿವಮೂರ್ತಿ ಎ,(ಕೆ.ಎಂ.ಎ.ಎಸ್)
ಮುಖ್ಯಾಧಿಕಾರಿ
ಪುರಸಭೆ, ದೇವನಹಳ್ಳಿ

ವಾಸಾಸಂಇ/ವಾಪ್ರ/ಶಿರಡಿ ಸಾಯಿ/78/2026–27

ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ

ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಬಳ್ಳಾಪುರ

ಕೆ.ಪಿ.ಪಿ ಇ–ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 17/2025–26 ದಿನಾಂಕ: 27.02.2026 ಕೆ.ಪಿ.ಪಿ ಇ–ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಮುಂದೂಡಿಕೆ ಪ್ರಕಟಣೆ ಸಂಖ್ಯೆ: 17(1)/2025–26 ದಿನಾಂಕ: 13.03.2026 ಕೆ.ಪಿ.ಪಿ ಇ–ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ: 17(2)/2025–26 ದಿನಾಂಕ: 01.04.2026

ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ– IV ರ ನಿಬಂಧನೆಗೊಳಪಟ್ಟಂತೆ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಐಟಂವಾರು ಇ–ಪ್ರಕ್ಯೂರ್‌ಮೆಂಟ್ ದ್ವಿ–ಲಕೋಟೆ ಪದ್ಧತಿಯಲ್ಲಿ (Double Cover System) ಚಿಕ್ಕಬಳ್ಳಾಪುರ ವಿಭಾಗ ವ್ಯಾಪ್ತಿಯ 2025–26 ನೇ ಸಾಲಿನ CMIDP ಲೆಕ್ಕಶೀರ್ಷಿಕೆಯಡಿ ಕೆಳಗೆ ನಮೂದಿಸಿರುವ ಕಾಮಗಾರಿಗಳಿಗೆ ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿರುವ ಅಧಿಕೃತ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು ಕೆ.ಪಿ.ಪಿ ಇ–ಪ್ರಕ್ಯೂರ್‌ಮೆಂಟ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ **https://eproc.karnataka.gov.in** ಮೂಲಕ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ. (1) E-procurement ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿ ಗಳನ್ನು ವೆಬ್ ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ **ದಿನಾಂಕ: 09.4.2026** ರ **16.30 ರವರೆಗೆ** (2) ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 10.04.2026** ರಂದು **16.35 ನಂತರ** (3) ಆರ್ಥಿಕ ಬಿಡ್‌ನ್ನು ತೆರೆಯುವ **ದಿನಾಂಕ: 13.04.2026** ರಂದು **ಬೆಳಿಗ್ಗೆ 11.30 ನಂತರ** (ಸಾಧ್ಯವಾದಲ್ಲಿ) (4) ಅರ್ಜಿ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ): e- Procurement ನಿಯಮಾನುಸಾರ

ಕ್ರ. ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ (ರೂ. ಗಳಲ್ಲಿ)	ಕಾಲಮಿತಿ ಮಳೆಗಾಲ ಸೇರಿ
1	Improvements to road from Huduguru village to Virupasandra Lakshmipur road via fishermens houses in Gowribidanur Taluk Chikkaballapur District (**RDPR/2025-26/RD/WORK_INDENT25326/CALL-2)**	100.51	200000.00	6 ತಿಂಗಳು
	Total	**100.51**		

ಸಹಿ/– ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:15/ಕೆಎಸ್‌ಎಂಸಿಎ/2026–27

ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ನಿ.,

ನಂ.24, ಸುವರ್ಣ ಭವನ, 1ನೇ ಮುಖ್ಯರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು–560104.
ದೂ. 080-23402712, 23503666, 23359600, ಇ–ಮೇಲ್ : jscbinfo@jscbl.com Website: jscbl.com

ಸ್ವಾಧೀನ ಸೂಚನೆ ನಿಯಮ 8(1)ರಡಿಯಲ್ಲಿ (ಸ್ಥಿರಾಸ್ತಿಗಳಿಗಾಗಿ)

ಶ್ರೀ ಶ್ರೀನಿವಾಸ್ ಎಂ.ಆರ್ ಮತ್ತು ಶ್ರೀಮತಿ ಶಾರದಾ ಎಸ್

ಕೆಳಸಹಿದಾರರು **ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ.,** ಇದರ ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟ್ರೆಸ್ಟ್ ಆಕ್ಟ್ 2002 ರ ಅನ್ವಯ ಮತ್ತು ಸೆಕ್ಯೂರಿಟಿ ಇಂಟ್ರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳ 2002 ನಿಯಮ 3 ಅನ್ನು ಓದಿಕೊಂಡಂತೆ ಪ್ರಕರಣ 13(12)ರ ಅನ್ವಯ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಸದರಿ ಸೂಚನೆ ತಲುಪಿದ ದಿನಾಂಕದಿಂದ 60 ದಿನಗಳ ಒಳಗೆ ಸೂಚನೆಯಲ್ಲಿ ತಿಳಿಸಿರುವ ಮೊಬಲಗು **ದಿನಾಂಕ: 27.01.2026** ರಿಂದ **ರೂ.2,82,55,691/–** (ರೂಪಾಯಿ ಎರಡು ಕೋಟಿ ಎಂಭತ್ತೆರಡು ಲಕ್ಷದ ಐವತ್ತೈದು ಸಾವಿರದ ಆರು ನೂರ ತೊಂಭತ್ತೊಂದು ಮಾತ್ರ) ಗಳನ್ನು ಪಾವತಿ ಮಾಡಲು **ಸಾಲಗಾರರಾದ : (1) ಶ್ರೀ** ಶ್ರೀನಿವಾಸ್ ಎಂ.ಆರ್ ಬಿನ್ ಲೇಟ್ ರಾಮಯ್ಯ ಮತ್ತು **ಶ್ರೀಮತಿ ಶಾರದಾ ಎಸ್** ಕೋಂ ಶ್ರೀನಿವಾಸ್ ಎಂ.ಆರ್, ಮೆ॥ ಶಾರದಾ ಶೆಲ್ಟರ್ಸ್ ರವರ ಮಾಲೀಕರು, ಇವರಿಬ್ಬರ ವಿಳಾಸ ನಂ. 81. ಫ್ಲಾಟ್ ನಂ. 402, ಡಬಲ್ ರಸ್ತೆ, ಡಾಲರ್ಸ್ ಕಾಲೋನಿ, ಪ್ರೆಸಿಡೆನ್ಸಿ ಸ್ಕೂಲ್ ಹಿಂದೆ, ನಂದಿನಿ ಲೇಔಟ್, ಬೆಂಗಳೂರು–560096, ಇವರಿಗೆ **ದಿನಾಂಕ: 02.08.2025** ರಂದು ಡಿಮ್ಯಾಂಡ್ ನೋಟಿಸ್‌ನ್ನು ನೀಡಲಾಗಿತ್ತು.

ಸಾಲಗಾರರು ಸದರಿ ಮೊಬಲಗನ್ನು ಮರುಪಾವತಿಸದೇ ಇರುವುದರಿಂದ ಈ ಕೆಳಗೆ ಸಹಿ ಮಾಡಿರುವವರು ಕೆಳಗೆ ವಿವರಿಸಲಾದ ಆಸ್ತಿಯನ್ನು ಈ ಮೇಲೆ ತಿಳಿಸಿದ ಕಾಯಿದೆಯ ಸೆಕ್ಷನ್ 13(8) ರೊಂದಿಗೆ ನಿಯಮ 8 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ **ದಿನಾಂಕ: 02.04.2026** ರಂದು ಸ್ವಾಧೀನ ಪಡಿಸಿಕೊಳ್ಳಲಾಗಿದೆ ಎಂದು ಸಾಲಗಾರರಿಗೆ ಈ ಮೂಲಕ ತಿಳಿಯಪಡಿಸಿದೆ.

ನಿರ್ದಿಷ್ಟವಾಗಿ ಸಾಲಗಾರರು ಮತ್ತು ಸಾಮಾನ್ಯವಾಗಿ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಕೆಳಗೆ ವಿವರಿಸಿದ ಆಸ್ತಿಯೊಂದಿಗೆ ವ್ಯವಹರಿಸದಂತೆ ಈ ಮೂಲಕ ಎಚ್ಚರಿಸುತ್ತಿದ್ದೇವೆ ಹಾಗೂ ಅಂತಹ ಯಾವುದೇ ವ್ಯವಹಾರಗಳು **ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ, ವಿಜಯನಗರ, ಬೆಂಗಳೂರು** ಇವರಿಗೆ ಸಂದಾಯವಾಗತಕ್ಕ ಮೊಬಲಗು **ಅಂದ್ರಹಳ್ಳಿ ಶಾಖೆಯಲ್ಲಿರುವ ಸಾಲದ ಖಾತೆ ಸಂಖ್ಯೆಗಳು MTL-25 ಮತ್ತು MTL-32 ಒಟ್ಟು ಮೊತ್ತ ರೂ.2,77,61,817/– (ರೂಪಾಯಿ ಎರಡು ಕೋಟಿ ಎಪ್ಪತ್ತೇಳು ಲಕ್ಷದ ಅರವತ್ತೊಂದು ಸಾವಿರದ ಎಂಟು ನೂರ ಹದಿನೇಳು ಮಾತ್ರ) 01.04.2026** ರಂತೆ ಮತ್ತು ದಿನಾಂಕ **02.04.2026** ರಿಂದ ಅದರ ಮೇಲಿನ ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ.

ಸಾಲಗಾರರ / ಜಾಮೀನುದಾರರಾದ ಗಮನಕ್ಕೆ ತರುವುದೇನೆಂದರೆ ಭದ್ರತಾ ಸ್ವತ್ತುಗಳನ್ನು ಹಿಂಪಡೆಯುವ ಕಾಲಾವಕಾಶ ಉಪ ಕಾಯಿದೆ 8 ಮತ್ತು ಕಾಯಿದೆಯ ಸೆಕ್ಷನ್ 13ರ ಅನ್ವಯ ಇರುತ್ತದೆ.

ಹೈಪೋಥೆಕೇಟೆಡ್ ಆಸ್ತಿಗಳ ವಿವರಗಳು ಮತ್ತು ಸಾಲಗಾರನ ಅಡಮಾನದ ಆಸ್ತಿಗಳ ವಿವರಗಳು :

ಆಸ್ತಿಗಳ ವಿವರ

ಷೆಡ್ಯೂಲ್–ಬಿ : ಆಸ್ತಿಯ ಎಲ್ಲಾ ಭಾಗ ಮತ್ತು ವಿಭಾಗಗಳನ್ನು ಒಳಗೊಂಡಿರುವ ಸ್ಥಿರಾಸ್ತಿಯ ಮನೆ ಕಾರ್ಪೋರೇಷನ್ ಹೊಸ ನಂ. 67/10 (ಹಳೆ ನಂ. 67/ಸಿ), ಬಿಡಿಎ ನಿವೇಶನ ನಂ. 61/2 (ಹಳೆ ನಿವೇಶನ ನಂ. 61) ಈ ಆಸ್ತಿಯು ಇಂಡಸ್ಟ್ರಿಯಲ್ ಸಬರ್ಬ್, ವಾರ್ಡ್ ನಂ. 10, ಪಿಐಡಿ ನಂ. 10–1–67/10, ಯಶವಂತಪುರ, ಬೆಂಗಳೂರಿನಲ್ಲಿದೆ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ (72.84 + 71.42)/2 ಮೀಟರ್‌ಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ 12.73 ಮೀಟರ್‌ಗಳು ಒಟ್ಟು ವಿಸ್ತೀರ್ಣ 918.53 ಚದರ ಮೀಟರ್‌ಗಳು ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಕನ್ಸರ್‌ವೆನ್ಸಿ ಲೇನ್, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ನಿವೇಶನ ನಂ. 61/1, ದಕ್ಷಿಣಕ್ಕೆ: ನಿವೇಶನ ನಂ. 62.

ಷೆಡ್ಯೂಲ್–ಸಿ : ಷೆಡ್ಯೂಲ್ ಬಿ ಆಸ್ತಿ ಮತ್ತು ಅಪಾರ್ಟ್‌ಮೆಂಟ್, ನೆಲ ಮಹಡಿಯಲ್ಲಿ ನಿರ್ಮಿತವಾಗಿರುವ "ಬೃಂದಾವನ" ಎಂಬ **ವಾಸಯೋಗ್ಯ ಅಪಾರ್ಟ್‌ಮೆಂಟ್ ಯೂನಿಟ್ ನಂ. 102** ರ ವಿಸ್ತೀರ್ಣ 1,497 ಚದರ ಅಡಿಯ ಸೂಪರ್ ಬಿಲ್ಟ್ ಅಪ್ ಪ್ರದೇಶ ಜೊತೆಗೆ ಸಮಾನುಪಾತದ ಪಾಲಿನಲ್ಲಿ ಸಾಮಾನ್ಯ ಪ್ರದೇಶಗಳು, ಲಾಬಿಗಳು, ಮೆಟ್ಟಿಲುಗಳು ಮತ್ತು ಸಾಮಾನ್ಯ ಬಳಕೆಯ ಇತರೆ ಪ್ರದೇಶಗಳು ಜೊತೆಗೆ ಸ್ಟಿಲ್ಟ್ ಮಟ್ಟದಲ್ಲಿ ಒಂದು ಮುಚ್ಚಿದ ಕಾರ್ ನಿಲುಗಡೆ ಸ್ಥಳ ಜೊತೆಗೆ 330 ಚದರ ಅಡಿಯ ಭೂಮಿಯಲ್ಲಿ ಅವಿಭಜಿತ ಪಾಲನ್ನು ಒಳಗೊಂಡಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಯೂನಿಟ್ ನಂ. 103, ಪಶ್ಚಿಮಕ್ಕೆ: ಯೂನಿಟ್ ನಂ. 101, ಉತ್ತರಕ್ಕೆ: ನಿವೇಶನ ನಂ. 61/1, ದಕ್ಷಿಣಕ್ಕೆ: ನಿವೇಶನ ನಂ. 62.

ಷೆಡ್ಯೂಲ್ ಬಿ ಆಸ್ತಿ ಮತ್ತು ಅಪಾರ್ಟ್‌ಮೆಂಟ್, ನೆಲ ಮಹಡಿಯಲ್ಲಿ ನಿರ್ಮಿತವಾಗಿರುವ "ಬೃಂದಾವನ" ಎಂಬ **ವಾಸಯೋಗ್ಯ ಅಪಾರ್ಟ್‌ಮೆಂಟ್ ಯೂನಿಟ್ ನಂ. 103** ರ ವಿಸ್ತೀರ್ಣ 1,565 ಚದರ ಅಡಿಯ ಸೂಪರ್ ಬಿಲ್ಟ್ ಅಪ್ ಪ್ರದೇಶ ಜೊತೆಗೆ ಸಮಾನುಪಾತದ ಪಾಲಿನಲ್ಲಿ ಸಾಮಾನ್ಯ ಪ್ರದೇಶಗಳು, ಲಾಬಿಗಳು, ಮೆಟ್ಟಿಲುಗಳು ಮತ್ತು ಸಾಮಾನ್ಯ ಬಳಕೆಯ ಇತರೆ ಪ್ರದೇಶಗಳು ಜೊತೆಗೆ ಸ್ಟಿಲ್ಟ್ ಮಟ್ಟದಲ್ಲಿ ಒಂದು ಮುಚ್ಚಿದ ಕಾರ್ ನಿಲುಗಡೆ ಸ್ಥಳ ಜೊತೆಗೆ 330 ಚದರ ಅಡಿಯ ಭೂಮಿಯಲ್ಲಿ ಅವಿಭಜಿತ ಪಾಲನ್ನು ಒಳಗೊಂಡಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಯೂನಿಟ್ ನಂ. 104, ಪಶ್ಚಿಮಕ್ಕೆ: ಯೂನಿಟ್ ನಂ. 102, ಉತ್ತರಕ್ಕೆ: ನಿವೇಶನ ನಂ. 61/1, ದಕ್ಷಿಣಕ್ಕೆ: ನಿವೇಶನ ನಂ. 62.

ಷೆಡ್ಯೂಲ್ ಬಿ ಆಸ್ತಿ ಮತ್ತು ಅಪಾರ್ಟ್‌ಮೆಂಟ್, ನೆಲ ಮಹಡಿಯಲ್ಲಿ ನಿರ್ಮಿತವಾಗಿರುವ "ಬೃಂದಾವನ" ಎಂಬ **ವಾಸಯೋಗ್ಯ ಅಪಾರ್ಟ್‌ಮೆಂಟ್ ಯೂನಿಟ್ ನಂ. 303** ರ ವಿಸ್ತೀರ್ಣ 1,565 ಚದರ ಅಡಿಯ ಸೂಪರ್ ಬಿಲ್ಟ್ ಅಪ್ ಪ್ರದೇಶ ಜೊತೆಗೆ ಸಮಾನುಪಾತದ ಪಾಲಿನಲ್ಲಿ ಸಾಮಾನ್ಯ ಪ್ರದೇಶಗಳು, ಲಾಬಿಗಳು, ಮೆಟ್ಟಿಲುಗಳು ಮತ್ತು ಸಾಮಾನ್ಯ ಬಳಕೆಯ ಇತರೆ ಪ್ರದೇಶಗಳು ಜೊತೆಗೆ ಸ್ಟಿಲ್ಟ್ ಮಟ್ಟದಲ್ಲಿ ಒಂದು ಮುಚ್ಚಿದ ಕಾರ್ ನಿಲುಗಡೆ ಸ್ಥಳ ಜೊತೆಗೆ 330 ಚದರ ಅಡಿಯ ಭೂಮಿಯಲ್ಲಿ ಅವಿಭಜಿತ ಪಾಲನ್ನು ಒಳಗೊಂಡಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಯೂನಿಟ್ ನಂ. 304, ಪಶ್ಚಿಮಕ್ಕೆ: ಯೂನಿಟ್ ನಂ. 302, ಉತ್ತರಕ್ಕೆ: ನಿವೇಶನ ನಂ. 61/1, ದಕ್ಷಿಣಕ್ಕೆ: ನಿವೇಶನ ನಂ. 62.

ದಿನಾಂಕ : 02.04.2026
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ.,

ಇಂಟರ್ ನ್ಯಾಷನಲ್ ಟೂರ್ಸ್

1 **ಕೈಲಾಸ ಮಾನಸ ಸರೋವರ ಯಾತ್ರಾ (ಹೆಲಿಕಾಪ್ಟರ್ ಹಾಗು ವಿಮಾನದಲ್ಲಿ)**
- ನೇಪಾಳ ಗಂಜ್ - ಸಿಮಿಕೋಟ್ - ನೇಪಾಳ ಗಂಜ್ - ವಿಮಾನ ಪ್ರಯಾಣ
- ಸಿಮಿಕೋಟ್ - ಹಿಲ್ಸಾ - ಸಿಮಿಕೋಟ್ - ಹೆಲಿಕಾಪ್ಟರ್ ಪ್ರಯಾಣ
- ಚೀನಾ - ಟಿಬೆಟ್ ಪ್ರದೇಶ - ಬಸ್ಸಿನಲ್ಲಿ ಪ್ರಯಾಣ

ದಿನಾಂಕ: MAY 27. JUN 5, 14, 26. JUL 4, 12, 25. AUG 2, 10, 24. SEP 1, 9, 18, 22.
10 ದಿನಗಳು | 7022259008

2 **ಸಿಂಗಾಪುರ್ - ಮಲೇಷಿಯಾ - ಥೈಲ್ಯಾಂಡ್**
ಸಿಂಗಾಪುರ್: ಯೂನಿವರ್ಸಲ್ ಸ್ಟುಡಿಯೋ, ಸೆಂಟೋಸಾ ಐಲ್ಯಾಂಡ್, ಕೇಬಲ್ ಕಾರ್, ಗಾರ್ಡನ್ಸ್ ಬೈ ದ ಬೇ, ಸಿಂಗಾಪುರ್ ಓಷನೇರಿಯಂ, ಬರ್ಡ್ ಪ್ಯಾರಡೈಸ್, ಟ್ರಾಮ್ ರೈಡ್, ನೈಟ್ ಸಫಾರಿ. **ಮಲೇಷಿಯಾ:** ಕೌಲಾಲಂಪುರ್ ಸಿಟಿ ಟೂರ್, ಪುತ್ರಜಯ, ಜೆಂಟಿಂಗ್ ಹೈ ಲ್ಯಾಂಡ್. **ಥೈಲ್ಯಾಂಡ್:** ಪಟ್ಟಾಯ, ಕೋರಲ್ ಐಲ್ಯಾಂಡ್, ಅಲ್ಕಝರ್ ಶೋ, ನೋಂಗ್ ನೂಚ್ ವಿಲೇಜ್, ಬ್ಯಾಂಕಾಕ್ ಸಿಟಿ ಟೂರ್, ಸಫಾರಿ ವರ್ಲ್ಡ್, ಮರೈನ್ ಪಾರ್ಕ್.
ದಿನಾಂಕ: MAY 14, 21. JUN 4, 18. JUL 2, 16. AUG 6, 13, 20. SEP 3, 17, 24. OCT 1, 15, 29. NOV 5, 19, 26. DEC 3, 10.
4/5/8/12/16 ದಿನಗಳು | 7483366378

3 **ಇಂಗ್ಲೆಂಡ್ ಮತ್ತು ಯುರೋಪ್**
ಇಂಗ್ಲೆಂಡ್, ಫ್ರಾನ್ಸ್, ಬೆಲ್ಜಿಯಂ, ನೆದರ್ ಲ್ಯಾಂಡ್ಸ್, ಲಿಕ್ಟನ್ ಸ್ಟನ್, ಲಕ್ಸಮ್ ಬರ್ಗ್, ಆಸ್ಟ್ರಿಯ, ಜರ್ಮನಿ, ಸ್ವಿಝರ್ ಲ್ಯಾಂಡ್, ಇಟಲಿ, ವ್ಯಾಟಿಕನ್.
ದಿನಾಂಕ: JUN 9, 23. JUL 14, 28. AUG 11, 25. SEP 15, 29. OCT 13, 27. NOV 10.
16 ದಿನಗಳು | 7022259008



4 **ಬೆಸ್ಟ್ ಆಫ್ ಯುರೋಪ್**
ಫ್ರಾನ್ಸ್, ಬೆಲ್ಜಿಯಂ, ನೆದರ್ ಲ್ಯಾಂಡ್ಸ್, ಲಿಕ್ಟನ್ ಸ್ಟನ್, ಲಕ್ಸಮ್ ಬರ್ಗ್, ಆಸ್ಟ್ರಿಯ, ಜರ್ಮನಿ, ಸ್ವಿಝರ್ ಲ್ಯಾಂಡ್, ಇಟಲಿ, ವ್ಯಾಟಿಕನ್.
ದಿನಾಂಕ: JUN 12, 19, 26. JUL 3, 17, 31. AUG 7, 14, 28. SEP 4, 18, 25. OCT 2, 16, 30. NOV 6, 13.
13 ದಿನಗಳು | 9364104366

5 **ಯುನೈಟೆಡ್ ಕಿಂಗ್ ಡಮ್**
ಡಬ್ಲಿನ್, ಟ್ರಿನಿಟಿ ಕಾಲೇಜ್, ಬೆಲ್ ಫಾಸ್ಟ್, ಟೈಟಾನಿಕ್ ಮ್ಯೂಸಿಯಂ, ಗ್ಲಾಸ್ಗೋ, ಎಡಿನ್ ಬರಾ, ವಿಂಡರ್ ಮಿಯರ್ ಲೇಕ್, ಮ್ಯಾಂಚೆಸ್ಟರ್, ಆಕ್ಸ್ ಫರ್ಡ್, ಲಂಡನ್, ಲಂಡನ್ ಐ ಮತ್ತು ಟವರ್, ಓವಲ್ ಕ್ರಿಕೆಟ್ ಸ್ಟೇಡಿಯಂ, ಥೇಮ್ಸ್ ರಿವರ್ ಕ್ರೂಸ್.
ದಿನಾಂಕ: JUN 9, 23. JUL 14, 28. AUG 11, 25. SEP 15, 29. OCT 13, 27. NOV 10.
11 ದಿನಗಳು | 7975001525

6 **ಬಾಲಿ - ದ ಲ್ಯಾಂಡ್ ಆಫ್ ಗಾಡ್ಸ್**
ಡೆನ್ ಪಸರ್, ನುಸಾ ಪೆನಿಡಾ ಐಲ್ಯಾಂಡ್, ಕಿಂತಾಮಣಿ, ಉಬುದ್, ಗರುಡ ವಿಷ್ಣು ಕಲ್ಚರಲ್ ಪಾರ್ಕ್, ತನಾಹ್ ಲಾಟ್, ಬೆರಾಟನ್ ಲೇಕ್, ಉಲಾನ್ ದಾನು, ತಮನ್ ಆಯುನ್, ತಂಜುಂಗ್ ಬೆನೋವಾ ಬೀಚ್, ಉಲು ವಾಟು, ಬೈಸಾಕಿ, ತೀರ್ಥ ಎಂಪುಲ್, ತೀರ್ಥ ಗಂಗಾ, ಕಿಂಗ್ ಪ್ಯಾಲೇಸ್, ಬ್ಯಾಟ್ ಕೇವ್ಸ್ ಟೆಂಪಲ್.
ದಿನಾಂಕ : MAY 4, 11, 18. JUN 1, 15. JUL 6, 20. AUG 3, 17. SEP 7, 14, 21. OCT 5, 12, 26. NOV 2, 9, 16, 23. DEC 7, 14.
5/7/9 ದಿನಗಳು | 7022259003

7 **ವಿಯೆಟ್ನಾಮ್ - ಕಾಂಬೋಡಿಯಾ**
ವಿಯೆಟ್ನಾಮ್: ಹಾನೋಯ್, ನಿನ್ ಬಿನ್, ಹೊಲಾಂಗ್ ಬೇ, ದ ನಾಂಗ್, ಹೊಯ್ ಆನ್, ಬಾ ನಾ ಹಿಲ್ಸ್, ಮೆಕಾಂಗ್ ಡೆಲ್ಟಾ, ಹೊಚಿಮಿನ್ ಸಿಟಿ, ಕು ಚಿ ಟನಲ್ಸ್. ಕಾಂಬೋಡಿಯಾ: ನೊಮ್ ಫೆನ್, ಸಿಯಾಮ್ ರೀಪ್, ಅಂಕೋರ್ ವಾಟ್, ಟೋನ್ಲೆ ಸಾಪ್, ಥೌಸಂಡ್ ಲಿಂಗ ರಿವರ್,
ದಿನಾಂಕ: MAY 7, 14, 21. JUN 4, 18. JUL 9, 23. AUG 6, 13, 20. SEP 10, 17, 24. OCT 1, 15, 29. NOV 5, 19, 26. DEC 3, 10
4/6/7/10/12 ದಿನಗಳು | 7022259007

8 **ನೇಪಾಳ - ಮುಕ್ತಿನಾಥ – ಜನಕಪುರ**
ಲುಂಬಿನಿ, ಪೋಕ್ರಾ, ಜೋಮ್ ಸಮ್, ಮುಕ್ತಿನಾಥ, ಫೀವಾ ಲೇಕ್, ಮನೋಕಾಮನ, ಕಟ್ಮಂಡು, ಭಕ್ತಪುರ, ಡೋಲೇ ಶ್ವರ ಮಹಾದೇವ, ಜನಕಪುರ
ದಿನಾಂಕ: APR 23. MAY 7, 21. JUN 4, 18. JUL 9, 23. AUG 13, 27. SEP 10, 24. OCT 1, 22, 29. NOV 12, 26.
9 ದಿನಗಳು | 9364088424

9 **ಭೂತಾನ್ – ದ ಲ್ಯಾಂಡ್ ಆಫ್ ಹ್ಯಾಪಿನೆಸ್**
ಫುನ್ ಶೋಲಿಂಗ್, ಪುನಾಖ, ಪಾರೋ, ಥಿಂಪು.
ದಿನಾಂಕ: APR 23. MAY 7, 21. JUN 4, 18. JUL 9, 23. AUG 13, 27. SEP 10, 24. OCT 1, 15, 22, 29. NOV 12, 26. DEC 3, 17.
8 ದಿನಗಳು | 9364104373

10 **ಹಾಂಗ್ ಕಾಂಗ್ – ಮಖಾವು - ಶೆಂಜನ್**
ಡಿಸ್ನಿ ಲ್ಯಾಂಡ್, ವಿಕ್ಟೋರಿಯಾ ಪೀಕ್, ಮೇಡಂ ತುಸಾಡ್ಸ್, ವಿಕ್ಟೋರಿಯಾ ಹಾರ್ಬರ್, ಶೆಂಜನ್ ಓಷನ್ ಪಾರ್ಕ್, ಮಖಾವು.
ದಿನಾಂಕ: MAY 7, 14, 21. JUN 4, 18. JUL 9, 23. AUG 13, 20. SEP 17, 24. OCT 1, 15, 29. NOV 5, 12, 19. DEC 3, 10.
7 ದಿನಗಳು | 7022259008

11 **ಸ್ಕಾಂಡಿನೇವಿಯ**
ಫಿನ್ ಲ್ಯಾಂಡ್, ಹೆಲ್ ಸಿಂಕಿ, ಸಿಲ್ಯಾ ಲೈನ್ ಕ್ರೂಸ್, ಸ್ಟಾಕ್ ಹೋಮ್, ವಾಸಾ ಶಿಪ್ ಮ್ಯೂಸಿಯಂ, ಡ್ರಾಟಿಂಗ್ ಹೋಮ್ ಪ್ಯಾಲೇಸ್, ನಾರ್ವೆ ಇನ್ ನಟ್ ಶೆಲ್, ಓಸ್ಲೊ, ಗುಸ್ತಾವ್ ವಿಜಿಲ್ಯಾಂಡ್ ಪಾರ್ಕ್, ಫಿಯಾರ್ಡ್ ಕ್ರೂಸ್, ಕೋಪನ್ ಹೇಗನ್
ದಿನಾಂಕ: MAY 29. JUN 12, 26. JUL 10, 24. AUG 14, 28. SEP 4, 18.
10 ದಿನಗಳು | 7022259003

12 **ಈಸ್ಟ್ ಯುರೋಪ್**
ಜರ್ಮನಿ, ಹಂಗರಿ, ಝೆಕ್ ರಿಪಬ್ಲಿಕ್, ಸ್ಲೊವೇಕಿಯಾ, ಆಸ್ಟ್ರಿಯಾ, ಕ್ರೋವೆಷಿಯ, ಸ್ಲೋವೆನಿಯ, ಮ್ಯೂನಿಚ್, ಬರ್ಲಿನ್, ಟೆರರ್ ಮ್ಯೂಸಿಯಂ, ಡ್ರೆಸ್ ಡನ್, ಪ್ರೇಗ್, ವಿಯೆನ್ನಾ, ಬುಡಾ ಪೆಸ್ಟ್, ದಾನುಬೆ ರಿವರ್ ಕ್ರೂಸ್, ಹಂಗರಿಯನ್ ಹಾರ್ಸ್ ಶೋ.
ದಿನಾಂಕ: JUN 5, 19. JUL 3, 17. AUG 7, 21. SEP 4, 18. OCT 2, 16. NOV 6, 13.
11 ದಿನಗಳು | 9364104366



13 **ರಷ್ಯಾ**
ಕ್ರೆಮ್ಲಿನ್, ರೆಡ್ ಸ್ಕ್ವೇರ್, ಕ್ಯಾತೆಡ್ರಲ್ ಆಫ್ ಕ್ರಿಸ್ಟ್ ದ ಸೇವಿಯರ್, ಸ್ಪಾರೋ ಹಿಲ್ಸ್, ಮೋಸ್ಕ್ವಾ ರಿವರ್ ಬೋಟ್ ರೈಡ್, ಪೀಟರ್ ಹೊಫ್ ಪ್ಯಾಲೇಸ್, ಸ್ಯಾಪ್ ಸನ್ ಟ್ರೈನ್, ವಾಸಿಲಿವಸ್ಕೈ ಐಲ್ಯಾಂಡ್, ಅನಿಕೋವ್ ಬ್ರಿಡ್ಜ್, ಪೀಟರ್ ಅಂಡ್ ಪಾಲ್ಸ್ ಫೋರ್ಟ್ರಸ್, ಪ್ಯಾಲೇಸ್ ಸ್ಕ್ವೇರ್, ಪುಶ್ಕಿನ್, ಅಲೆಕ್ಸಂಡರ್ ಕಾಲಂ ಮೋನ್ಯೂಮೆಂಟ್.
ದಿನಾಂಕ: MAY 4, 18. JUN 8, 22. JUL 6, 20. AUG 10, 24. SEP 7, 21. OCT 5, 12, 19. NOV 2, 9.
7 ದಿನಗಳು | 9364104373

ಅಡಿಗಾಸ್ ಯಾತ್ರಾ

+91 94494 78944
www.adigasyatra.com
News Website : www.adigasyatranews.com
care@adigasyatra.com

Follows Us :
Facebook | Instagram | News Website | Youtube

2,562 ಹೆಣ್ಣು ಮಕ್ಕಳಿಗೆ ಎಚ್‌ಪಿವಿ ಲಸಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಬಿಎ ವ್ಯಾಪ್ತಿಯಲ್ಲಿ 2,562 ಹೆಣ್ಣುಮಕ್ಕಳಿಗೆ ಹ್ಯೂಮನ್ ಪ್ಯಾಪಿಲೋಮಾ ವೈರಸ್ (ಎಚ್‌ಪಿವಿ) ನಿರೋಧಕ ಲಸಿಕೆ ನೀಡಿದ್ದು, ಯಾವುದೇ ಅಡ್ಡ ಪರಿಣಾಮದ ಬಗ್ಗೆ ವರದಿಯಾಗಿಲ್ಲ ಎಂದು ಆರೋಗ್ಯ ವಿಭಾಗದ ವಿಶೇಷ ಆಯುಕ್ತರು ತಿಳಿಸಿದರು.

365 ವಾರ್ಡುಗಳಲ್ಲಿ ಸುಮಾರು 1,18,339 ಹೆಣ್ಣು ಮಕ್ಕಳಿಗೆ ಲಸಿಕೆ ನೀಡುವ ಗುರಿ ಹೊಂದಲಾಗಿದೆ. ಈ ಲಸಿಕೆಯನ್ನು 145 ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ನೀಡಲಾಗುತ್ತಿದೆ. ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕೆ ಪಡೆದಿರುವ ಮಕ್ಕಳಿಗೆ ಮರು ಲಸಿಕೆ ನೀಡುವುದಿಲ್ಲ ಎಂದರು.

ಮಹಿಳೆಯರನ್ನು ಕಾಡುವ ಕ್ಯಾನ್ಸರ್‌ನಲ್ಲಿ ಗರ್ಭಕಂಠ ಕ್ಯಾನ್ಸರ್ ಪ್ರಮುಖವಾಗಿದೆ. 2022ರಲ್ಲಿ ಸುಮಾರು 79,103 ಪ್ರಕರಣಗಳು ವರದಿಯಾಗಿದ್ದು, 34,805 ಮಹಿಳೆಯರು ಮೃತಪಟ್ಟಿದ್ದಾರೆ. ಈ ಕ್ಯಾನ್ಸರ್‌ಗೆ ಪ್ರಮುಖ ಕಾರಣವೆಂದರೆ ಹ್ಯೂಮನ್ ಪ್ಯಾಪಿಲೋಮಾ ವೈರಸ್ ಸೋಂಕು. ವೈಯಕ್ತಿಕ ಸ್ವಚ್ಛತೆ ಕೊರತೆ, ಜನನಾಂಗಗಳಲ್ಲಿ ಉಂಟಾಗುವ ತೊಂದರೆಗಳು, ಅಸುರಕ್ಷಿತ ಲೈಂಗಿಕ ಸಂಪರ್ಕ ಇತ್ಯಾದಿಗಳಿಂದ ಈ ಸೋಂಕು ಉಂಟಾಗಿ, ಕ್ರಮೇಣ ಗರ್ಭಕಂಠದ ಜೀವಕೋಶಗಳಲ್ಲಿ ಬದಲಾವಣೆ ಉಂಟುಮಾಡಿ ಕ್ಯಾನ್ಸರ್‌ಗೆ ಕಾರಣವಾಗುತ್ತದೆ. ಗರ್ಭಕಂಠ ಕ್ಯಾನ್ಸರ್ ಒಂದು ಪ್ರಮುಖ ಸಾರ್ವಜನಿಕ ಆರೋಗ್ಯ ಸಮಸ್ಯೆಯಾಗಿರುವುದರಿಂದ, 14ನೇ ವಯಸ್ಸಿನಲ್ಲಿಯೇ ಲಸಿಕೆಯನ್ನು ನೀಡುವುದರಿಂದ ಭವಿಷ್ಯದಲ್ಲಿ ಸೋಂಕಿನಿಂದ ರಕ್ಷಣೆ ಒದಗಿಸಲು ಸಾಧ್ಯವಾಗುತ್ತದೆ ಎಂದರು.

'ಪಾಲಕರು ಯಾವುದೇ ತಪ್ಪು ಕಲ್ಪನೆಗಳು ಅಥವಾ ಸಾಮಾಜಿಕ ಜಾಲತಾಣಗಳಲ್ಲಿ ಹರಡುವ ಸುಳ್ಳು ಮಾಹಿತಿಗಳ ಪ್ರಭಾವಕ್ಕೆ ಒಳಗಾಗದೆ, ತಮ್ಮ ಮಕ್ಕಳ ಭವಿಷ್ಯದ ಆರೋಗ್ಯ ದೃಷ್ಟಿಯಿಂದ ಸಮೀಪದ ಆರೋಗ್ಯ ಕೇಂದ್ರಗಳನ್ನು ಸಂಪರ್ಕಿಸಿ 14ರಿಂದ 15 ವರ್ಷದ ಎಲ್ಲಾ ಹೆಣ್ಣು ಮಕ್ಕಳಿಗೂ ಎಚ್‌ಪಿವಿ ಲಸಿಕೆ ಹಾಕಿಸುವಂತೆ ವಿನಂತಿಸಲಾಗಿದೆ. ಪೋಷಕರ ಸಹಕಾರದಿಂದ ಈ ಅಭಿಯಾನ ಯಶಸ್ವಿಗೊಳಿಸಲು ಸಾಧ್ಯವಾಗುತ್ತದೆ' ಎಂದು ಹೇಳಿದರು.

ಲಸಿಕೆ ನೀಡಿದ ನಂತರ ಇ-ಪ್ರಮಾಣಪತ್ರವನ್ನು ನೀಡಲಾಗುತ್ತದೆ. ಪೋಷಕರು ಪೋರ್ಟಲ್‌ನಲ್ಲಿ (https://uwin.mohfw.gov.in/home) ನೋಂದಣಿ ಮಾಡಿಕೊಂಡು ಕೇಂದ್ರಕ್ಕೆ ಭೇಟಿ ನೀಡಬಹುದು ಎಂದರು.

ವಾಣಿವಿಲಾಸ ಆಸ್ಪತ್ರೆಯಲ್ಲಿ ಐವಿಎಫ್ ಚಿಕಿತ್ಸೆ

ಖಾಸಗಿ ವ್ಯವಸ್ಥೆಯಡಿ ಚಿಕಿತ್ಸೆ ದುಬಾರಿಯಾಗಿರುವ ಕಾರಣ ಕೇಂದ್ರ ನಿರ್ಮಾಣಕ್ಕೆ ರಾಜ್ಯ ಸರ್ಕಾರದ ಕ್ರಮ

8-9 ಸಾವಿರ, ವಾಣಿವಿಲಾಸ ಆಸ್ಪತ್ರೆಗೆ ತಿಂಗಳಿಗೆ ಭೇಟಿ ನೀಡುವ ಹೊರರೋಗಿಗಳು

1,300-1,500 ಆಸ್ಪತ್ರೆಯಲ್ಲಿ ತಿಂಗಳಿಗೆ ನಡೆಯುವ ಹೆರಿಗೆಗಳು

• ವರುಣ ಹೆಗಡೆ

ಬೆಂಗಳೂರು: ಬದಲಾದ ಜೀವನಶೈಲಿ ಸೇರಿ ವಿವಿಧ ಕಾರಣಗಳಿಂದ ಜನರಲ್ಲಿ ಫಲವತ್ತತೆ ದರ ಕುಸಿಯುತ್ತಿದ್ದು, ಇದರಿಂದ ಮಕ್ಕಳನ್ನು ಹೊಂದುವ ಕನಸು ಎಲ್ಲ ದಂಪತಿಗೆ ಸಾಕಾರವಾಗುತ್ತಿಲ್ಲ. ಆದ್ದರಿಂದ ನಗರದ ವಾಣಿವಿಲಾಸ ಆಸ್ಪತ್ರೆಯಲ್ಲಿ ರಾಜ್ಯ ಸರ್ಕಾರವು ಐವಿಎಫ್ (ಕೃತಕ ಗರ್ಭಧಾರಣೆ) ಚಿಕಿತ್ಸಾ ಕೇಂದ್ರ ಪ್ರಾರಂಭಿಸುತ್ತಿದೆ.

ಖಾಸಗಿ ವ್ಯವಸ್ಥೆಯಡಿ ಐವಿಎಫ್ ಚಿಕಿತ್ಸೆ ದುಬಾರಿ ಆಗಿರುವುದರಿಂದ, ಬಡ-ಮಧ್ಯಮ ವರ್ಗದ ಕುಟುಂಬಗಳಿಗೆ ಮಕ್ಕಳು ಹೊಂದುವ ಬಯಕೆ ಕನಸಾಗಿಯೇ ಉಳಿಯುತ್ತಿದೆ. ಇನ್ನೊಂದೆಡೆ ಐವಿಎಫ್ ಚಿಕಿತ್ಸೆಗೆ ಬೇಡಿಕೆ ಹೆಚ್ಚುತ್ತಿರುವ ಕಾರಣ, ನಗರದಲ್ಲಿ ಖಾಸಗಿ ವ್ಯವಸ್ಥೆಯಡಿ ಈ ಚಿಕಿತ್ಸಾ ಕೇಂದ್ರಗಳ ಸಂಖ್ಯೆ ಹೆಚ್ಚುತ್ತಿದೆ. ಆದ್ದರಿಂದ ಸರ್ಕಾರಿ ವ್ಯವಸ್ಥೆಯಡಿ ಈ ಕೇಂದ್ರ ನಿರ್ಮಿಸುವ ಪ್ರಸ್ತಾವ ಇತ್ತು. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕ್ರಮ ಕೈಗೊಂಡಿದ್ದು, ಸದ್ಯ ₹1 ಕೋಟಿ ಅನುದಾನವನ್ನು ಒದಗಿಸುತ್ತಿದೆ. ಸಿಎಸ್‌ಆರ್ ಅನ್ನೂ ಬಳಸಿಕೊಳ್ಳಲಾಗುತ್ತಿದ್ದು, ಆಸ್ಪತ್ರೆಯ ನೂತನ ಕಟ್ಟಡದಲ್ಲಿ ಐವಿಎಫ್ ಕೇಂದ್ರ ಕಾರ್ಯಾರಂಭ ಮಾಡಲಿದೆ.

ಐವಿಎಫ್ ಕೇಂದ್ರಕ್ಕೆ ನೂತನ ಕಟ್ಟಡದಲ್ಲಿ ಸ್ಥಳಾವಕಾಶವಿದೆ. ಪ್ರತ್ಯೇಕ ಮೂಲಸೌಕರ್ಯ, ಉಪಕರಣ ಹಾಗೂ ಮಾನವ ಸಂಪನ್ಮೂಲ ಅಗತ್ಯವಿದ್ದು, ಈ ವರ್ಷಾಂತ್ಯದೊಳಗೆ ಪ್ರಾರಂಭವಾಗಲಿದೆ

ಡಾ. ಸವಿತಾ ಸಿ., ವಾಣಿವಿಲಾಸ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿ

ವಾಣಿವಿಲಾಸ ನಗರದ ಪ್ರಮುಖ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಾಗಿದೆ. ಇದು ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಡಿ ಕಾರ್ಯನಿರ್ವಹಿಸುತ್ತಿದೆ. ರಾಜ್ಯದ ಅತಿ ದೊಡ್ಡ ತಾಯಿ-ಮಗುವಿನ ಆಸ್ಪತ್ರೆಯೂ ಇದಾಗಿದೆ. ತೃತೀಯ ಹಂತದ ಸಂಕೀರ್ಣ ಪ್ರಕರಣಗಳು ಹೆಚ್ಚಾಗಿ ಇಲ್ಲಿಗೆ ಶಿಫಾರಸು ಆಧಾರದಲ್ಲಿ ಬರುತ್ತಿವೆ. ಆಸ್ಪತ್ರೆಯ ಹೊರರೋಗಿ ವಿಭಾಗಕ್ಕೆ ಪ್ರತಿನಿತ್ಯ ಸರಾಸರಿ 250ರಿಂದ 300 ಮಂದಿ ಭೇಟಿ ನೀಡುತ್ತಿದ್ದಾರೆ. ಪ್ರತಿ ತಿಂಗಳು ಸಾವಿರಕ್ಕೂ ಅಧಿಕ ಹೆರಿಗೆ ಮಾಡಿಸಲಾಗುತ್ತಿದೆ. ಆದ್ದರಿಂದ ಈ ಆಸ್ಪತ್ರೆಯಲ್ಲಿ ಐವಿಎಫ್ ಕೇಂದ್ರಕ್ಕೆ ಸರ್ಕಾರ ಕ್ರಮ ಕೈಗೊಂಡಿದೆ.

ದುಬಾರಿ ಚಿಕಿತ್ಸೆ: ಈ ಕೇಂದ್ರವು ತಜ್ಞ ವೈದ್ಯರ ಕೊಠಡಿಗಳು, ಪ್ರಯೋಗಾಲಯ, ನೋಂದಣಿ ಕೌಂಟರ್, ಸಮಾಲೋಚನಾ ಕೊಠಡಿ ಸೇರಿ ವಿವಿಧ ವಿಭಾಗಗಳನ್ನು ಹೊಂದಲಿದೆ. ಡೇ ಕೇರ್ ಸೆಂಟರ್‌ನಂತೆ (ಹೊರರೋಗಿ ವಿಭಾಗ) ಕಾರ್ಯನಿರ್ವಹಿಸಲಿದೆ. ಐವಿಎಫ್‌ಗೆ ನಿಗದಿಪಡಿಸಲಾದ ಮಾನದಂಡದ ಅನುಸಾರ ಕೇಂದ್ರವನ್ನು ಸಜ್ಜುಗೊಳಿಸಲಾಗುತ್ತದೆ. ಬಳಿಕ ಸ್ತ್ರೀರೋಗ ತಜ್ಞರು ಒಳಗೊಂಡಂತೆ ಅಗತ್ಯ ವೈದ್ಯರು ಹಾಗೂ ಸಿಬ್ಬಂದಿಯನ್ನು ನಿಯೋಜಿಸಲಾಗುತ್ತದೆ ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.

'ಮಕ್ಕಳಾಗದೆ ಇರುವ ಮಹಿಳೆಯರ ಅಂಡಾಣು ಹಾಗೂ ಪುರುಷರ ವೀರ್ಯಾಣುವನ್ನು ಪ್ರಯೋಗಾಲಯದಲ್ಲಿ ಫಲವತ್ತಾಗಿಸಿ, ನಂತರ ಭ್ರೂಣವನ್ನು ಮಹಿಳೆಯ ಗರ್ಭಕ್ಕೆ ಸೇರಿಸುವ ಕಾರ್ಯವಿಧಾನವೇ ಐವಿಎಫ್. ಬಂಜೆತನದಿಂದ ಬಳಲುತ್ತಿರುವ ದಂಪತಿಗಳಿಗೆ ಮಕ್ಕಳನ್ನು ಹೊಂದಲು ಈ ತಂತ್ರಜ್ಞಾನ ವರದಾನವಾಗಿ ಪರಿಣಮಿಸಿದೆ. ಖಾಸಗಿ ಕ್ಲಿನಿಕ್‌ಗಳಲ್ಲಿ ಈ ಚಿಕಿತ್ಸೆಗೆ ₹1.5 ಲಕ್ಷದಿಂದ ₹ 5 ಲಕ್ಷದವರೆಗೆ ವೆಚ್ಚವಾಗಲಿದೆ' ಎಂದು ಆಸ್ಪತ್ರೆಯ ಸ್ತ್ರೀರೋಗ ತಜ್ಞರೊಬ್ಬರು ವಿವರಿಸಿದರು.

'ಆಯುಷ್ಮಾನ್' ಅಡಿ ಚಿಕಿತ್ಸೆ

ಮಕ್ಕಳಾಗದ ದಂಪತಿಗಳಿಗೆ 'ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನಾರೋಗ್ಯ ಯೋಜನೆ-ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ ಯೋಜನೆಯಡಿ' ಸಂತಾನೋತ್ಪತ್ತಿ ಚಿಕಿತ್ಸೆಗಳನ್ನು ನೀಡಲು ಇತ್ತೀಚೆಗೆ ಅವಕಾಶ ಕಲ್ಪಿಸಲಾಗಿದೆ. ಯೋಜನೆಯಡಿ ಒಂದು ವರ್ಷದ ಅವಧಿಗೆ ಬಿಪಿಎಲ್ ಕುಟುಂಬದ 120 ದಂಪತಿಗೆ ಮಾತ್ರ ಈ ಚಿಕಿತ್ಸೆಗೆ ಅನುಮೋದನೆ ದೊರೆತಿದೆ. ಮುಂದಿನ ದಿನಗಳಲ್ಲಿ ಯೋಜನೆಯಡಿ ಇನ್ನಷ್ಟು ಕುಟುಂಬಗಳಿಗೆ ಸಂತಾನೋತ್ಪತ್ತಿ ಚಿಕಿತ್ಸೆ ಒದಗಿಸಲು ಆರೋಗ್ಯ ಇಲಾಖೆಯು ಚಿಂತನೆ ನಡೆಸಿದ್ದು, ವಾಣಿವಿಲಾಸ ಆಸ್ಪತ್ರೆಯಲ್ಲಿ ಐವಿಎಫ್ ಚಿಕಿತ್ಸೆ ಪ್ರಾರಂಭವಾದ ಬಳಿಕ, ಇಲ್ಲಿ ಯೋಜನೆಯಡಿ ಚಿಕಿತ್ಸೆ ದೊರೆಯುವ ಸಾಧ್ಯತೆಯಿದೆ.

'ಫಲವತ್ತತೆ ದರ ಕುಸಿತ'

'ಬದಲಾದ ಜೀವನ ಶೈಲಿಯ ಜತೆಗೆ, ಪಾಶ್ಚಾತ್ಯ ಆಹಾರ ಪದ್ಧತಿ, ತಡವಾಗಿ ವಿವಾಹ, ಕೆಲಸದ ಹಾಗೂ ಮಾನಸಿಕ ಒತ್ತಡ ಸೇರಿ ವಿವಿಧ ಕಾರಣದಿಂದ ಇತ್ತೀಚಿನ ವರ್ಷಗಳಲ್ಲಿ ಜನರಲ್ಲಿ ಫಲವತ್ತತೆ ದರ ಕುಸಿಯುತ್ತಿದೆ. ಇದರಿಂದಾಗಿ ಐವಿಎಫ್ ಚಿಕಿತ್ಸೆಗೆ ಬೇಡಿಕೆ ಹೆಚ್ಚುತ್ತಿದೆ. ಖಾಸಗಿ ವ್ಯವಸ್ಥೆಯಲ್ಲಿ ಈ ಚಿಕಿತ್ಸೆ ದುಬಾರಿ. ಬಡ-ಮಧ್ಯಮ ವರ್ಗದವರ ದೃಷ್ಟಿಯಿಂದ ಸರ್ಕಾರಿ ವ್ಯವಸ್ಥೆಯಡಿ ಈ ಚಿಕಿತ್ಸೆ ಪ್ರಾರಂಭಿಸಲಾಗುತ್ತಿದೆ' ಎಂದು ವಾಣಿವಿಲಾಸ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿ ಡಾ. ಸವಿತಾ ಸಿ. ತಿಳಿಸಿದರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಘಟಿಕೋತ್ಸವ: ರಾಜ್ಯಪಾಲರ ಮನವಿ

'ಸಂಸ್ಕೃತ ಜ್ಞಾನ ಪರಂಪರೆ ಉಳಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾರತದ ಪ್ರಾಚೀನ ಜ್ಞಾನ ಪರಂಪರೆಯನ್ನು ಆಧುನಿಕ ತಂತ್ರಜ್ಞಾನ ದೊಟ್ಟಿಗೆ ಜೋಡಿಸುವ ಅಗತ್ಯವಿದೆ. ಆ ಮೂಲಕ ಸಂಸ್ಕೃತದ ಶ್ರೀಮಂತ ಪರಂಪರೆಯನ್ನು ಅಜರಾಮರವಾಗಿಸಬೇಕು' ಎಂದು ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಅಭಿಪ್ರಾಯಪಟ್ಟರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 12 ಮತ್ತು 13ನೇ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ ಅವರು ಮಾತನಾಡಿದರು.

'ಸಂಸ್ಕೃತದಲ್ಲಿ ಇರುವ ಜ್ಞಾನ ಪರಂಪರೆಯನ್ನು ಡಿಜಿಟಲ್ ಸ್ವರೂಪದಲ್ಲಿ ದಾಖಲಿಸುವ ಅಗತ್ಯವಿದೆ. ಹಲವು ಭಾಷೆಗಳಿಗೆ ಸಂಸ್ಕೃತವು ಜನನಿಯಾಗಿದೆ. ಜಗತ್ತು ಈಗ ಪರಿಸರ ಸಮಸ್ಯೆ ಮತ್ತು ನೈತಿಕ ಮೌಲ್ಯಗಳ ಕುಸಿತದ ಅಪಾಯದಲ್ಲಿವೆ. ಸಂಸ್ಕೃತದಲ್ಲಿರುವ ಜ್ಞಾನ ಪರಂಪರೆಯಲ್ಲಿ ಈ ಸಮಸ್ಯೆಗಳಿಗೆ ಪರಿಹಾರವಿದೆ. ವಿಕಸಿತ ಭಾರತ ಗುರಿ ಸಾಧನೆಗೆ ಇದರಿಂದ ನೆರವಾಗಲಿದೆ. ಯುವ ಸಮೂಹವು ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕು' ಎಂದರು.

ಸಂಸದ ಡಾ.ಸಿ.ಎನ್.ಮಂಜುನಾಥ್, 'ಕನ್ನಡವನ್ನೂ ಒಳಗೊಂಡು ಹಲವು ಭಾಷೆಗಳ ಮೇಲೆ ಸಂಸ್ಕೃತದ ಪ್ರಭಾವ ಇದೆ. ಸಂಸ್ಕೃತ ಕೇವಲ ಒಂದು ಭಾಷೆ ಅಲ್ಲ. ಅದು ನಮ್ಮ ನೈತಿಕ ಮೌಲ್ಯ, ಸಿದ್ಧಾಂತ, ಸಾಂಸ್ಕೃತಿಕ ಪರಂಪರೆಯ ಪ್ರತಿಬಿಂಬ. ಸಂಸ್ಕೃತ ಭಾಷೆಯಲ್ಲಿ ಜ್ಞಾನ ಸಂಪತ್ತು ಅಡಗಿದೆ. ಅದನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು' ಎಂದರು.

ವಿ.ವಿ ಕುಲಪತಿ ಪ್ರೊ. ಅಹಲ್ಯಾ ಎಸ್., 'ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಡಿಜಿಟಲ್ ಗ್ರಂಥಾಲಯ, ತಾಡು ಲಿಪಿ ಸಂರಕ್ಷಣೆ, ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಕುರಿತ ತರಬೇತಿ ಒಳಗೊಂಡು ಅಂತರರಾಷ್ಟ್ರೀಯ ಸಂಸ್ಥೆಗಳ ಸಹಯೋಗದಲ್ಲಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ' ಎಂದರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ (ಕುಳಿತವರು ಎಡದಿಂದ) ಆನಂದ ಥೇರೊ, ಪುಷ್ಪಾ ದೀಕ್ಷಿತ್, ವ್ಯಾಸನಕೆರೆ ಪ್ರಭಂಜನಾಚಾರ್ಯ, ಪ್ರೊ.ಎಚ್.ಎಂ.ಶಿಂಗಪ್ಪ ಮತ್ತು ಪ್ರೊ.ಸುಕಾಂತ್ ಕುಮಾರ್ ಸೇನಾಪತಿ ಅವರಿಗೆ ಗೌರವ ಡಿ.ಲಿಟ್ ಪ್ರದಾನ ಮಾಡಲಾಯಿತು. (ನಿಂತವರು ಎಡದಿಂದ) ಪ್ರೊ.ಅಹಲ್ಯಾ, ಥಾವರಚಂದ್ ಗೆಹಲೋತ್, ಡಾ.ಸಿ.ಎನ್. ಮಂಜುನಾಥ್ ಮತ್ತು ಗಿರೀಶ್ ಚಂದ್ರ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

ಐವರಿಗೆ ಗೌರವ ಡಿ.ಲಿಟ್ ಪದವಿ

ಬೌದ್ಧ ಭಿಕ್ಕು ಆನಂದ ಥೇರೊ, ಪುಷ್ಪಾ ದೀಕ್ಷಿತ್, ವ್ಯಾಸನಕೆರೆ ಪ್ರಭಂಜನಾಚಾರ್ಯ, ಪ್ರೊ.ಎಚ್.ಎಂ.ಶಿಂಗಪ್ಪ, ಪ್ರೊ.ಸುಶಾಂತ್ ಕುಮಾರ್ ಸೇನಾಪತಿ ಅವರಿಗೆ ಘಟಿಕೋತ್ಸವದಲ್ಲಿ ಗೌರವ ಡಿ.ಲಿಟ್ ಪದವಿಯನ್ನು ಪ್ರದಾನ ಮಾಡಲಾಯಿತು.

2023-24ನೇ ಸಾಲಿನ 21 ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ, 26 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಪ್ರದಾನ ಮಾಡಲಾಯಿತು. 2024-25ನೇ ಸಾಲಿನ 21 ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ಮತ್ತು 27 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಪ್ರದಾನ ಮಾಡಲಾಯಿತು. 36 ವಿದ್ಯಾರ್ಥಿಗಳಿಗೆ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಯಿತು.

ಸಂಕ್ಷಿಪ್ತ ಸುದ್ದಿ

ಏ. 27ಕ್ಕೆ ಘಟಿಕೋತ್ಸವ

ಬೆಂಗಳೂರು: ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯದ ಎರಡನೇ ಘಟಿಕೋತ್ಸವವು ಏಪ್ರಿಲ್ 27ರಂದು ಬೆಳಿಗ್ಗೆ 11.30ಕ್ಕೆ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ನಡೆಯಲಿದೆ.

2023-24 ಮತ್ತು 2024-25ನೇ ಸಾಲಿನಲ್ಲಿ ಪದವಿ ಮತ್ತು ಸ್ನಾತಕೋತರ ಪದವಿ ಪರೀಕ್ಷೆಗಳಲ್ಲಿ ಅರ್ಹರಾದವರಿಗೆ ಪದವಿ ಪ್ರಮಾಣಪತ್ರಗಳನ್ನು ವಿತರಿಸಲಾಗುತ್ತದೆ. ಅರ್ಹ ವಿದ್ಯಾರ್ಥಿಗಳು ಏ.10 ರೊಳಗೆ ನಿಗದಿತ ಶುಲ್ಕದೊಂದಿಗೆ ಘಟಿಕೋತ್ಸವಕ್ಕೆ ಅರ್ಜಿ ಸಲ್ಲಿಸಬೇಕು ಎಂದು ಕುಲಸಚಿವೆ ಮಮತಾದೇವಿ ಜಿ.ಎಸ್. ತಿಳಿಸಿದ್ದಾರೆ.

ಮಿಸ್ ಯೂನಿವರ್ಸ್ ಕರ್ನಾಟಕ ಸ್ಪರ್ಧೆ

ಬೆಂಗಳೂರು: ನಗರದ ಅರಮನೆ ಮೈದಾನದಲ್ಲಿ ನಡೆದ ಮಿಸ್ ಯೂನಿವರ್ಸ್ ಕರ್ನಾಟಕ-2026 ಗ್ರ್ಯಾಂಡ್ ಫಿನಾಲೆಯಲ್ಲಿ 38 ಸ್ಪರ್ಧಿಗಳು ಪಾಲ್ಗೊಂಡಿದ್ದರು.

ಲೇಖನಾ ಹೆಗ್ಡೆ 2026ರ ಮಿಸ್ ಯೂನಿವರ್ಸ್ ಕರ್ನಾಟಕ ಕಿರೀಟವನ್ನು ಮುಡಿಗೇರಿಸಿಕೊಂಡರು. ಸ್ಫೂರ್ತಿ ಶೆಟ್ಟಿ ಅವರು ಮೊದಲ ರನ್ನರ್ ಅಪ್ ಹಾಗೂ ಜಾಗೃತಿ ಚೋಪ್ರಾ ಎರಡನೇ ರನ್ನರ್ ಅಪ್ ಆಗಿ ಆಯ್ಕೆಯಾದರು. ಹದಿಹರೆಯದ ವಿಭಾಗದಲ್ಲಿ ಸಮೀಕ್ಷಾ ಪ್ರಸಾದ್ ಅವರು ಮಿಸ್ ಟೀನ್ ಕರ್ನಾಟಕ-2026 ಮುಡಿಗೇರಿಸಿಕೊಂಡರು. ಆಯುಷ್ಮಾ ಶಾಂಭವಿ ಮೊದಲ ರನ್ನರ್ ಅಪ್ ಮತ್ತು ವರ್ಷಾ ಎರಡನೇ ರನ್ನರ್ ಅಪ್ ಆಗಿ ಆಯ್ಕೆಯಾದರು ಎಂದು ಪ್ರಕಟಣೆ ತಿಳಿಸಿದೆ. ನಂದಿನಿ ನಾಗರಾಜ್ ಅವರು ಈ ಕಾರ್ಯಕ್ರಮವನ್ನು ಆಯೋಜಿಸಿದ್ದರು.

ಬಾಲಕಿಯರ ಗರ್ಭಧಾರಣೆ: ಲೆಕ್ಕಪರಿಶೋಧನೆ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 10-18 ವರ್ಷ ವಯಸ್ಸಿನ ಹೆಣ್ಣು ಮಕ್ಕಳ ಆರೋಗ್ಯ ಬಲಪಡಿಸುವ ಸಲುವಾಗಿ ಹದಿಹರೆಯದ ಗರ್ಭಧಾರಣೆ ಪ್ರಕರಣಗಳನ್ನು ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳು ಆರ್‌ಸಿಎಚ್ ವೇದಿಕೆಯಲ್ಲಿ ಕಡ್ಡಾಯವಾಗಿ ವರದಿ ಮಾಡಬೇಕು. ಸಂಬಂಧಪಟ್ಟ ತಾಲ್ಲೂಕು ಆರೋಗ್ಯಾಧಿಕಾರಿ ಲೆಕ್ಕಪರಿಶೋಧನೆ ನಡೆಸಿ ವರದಿ ನೀಡಬೇಕೆಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆದೇಶ ಹೊರಡಿಸಿದೆ.

ಈ ವಯಸ್ಸಿನ ಹೆಣ್ಣುಮಕ್ಕಳಲ್ಲಿ ಗರ್ಭಧಾರಣೆಯು ತಾಯಿಗೆ ತೊಡಕು, ಹೆರಿಗೆಯ ವೇಳೆ ಅನಾನುಕೂಲ, ಸಾಮಾಜಿಕ ಸಮಸ್ಯೆಗಳ ಅಪಾಯವನ್ನು ಸೃಷ್ಟಿಸುತ್ತದೆ. ಹದಿಹರೆಯದ ಗರ್ಭಧಾರಣೆಗಳು ವರದಿ ಆಗುತ್ತಲೇ ಇವೆ. ಇವು ಬಾಲ್ಯ ವಿವಾಹ, ಶಿಕ್ಷಣ ಮೊಟಕುಗೊಳಿಸುವುದು, ಸಾಮಾಜಿಕ ಸಮಸ್ಯೆ, ಸರ್ಕಾರಿ ಸೇವೆಗಳನ್ನು ಪಡೆಯುವಲ್ಲಿ ಅಡಚಣೆ ಉಂಟು ಮಾಡಬಹುದು. ಹೀಗಾಗಿ ಅಂತಹ ಪ್ರಕರಣಗಳನ್ನು ಪರಿಶೀಲಿಸಲು ವ್ಯವಸ್ಥಿತ ಕಾರ್ಯವಿಧಾನ ಅಗತ್ಯ. ಹಾಗಾಗಿ ಕಡ್ಡಾಯ ಲೆಕ್ಕ ಪರಿಶೋಧನೆ ನಡೆಸಬೇಕು. ಈ ಮೂಲಕ ಹದಿಹರೆಯದ ಗರ್ಭಧಾರಣೆಯನ್ನು ತಡೆಗಟ್ಟುವ ಗುರಿ ಹೊಂದಲಾಗಿದೆ ಎಂದು ಆದೇಶದಲ್ಲಿ ತಿಳಿಸಿದೆ.

ಮದುವೆ ವಯಸ್ಸು, ಶೈಕ್ಷಣಿಕ ಸ್ಥಿತಿ, ಶಾಲಾ ಹಾಜರಾತಿ, ಸಂತಾನೋತ್ಪತ್ತಿ ಆರೋಗ್ಯದ ಬಗ್ಗೆ ಜಾಗೃತಿ, ಗರ್ಭನಿರೋಧಕ ಮತ್ತು ಸಮಾಲೋಚನೆಗಳ ಸೇವೆಗಳ ಲಭ್ಯತೆ, ಸಾಮಾಜಿಕ ಆರ್ಥಿಕ ಮತ್ತು ಕೌಟುಂಬಿಕ ದೌರ್ಬಲ್ಯ, ಆರ್‌ಕೆಎಸ್‌ಕೆ, ಐಸಿಡಿಎಸ್ ಮತ್ತು ಶಾಲಾ ಆರೋಗ್ಯ ಕಾರ್ಯಕ್ರಮಗಳ ಅಡಿಯಲ್ಲಿ ಸೇವೆಗಳ ಕುರಿತ ಮಾಹಿತಿ ಎಲ್ಲವನ್ನೂ ಪಡೆಯಬೇಕು.

ಸಮಾಲೋಚಕರು ಮತ್ತು ಸ್ನೇಹ ಕೇಂದ್ರದ ಮೂಲಕ ಸಮಾಲೋಚನೆ ಸೇವೆ ನೀಡಬೇಕು. ಕಾರ್ಯಕ್ರಮದ ಮಾರ್ಗಸೂಚಿಗಳ ಪ್ರಕಾರ ಗರ್ಭನಿರೋಧಕ ಸೇವೆಗಳು ಮತ್ತು ಗರ್ಭಧಾರಣೆಯ ಪರೀಕ್ಷಾ ಕಿಟ್ ಒದಗಿಸಬೇಕು. ಶಾಲೆ ಬಿಟ್ಟವರು, ವಲಸಿಗರು ಮತ್ತು ಸಾಮಾಜಿಕವಾಗಿ ದುರ್ಬಲ ಕುಟುಂಬಗಳು ಸೇರಿ ಬಾಲಕಿಯರ ಗುರುತಿಸುವಿಕೆ ಮತ್ತು ಮ್ಯಾಪಿಂಗ್ ಮಾಡಬೇಕು. ಈ ಎಲ್ಲಾ ಲೆಕ್ಕ ಪರಿಶೋಧನೆ ಕುರಿತು ಡಿಎಚ್‌ಒ ಹಾಗೂ ರಾಜ್ಯ ಮಟ್ಟದಲ್ಲಿ ಉಪ ನಿರ್ದೇಶಕರು ಮೇಲ್ವಿಚಾರಣೆ ವಹಿಸಬೇಕು. ಗೌಪ್ಯತೆ ಕಾಪಾಡುವುದು ಕಡ್ಡಾಯ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಚೆಸ್: ಪ್ರತೀತಿ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಪ್ರತೀತಿ

ಬೆಂಗಳೂರು: ನಗರದ ಭರವಸೆಯ ಆಟಗಾರ್ತಿ ಪ್ರತೀತಿ ಬೋರ್ದೊಲಾಯಿ, ಅಹಮದಾಬಾದಿನಲ್ಲಿ ಮಂಗಳವಾರ ಮುಕ್ತಾಯಗೊಂಡ 35ನೇ ರಾಷ್ಟ್ರೀಯ 17 ವರ್ಷದೊಳಗಿನವರ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡರು. ಮೂರನೇ ಶ್ರೇಯಾಂಕದ ಈ ಆಟಗಾರ್ತಿ 11 ಸುತ್ತುಗಳಿಂದ 9 ಅಂಕಗಳನ್ನು ಸಂಗ್ರಹಿಸಿದರು.

ಶಿಷ್ಯ ಬೆಮೆಲ್ ಪಬ್ಲಿಕ್ ಸ್ಕೂಲ್‌ನ ವಿದ್ಯಾರ್ಥಿನಿಯಾಗಿರುವ ಪ್ರತೀತಿ, ಅಂತಿಮ ಸುತ್ತಿನಲ್ಲಿ ಆಂಧ್ರ ಪ್ರದೇಶದ ವಿಮೆನ್ ಫಿಡೆ ಮಾಸ್ಟರ್ (ಡಬ್ಲ್ಯುಎಫ್‌ಎಂ) ಶರಣ್ಯದೇವಿ ನರಹರಿ (8.5 ಅಂಕ) ಅವರನ್ನು ಸೋಲಿಸುವ ಮೂಲಕ ಅಗ್ರಸ್ಥಾನಕ್ಕೇರಿದರು. 13 ವರ್ಷ ವಯಸ್ಸಿನ ಆಟಗಾರ್ತಿ ಅಂತಿಮ ಸುತ್ತನ್ನು ಆಡುವ ಮೊದಲು ಎರಡನೇ ಸ್ಥಾನದಲ್ಲಿದ್ದರು. ಶರಣ್ಯ ರನ್ನರ್ ಅಪ್ ಸ್ಥಾನ ಪಡೆದರು. ಮಹಾರಾಷ್ಟ್ರದ ಅನುಷ್ಕಾ ಬಾಪು ಕುತ್ವಾಲ್ (8 ಅಂಕ) ಮೂರನೇ ಸ್ಥಾನ ಪಡೆದರು.

ನಗರದಲ್ಲಿ ಇಂದು

ಜೈನ್ ವಿಶ್ವವಿದ್ಯಾಲಯ ಕಿರು ಚಿತ್ರೋತ್ಸವ-2026: ಅತಿಥಿಗಳು: ನವೀನ್ ಶಂಕರ್, ದಿನೇಶ್ ನಿಲಕಂಠ್, ಜಿತೇಂದ್ರ ಕುಮಾರ್ ಮಿಶ್ರಾ, ನವೀನ್ ದ್ವಾರಕಾನಾಥ್, ಆಯೋಜನೆ: ಜೈನ್ ಡೀಮ್ಡ್ ಟು ಬಿ ವಿಶ್ವವಿದ್ಯಾಲಯ, ಸ್ಥಳ: ಸುಚಿತ್ರಾ ಸಿನಿಮಾ ಮತ್ತು ಕಲ್ಚರಲ್ ಅಕಾಡೆಮಿ, ಎರಡನೇ ಹಂತ ಬನಶಂಕರಿ, ಬೆಳಿಗ್ಗೆ 9

ಸಾಮರ್ಥ್ಯ-2026: ಉದ್ಘಾಟನೆ: ರಿಜ್ವಾನ್ ಅರ್ಷದ್, ಅತಿಥಿಗಳು: ದುನಿಯಾ ವಿಜಯ್, ಬಿ. ರಮೇಶ್, ಸುಂದರ್ ರಾಜ್ ಅರಸ್, ಅಮ್ಮ ರಾಮಚಂದ್ರ ಜಿ., ಅಧ್ಯಕ್ಷತೆ: ಎಜಾಜ್ ಅಹಮದ್ ಖಾನ್, ಆಯೋಜನೆ ಮತ್ತು ಸ್ಥಳ: ಸರ್ಕಾರಿ ರಾಂನಾರಾಯಣ್ ಚೆಲ್ಲಾರಾಂ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಅರಮನೆ ರಸ್ತೆ, ಬೆಳಿಗ್ಗೆ 10.30

ವಿಶ್ವ ಜಲದಿನ-2026: ಉದ್ಘಾಟನೆ: ಡಾ. ರಾಮ್‌ಪ್ರಸಾತ್ ಮನೋಹರ್ ವಿ., ಅತಿಥಿಗಳು: ನಿರ್ಮಲಾ ಗೌಡ, ಮಮತಾದೇವಿ ಜಿ.ಎಸ್., ವೀಣಾ ಆರ್. ಅಚ್ಯುತ್, ಆಶಾ ಎಸ್., ಆಯೋಜನೆ: ಬೆಂಗಳೂರು ಜಲಮಂಡಳಿ ಅಭಿಯಂತರರ ಸಂಘ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಳಿಗ್ಗೆ 10.30

ಯುಗಾದಿ ಸಂಭ್ರಮ-2026: ಉದ್ಘಾಟನೆ: ಎಸ್. ರಘು, ನೃತ್ಯ ವೈವಿಧ್ಯ: ಮಂಜುಶ್ರೀ ಸಂತೋಷ್, ಆಯೋಜನೆ: ಕನ್ನಡ ಸಂಸ್ಕೃತಿ ಮಹಿಳಾ ಕೂಟ, ಸ್ಥಳ: ಶಕ್ತಿ ಗಣಪತಿ ಕಲ್ಯಾಣ ಮಂಟಪ, ನ್ಯೂ ತಿಪ್ಪಸಂದ್ರ, ಎಚ್‌ಎಎಲ್ ಮೂರನೇ ಹಂತ, ಬೆಳಿಗ್ಗೆ 10.30

ವಿಶ್ವ ಬಂಜಾರ ದಿನಾಚರಣೆ: ಉದ್ಘಾಟನೆ: ಎ.ಆರ್. ಗೋವಿಂದಸ್ವಾಮಿ, ಅತಿಥಿಗಳು: ಕೋಡ್ಲು ರಾಮಕೃಷ್ಣ, ವಡ್ಡಗೆರೆ ನಾಗರಾಜಯ್ಯ, ಪರಮೇಶ್ ನಾಯ್ಕ್, ಬಾಲು ನಾಯಕ್, ಅಧ್ಯಕ್ಷತೆ: ಎನ್. ವರಲಕ್ಷ್ಮಿ, ಆಯೋಜನೆ: ಬಂಜಾರ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಕಾಡೆಮಿ, ಸ್ಥಳ: ಗೋವಿಂದರಾಜು ಅಂಗಳ, ಸಂಜೆ 4.30

ಕನ್ನಡ ನಾಟಕೋತ್ಸವ-2026: 'ವಿಕಟವಿಲಾಸ' ನಾಟಕ ಪ್ರದರ್ಶನ, ಪ್ರಸ್ತುತಿ: ನಾಟ್ಯ ಸರಸ್ವತಿ, ನಿರ್ದೇಶನ: ಯು. ಗೋವಿಂದೇಗೌಡ, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಸಂಜೆ 6.30

ಸಂಗೀತ ಕಛೇರಿ: ಗಾಯನ: ರಾವ್ ಆರ್. ಶರತ್, ಪಿಟೀಲು: ಅಚ್ಯುತರಾವ್, ಮೃದಂಗ: ಪವನ್ ಮಾಧವ್ ಮಾಸುರ್, ಮೋರ್ಸಿಂಗ್: ಎನ್. ಕಾರ್ತಿಕ್ ಪ್ರಣವ್, ಆಯೋಜನೆ: ವಯ್ಯಾಲಿಕಾವಲ್ ಎಕ್ಸ್‌ಟೆನ್ಶನ್ ಅಸೋಸಿಯೇಷನ್, ಸ್ಥಳ: ಶ್ರೀರಾಮ ದೇವಸ್ಥಾನ, ಒಂಬತ್ತನೇ ಮುಖ್ಯರಸ್ತೆ, ವೈಯ್ಯಾಲಿ ಕಾವಲ್, ಸಂಜೆ 6.30

'ಮಹಾಭಾರತ' ಪ್ರವಚನ: ಜಗನ್ನಾಥಾಚಾರ್ಯ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಆರನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಸಂಜೆ 7

88ನೇ ಶ್ರೀರಾಮನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ಸಂಜೀವ್ ಎಸ್. ನವರತ್ನ ಮತ್ತು ತಂಡ, ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಐಶ್ವರ್ಯ ಮತ್ತು ಸೌಂದರ್ಯ, ಎಸ್. ಜನಾರ್ದನ್, ಎಚ್.ಎಸ್. ಸುಧೀಂದ್ರ, ಸುಕನ್ಯಾ ರಾಮಗೋಪಾಲ್, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 5 ರಿಂದ

33ನೇ ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಉಮಾ ಕುಮಾರ್, ಪಿಟೀಲು: ವಿಶ್ವಜಿತ್ ಮತ್ತೂರು, ಮೃದಂಗ: ಫಣೀಂದ್ರ ಭಾಸ್ಕರ್, ಘಟ: ಶಮಿತ್‌ಗೌಡ, ಆಯೋಜನೆ ಮತ್ತು ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 6.30

'ಯುದ್ಧ ನಿಲ್ಲಿಸಿ' ಶಾಂತಿ ಸ್ಥಾಪಿಸಿ-ಭೂಮಿ ರಕ್ಷಿಸಿ: ಭಾಗವಹಿಸುವವರು: ಕೆ. ಮರುಳಸಿದ್ದಪ್ಪ, ಎಸ್.ಜಿ. ಸಿದ್ಧರಾಮಯ್ಯ, ಜಿ. ರಾಮಕೃಷ್ಣ, ಪುರುಷೋತ್ತಮ ಬಿಳಿಮಲೆ, ಎಲ್.ಎನ್. ಮುಕುಂದರಾಜ್, ಬಂಜಗೆರೆ ಜಯಪ್ರಕಾಶ್, ಆಯೋಜನೆ: ಸಮಾನ ಮನಸ್ಕರ ವೇದಿಕೆ, ಸ್ಥಳ: ಪುರಭವನ, ಜೆ.ಸಿ. ರಸ್ತೆ, ಸಂಜೆ 5

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಹೇಳಿಕೆ

'ಹೆಣ್ಣು ಮಕ್ಕಳ ಮೇಲೆ ನಿಲ್ಲದ ದೌರ್ಜನ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ, ಲೈಂಗಿಕ ದೌರ್ಜನ್ಯಗಳು ನಡೆಯುತ್ತಲೇ ಇವೆ. ಇಂತಹ ಪ್ರಕರಣಗಳಲ್ಲಿ ಕೃತ್ಯ ಎಸಗಿದವರು ಶೇಕಡ 90ರಷ್ಟು ಹತ್ತಿರದ ಸಂಬಂಧಿಕರೇ ಆಗಿರುತ್ತಾರೆ ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ ಹೇಳಿದರು.

ರಾಜ್ಯ ಸರ್ಕಾರಿ ನೌಕರರ ಸಂಘ ಮಂಗಳವಾರ ಏರ್ಪಡಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಮಕ್ಕಳ ಜವಾಬ್ದಾರಿಯನ್ನು ಮತ್ತೊಬ್ಬರಿಗೆ ವಹಿಸಿ ಬಿಟ್ಟು ಹೋಗುತ್ತೇವೆ. ಆದರೆ, ವರದಿಗಳ ಪ್ರಕಾರ ಹೆಣ್ಣು ಮಕ್ಕಳು ಲೈಂಗಿಕ ದೌರ್ಜನ್ಯಕ್ಕೆ ಒಳಗಾಗುತ್ತಿರುವುದು ಸಂಬಂಧಿಕರು ಹಾಗೂ ನೆರೆ ಹೊರೆಯವರಿಂದ. ಹೊರಗಿನ ವ್ಯಕ್ತಿಗಳಿಂದಲೂ ಕೃತ್ಯ ನಡೆಯುತ್ತದೆ. ಆದರೆ ಕಡಿಮೆ. ಮನೆಯ ಮಕ್ಕಳ ಸುರಕ್ಷತೆ ತಂದೆ, ತಾಯಿ ಕರ್ತವ್ಯ. ನಾವು ಜನ್ಮ ನೀಡಿದ ಮಕ್ಕಳಿಂದಲೇ ದೌರ್ಜನ್ಯ ಆಗುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಮಹಿಳೆಯರು ತಮ್ಮ ಹಕ್ಕುಗಳ ಬಗ್ಗೆ ಕೇಳಿ, ತಿಳಿದುಕೊಳ್ಳಬೇಕು. ಶೋಷಣೆ ಮತ್ತು ದೌರ್ಜನ್ಯಗಳ ವಿರುದ್ಧ ಧ್ವನಿ ಎತ್ತಬೇಕು ಮತ್ತು ಪ್ರತಿಭಟಿಸಬೇಕು

ಸಪ್ತಮಿ ಗೌಡ, ನಟಿ

ಹಿಂದೆ ಹೆರಿಗೆ ಸಮಯದಲ್ಲೇ ಸಾವು ಸಂಭವಿಸುತ್ತಿದ್ದವು. ಈಗ ವೈದ್ಯಕೀಯ ಕ್ಷೇತ್ರದಲ್ಲಿನ ಬದಲಾವಣೆಯ ಪರಿಣಾಮ ತಾಯಂದಿರ ಸಾವು ಕಡಿಮೆ ಆಗಿದೆ. ಮತ್ತೊಬ್ಬರನ್ನು ಕಂಡು ಅಸೂಯೆ ಪಟ್ಟರೆ ಒಳ್ಳೆಯದು ಆಗುವುದಿಲ್ಲ. ಶ್ರೇಯಸ್ಸು ಬಯಸಿದರೆ ಮೂರು ಪಟ್ಟು ಒಳ್ಳೆಯದಾಗುತ್ತದೆ. ವಿಧವೆಗೆ ಮರು ವಿವಾಹ ಮಾಡಬೇಕು. ಈ ಬದಲಾವಣೆ ಆಗಬೇಕು. ಹೆಣ್ಣನ್ನು ಮದುವೆ ಆಗುವುದು ಮನೆಯ ಕೆಲಸಕ್ಕೆ, ಮಕ್ಕಳನ್ನು ಹುಟ್ಟಿಸಲು ಎಂಬ ಮನಸ್ಥಿತಿ ಹೋಗಬೇಕು. ಮನೆಯ ಕೆಲಸದಲ್ಲಿ ಪುರುಷರು ಸಹಕರಿಸಬೇಕು ಎಂದು ತಿಳಿಸಿದರು.

ಕಷ್ಟ ಬಂದಾಗ ಹೆಣ್ಣು ಮಕ್ಕಳು ಅಳುತ್ತಾ, ಖಿನ್ನತೆಗೆ ಒಳಗಾಗುತ್ತಾರೆ. ಆದರೆ, ಕಷ್ಟಗಳು ಬರುವುದು ಕುಗ್ಗಿಸಲು ಅಲ್ಲ, ಬೆಳೆಸಲು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ, ಹಲ್ಲೆ, ಶೋಷಣೆ ನಡೆದರೆ ಪೊಲೀಸ್ ಸಹಾಯವಾಣಿ ಸಂಖ್ಯೆ 112 ಹಾಗೂ ಮಹಿಳಾ ಸಹಾಯವಾಣಿ ಸಂಖ್ಯೆ 181ಕ್ಕೆ ಕರೆ ಮಾಡಿದರೆ, 8ರಿಂದ 10 ನಿಮಿಷದೊಳಗೆ ಪೊಲೀಸರು ನೆರವಿಗೆ ಧಾವಿಸುತ್ತಾರೆ ಎಂದು ಸಲಹೆ ನೀಡಿದರು.

ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಶಾಲಿನಿ ರಜನೀಶ್ ಅವರಿಗೆ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್ ಷಡಾಕ್ಷರಿ ಅವರು ಮನವಿ ಸಲ್ಲಿಸಿದರು. ಸಪ್ತಮಿ ಗೌಡ, ನಾಗಲಕ್ಷ್ಮೀ ಚೌಧರಿ ಮತ್ತು ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಮಾತನಾಡಿ, 'ಮಹಿಳಾ ಸಬಲೀಕರಣಕ್ಕಾಗಿ ಸರ್ಕಾರ ಹಲವು ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ. ನಾಗರಿಕ ಸೇವೆ ಮಾಡುವ ಮಹಿಳಾ ನೌಕರರು ಮಾನವೀಯತೆ, ಕರುಣೆ, ತಾಳ್ಮೆ, ಸಹನೆ, ಶಿಸ್ತು, ಧೈರ್ಯ, ನಂಬಿಕೆ, ಅನುಕಂಪ ಇರಬೇಕು. ಆಸ್ಪತ್ರೆ ಅಥವಾ ಶಾಲೆ ಇರಬಹುದು. ಮನೆಯ ಕೆಲಸ ಅಂದುಕೊಂಡು ಮಾಡಬೇಕು. ಆಗ, ಸರ್ಕಾರಕ್ಕೆ ಮತ್ತು ದೇಶಕ್ಕೆ ಒಳ್ಳೆಯ ಹೆಸರು ಬರಲಿದೆ' ಎಂದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ, ಉಪಾಧ್ಯಕ್ಷರಾದ ಯಶೋದಮ್ಮ, ಉಮಾ, ಸಂಘಟನಾ ಕಾರ್ಯದರ್ಶಿ ನಿರುಪಮಾ, ಸಾಂಸ್ಕೃತಿಕ ಕಾರ್ಯದರ್ಶಿ ಶೋಭಾರಾಣಿ ಹಾಜರಿದ್ದರು. ಗಿರೀಗೌಡ ಸ್ವಾಗತಿಸಿದರು.

ಸಾರ್ವಜನಿಕ ಸೂಚನೆ

ಬೆಂಗಳೂರಿನ ಯುನಿಟೆಕ್‌ನ ವಸತಿ ಅಪಾರ್ಟ್‌ಮೆಂಟ್ ಮತ್ತು ವಸತಿ ಪ್ಲಾಟ್‌ಗಳ ಯೋಜನೆಗೆ ಪರಿಸರ ಅನುಮತಿ ಮಂಜೂರು

ಗೌರವಾನ್ವಿತ ಸುಪ್ರೀಂ ಕೋರ್ಟ್‌ನಿಂದ ನೇಮಕಗೊಂಡ ಮೆಸರ್ಸ್ ಯುನಿಟೆಕ್ ಲಿಮಿಟೆಡ್‌ನ ಹೊಸ ಆಡಳಿತ ಮಂಡಳಿಯು 20.01.2020 ರ ಆದೇಶದ ಮೂಲಕ "ಪ್ರಸ್ತಾಪಿತ ವಸತಿ ಅಪಾರ್ಟ್‌ಮೆಂಟ್ ಕಟ್ಟಡಗಳು ಮತ್ತು ವಸತಿ ವಿನ್ಯಾಸ" ಅಂದರೆ ಸರ್ವೆ ಸಂಖ್ಯೆಯಲ್ಲಿರುವ ಯುನಿವರ್ಲ್ಡ್ ರೆಸಾರ್ಟ್‌ಗಳು ಎಂದು ತಿಳಿಸಲು ಸಂತೋಷಪಡುತ್ತದೆ. ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕಿನ ಅತ್ತಿಬೆಲೆ ಹೋಬಳಿಯ ವೀರಸಂದ್ರ ಗ್ರಾಮದ 81/1, 81/2, 83/1(P), 96/2(P), 97/1, 98/1, 98/2(P), 101/1, 101/2, 101/3 & 102/1 ಗಳಿಗೆ ಪರಿಸರ ಸಚಿವಾಲಯ ಮತ್ತು ಕರ್ನಾಟಕ (ರಾಜ್ಯ ಪರಿಸರ ಪರಿಣಾಮ ಮೌಲ್ಯಮಾಪನ ಪ್ರಾಧಿಕಾರ (SEIAA) ಹೊರಡಿಸಿದ) ಪರಿಸರ ಅನುಮತಿಯನ್ನು EIA ಅಧಿಸೂಚನೆ 2006 ರ ನಿಬಂಧನೆಯ ಅಡಿಯಲ್ಲಿ ದಿನಾಂಕ 21.01.2026 ರಂದು EC ಗುರುತಿನ ಸಂಖ್ಯೆ EC24C3801KA5522632N ಮೂಲಕ ನೀಡಲಾಗಿದೆ.

ಅನುಮೋದಿತ ಪತ್ರಗಳು ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಲ್ಲಿ (MoEF&CC) ಲಭ್ಯವಿದೆ ಮತ್ತು ಅವರ ವೆಬ್‌ಸೈಟ್ https://parivesh.nic.in/ ಮತ್ತು ಯುನಿಟೆಕ್ ಲಿಮಿಟೆಡ್ ವೆಬ್‌ಸೈಟ್ https://unitechgroup.com/ ನಲ್ಲಿಯೂ ಸಹ ಪ್ರವೇಶಿಸಬಹುದು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಯುನಿಟೆಕ್ ಗ್ರೂಪ್ ಆಫ್ ಕಂಪನಿಗಳು

ಅಖಿಲ ಭಾರತ ಕೊಳಚೆನಿವಾಸಿಗಳ ಜಂಟಿ ಕ್ರೀಯ ಹಿತ ರಕ್ಷಣಾ ವೇದಿಕೆಯ ಒಕ್ಕೂಟ(ರಿ), ರಾಜ್ಯ ಶಾಖೆಯ ರಾಜ್ಯಾಧ್ಯಕ್ಷರಾದ ಸಿ. ಎನ್ ಮರಿಯಪ್ಪ ಚಕ್ರಭಾವಿ ಯವರಿಗೆ

ಅಭಿನಂದನೆಗಳು

ಶುಭಕೋರುವವರು:

ಕರ್ನಾಟಕ ಕೊಳೆಗೇರಿ ನಿವಾಸಿಗಳ ಸಂಯುಕ್ತಾ ಸಂಘಟನ ವೇದಿಕೆ(ರಿ)
ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲಾ ಕೊಳಚೆ ನಿವಾಸಿಗಳ ಒಕ್ಕೂಟ(ರಿ)
ಕರ್ನಾಟಕ ರಾಜ್ಯ ಸಫಾಯಿ ಕಾರ್ಮಿಕರ ಹೀತರಕ್ಷಣಾ ಒಕ್ಕೂಟ ವೇದಿಕೆ(ರಿ)
ಕರ್ನಾಟಕ ರಾಜ್ಯ ಗಾರ್ಮೆಂಟ್ಸ್ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘ(ರಿ)
ಪ್ರೀತಿ ಮಹಿಳಾ ಮಂಡಳಿ(ರಿ),
ಬೆಂಗಳೂರು ನಗರ ಮತ್ತು ಗ್ರಾಮಂತರ ಜಿಲ್ಲಾ ಒಕ್ಕಲಿಗರ ಸಾಂಕೃತಿಕ ಕ್ರೀಡಾ ವೇದಿಕೆ(ರಿ)
ಕರ್ನಾಟಕ ರಾಜ್ಯ ಸರ್ಕಾರಿ ಭೂಕಬಳಿಕೆ ವಿರುದ್ಧ ಹೋರಾಟ ಸಮಿತಿ(ರಿ)
ಚೈತನ್ಯ ಸಮಾಜಿಕ ಶಿಕ್ಷಣ ಸಮಿತಿ(ರಿ)
ಬೆಂಗಳೂರು ನಗರ ಗ್ರಾಮಾಂತರ ಜಿಲ್ಲಾ ಸ್ತ್ರೀ ಶಕ್ತಿ ಮಹಿಳಾ ವಸತಿ ಹೀನರ ಸಂಘ(ರಿ)

‘ಅಂಚೆ ಕಚೇರಿ: ಎಟಿಎಂ ಕಾರ್ಡ್ ಅಭಾವ ಇಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗ್ರಾಹಕರಿಗೆ ತೊಂದರೆ ಆಗದಂತೆ ಎಟಿಎಂ ಕಾರ್ಡ್‌ಗಳನ್ನು ಸಮರ್ಪಕವಾಗಿ ವಿತರಿಸಲಾಗುತ್ತಿದೆ. ಎಟಿಎಂ ಕಾರ್ಡ್‌ಗಳ ಅಭಾವ ಇಲ್ಲ’ ಎಂದು ಅಂಚೆ ಇಲಾಖೆ ತಿಳಿಸಿದೆ.

‘ಅಂಚೆ ಕಚೇರಿಗಳಲ್ಲಿ ಉಳಿತಾಯ ಖಾತೆ ಹೊಂದಿರುವ ಗ್ರಾಹಕರಿಗೆ ತಕ್ಷಣಕ್ಕೆ ಎಟಿಎಂ ಕಾರ್ಡ್‌ಗಳನ್ನು ನೀಡಲಾಗುತ್ತಿದೆ. ಆದರೆ, ಕಾರ್ಡ್‌ಗಳಲ್ಲಿ ಗ್ರಾಹಕರ ಹೆಸರು ಮುದ್ರಿಸಬೇಕಾದಂತಹ ಸಂದರ್ಭದಲ್ಲಿ 15 ದಿನಗಳ ನಂತರ ನೇರವಾಗಿ ಗ್ರಾಹಕರ ಮನೆಯ ವಿಳಾಸಕ್ಕೆ ಕಳುಹಿಸಲಾಗುತ್ತಿದೆ. ರಾಜ್ಯದ ಯಾವುದೇ ಅಂಚೆ ಕಚೇರಿಗಳಲ್ಲಿ ಎಟಿಎಂ ಕಾರ್ಡ್‌ಗಳ ಅಭಾವ ಇಲ್ಲ. ಗ್ರಾಹಕರ ಬೇಡಿಕೆಗೆ ತಕ್ಕಂತೆ ಪೂರೈಕೆ ಇದ್ದು, ಯಾವುದೇ ರೀತಿಯ ಸಮಸ್ಯೆ ಇಲ್ಲ’ ಎಂದು ಚೀಫ್ ಪೋಸ್ಟ್‌ಮಾಸ್ಟರ್ ಸಿ.ಸೆಲ್ವಿ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಅಂಚೆ ಕಚೇರಿಯಲ್ಲಿ ಎಸ್‌ಬಿ ಖಾತೆ ಹೊಂದಿರುವ ಗ್ರಾಹಕರ ಎಟಿಎಂ ಕಾರ್ಡ್‌ಗಳ ಅವಧಿ ಮುಗಿದಿದ್ದು, ಹೊಸ ಕಾರ್ಡ್‌ಗಳನ್ನು ವಿತರಿಸಲು ವಿಳಂಬ ಆಗುತ್ತಿದೆ. ಇದರಿಂದ ಸಾರ್ವಜನಿಕರಿಗೆ ವಿಶೇಷವಾಗಿ ಪಿಂಚಣಿದಾರರು ಹಾಗೂ ಹಿರಿಯ ನಾಗರಿಕರಿಗೆ ತೊಂದರೆ ಆಗಿದೆ. ಅಂಚೆ ಕಚೇರಿಗಳಲ್ಲಿ ಬೇಡಿಕೆಗೆ ತಕ್ಕಂತೆ ಎಟಿಎಂ ಕಾರ್ಡ್‌ಗಳು ಪೂರೈಕೆ ಆಗುತ್ತಿಲ್ಲವೆಂದು ಅಂಚೆ ಕಚೇರಿಯ ಸಿಬ್ಬಂದಿ ಹೇಳುತ್ತಿದ್ದಾರೆ’ ಎಂದು ಗ್ರಾಹಕರಾದ ಆನಂದ ದೂರಿದ್ದಾರೆ.

ಸಮ್ಮೇಳನದಲ್ಲಿ ಎಂ.ಆರ್. ವೆಂಕಟೇಶ್ ಅವರನ್ನು ಗೌರವಿಸಲಾಯಿತು. ಆರ್. ಸುನಂದಮ್ಮ, ಎಸ್.ಜಿ. ಸಿದ್ಧರಾಮಯ್ಯ, ವಾಗ್ಮಿ ಕೆ.ಪಿ. ಪುತ್ತೂರಾಯ, ಪ್ರೇಮಾ ಸಿದ್ದರಾಜು ಉಪಸ್ಥಿತರಿದ್ದರು

ಸಾಹಿತ್ಯಲೋಕ ಶಾಂತಿ ಸ್ಥಾಪನೆಗೆ ಶ್ರಮಿಸಲಿ: ಎಂ.ಆರ್. ವೆಂಕಟೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇಡೀ ಜಗತ್ತಿನ ಸಾಹಿತ್ಯ ಲೋಕ ಈ ಕಾಲಘಟ್ಟದಲ್ಲಿ ಯುದ್ಧದಿಂದ ಆಗುವ ಅನಾಹುತಗಳ ಬಗ್ಗೆ ಅರಿವು ಮೂಡಿಸಬೇಕು’ ಎಂದು ಕನ್ನಡಪರ ಹೋರಾಟಗಾರರೂ ಆದ ತ್ಯಾಗರಾಜ್ ಕೋ ಆಪರೇಟಿವ್ ಬ್ಯಾಂಕ್‌ನ ಅಧ್ಯಕ್ಷ ಎಂ.ಆರ್. ವೆಂಕಟೇಶ್ ಅಭಿಪ್ರಾಯ ಪಟ್ಟರು.

ಬೆಂಗಳೂರು ನಗರ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತು ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 15ನೇ ಚುಟುಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿ ಮಾತನಾಡಿದರು.

‘ಈಗ ನಡೆಯುತ್ತಿರುವ ಯುದ್ಧವನ್ನು ಕೇವಲ ದೇಶಗಳ ನಡುವಿನ ಭೌಗೋಳಿಕ ಅಥವಾ ರಾಜಕೀಯ ಸಂಘರ್ಷವೆಂದು ನೋಡದೆ, ಮನುಕುಲದ ನೈತಿಕ ಮತ್ತು ಸಾಂಸ್ಕೃತಿಕ ಅವನತಿಯ ಸಂಕೇತ ಎಂದು ಭಾವಿಸಬೇಕಿದೆ. ಮಾನವೀಯತೆಯ ಸೋಲು ಎಂದು ವಿಶ್ಲೇಷಿಸಿ, ನಮ್ಮ ದೇಶದ ‘ವಸುಧೈವ ಕುಟುಂಬಕಂ’ ಪರಿಕಲ್ಪನೆ ಮತ್ತು ಕುವೆಂಪು ಅವರ ವಿಶ್ವಮಾನವ ಸಂದೇಶದ ಪ್ರಸ್ತುತತೆಯನ್ನು ಮನಗಾಣಬೇಕು’ ಎಂದು ಹೇಳಿದರು.

‘ಶಾಂತಿ, ಸಹನೆ, ಮಮತೆ, ಐಕ್ಯತೆ, ಸಮಬಾಳು ಮತ್ತು ಸಮನ್ವಯ ಸಾರುವುದೇ ಸಾಹಿತ್ಯ ಲೋಕದ ಧ್ಯೇಯವಾಗಬೇಕು. ಯುದ್ಧದ ದುಷ್ಪರಿಣಾಮಗಳ ಬಗ್ಗೆ ಸಾಹಿತ್ಯ ಲೋಕ ಅರಿವು ಮೂಡಿಸಬೇಕು. ಆ ಶಕ್ತಿ ಸಾಹಿತ್ಯ ಲೋಕಕ್ಕಿದೆ. ರಾಮಾಯಣ, ಮಹಾಭಾರತದಂತಹ ಮಹಾಕಾವ್ಯಗಳು ಯುದ್ಧದ ದುಷ್ಪರಿಣಾಮದ ಬಗ್ಗೆ ನೀತಿ ಪಾಠ ಸಾರಿವೆ’ ಎಂದರು.

ಸಮ್ಮೇಳನ ಉದ್ಘಾಟಿಸಿದ ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಆರ್. ಸುನಂದಮ್ಮ, ‘ಸಮಾಜದಲ್ಲಿ ಹೆಣ್ಣನ್ನು ಸಮಾನ ಗೌರವದಿಂದ ಕಾಣುವಂತಾಗಬೇಕು. ವರ್ಗ ಸಂಘರ್ಷದ ಬಗ್ಗೆ ಎಲ್ಲರೂ ಧ್ವನಿ ಎತ್ತಬೇಕು’ ಎಂದು ಹೇಳಿದರು.

ಚುಟುಕು ಕವಿ ಜರಗನಹಳ್ಳಿ ಶಿವಶಂಕರ್ ಅವರ ಹನಿಗವನಗಳನ್ನು ವಾಚಿಸಿದ ಸಾಹಿತಿ ಎಸ್.ಜಿ. ಸಿದ್ಧರಾಮಯ್ಯ, ‘ಚುಟುಕು ಸಾಹಿತ್ಯ ಕನ್ನಡ ಸಾಹಿತ್ಯದ ಅಮೂಲ್ಯ ಸಂಪತ್ತು’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಗರದ ಕೋಟೆ ಪ್ರೌಢಶಾಲೆ ಆವರಣದಲ್ಲಿ ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್ ಆಯೋಜಿಸಿರುವ 88ನೇ ಶ್ರೀರಾಮನವಮಿ ಸಂಗೀತೋತ್ಸವ ಕಾರ್ಯಕ್ರಮದಲ್ಲಿ ಬಾಲು ಮಾಸ್ತಿ ಅವರು ಮಂಗಳವಾರ ವೀಣಾ ವಾದನ ಪ್ರಸ್ತುತಪಡಿಸಿದರು

ಪ್ರಜಾವಾಣಿ ಚಿತ್ರ

ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರ

"ಕೆಂಗಲ್ ಹನುಮಂತಯ್ಯ ಅಭಿವೃದ್ಧಿ ಭವನ' ಬಿ.ಎಂ. ರಸ್ತೆ, ರಾಮನಗರ–562159
ಬೆಂಗಳೂರು ದಕ್ಷಿಣ ಜಿಲ್ಲೆ. ದೂರವಾಣಿ: 080–27276616 e-mail: ruda.me@gmail.com

ಸಂ.: ರಾನಪ್ರಾ/2026–27/05 ದಿನಾಂಕ: 02.04.2026

ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟಾಂಡರ್ ಟೆಂಡರ್ ಡಾಕ್ಯೂಮೆಂಟ್‌ನ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿಗೆ ಹೊರಗುತ್ತಿಗೆ ಆಧಾರದಲ್ಲಿ ಮಾನವ ಸಂಪನ್ಮೂಲ ಸರಬರಾಜು ಮಾಡುವ ಸಂಬಂಧ ಕೆ.ಪಿ.ಪಿ ಪೋರ್ಟಲ್ https: //kppp.karnataka.gov.in ಮುಖಾಂತರ ಕರೆದಿರುವ ಟೆಂಡರ್‌ಗೆ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಹೆಚ್ಚಿನ ವಿವರಗಳನ್ನು ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದು. ಈ ಕೆಳಕಂಡಂತೆ ನಿಗಧಿಪಡಿಸಿದ ಇ.ಎಂ.ಡಿಯನ್ನು ಕೆ.ಪಿ.ಪಿ ಪೋರ್ಟಲ್‌ನಲ್ಲಿ ನಮೂದಿಸಿದ ಯಾವುದಾದರೂ ಒಂದು ರೀತಿಯಲ್ಲಿ ಸಲ್ಲಿಸತಕ್ಕದ್ದು, ಇ.ಎಂ.ಡಿಯು ಟೆಂಡರ್‌ನ ನ್ಯಾಯ ಸಮ್ಮತಾ ಮಾನ್ಯತಾ ಅವಧಿಗಿಂತ (Validity period) 45 ದಿನಗಳ ನಂತರದವರೆಗೆ ಮಾನ್ಯತೆ ಇರತಕ್ಕದ್ದು.

ವಿವರ: **Providing of Manpower in RUDA Office, Ramanagara. ಅಂದಾಜು ಮೊತ್ತ ರೂ.35.00 ಲಕ್ಷಗಳು. ಇಎಂಡಿ ಮೊತ್ತ ರೂ. 87,500/-. ಟೆಂಡರ್ ಫಾರಂ ಶುಲ್ಕ** Refer KPP Portal. ನೋಂದಾಯಿತ ಅರ್ಹ ಮಾನವ ಸಂಪನ್ಮೂಲ ಸರಬರಾಜುದಾರರಿಂದ. 1) ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ **ದಿನಾಂಕ: 04,04.2026ರಿಂದ** 2) ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 27.04.2026 ರಂದು ಸಂಜೆ 4:00 ಗಂಟೆವರೆಗೆ** 3) ಟೆಂಡರ್‌ನ (ತಾಂತ್ರಿಕ ಬಿಡ್) ತೆರೆಯುವ **ದಿನಾಂಕ 28.04.2026 ಸಂಜೆ 5:30 ಗಂಟೆಗೆ.**

ಸಹಿ/– ಆಯುಕ್ತರು
DIPR/BSD/11/SA/2026-27 ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರ, ರಾಮನಗರ.

ಗ್ರೇಟರ್ ಬೆಂಗಳೂರು ಪ್ರಾಧಿಕಾರ

ಉಪ ಮುಖ್ಯ ಮಾಹಿತಿ ಅಧಿಕಾರಿಗಳ ಕಛೇರಿ, ಐಟಿ ಸೆಕ್ಷನ್
ಅನೆಕ್ಸ್ 2 ಕಟ್ಟಡ, ಜಿಬಿಎ ಕೇಂದ್ರ ಕಛೇರಿ, ಎನ್.ಆರ್. ಚೌಕ,
ಬೆಂಗಳೂರು–560002. ದೂ: 9480688000, ಇಮೇಲ್: dcio-it@bbmp.gov.in

ಸಂಖ್ಯೆ: ಜಿಬಿಎ/2026–27/ಐಎನ್‌ಡಿ0027 ದಿನಾಂಕ: 07–04–2026

ಟೆಂಡರ್ ಪ್ರಕಟಣೆ

ಉಪ ಮುಖ್ಯ ಮಾಹಿತಿ ಅಧಿಕಾರಿಗಳು – ಐಟಿ, ಜಿಬಿಎ ಇಲಾಖೆ, ಬೆಂಗಳೂರು ಇವರು ಆಯುಕ್ತರು, ಜಿಬಿಎ ಇವರ ಪರವಾಗಿ **ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಇ–ಖಾತಾ ನಾಗರೀಕ ಸಹಾಯವಾಣಿಗಾಗಿ ಕಾಲ್ ಸೆಂಟರ್ ಸೇವೆಗಳನ್ನು ಒದಗಿಸಲು** ಅರ್ಹ ಕಂಪನಿಗಳಿಂದ ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಇಎಂಡಿ ಮೊತ್ತ: **ರೂ. 3,00,000/–.**

ಟೆಂಡರ್ ದಿನಾಂಕಗಳು : (1) ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್ **https://kppp.karnataka.gov.in**ನಿಂದ ದಿನಾಂಕ: **07.04.2026 ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪೂರ್ವ–ಬಿಡ್ ಸಭೆಯ ದಿನಾಂಕ: **16.04.2026ರಂದು ಸಂಜೆ 4.00 ಗಂಟೆಗೆ – ವಿಶೇಷ ಆಯುಕ್ತರು (ಕಂದಾಯ ಮತ್ತು ಐಟಿ), ಅನೆಕ್ಸ್–1, 1ನೇ ಮಹಡಿ, ಜಿಬಿಎ ಕೇಂದ್ರ ಕಚೇರಿ, ಎನ್.ಆರ್. ಚೌಕ, ಬೆಂಗಳೂರು–560002, ಇವರ ಕಚೇರಿಯಲ್ಲಿ.** (3) ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **15.04.2026ರ ಮಧ್ಯಾಹ್ನ 3.00 ಗಂಟೆವರೆಗೆ.** (4) ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **27.04.2026ರ ಸಂಜೆ 5.00 ಗಂಟೆವರೆಗೆ.** (5) ಟೆಂಡರ್ ತೆರೆಯುವ ದಿನಾಂಕ (ತಾಂತ್ರಿಕ ಬಿಡ್ & ತಾಂತ್ರಿಕ ಮೌಲ್ಯೀಕರಣ): **28.04.2026ರ ಸಂಜೆ 5.10 ಗಂಟೆಗೆ.** (6) ಟೆಂಡರ್‌ಗಳನ್ನು ತೆರೆಯುವ ದಿನಾಂಕ (ಆರ್ಥಿಕ ಬಿಡ್) ಸಾಧ್ಯವಾದಲ್ಲಿ: **ತಾಂತ್ರಿಕ ಬಿಡ್ ಮೌಲ್ಯೀಕರಣದ ನಂತರ.** (7) ಆಕ್ಷೇಪಣೆಗಳಿಗೆ ಸಂಪರ್ಕಿಸುವ ವ್ಯಕ್ತಿ ಮತ್ತು ಟೆಂಡರ್‌ಗಳನ್ನು ತೆರೆಯುವ ವಿಳಾಸ: **ಮೇಲೆ ತಿಳಿಸಲಾದ ಕಛೇರಿಯಲ್ಲಿ.**

ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ಕೆಪಿಪಿ ಪೋರ್ಟಲ್ **https://kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಉಪ ಮುಖ್ಯ ಮಾಹಿತಿ ಅಧಿಕಾರಿಗಳು – ಐಟಿ
ಜಿಬಿಎ, ಬೆಂಗಳೂರು

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ–562114
ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೂರವಾಣಿ/ಫ್ಯಾಕ್ಸ್: 080–27934470 / 27935412
Email: hosakote.pa@gmail.com URL: www.hoskote.tpa.gov.in

ಸಂಖ್ಯೆ: ಹೊಯೋಪ್ರಾ/ಭೂಉಬ/56/2025–26 ದಿನಾಂಕ: 07.04.2026

ತಿದ್ದುಪಡಿ ಪ್ರಕಟಣೆ

ಉಲ್ಲೇಖ: ಹೊಸಕೋಟೆ ಯೋಜನಾ ಪ್ರಾಧಿಕಾರದ ಸಾರ್ವಜನಿಕ ಪ್ರಕಟಣಾ ಸಮ ಸಂಖ್ಯೆ ಪತ್ರ ದಿನಾಂಕ: 04.12.2025.

ಮೇಲ್ಕಂಡ ಉಲ್ಲೇಖದಂತೆ ಹೊಸಕೋಟೆ ತಾಲ್ಲೂಕು, ಸೂಲಿಬೆಲೆ ಹೋಬಳಿ, ಕಂಬಳೀಪುರ ಗ್ರಾಮದ ಸ.ನಂ. 161/1 ರಲ್ಲಿನ 01 ಎಕರೆ, ಸ.ನಂ. 161/2 ರಲ್ಲಿನ 01 ಎಕರೆ 12 ಗುಂಟೆ, ಸ.ನಂ. 161/3 ರಲ್ಲಿನ 01 ಎಕರೆ 07 ಗುಂಟೆ, ಸ.ನಂ. 161/4 ರಲ್ಲಿನ 01 ಎಕರೆ 07 ಗುಂಟೆ, ಸ.ನಂ. 162/1 ರಲ್ಲಿನ 36 ಗುಂಟೆ, ಸ.ನಂ. 162/2 ರಲ್ಲಿನ 36 ಗುಂಟೆ, ಸ.ನಂ. 162/3 ರಲ್ಲಿನ 36 ಗುಂಟೆ, ಸ.ನಂ. 162/4 ರಲ್ಲಿನ 37 ಗುಂಟೆ ಮತ್ತು ಸ.ನಂ. 162/5 ರಲ್ಲಿನ 36 ಗುಂಟೆ ವಿಸ್ತೀರ್ಣದ ಜಮೀನುಗಳನ್ನು **“ಕೃಷಿ ವಲಯದಿಂದ ವಸತಿ ಉದ್ದೇಶಕ್ಕೆ”** ಭೂ ಉಪಯೋಗ ಬದಲಾವಣೆ ಸಂಬಂದ ಹೊಸಕೋಟೆ ಯೋಜನಾ ಪ್ರಾಧಿಕಾರದಿಂದ ದಿನಾಂಕ: 07.12.2025 ರಂದು ದಿನಪತ್ರಿಕೆಗಳಲ್ಲಿ ಪ್ರಕಟಣೆಗೊಂಡಿರುತ್ತದೆ. **ಇದನ್ನು ಕೃಷಿ ವಲಯದಿಂದ ವಸತಿ ಉದ್ದೇಶಕ್ಕೆ ಎಂಬುದರ ಬದಲಾಗಿ ಕೈಗಾರಿಕಾ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ** ಸಲಹೆ/ಸೂಚನೆ/ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡ ರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ–562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ/ಸೂಚನೆ/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–,
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ
ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ,
ವಾಸಾಸಂಇ/ವಾಪ್ರ/ಎಲ್‌ಸಿ/102/2026–27 ಹೊಸಕೋಟೆ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

LOOKING FOR NTT Trained Preschool teacher for a reputed Preschool Basaveshwarnagar with 1-5 years experience and Good Command over English. Timings: 9am to 2pm Salary: Rs. 7000- 14000 Contact: 9844822233

RAMAIAH Polytechnic
VACANCY EXIST FOR THE POSITION OF
Lecturers in the following branches:
- Computer Science Engineering
- Electronics and Communication Engineering
- Mechanical Engineering
Qualification: Min. B.E. in the respective branch
- Lecturer postion in Kannada (Part Time)
Qualification: M.A. in Kannada

Application to be sent either in person / E-mail / post, within 10days of the Advertisement.
Person having experience of two years and above will be preferred. Retired faculty from Government and Aided Polytechnics may also apply.
E-mail:msrp_principal@yahoo.com
Ph: 080-2360 0732 / 2360 2481 / 2360 2484 / 90363 84341
M.S.R.Nagar, MSRIT Post, Bangalore – 560054
www.ramaiahptedu.in
Principal

Buddha Education Society & Trust (R) Estd-1982
BHAGAWAN BUDDHA HOMOEOPATHIC MEDICAL COLLEGE & HOSPITAL
(Recognised by Govt. of Karnataka, Affiliated to Rajiv Gandhi University of Health Sciences, Karnataka, Recognised by National Commission for Homoeopathy, Ministry of AYUSH, New Delhi)
No.103/6, 40 ft BDA Road, NGEF Layout, Mallathalli, Bengaluru-560056. Ph: 080-23211056 / 5349 / 7944
INVITES APPLICATIONS FOR
1. Principal : 1
2. PROFESSOR OR ASSOCIATE PROFESSOR : 1 Pathology & Microbiology, 1 Practice of Medicine.
3. STATISTICAL ASSISTANT: 1 (Graduate with statistics as one of the subjects)
4. Practicing Consultants of Modern Medicine & Homoeopathy in-Skin, Cardio, Paedia, Psychiatry, Radiology, Ophthal, Rheumatology, Geriatrics, Nephro, Gen Med, Neuro, OBG, Surg, Physio and Emergency Medicine. Qualification & Exp. for posts 1 & 2 will be as specified by NCH. Qualification for post 4- 10 yrs clinical experience for MD HOM 20 YRS of clinical experience for MD/DCH/DVD/DNB.
5. Multi-Tasking Staff : SSLC Qualiication.

HOSPITAL STAFF
Lab Technician 1 (DMLT/BMLT), X-Ray Technician 1 (X-Ray Tech Course), Store Keeper1 / Registration Clerk 1 (SSLC with knowledge of computers)
Application to all posts of both college & hospital should be addressed to “The Managing Trustee”, or application may be handed over to the College Office in person.

THE DECCAN PU COLLEGE BENGALURU
Powered by Purpose. Prepared for Tomorrow.
JOB OPPORTUNITY
Part of Deccan International School, a 23+ year old School with state of the art Infrastructure.
Positions open
- Accountancy Teacher
- Economics Teacher
- Business Studies Teacher
- Statistics Teacher
- Computer Science Teacher
- English Teacher
- Kannada Teacher
- Hindi Teacher

✓ Post-graduation in relevant field with B.Ed.
✓ 3–5 yrs relevant exp is mandatory.
✓ NET/SLET qualified candidates preferred.
✓ Attractive compensation package commensurate with qualification & experience.
✓ We are equal opportunity employer.
Candidates may email their CV with latest photograph
careers@deccanpuc.edu.in
#11, 18th Main Rd, Brindavan Layout, Padmanabhanagar, Bengaluru, Karnataka 560061

BHARATHAMATHA EDUCATION SOCIETY Wanted Immediately MANAGER-Administration Experienced Lady Commerce Graduates, with Proficiency in Computer Operations including Tally, ability to type and correspond independently in Kannada, English and good knowledge of Account Maintenance. Please apply Immediately with detailed Resume with Photograph, to reach us on or before 15/04/2026.The Secretary, BHARATHAMATHA EDUCATION SOCIETY Hanumanthanagar, Bangalore- 560019 Phone: 9110669225 Email: bharathamatha.edusoc@gmail.com

WANTED TEACHERS: Nursery, Primary and High School Classes for all the Subjects including Computer. 'SRI VIDYA KENDRA' Peenya 1st stage, Bangalore-58. Ph- 9900708182, 28398833, 41179155

REPUTED CBSE school at Hesaraghatta Main Road requires an experienced PRINCIPAL. Interested candidates. Contact: 6360291124/ Mail id:: ashakashyap1380@gmail.com

WANTED IMMEDIATELY qualified Principal, H.M, Teachers with B.A/ B.Sc, B.Ed/ D.Ed to teach High School/ Primary classes of State Syllabus English Medium School. Lady Teachers preferred. Apply confidentially with complete Bio-Data to The Secretary, SGPTA School, 76/1, Nethaji Road, Thyagarajanagar, Bangalore-560070 or Contact Mobile: 9901733271.

DH Classifieds More value, more impact ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY CLASSIFIED DISPLAY
@ 550/-* PER SQCM
SINGLE / DOUBLE / MULTIPLE COLUMN
www.dhclassifieds.com BOOK NOW
For more details contact:
+91 9845114560 | +91 9886213331 | +91 9731810277

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

Accounts & Finance

ACCOUNTANT REQUIRES 2 years' experience in Tally, STREAMLINE Advertising, Jayanagar 7th Block, Bangalore. ad@streamline.ind.in : 29900238/ 7353354235

Drivers

CAR DRIVERS for Home in Koramangala. Driving within City. Mon-Sat 10AM-7PM. Salary Rs.22,000. Ph: 8951234569

Marketing & Sales

WANTED SALES Managers, Sales Executives, Telecallers. Opportunity to earn up to 40,000 P.M. Contact 8867627879

Malleshwaram

'HOUSE FOR sale Ground + 1st floor site measuring 30'x55' facing South posh location Near (B.Sarojadevi Residence) Contact: Yuvraj- 98800-59377'

Industrial & Factory

Tumkur Road

SALE, 9.5 Acres Industrial Converted Land Suitable for Warehouse, Industry, Education near Dabaspet. NAIK: 9141326819

B.B.Jewellers is Hiring
Work Just 5 Hours a Day... We Provide Stay & Food
Hiring Female Sales Executives for Jewellery Showrooms in Bangalore (Koramangala - Dommasandra)
Minimum 3 Years Experience in Jewellery Sales Required
✓ 5-hour shifts only
✓ Free accommodation
✓ One-time meal provided
✓ Fixed salary + incentives
10 AM–3 PM | 3 PM–8 PM
Better income, better savings, better lifestyle
Contact: 9986577790
Share your resume on WhatsApp to the above number
No:818, 8th Block, 80 Feet Road, Koramangala, Bangalore - 95

General

JUPITER HOSPITALS Nelamangala & Malleswaram Wanted Receptionist & Staff Nurse. Computer, Good English. 9845024211/ 9341220446

WANTED FEMALE in house live in MAID languages preferred Hindi & etc, Attractive Salary, Call:9980140661

REAL ESTATE SELLING

Commerical

Out-Station

6000 SQFT commercial property in prime location available for sale in Hiriyur. Interested buyers call 9591945892

House

BTM Layout

HOUSE FOR SALE- BTM 1ST STAGE, 2240 SQFT DUPLEX, 6 BHK, 4 BATHS, PRIME LOCATION. CALL: 9035361303

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RESTAURANT SPACE for RENT
Two Commercial Spaces of 3110 Sft. and 3420 Sft. available for Rent next to Majestic / City Railway Station. Suitable for Restaurant.
For details Contact : 9844045744 / 9845105330

EDUCATION SUCCESS
ಕ್ಲಾಸಿಫೈಡ್ಸ್

arivuPRO ACADEMY
B.COM+
CA | CS | CMA | ACCA | CMA US
CIA | EA | FRM | SKILL
ArivuPro is Celebrating Exceptional Results in CA & CS Exams
ALL INDIA RANK | DISTINCTIONS HOLDERS
ALL INDIA RANK HOLDERS
Bhaskar Karki, Marks 452 — ALL INDIA RANK 20, CA Intermediate Jan 2026 Exam
Bavisetti Chandra Sekhar, Marks 394 — ALL INDIA RANK 14, CS Professional Dec 2025 Exam
Madhumitha V, Marks 386 — ALL INDIA RANK 20, CS Professional Dec 2025 Exam
DISTINCTION HOLDERS
DISTINCTION Sethu Palaniappan, Marks 321, CA Foundation Jan 2026 Exam
DISTINCTION Velarasu K, Marks 302, CA Foundation Jan 2026 Exam
DISTINCTION Omesha P, Marks 301, CA Foundation Jan 2026 Exam
DISTINCTION Krishna Vasanth, Marks 286, CA Foundation Jan 2026 Exam
DISTINCTION Sahana S, Marks 290, CA Foundation Jan 2026 Exam
205+ Students Passed - In CS Executive, CS Professional (December 2025 Attempt)
415+ Students Passed - In CA Foundation, CA Inter, CA Final (January 2026 Attempt)
BRANCH: BANGALORE - KORAMANGALA & MALLESHWARAM | CHENNAI | COIMBATORE | TAMBARAM
For Free Counselling: Call/WhatsApp to +91 9686665253
www.arivupro.com help@arivupro.com

PERSONAL

Change of Name

I, SUBRAMANYA BHATT, Residing at Bengaluru-32 have changed my name as R. SUBRAMANYA BHATT, Vide affidavit dated 7/4/2026 before Notary K.S. Bammappanavar, Bengaluru

CHANGE OF NAME
I, **SAILAJA VENKATESH REDDY** Residing at No. 1968, 24th Main, 15th Cross, 1st Sector, Hosur, Sarjapur Road, HSR Layout, Bangalore-560102, have changed my name to **V SHAILAJA** vide affidavit dated 07.04.2026 before Notary B.M. Chandrashekar, Bangalore. Henceforth I shall be known as **V SHAILAJA** only.

CONNECT

ಅದ್ದೂರಿ ಉದ್ಘಾಟನೆ
ನಮ್ಮ 3ನೇ ಮಳಿಗೆ
MYSORE SILKS ಸೀರೆ ಉತ್ಸವ By Sulakshmi Silks
Opening Offer 60% off
ON PURE MYSORE CREPE SILK SAREE

ಸೀರೆ ಉತ್ಸವ-3 ನಮ್ಮೊಂದಿಗೆ ಸೇರಿ ಆಚರಿಸಿ
ನಮ್ಮ ಹೊಸ ಮಳಿಗೆಯಲ್ಲಿ 1 ರಿಂದ 10ನೇ ಏಪ್ರಿಲ್ 2026
SULAKSHMI SILKS
ಕರ್ನಾಟಕದ ಅತಿದೊಡ್ಡ ಸೀರೆ ಉತ್ಸವ
ಸಂಪರ್ಕಿಸಿ: 99727 18898 | 93531 38343 | 9886306643 | 96631 27606
ಸ್ಥಳ: ನಂ.119/1, ಶ್ರೀನಿಧಿ ಕಾಂಪ್ಲೆಕ್ಸ್, 11ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003

ಚಿಟಿಕೆ ಸುದ್ದಿ

ದಾಬಸ್‌ಪೇಟೆಗೆ ಕಾವೇರಿ ನೀರು: ಏ.17ರಂದು ರಸ್ತೆತಡೆ

ಮಾಗಡಿ: ಕಾವೇರಿ ನೀರನ್ನು ದಾಬಸ್‌ಪೇಟೆ ಕೈಗಾರಿಕಾ ಪ್ರದೇಶಕ್ಕೆ ಕೊಂಡೊಯ್ಯುವ ಸರ್ಕಾರದ ಯೋಜನೆಗೆ ರೈತ ಸಂಘ ವಿರೋಧ ವ್ಯಕ್ತಪಡಿಸಿದೆ.

ಮೊದಲು ಮಾಗಡಿ ತಾಲ್ಲೂಕಿನ ಜನರಿಗೆ ಮತ್ತು ಕೆರೆಗಳಿಗೆ ಕಾವೇರಿ ನೀರು ಒದಗಿಸಿ ನಂತರ ಬೇರೆಯವರಿಗೆ ಕೊಡಿ ಎಂದು ರೈತ ಸಂಘದ ಅಧ್ಯಕ್ಷ ಹೊಸಪಾಳ್ಯ ಲೋಕೇಶ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

‘ನಮ್ಮ ತಾಲೂಕಿಗೆ ನೀರು ಕೊಟ್ಟ ನಂತರವಷ್ಟೇ ಬೇರೆ ಜಿಲ್ಲೆಗೆ ನೀರು ಹರಿಸಲು ಅವಕಾಶ ನೀಡಲಾಗುವುದು. ಏಪ್ರಿಲ್ 17ರೊಳಗೆ ಅಧಿಕಾರಿಗಳು ಅಥವಾ ಜನಪ್ರತಿನಿಧಿಗಳು ರೈತ ಸಂಘದೊಂದಿಗೆ ಚರ್ಚಿಸಿ ಅಂತಿಮ ನಿರ್ಧಾರ ಪ್ರಕಟಿಸಬೇಕು. ಇಲ್ಲದಿದ್ದರೆ ಏ. 17ರಂದು ಹೊಸಪೇಟೆ ಗೇಟ್ ಬಳಿ ರಸ್ತೆ ತಡೆ ನಡೆಸಿ ಹೋರಾಟ ಮಾಡಲಾಗುವುದು’ ಎಂದು ಎಚ್ಚರಿಸಿದರು.

ರೈತ ಸಂಘದ ಜಿಲ್ಲಾ ಯುವ ಘಟಕ ಅಧ್ಯಕ್ಷ ರವಿಕುಮಾರ್, ಶಿವಲಿಂಗಯ್ಯ, ಚಂದ್ರಾಯಪ್ಪ, ನಾರಾಯಣ್, ಕಾಂತರಾಜು, ರಾಮಣ್ಣ, ವೆಂಕಟೇಶ್, ಮುನಿರಾಜ್, ನಿಂಗಣ್ಣ, ಶಿವಲಿಂಗಯ್ಯ, ಕರಿಯಪ್ಪ, ಚಿಕ್ಕಣ್ಣ, ಅಂಜಿನಪ್ಪ ಇದ್ದರು.

ಹಾಸ್ಟೆಲ್ ಕಟ್ಟಡದಿಂದ ಜಿಗಿದು ವಿದ್ಯಾರ್ಥಿ ಆತ್ಮಹತ್ಯೆ

ಬೆಂಗಳೂರು: ಬಿ–ಟೆಕ್ ವಿದ್ಯಾರ್ಥಿಯೊಬ್ಬ ಹಾಸ್ಟೆಲ್‌ನ 9ನೇ ಮಹಡಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಯಲಹಂಕ ನ್ಯೂಟೌನ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಜಾರ್ಖಂಡ್ ಲಕ್ಷ್ಮೀಮಿಶ್ರಾ(19) ಆತ್ಮಹತ್ಯೆ ಕೊಂಡ ವಿದ್ಯಾರ್ಥಿ.

ಯಲಹಂಕದಲ್ಲಿರುವ ಕಾಲೇಜಿನಲ್ಲಿ ಲಕ್ಷ್ಮೀಮಿಶ್ರಾ ಓದುತ್ತಿದ್ದ. ಮಂಗಳವಾರ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಳ್ಳಲು ಪರೀಕ್ಷೆ ಒತ್ತಡವೇ ಕಾರಣವೇ ಅಥವಾ ವೈಯಕ್ತಿಕ ಕಾರಣವೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ. ರಾಂಚಿಯಲ್ಲಿ ನೆಲಸಿರುವ ವಿದ್ಯಾರ್ಥಿಯ ಪೋಷಕರಿಗೆ ಮಾಹಿತಿ ನೀಡಲಾಗಿದ್ದು, ಅವರು ಬೆಂಗಳೂರಿಗೆ ಬರುತ್ತಿದ್ದಾರೆ. ಸದ್ಯಕ್ಕೆ ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಸಮೀಪದ ಆಸ್ಪತ್ರೆಗೆ ರವಾನಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಯಲಹಂಕ ನ್ಯೂಟೌನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಡೋಜ ಪ್ರದಾನ ಪ್ರಶ್ನಿಸಿದ್ದ ಪಿಐಎಲ್ ವಜಾ

ಬೆಂಗಳೂರು: ಕರ್ನಾಟಕ ರಾಜ್ಯ ಮಾಹಿತಿ ಆಯೋಗದ ಪ್ರಭಾರ ಮುಖ್ಯ ಮಾಹಿತಿ ಆಯುಕ್ತರಾಗಿ ನಿವೃತ್ತಿ ಹೊಂದಿರುವ ಎಚ್.ಸಿ.ಸತ್ಯನ್ ಅವರಿಗೆ ಹಂಪಿ ಕನ್ನಡ ವಿಶ್ವವಿದ್ಯಾಲಯ ನಾಡೋಜ ಪದವಿ ಪ್ರದಾನ ಮಾಡಿರುವುದನ್ನು ಪ್ರಶ್ನಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಹೈಕೋರ್ಟ್ ವಜಾಗೊಳಿಸಿದೆ.

‘ಕಮಿಟಿ ಫಾರ್ ಪಬ್ಲಿಕ್ ಅಕೌಂಟೆಬಿಲಿಟಿ’ ಸಂಸ್ಥೆಯ ಅಧ್ಯಕ್ಷ ಎಸ್.ಶಿವಕುಮಾರ್ ಸಲ್ಲಿಸಿದ್ದ ಈ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು ‘ಸತ್ಯನ್ ಅವರ ಮೇಲೆ ಭ್ರಷ್ಟಾಚಾರದ ಆರೋಪ ಇದೆ’ ಎಂದರು. ಇದಕ್ಕೆ ಪೀಠವು ’ಆರೋಪ ಸಾಬೀತಾಗಿದೆಯಾ? ಸುಮ್ಮನೆ ಆರೋಪ ಸಾಬೀತಾಗಿಲ್ಲ ಎಂದರೆ ದೊಡ್ಡ ಮೊತ್ತದ ದಂಡ ವಿಧಿಸಬೇಕಾದೀತು’ ಎಂದು ಎಚ್ಚರಿಸಿತು.

‘ಯಾರಿಗೆ ಯಾವ ಪದವಿ ಕೊಡಬೇಕು ಎಂಬುದನ್ನು ನಿರ್ಧರಿಸಲು ವಿಶ್ವವಿದ್ಯಾಲಯ ಸ್ವತಂತ್ರವಾಗಿದೆ. ಇಂತಹ ವಿಷಯದಲ್ಲಿ ನ್ಯಾಯಾಲಯ ಮಧ್ಯ ಪ್ರವೇಶಿಸಲು ಬಯಸುವುದಿಲ್ಲ’ ಎಂದು ಪೀಠ ಹೇಳಿತು.

ಕೊಂಡಕ್ಕೆ ಬಿದ್ದು ಅರ್ಚಕನಿಗೆ ಗಾಯ

ಹಾರೋಹಳ್ಳಿ: ಮರಳವಾಡಿ ತೇರುಬೀದಿ ಗ್ರಾಮದ ಓಂಕಾರೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಮಂಗಳವಾರ ಕೊಂಡ ಹಾಯುತ್ತಿದ್ದ ಅರ್ಚಕ ಆಯತಪ್ಪಿ ಕೊಂಡಕ್ಕೆ ಬಿದ್ದು ಗಾಯಗೊಂಡಿದ್ದಾರೆ.

ಹಾರೋಹಳ್ಳಿಯ ಪುಟ್ಟವೀರಪ್ಪ ಅಲಿಯಾಸ್ ಪುಟ್ಟಸ್ವಾಮಿ (50) ಗಾಯಗೊಂಡ ಅರ್ಚಕ. ಗಾಯಾಳು ಅರ್ಚಕನನ್ನು ಸದ್ಯಕ್ಕೆ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ.

ಪುಟ್ಟಸ್ವಾಮಿ 10-12 ವರ್ಷದಿಂದ ಕೊಂಡ ಹಾಯುತ್ತಿದ್ದಾರೆ. ಓಂಕಾರೇಶ್ವರ ದೇಗುಲ ಮುಜರಾಯಿ ಇಲಾಖೆಗೆ ಅಧೀನದಲ್ಲಿದೆ. ಮುಂಜಾಗ್ರತಾ ಕ್ರಮ ಕೈಗೊಳ್ಳದ ಕಾರಣ ಈ ಅನಾಹುತ ಸಂಭವಿಸಿದೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

₹27.42 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಆರು ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಭರ್ಜರಿ ಕಾರ್ಯಾಚರಣೆ, 8 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಗೋಡಿ, ಯಲಹಂಕ, ಮೈಕೊಲೇಔಟ್, ಪರಪ್ಪನ ಅಗ್ರಹಾರ, ಬಾಗಲೂರು ಹಾಗೂ ಬಾಣಸವಾಡಿ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ನಡೆದ ವಿಶೇಷ ಕಾರ್ಯಾಚರಣೆಯಲ್ಲಿ ಡ್ರಗ್ಸ್ ಮಾರಾಟ ಮಾಡುತ್ತಿದ್ದ ಎಂಟು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಅಂದಾಜು ₹27.42 ಕೋಟಿ ಮೌಲ್ಯದ ವಿವಿಧ ಮಾದರಿಯ ಸಿಂಥೆಟಿಕ್ ಹಾಗೂ ನೈಸರ್ಗಿಕ ಡ್ರಗ್ಸ್ ಜಪ್ತಿ ಮಾಡಿದ್ದಾರೆ.

ವಿದೇಶದ ಒಬ್ಬ, ಹೊರ ರಾಜ್ಯದ ನಾಲ್ವರು ಹಾಗೂ ಬೆಂಗಳೂರಿನ ಮೂವರನ್ನು ಬಂಧಿಸಲಾಗಿದೆ. ಆರೋಪಿಗಳಿಂದ 12 ಕೆ.ಜಿ ಎಂಡಿಎಂಎ ಕ್ರಿಸ್ಟಲ್, 275 ಗ್ರಾಂ ಕೊಕೇನ್, 32 ಕೆ.ಜಿ ಗಾಂಜಾ, 40 ಗ್ರಾಂ ಚಿನ್ನಾಭರಣ, ಕೃತ್ಯಕ್ಕೆ ಬಳಸಿದ ಎರಡು ದ್ವಿಚಕ್ರ ವಾಹನ, ಒಂದು ಕಾರು, ಎರಡು ಮೊಬೈಲ್, ₹2.85 ಲಕ್ಷ ನಗದು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಮಾಧ್ಯಮಗೋಷ್ಠಿಯಲ್ಲಿ ಮಂಗಳವಾರ ಮಾಹಿತಿ ನೀಡಿದರು.

ನಗರದಲ್ಲಿ ಡ್ರಗ್ಸ್ ಪೆಡ್ಲಿಂಗ್ ನಡೆಸುತ್ತಿದ್ದ ನೈಜೀರಿಯಾ ದೇಶದ ಇಮ್ಯಾನ್ಯುಯಲ್ ಎಂಬುವರನ್ನು ಹೆಬ್ಬಗೋಡಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಆರೋಪಿಯಿಂದ ₹27 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ.

ಅಪರಾಧ ಸುದ್ದಿ

2014ರಲ್ಲಿ ವ್ಯಾವಹಾರಿಕ ವೀಸಾದಡಿ ಭಾರತಕ್ಕೆ ಇಮ್ಯಾನ್ಯುಯಲ್ ಬಂದಿದ್ದರು. ಭಾರತೀಯ ಮಹಿಳೆಯನ್ನು ಮದುವೆಯಾಗಿದ್ದರು. ಐದು ಮನೆಗಳನ್ನು ಬಾಡಿಗೆಗೆ ಪಡೆದು ಅಲ್ಲಿ ಮಾದಕ ವಸ್ತುಗಳನ್ನು ದಾಸ್ತಾನು ಮಾಡುತ್ತಿದ್ದರು. ಹೊರ ರಾಜ್ಯ ಮತ್ತು ವಿದೇಶಗಳಿಂದ ಪೆಡ್ಲರ್‌ಗಳ ಮೂಲಕ ಮಾದಕ ವಸ್ತುಗಳನ್ನು ತರಿಸಿಕೊಳ್ಳುತ್ತಿದ್ದರು. ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ. ತಲೆಮರೆಸಿಕೊಂಡಿರುವ ಆರೋಪಿಗಳ ಪತ್ತೆಗೆ ಶೋಧಕಾರ್ಯ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಗಾಂಜಾ ಪೆಡ್ಲರ್ ಗಳ ಬಂಧನ: ಯಲಹಂಕ ಉಪನಗರ ಠಾಣೆ ಪೊಲೀಸರು ಕಾರ್ಯಾಚರಣೆ ನಡೆಸಿ, ಗಾಂಜಾ ಪೆಡ್ಲರ್‌ಗಳಾದ ಆದೇಶ್(19), ಮೊಹಮ್ಮದ್ ನಿಶಾದ್(24) ಎಂಬುವವರನ್ನು ಬಂಧಿಸಿದ್ದಾರೆ.

ಮೂರು ವರ್ಷದ ಹಿಂದೆ ನಗರಕ್ಕೆ ಬಂದಿದ್ದ ಆರೋಪಿಗಳು, ಒಡಿಶಾದಿಂದ ಗಾಂಜಾ ತಂದು ಮಾರಾಟ ಮಾಡುತ್ತಿದ್ದರು. ಬಂಧಿತರಿಂದ ₹10.50 ಲಕ್ಷ ಮೌಲ್ಯದ 21 ಕೆ.ಜಿ ಗಾಂಜಾ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

12 ವರ್ಷದಿಂದ ಡ್ರಗ್ಸ್ ಮಾರಾಟ

ನೈಜೀರಿಯಾದ ಇಮ್ಯಾನ್ಯುಯಲ್ ಕಳೆದ ಹನ್ನೆರಡು ವರ್ಷಗಳಿಂದ ಬೆಂಗಳೂರಿನಲ್ಲಿ ಡ್ರಗ್ಸ್ ಮಾರಾಟ ಮಾಡುತ್ತಿದ್ದರು. ನಗರದ ವಿವಿಧೆಡೆ ಡ್ರಗ್ಸ್ ಮಾರಾಟ ಕ್ಕೆಂದು ಪೆಡ್ಲರ್‌ಗಳನ್ನು ನೇಮಿಸಿ ಕೊಂಡಿದ್ದರು. 12 ವರ್ಷಗಳಿಂದ ಡ್ರಗ್ಸ್ ಮಾರಾಟ ಮಾಡುತ್ತಿದ್ದರೂ ಒಮ್ಮೆಯೂ ಪೊಲೀಸರಿಗೆ ಸಿಕ್ಕಿ ಬಿದ್ದಿರಲಿಲ್ಲ.


ಇಮ್ಯಾನ್ಯುಯಲ್

ಆರೋಪಿಗಳಿಂದ ಜಪ್ತಿ ಮಾಡಿಕೊಂಡ ಡ್ರಗ್ಸ್, ಮೊಬೈಲ್ ಫೋನ್‌ಗಳನ್ನು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಅವರು ಪರಿಶೀಲಿಸಿದರು

ಆಟೊ ಚಾಲನೆ ನೆಪದಲ್ಲಿ ಡ್ರಗ್ಸ್ ಮಾರಾಟ

ಆಹಾರ ಪದಾರ್ಥಗಳ ಡೆಲಿವರಿ ಬಾಯ್, ಆಟೊ ಚಾಲನೆಯ ನೆಪದಲ್ಲಿ ವಿವಿಧ ಮಾದರಿಯ ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದ ಇಬ್ಬರನ್ನು ಪರಪ್ಪನ ಅಗ್ರಹಾರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ರಾಹುಲ್ ಮತ್ತು ಪ್ರೇಮ್ ಬಂಧಿತರು.

ತಮಿಳುನಾಡಿನಿಂದ ಗಾಂಜಾವನ್ನು ನಗರಕ್ಕೆ ತರಿಸಿಕೊಂಡು ಮಾರಾಟ ಮಾಡುತ್ತಿದ್ದರು. ರಾಹುಲ್ ಡೆಲಿವರಿ ಬಾಯ್ ಹಾಗೂ ಪ್ರೇಮ್ ಆಟೊ ಚಾಲಕನ ಸೋಗಿನಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದರು. ಬಂಧಿತರಿಂದ ₹3 ಲಕ್ಷ ಮೌಲ್ಯದ 7 ಕೆ.ಜಿ 500 ಗ್ರಾಂ ಗಾಂಜಾ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಇನ್ನು ಮೈಕೊ ಲೇಔಟ್ ಠಾಣೆಯ ಪೊಲೀಸರು, ಅಸ್ಸಾಂನ ಬೋಬಿ ನಾಯ್ಡು (26) ಎಂಬುವರನ್ನು ಬಂಧಿಸಿದ್ದಾರೆ. ಆರೋಪಿಯಿಂದ ₹3.30 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ. ಬಾಗಲೂರು ಹಾಗೂ ಬಾಣಸವಾಡಿ ಠಾಣೆಯ ಪೊಲೀಸರು ಕಾರ್ಯಾಚರಣೆ ನಡೆಸಿ, ₹3 ಲಕ್ಷ ಮೌಲ್ಯದ ಮಾದಕ ವಸ್ತುಗಳನ್ನು ಜಪ್ತಿ ಮಾಡಿದ್ದಾರೆ.

ಪಶುವೈದ್ಯರ ಸಾವು ತನಿಖೆಗೆ ಆಗ್ರಹ

ಬೆಂಗಳೂರು: ಪಶುವೈದ್ಯರಾದ ಸಮೀಕ್ಷಾ ರೆಡ್ಡಿ ಮತ್ತು ವೈಶಾಖ್ ವಿಸ್ವಾನ್ ಅವರ ಸಾವಿನ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಿ, ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ಪಶುವೈದ್ಯಕೀಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಆಡಳಿತ ಮಂಡಳಿ ಮತ್ತು ವಿದ್ಯಾರ್ಥಿಗಳು ಕಪ್ಪುಪಟ್ಟಿ ಧರಿಸಿ ಮಂಗಳವಾರ ಮೌನ ಪ್ರತಿಭಟನೆ ನಡೆಸಿದರು.

ಶಿವಮೊಗ್ಗದ ತ್ಯಾವರೆಕೊಪ್ಪದ ಹುಲಿ–ಸಿಂಹಧಾಮದಲ್ಲಿ ನೀರಾನೆ ದಾಳಿಯಿಂದ ಪಶುವೈದ್ಯೆ ಸಮೀಕ್ಷಾ ರೆಡ್ಡಿ ಹಾಗೂ ಜಾಮ್ ನಗರದ ವಂತಾರಾದಲ್ಲಿ ಡಾ.ವೈಶಾಖ್ ವಿಸ್ವಾನ್ ಅವರ ಸಾವು ಪಶುವೈದ್ಯಕೀಯ ಕ್ಷೇತ್ರ ಎದುರಿಸುತ್ತಿರುವ ಅಪಾಯಕಾರಿ ಪರಿಸ್ಥಿತಿಗೆ ಸಾಕ್ಷಿಯಾಗಿದೆ ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

ಮೃಗಾಲಯ ಮತ್ತು ಸಫಾರಿಗಳಲ್ಲಿ ಕಾರ್ಯನಿರ್ವಹಿಸುವ ಪಶುವೈದ್ಯರಿಗೆ ಕಟ್ಟುನಿಟ್ಟಾದ ಸುರಕ್ಷತಾ ಕಾರ್ಯಾಚರಣೆ ವಿಧಾನಗಳನ್ನು (ಎಸ್‌ಒಪಿ) ಜಾರಿಗೊಳಿಸಬೇಕು, ಅಪಾಯಕಾರಿ ಪರಿಸ್ಥಿತಿಯಲ್ಲಿ ಕೆಲಸ ಮಾಡುವವರಿಗೆ ವಿಶೇಷ ಭತ್ಯೆ ಮತ್ತು ವಿಮಾ ಸೌಲಭ್ಯ ಒದಗಿಸಬೇಕು. ವನ್ಯಜೀವಿ ವಿಭಾಗಗಳಲ್ಲಿ ಗುತ್ತಿಗೆ ಆಧಾರದ ನೇಮಕಾತಿ ಬದಲು ಕಾಯಂ ಪಶುವೈದ್ಯಕೀಯ ವಿಭಾಗಗಳನ್ನು ಸ್ಥಾಪಿಸಬೇಕು ಎಂದು ಆಗ್ರಹಿಸಿದರು.

ಪಶುಗಳ ಆರೋಗ್ಯ ಕಾಪಾಡುವಲ್ಲಿ ತಮ್ಮ ಪ್ರಾಣವನ್ನೇ ಪಣಕ್ಕಿಡುವ ಪಶುವೈದ್ಯರ ಸುರಕ್ಷತೆಯ ಬಗ್ಗೆ ಸರ್ಕಾರ ಮತ್ತು ಸಂಬಂಧಪಟ್ಟ ಇಲಾಖೆಗಳು ಎಚ್ಚೆತ್ತುಕೊಳ್ಳಬೇಕು ಎಂದು ಮನವಿ ಮಾಡಿದರು.

ವಿಶ್ವವಿದ್ಯಾಲಯದ ಕುಲಪತಿ ಕೆ.ಸಿ. ವೀರಣ್ಣ ನೇತೃತ್ವದಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಪಶು ವೈದ್ಯಕೀಯ ಕಾಲೇಜಿನ ಡೀನ್‌ಗಳು ಕಪ್ಪು ಪಟ್ಟಿ ಧರಿಸಿದ್ದರು. ಹೆಬ್ಬಾಳದ ಎನ್.ಕೆ.ಶಿವಕುಮಾರ್ ಗೌಡ, ಬೀದರ್‌ನ ಡಾ.ಎಂ.ಕೆ.ತಾಂಡ್ಲೆ, ಗದಗದ ಡಾ. ರಾಮಚಂದ್ರ ಬಿ., ಶಿವಮೊಗ್ಗದ ಡಾ. ಪ್ರಕಾಶ್ ನಾಡೂರ್, ಹಾಸನದ ಡಾ. ಓ.ಆರ್. ನಟರಾಜು, ಅಥಣಿಯ ಡಾ. ಗಂಗಾನಾಯಕ್ ಹಾಗೂ ಸಂಶೋಧನಾ ನಿರ್ದೇಶಕ ಡಾ. ಬಿ.ವಿ. ಶಿವಪ್ರಕಾಶ್, ವಿಸ್ತರಣಾ ನಿರ್ದೇಶಕ ಡಾ.ಬಸವರಾಜ್ ಅವತಿ, ವಿದ್ಯಾರ್ಥಿ ಕಲ್ಯಾಣ ನಿರ್ದೇಶಕ ಡಾ.ಶ್ರೀಕಾಂತ್ ಕುಲಕರ್ಣಿ, ಪಶು ವಿಜ್ಞಾನ ವಿಭಾಗದ ಮುಖ್ಯಸ್ಥ ಡಾ.ಆರ್.ನಾಗರಾಜ ಸಭೆಯಲ್ಲಿ ಭಾಗವಹಿಸಿದ್ದರು.

ಡಿ.ಜೆ ಹಳ್ಳಿಯ ಶಾಂಪುರ ರಸ್ತೆಯ ಅಂಗಡಿಯಲ್ಲಿ ಅಗ್ನಿ ಅವಘಡ

ಪ್ಲೈವುಡ್ ಅಂಗಡಿ ಭಸ್ಮ, 6 ಹಸು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿ.ಜೆ ಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಶಾಂಪುರ ರಸ್ತೆಯ ಪ್ಲೈವುಡ್ ಅಂಗಡಿಯಲ್ಲಿ ಸೋಮವಾರ ತಡರಾತ್ರಿ ಕಾಣಿಸಿಕೊಂಡ ಬೆಂಕಿಯು ಪಕ್ಕದಲ್ಲಿದ್ದ ದನದ ಕೊಟ್ಟಿಗೆಗೂ ವ್ಯಾಪಿಸಿದ್ದರಿಂದ ಆರು ಹಸುಗಳು ಸಜೀವ ದಹನವಾಗಿವೆ. ಅಲ್ಲದೇ, ಪ್ಲೈವುಡ್ ಅಂಗಡಿಯಲ್ಲಿದ್ದ ಪೀಠೋಪಕರಣಗಳು, ಅಂಗಡಿ ಎದುರು ನಿಲುಗಡೆ ಮಾಡಿದ್ದ ಟಾಟಾ ಏಸ್ ವಾಹನ ಸುಟ್ಟು ಹೋಗಿವೆ.

ಸೋಮವಾರ ತಡರಾತ್ರಿ 1.30ರ ಸುಮಾರಿಗೆ ಬೆಂಕಿ ಕಾಣಿಸಿಕೊಂಡಿತ್ತು. ನೋಡ ನೋಡುತ್ತಿದ್ದಂತೆಯೇ ಬೆಂಕಿಯ ಜ್ವಾಲೆ ಹೆಚ್ಚಾಗಿತ್ತು. ಅಂಗಡಿ ಪಕ್ಕದಲ್ಲಿ ಇರುವ ದನದ ಕೊಟ್ಟಿಗೆಗೂ ಬೆಂಕಿ ಕ್ಷಣಾರ್ಧದಲ್ಲಿ ವ್ಯಾಪಿಸಿದ ಪರಿಣಾಮ ಆರು ಹಸುಗಳು ಬೆಂಕಿಗೆ ಆಹುತಿಯಾಗಿವೆ. ಉಳಿದ ಹಸುಗಳನ್ನು ರಕ್ಷಣೆ ಮಾಡಲಾಯಿತು. ಗಾಯಗೊಂಡ ಹಸುಗಳಿಗೆ ಪಶು ವೈದ್ಯರು ಚಿಕಿತ್ಸೆ ನೀಡುತ್ತಿದ್ದಾರೆ.

ಅಹಮದ್ ಅವರು ಹಲವು ವರ್ಷಗಳಿಂದ ಪ್ಲೈವುಡ್ ಅಂಗಡಿ ನಡೆಸುತ್ತಿದ್ದಾರೆ. ಸೋಮವಾರ ರಾತ್ರಿ 10 ಗಂಟೆಯ ಸುಮಾರಿಗೆ ಮಳಿಗೆಗೆ ಬೀಗ ಹಾಕಿಕೊಂಡು ಮನೆಗೆ ತೆರಳಿದ್ದರು. ಅದಾದ ಮೇಲೆ ಬೆಂಕಿ ಅವಘಡ ಸಂಭವಿಸಿದೆ. ಮಳಿಗೆ ಪಕ್ಕದ ಮನೆಗೂ ಬೆಂಕಿ ತಗುಲಿದ್ದು, ನಷ್ಟ ಉಂಟಾಗಿದೆ.

ಪ್ಲೈವುಡ್ ಅಂಗಡಿಗೆ ತಾಗಿಕೊಂಡಂತೆ ಶ್ರೀನಿವಾಸ್ ಅವರ ಕೊಟ್ಟಿಗೆ ಇತ್ತು. ಕೊಟ್ಟಿಗೆಯಲ್ಲಿ 20 ಹಸುಗಳು ಇದ್ದವು. ಅವುಗಳ ಪೈಕಿ, 6 ಹಸುಗಳು ಮೃತಪಟ್ಟಿವೆ.

‘ಸುಮಾರು 25 ವರ್ಷಗಳಿಂದ ಹಸು ಸಾಕಾಣಿಕೆಯಲ್ಲಿ ತೊಡಗಿಸಿಕೊಂಡು ಹಾಲಿನ ವ್ಯಾಪಾರ ಮಾಡುತ್ತಿದ್ದೆ. ಹಾಲಿನ ವ್ಯಾಪಾರವೇ ಜೀವನಕ್ಕೆ ಆಧಾರವಾಗಿತ್ತು’ ಎಂದು ಮಾಲೀಕ ಶ್ರೀನಿವಾಸ್ ಕಣ್ಣೀರು ಹಾಕಿದರು.

ಸ್ಥಳೀಯರು ನೀಡಿದ ಮಾಹಿತಿ ಮೇರೆಗೆ ಸ್ಥಳಕ್ಕೆ ತೆರಳಿ ಕಾರ್ಯಾಚರಣೆ ನಡೆಸಲಾಯಿತು. ಮಳಿಗೆಯಲ್ಲಿ ಹೆಚ್ಚಿನ ಪ್ಲೈವುಡ್ ದಾಸ್ತಾನು ಮಾಡಿದ್ದರಿಂದ ಬೆಂಕಿ ಕ್ಷಣಾರ್ಧದಲ್ಲಿ ವ್ಯಾಪಿಸಿತ್ತು ಎಂದು ಅಗ್ನಿಶಾಮಕ ದಳದ ಸಿಬ್ಬಂದಿ ಮಾಹಿತಿ ನೀಡಿದರು.

ದನದ ಕೊಟ್ಟಿಗೆಗೆ ಬೆಂಕಿ ವ್ಯಾಪಿಸಿದ್ದ ದೃಶ್ಯ

ಪೊಲೀಸರಿಂದ ತನಿಖೆ

ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆದಲಾಗುತ್ತಿದೆ. ಬೆಂಕಿ ಅವಘಡಕ್ಕೆ ವಿದ್ಯುತ್ ಶಾರ್ಟ್ ಸರ್ಕಿಟ್ ಕಾರಣವೇ ಅಥವಾ ಕಿಡಿಗೇಡಿಗಳ ಕೃತ್ಯವೇ ಎಂಬುದನ್ನು ಪರಿಶೀಲನೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಕಳವಾಗಿದ್ದ 110 ಮೊಬೈಲ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ ವಿಭಾಗದ 13 ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಸಾರ್ವಜನಿಕರು ಕಳೆದುಕೊಂಡಿದ್ದ ಹಾಗೂ ಕಳ್ಳತನವಾಗಿದ್ದ 110 ಮೊಬೈಲ್ ಫೋನ್‌ಗಳನ್ನು ‘ಸೆಂಟ್ರಲ್ ಎಕ್ವಿಪ್‌ಮೆಂಟ್ ಐಡೆಂಟಿಟಿ ರಿಜಿಸ್ಟರ್’ (ಸಿಇಐಆರ್) ಪೋರ್ಟಲ್ ಸಹಾಯದಿಂದ ಪೊಲೀಸರು ಪತ್ತೆ ಹಚ್ಚಿದ್ದಾರೆ.

ಕಳ್ಳತನವಾದ ಮೊಬೈಲ್‌ಗಳ ಮಾಹಿತಿಯನ್ನು ‘ಇ-ಲಾಸ್ಟ್’ ಆ್ಯಪ್ ಹಾಗೂ ಕೇಂದ್ರ ಸರ್ಕಾರ ರೂಪಿಸಿರುವ ‘ಸೆಂಟ್ರಲ್ ಎಕ್ವಿಪ್‌ಮೆಂಟ್ ಐಡೆಂಟಿಟಿ ರಿಜಿಸ್ಟರ್’ ಪೋರ್ಟಲ್‌ನಲ್ಲಿ ದಾಖಲು ಮಾಡಲಾಗುತ್ತದೆ. ಉತ್ತರ ವಿಭಾಗದ ಪೊಲೀಸರು ತಾಂತ್ರಿಕ ಸುಳಿವು ಆಧರಿಸಿ, ತನಿಖೆ ನಡೆಸಿ ಮೊಬೈಲ್ ಪತ್ತೆ ಮಾಡಿ, ಜಪ್ತಿ ಮಾಡಿಕೊಳ್ಳುವಲ್ಲಿ ಯಶಸ್ವಿ ಆಗಿದ್ದಾರೆ.

ಆರ್.ಟಿ ನಗರ ಠಾಣೆ ಪೊಲೀಸರು 12, ಜಾಲಹಳ್ಳಿ 8, ಜೆ.ಸಿ ನಗರ 9, ಮಹಾಲಕ್ಷ್ಮಿ ಲೇಔಟ್ 12, ಸಂಜಯನಗರ 6, ರಾಜಾಜಿನಗರ 10, ಸುಬ್ರಹ್ಮಣ್ಯನಗರ 11, ನಂದಿನಿ ಲೇಔಟ್ 12, ಮಲ್ಲೇಶ್ವರ 8, ಹೆಬ್ಬಾಳ 3, ಯಶವಂತಪುರ 10, ಆರ್.ಎಂ.ಸಿ ಯಾರ್ಡ್ 4, ಶ್ರೀರಾಂಪುರ ಠಾಣೆಯ ಪೊಲೀಸರು 5 ಸೇರಿದಂತೆ ₹22 ಲಕ್ಷ ಮೌಲ್ಯದ 110 ಮೊಬೈಲ್ ಫೋನ್ ಜಪ್ತಿ ಮಾಡಿಕೊಂಡಿದ್ದಾರೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ತಿಳಿಸಿದರು.

ಕಾಳಸಂತೆಯಲ್ಲಿ ಐಪಿಎಲ್ ಟಿಕೆಟ್ ಮಾರುತ್ತಿದ್ದ 11 ಮಂದಿ ಸೆರೆ

ಬೆಂಗಳೂರು: ಐಪಿಎಲ್ ಕ್ರಿಕೆಟ್ ಟೂರ್ನಿಯ ಟಿಕೆಟ್‌ಗಳನ್ನು ಕಾಳಸಂತೆಯಲ್ಲಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದ 11 ಮಂದಿಯನ್ನು ಸಿಸಿಬಿಯ ವಿಶೇಷ ವಿಚಾರಣಾ ದಳದ ಸಿಬ್ಬಂದಿ ಬಂಧಿಸಿದ್ದಾರೆ. ಸಾಫ್ಟ್‌ವೇರ್ ಎಂಜಿನಿಯರ್ ಸತ್ಯನಾರಾಯಣ, ಜಗದೀಶ್, ಹರ್ಷ, ವಿನಯ್, ಶಾಹೀದ್, ನಿಖಿತ್, ಪುನೀತ್ ಸೇರಿದಂತೆ 11 ಮಂದಿಯನ್ನು ಬಂಧಿಸಿ ಅವರಿಂದ 28 ಟಿಕೆಟ್, 8 ಮೊಬೈಲ್ ಫೋನ್ ವಶಕ್ಕೆ ಪಡೆಯಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಮಾಧ್ಯಮಗೋಷ್ಠಿಯಲ್ಲಿ ಮಂಗಳವಾರ ಮಾಹಿತಿ ನೀಡಿದರು.

ಏಪ್ರಿಲ್ 5ರಂದು ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಹಾಗೂ ಚೆನ್ನೈ ಸೂಪರ್ ಕಿಂಗ್ಸ್ (ಸಿಎಸ್‌ಕೆ) ತಂಡಗಳ ನಡುವೆ ನಡೆದ ಐಪಿಎಲ್ ಪಂದ್ಯ ಆರಂಭಕ್ಕೂ ಮುನ್ನ ಆರೋಪಿಗಳು ಕಾಳಸಂತೆಯಲ್ಲಿ ಹೆಚ್ಚಿನ ಬೆಲೆಗೆ ಟಿಕೆಟ್ ಮಾರಾಟ ಮಾಡುತ್ತಿದ್ದರು. ಕಬ್ಬನ್ ಪಾರ್ಕ್ ಠಾಣಾ ವ್ಯಾಪ್ತಿಯಲ್ಲಿ ಟಿಕೆಟ್ ಮಾರಾಟ ಮಾಡುತ್ತಿದ್ದ 10 ಮಂದಿಯನ್ನು ಬಂಧಿಸಲಾಗಿದೆ. ಬಂಧಿತರಿಂದ ಏಳು ಮೊಬೈಲ್ ಫೋನ್ ಹಾಗೂ ವಿವಿಧ ಬೆಲೆಯ 18 ಟಿಕೆಟ್, ಆನ್‌ಲೈನ್ ಟಿಕೆಟ್‌ಗಳ ವಾಟ್ಸ್‌ಆ್ಯಪ್ ಸ್ಕ್ರೀನ್‌ಶಾಟ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಚಾಮರಾಜಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಟಿಕೆಟ್ ಮಾರಾಟಕ್ಕೆ ಮುಂದಾಗಿದ್ದ ಒಬ್ಬ ಆರೋಪಿಯನ್ನು ಬಂಧಿಸಲಾಗಿದೆ. ಜತೆಗೆ, ಒಂದು ಮೊಬೈಲ್ ಫೋನ್ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

ಚೀಲದಲ್ಲಿ ಮೃತದೇಹ: ಕೊಲೆ ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದ ಕಿಕ್ ಬಂಕ್ ಬಾರ್ ಪಕ್ಕದ ಖಾಲಿ ಪ್ರದೇಶದಲ್ಲಿ ಸುನಿಲ್ ನಾಯಕ್ (42) ಎಂಬುವರನ್ನು ಕೊಲೆ ಮಾಡಿ, ಮೃತದೇಹವನ್ನು ಪ್ಲಾಸ್ಟಿಕ್ ಚೀಲದಲ್ಲಿ ತುಂಬಿ ಎಸೆದಿದ್ದ ಆರೋಪಿಯನ್ನು ಹೆಬ್ಬಗೋಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆನೇಕಲ್ ತಾಲ್ಲೂಕಿನ ಜಿಗಣಿ ಹೋಬಳಿ ಯಾರಂಡನಹಳ್ಳಿಯಲ್ಲಿ ನೆಲಸಿದ್ದ ಒಡಿಶಾದ ಬುಸುದೇವ್ ಮಲ್ಲಿಕ್ (30) ಬಂಧಿತ.

ಆನಂದ ಎಂಬುವವರು ನೀಡಿದ ದೂರಿನ ಮೇಲೆ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಬುಸುದೇವ್

ಒಡಿಶಾದಿಂದ ಬೆಂಗಳೂರಿಗೆ ಬಂದಿದ್ದ ಆರೋಪಿ, ಜೀವನ ನಿರ್ವಹಣೆಗೆ ಕೂಲಿ ಕೆಲಸ ಮಾಡುತ್ತಿದ್ದ. ಸುನಿಲ್ ನಾಯಕ್ ಅವರ ಪತ್ನಿಯ ಜತೆಗೆ ಸಲುಗೆ ಬೆಳೆಸುವ ಆಲೋಚನೆಯಿಂದ ಆರೋಪಿ ಬುಸುದೇವ್ ಮಲ್ಲಿಕ್ ಕೊಲೆಗೆ ಸಂಚು ರೂಪಿಸಿದ್ದ. ಮಾರ್ಚ್ 26ರಂದು ವಿಪರೀತ ಮದ್ಯಪಾನ ಮಾಡಿದ್ದ ಆರೋಪಿ, ಮಾತುಕತೆ ಮಾಡುವ ನೆಪದಲ್ಲಿ ಕೈಗಾರಿಕಾ ಪ್ರದೇಶಕ್ಕೆ ಸುನಿಲ್ ನಾಯಕ್ ಅವರನ್ನು ಕರೆಸಿಕೊಂಡು ಚಾಕುವಿನಿಂದ ಇರಿದು ಕೊಲೆ ಮಾಡಿದ್ದ. ಬಳಿಕ, ಸಾಕ್ಷ್ಯ ನಾಶಪಡಿಸುವ ಉದ್ದೇಶದಿಂದ ಪ್ಲಾಸ್ಟಿಕ್ ಚೀಲದಲ್ಲಿ ಮೃತದೇಹ ತುಂಬಿ ಬಾರ್ ಪಕ್ಕದ ಖಾಲಿ ಪ್ರದೇಶದಲ್ಲಿ ಎಸೆದು ಹೋಗಿದ್ದ ಎಂದು ಪೊಲೀಸರು ಹೇಳಿದರು.

ವಿಶೇಷ ತಂಡ

ಆರೋಪಿಯ ಪತ್ತೆಗೆ ಹೆಬ್ಬಗೋಡಿ ಠಾಣೆ ಇನ್‌ಸ್ಪೆಕ್ಟರ್ ಜಿ.ಸೋಮಶೇಖರ್ ನೇತೃತ್ವದಲ್ಲಿ ವಿಶೇಷ ತಂಡ ರಚಿಸಲಾಗಿತ್ತು. ತಂಡವು ತ್ವರಿತ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ ಎಂದು ಎಲೆಕ್ಟ್ರಾನಿಕ್ ಸಿಟಿ ಉಪ ವಿಭಾಗದ ಡಿಸಿಪಿ ಎಂ.ನಾರಾಯಣ ತಿಳಿಸಿದರು.

ಮಹಿಳೆಗೆ ಬ್ಲ್ಯಾಕ್‌ಮೇಲ್: ಇಬ್ಬರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಜಾಲತಾಣದ ಮೂಲಕ ಮಹಿಳೆಯನ್ನು ಪರಿಚಯಿಸಿಕೊಂಡು ಖಾಸಗಿ ಕ್ಷಣದ ವಿಡಿಯೊ, ಫೋಟೊ ಸೆರೆ ಹಿಡಿದು, ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಬಂಧಿಸುವಲ್ಲಿ ಕೆ.ಆರ್.ಪುರ ಠಾಣೆ ಪೊಲೀಸರು ಯಶಸ್ವಿ ಆಗಿದ್ದಾರೆ.

ತೆಲಂಗಾಣದ ಬಿ.ಟೆಕ್ ಪದವೀಧರ ಮಹೇಶ್ (36) ಹಾಗೂ ಅನಂತಪುರದ ನಿವಾಸಿ ಸ್ವಾಮಿ (32) ಬಂಧಿತರು. ಕೆ.ಆರ್.ಪುರದ ವೈಟ್‌ಸಿಟಿ ಲೇಔಟ್‌ನಲ್ಲಿ ವಾಸವಾಗಿರುವ ಮಹಿಳೆಗೆ ಆರೋಪಿಗಳು ವಂಚಿಸಿದ್ದರು.

ಮಹಿಳೆಯಿಂದ ಚಿನ್ನ ಆಭರಣ, ನಗದು ದೋಚಿದ್ದರು. ಆರೋಪಿಗಳಿಂದ ₹85.65 ಲಕ್ಷ ಮೌಲ್ಯದ 571 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ದೂರುದಾರೆಯ ಪತಿ ಬಿಲ್ಡರ್ ಆಗಿದ್ದು, ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಒಂದೂವರೆ ವರ್ಷದ ಹಿಂದೆ ಸಾಮಾಜಿಕ ಜಾಲತಾಣ ‘ಸ್ನ್ಯಾಪ್ ಚಾಟ್’ನಲ್ಲಿ ಪರಿಚಯವಾದ ಮಹೇಶ್, ಮಹಿಳೆಯ ಜತೆಗೆ ಆತ್ಮೀಯವಾಗಿ ಮಾತನಾಡಿದ್ದ. ನಂತರ, ಇಬ್ಬರೂ ಮೊಬೈಲ್ ಸಂಖ್ಯೆ ವಿನಿಮಯ ಮಾಡಿಕೊಂಡಿದ್ದರು. ಕ್ರಮೇಣ ಇಬ್ಬರ ನಡುವೆ ಸಲುಗೆ ಬೆಳೆದಿತ್ತು. ಪರಸ್ಪರ ಖಾಸಗಿ ಸಂದೇಶ ಕಳುಹಿಸುತ್ತಿದ್ದರು. ಅದನ್ನು ದುರುಪಯೋಗ ಪಡಿಸಿಕೊಂಡಿದ್ದ ಮಹೇಶ್, ಉದ್ಯಮಕ್ಕೆ ಹಣದ ಅಗತ್ಯವಿದೆ ಎಂಬುದಾಗಿ ಸುಳ್ಳು ಹೇಳಿ ಮಹಿಳೆಯಿಂದ ಎರಡು ಕೆ.ಜಿ ಚಿನ್ನಾಭರಣ ಪಡೆದಿದ್ದ. ಆದರೆ, ವಾಪಸ್ ನೀಡಿರಲಿಲ್ಲ. ಚಿನ್ನದ ಆಭರಣ ವಾಪಸ್ ಕೇಳಿದಾಗ ಖಾಸಗಿ ವಿಡಿಯೊ, ಫೋಟೊಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕುವುದಾಗಿ ಬೆದರಿಸಿದ್ದ ಎಂಬುದಾಗಿ ದೂರು ನೀಡಲಾಗಿದೆ.

ಮತ್ತೊಬ್ಬ ಆರೋಪಿ ಸ್ವಾಮಿ ಸಹ ಮಹಿಳೆಗೆ ‘ಸ್ನ್ಯಾಪ್ ಚಾಟ್’ನಲ್ಲಿಯೇ ಪರಿಚಯವಾಗಿದ್ದ. ಆತ ಸಹ ಮಹಿಳೆಯಿಂದ ಹಣ ಪಡೆದುಕೊಂಡಿದ್ದ. ಮಹಿಳೆಯ ಜತೆಗೆ ಬೇರೆ ಯಾವುದೇ ರೀತಿಯ ಸಂಬಂಧ ಇಟ್ಟುಕೊಂಡಿಲ್ಲ. ಈತ ಕೂಡ ಹಣ ವಾಪಸ್ ಕೊಡದೇ ಬೆದರಿಕೆ ಹಾಕಿದ್ದ ಎಂಬುದು ಗೊತ್ತಾಗಿದೆ ಎಂದು ಪೊಲೀಸರು ಹೇಳಿದರು.

ಬೆಟ್ಟಿಂಗ್‌ನಲ್ಲಿ ಹಣ ಕಳೆದುಕೊಂಡಿದ್ದ ಆರೋಪಿ: ಆರೋಪಿ ಮಹೇಶ್, ಮಹಿಳೆಯಿಂದ ಪಡೆದುಕೊಂಡಿದ್ದ ಚಿನ್ನದ ಆಭರಣಗಳನ್ನು ಮಾರಾಟ ಮಾಡಿ ಆನ್‌ಲೈನ್ ಬೆಟ್ಟಿಂಗ್‌ಗೆ ಹಣವನ್ನು ಹೂಡಿದ್ದ. ಬೆಟ್ಟಿಂಗ್‌ನಲ್ಲಿ ಹಣ ಕಳೆದುಕೊಂಡಿದ್ದ ಎಂದು ಪೊಲೀಸರು ಹೇಳಿದರು.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ ಅವರಿಗೆ ಬಿಜೆಪಿ ನಾಯಕರು ಮನವಿ ಪತ್ರ ಸಲ್ಲಿಸಿದರು. ಎಸ್.ಮುನಿರಾಜು, ಸಿ.ಕೆ.ರಾಮಮೂರ್ತಿ, ಬಿಜೆಪಿ ಬೆಂಗಳೂರು ಉತ್ತರ ಜಿಲ್ಲಾ ಘಟಕದ ಅಧ್ಯಕ್ಷ ಎಸ್.ಹರೀಶ್, ರಾಜ್ಯ ಘಟಕದ ವಕ್ತಾರ ಎಸ್.ಪ್ರಕಾಶ್ ಮತ್ತು ಇತರರು ಇದ್ದರು

ಖರ್ಗೆ ವಿರುದ್ಧ ಬಿಜೆಪಿ ದೂರು

ಬೆಂಗಳೂರು: ಬಿಜೆಪಿ ಮತ್ತು ಆರ್‌ಎಸ್‌ಎಸ್ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಮೊಕದ್ದಮೆ ದಾಖಲಿಸಿ, ಬಂಧಿಸುವಂತೆ ಒತ್ತಾಯಿಸಿ ಬಿಜೆಪಿ ನಾಯಕರು ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ ಅವರಿಗೆ ದೂರು ನೀಡಿದರು.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಶಾಸಕ ಎಸ್. ಮುನಿರಾಜು, ‘ಖರ್ಗೆ ಅವರು ಕೋಮುದ್ವೇಷ ಹಬ್ಬಿಸುವ ಮಾತುಗಳನ್ನು ಆಡಿದ್ದಾರೆ’ ಎಂದು ಟೀಕಿಸಿದರು.

‘ನಿಮ್ಮ ಮುಂದೆ ಆರ್‌ಎಸ್‌ಎಸ್ ಮತ್ತು ಬಿಜೆಪಿ ಸದಸ್ಯರು ಬಂದರೆ, ನೀವು ನಮಾಜ್ ಮಾಡುತ್ತಿದ್ದರೂ ಅದನ್ನು ಬಿಟ್ಟು ಇವರ ಮೇಲೆ ದಾಳಿ ನಡೆಸಬೇಕು ಎಂದು ಖರ್ಗೆ ಅವರು ಅಸ್ಸಾಂನಲ್ಲಿ ಪ್ರಚಾರ ಸಭೆಯೊಂದರಲ್ಲಿ ಹೇಳಿದ್ದಾರೆ. ಇದು ಬೆಂಕಿ ಹಚ್ಚುವ ಕೆಲಸ’ ಎಂದರು.

‘ಇವರ ಮಾತುಗಳಿಂದ ಕೋಮುಗಲಭೆ ಹರಡಬಹುದು. ದೇಶ ದ್ರೋಹಿಗಳು, ಮೂಲಭೂತವಾದಿಗಳಿಗೆ ಬೆಂಬಲ ಸೂಚಿಸುವ ಮಾತುಗಳಿವು. ಇದರ ವಿರುದ್ಧ ಹೋರಾಟ ಮಾಡುತ್ತೇವೆ ಎಂದು ತಿಳಿಸಿದರು.

ಶಾಸಕ ಸಿ.ಕೆ.ರಾಮಮೂರ್ತಿ ಮಾತನಾಡಿ, ‘ಖರ್ಗೆಯವರು ಸಂವಿಧಾನಕ್ಕೆ ವಿರುದ್ಧವಾಗಿ ಮಾತನಾಡಿದ್ದಾರೆ. ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದರು.

ಇದನ್ನು ಕೂಲಂಕಷವಾಗಿ ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಸಲೀಂ ಅವರು ಬಿಜೆಪಿ ನಾಯಕರಿಗೆ ಭರವಸೆ ನೀಡಿದರು.

ಎಲ್‌ಪಿಜಿ ಅಭಾವ: ಕುಟುಂಬ ಸಮೇತ ಊರಿಗೆ ತೆರಳುತ್ತಿರುವ ಚಾಲಕರು

50 ಸಾವಿರ ಆಟೊ ಸಂಚಾರ ಸ್ಥಗಿತ

• ಕೆ.ಎಸ್.ಸುನಿಲ್

ಬೆಂಗಳೂರು: ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ವ್ಯತ್ಯಯದಿಂದ ನಷ್ಟದಲ್ಲಿರುವ ಹೋಟೆಲ್ ಉದ್ಯಮ ಒಂದಡೆಯಾದರೆ, ಮತ್ತೊಂದಡೆ ಎಲ್‌ಪಿಜಿ ಅಭಾವದಿಂದ ಆಟೊ ಚಾಲಕರು ಸಂಕಷ್ಟ ಎದುರಿಸುತ್ತಿದ್ದಾರೆ.

ಅಂದಾಜು 50 ಸಾವಿರ ಆಟೊಗಳ ಸಂಚಾರ ಸ್ಥಗಿತಗೊಂಡಿದೆ. ಸಾವಿರಾರು ಚಾಲಕರು ದುಡಿಮೆ ಇಲ್ಲದೇ ಕುಟುಂಬದ ಸಮೇತ ಊರುಗಳಿಗೆ ತೆರಳುತ್ತಿದ್ದಾರೆ.

ಎಲ್‌ಪಿಜಿ ಸ್ಟೇಷನ್‌ಗಳಿಗೆ ಸರಿಯಾಗಿ ಅನಿಲ ಪೂರೈಕೆಯಾಗದೆ ನಗರದಲ್ಲಿ ನೂರಕ್ಕೂ ಹೆಚ್ಚು ಸ್ಟೇಷನ್‌ಗಳು ಬಂದ್ ಆಗಿವೆ.

ಬಸವೇಶ್ವರನಗರ, ಶಿವಾಜಿನಗರ, ಯಲಹಂಕ ರೈಲ್ವೆ ನಿಲ್ದಾಣ ಸಮೀಪ, ದಾಸರಹಳ್ಳಿ ಸುತ್ತಮುತ್ತಲ ಬಾಗಲಗುಂಟೆ, ಅಂದ್ರಹಳ್ಳಿ, ನೆಲ ಗದರನಹಳ್ಳಿ, ಮಾದನಾಯಕನಹಳ್ಳಿ ಭಾಗದ ಎಲ್‌ಪಿಜಿ ಬಂಕ್‌ಗಳು ಬಂದ್ ಆಗಿವೆ. ಹಲವೆಡೆ ‘ನೋ ಸ್ಟಾಕ್’ ಫಲಕಗಳಿದ್ದರೆ, ಮತ್ತೆ ಕೆಲವು ಖಾಸಗಿ ಏಜೆನ್ಸಿಗಳು ದುಪ್ಪಟ್ಟು ಬೆಲೆಗೆ ಗ್ಯಾಸ್ ಮಾರಾಟ ಮಾಡುತ್ತಿವೆ ಎಂಬುದು ಚಾಲಕರ ಆರೋಪ.

ಕೆಲವು ಬಂಕ್‌ಗಳಲ್ಲಿ ಪ್ರತಿ ಆಟೊಗೆ ₹400 ಮೌಲ್ಯದ ಸೀಮಿತ ಪ್ರಮಾಣದ ಅನಿಲ ಮಾತ್ರ ತುಂಬಲಾಗುತ್ತಿದೆ. ಪೂರ್ಣ ಪ್ರಮಾಣದಲ್ಲಿ ಅನಿಲ ನೀಡಿದರೆ, ಇತರೆ ಆಟೊ ಚಾಲಕರಿಗೆ ಸಮಸ್ಯೆ ಆಗಬಹುದು ಎಂಬ ಕಾರಣಕ್ಕೆ ಈ ಕ್ರಮ ಕೈಗೊಳ್ಳಲಾಗುತ್ತಿದೆ. ಬಂಕ್ ಮಾಲೀಕರ ಪ್ರಕಾರ ಒಂದು ವಾರದ ದಾಸ್ತಾನು ಒಂದು ದಿನದಲ್ಲಿ ಖಾಲಿಯಾಗುತ್ತಿದೆ.

‘ಆಟೊ ಗ್ಯಾಸ್ ದರ ಹೆಚ್ಚಿರುವುದರಿಂದ ಮೊದಲಿಗಿಂತ ₹10 ಹೆಚ್ಚು ಕೇಳಿದರೆ ಗ್ರಾಹಕರು ಆಟೊದಲ್ಲಿ ಪ್ರಯಾಣಿಸಲು ನಿರಾಕರಿಸುತ್ತಾರೆ. ಆಟೊ ಗ್ಯಾಸ್ ದರ ಕಡಿಮೆ ಮಾಡಬೇಕು. ಸಮರ್ಪಕವಾಗಿ ಗ್ಯಾಸ್ ಪೂರೈಸಬೇಕು. ಗ್ಯಾಸ್ ಅಭಾವದಿಂದ ಆಟೊಗಳು ರಸ್ತೆಗಿಳಿದಿಲ್ಲ. ನಮ್ಮ ಸ್ನೇಹಿತರು ಕುಟುಂಬ ಸಮೇತ ಊರಿಗೆ ಹೊರಟರು’ ಎಂದು ಚಾಲಕ ಅಮ್ಜದ್ ತಿಳಿಸಿದರು.

‘ಎಲ್‌ಪಿಜಿ ಸಿಗದೇ ಇದ್ದರೆ ಪೆಟ್ರೋಲ್ ಬಳಸಿ ಎನ್ನುತ್ತಾರೆ. ಆದರೆ, ಅದು ಕಾರ್ಯಸಾಧುವಲ್ಲ. ಆಟೊಗಳ ಎಂಜಿನ್ ಎಲ್‌ಪಿಜಿ ಬಳಕೆಗೆಂದೇ ರೂಪಿಸಲ್ಪಟ್ಟಿದೆ. ಪೆಟ್ರೋಲ್ ದರ ದುಬಾರಿ ಆಗಿರುವುದರಿಂದ ಇದು ಕಷ್ಟ. ಗ್ಯಾಸ್‌ನಲ್ಲಿ ಒಂದು ಲೀಟರ್‌ಗೆ 22 ಕಿ.ಮೀ. ಕ್ರಮಿಸಲು ಸಾಧ್ಯ. 14 ಲೀಟರ್‌ನ ಟ್ಯಾಂಕ್ ಭರ್ತಿ ಮಾಡಿಸಿದರೆ ಸುಮಾರು 300 ಕಿ.ಮೀ. ಓಡಿಸಬಹುದು’ ಎಂದು ಚಾಲಕರು ಹೇಳಿದರು.

‘ಆಟೊ ರಸ್ತೆಗಿಳಿಯದ ಕಾರಣ ಆದಾಯವೂ ಇಲ್ಲ. ಹೀಗಾಗಿ ಸಾಲ ಮಾಡಿ ಆಟೊ ಮಾಲೀಕರಿಗೆ ದಿನದ ಬಾಡಿಗೆ ಪಾವತಿಸಬೇಕಾಗಿದೆ. ಆಭರಣ ಅಡವಿಟ್ಟು ಹಾಗೂ ಬ್ಯಾಂಕ್‌ನಲ್ಲಿ ಸಾಲ ಪಡೆದು ಆಟೊ ಬಾಡಿಗೆ ಪಾವತಿಸಲಾಗುತ್ತಿದೆ. ಪರಿಸ್ಥಿತಿ ಇದೇ ರೀತಿ ಮುಂದುವರಿದರೆ ಜೀವನ ನಡೆಸುವುದು ಮತ್ತಷ್ಟು ಕಷ್ಟ’ ಎಂದು ಚಾಲಕ ರಮೇಶ್ ಅಳಲು ತೋಡಿಕೊಂಡರು.

‘ಬೆಳಿಗ್ಗೆಯಿಂದ ಸಂಜೆವರೆಗೂ ₹600 ರಿಂದ ₹700 ದುಡಿದರೆ ಹೆಚ್ಚು. ಇದರಲ್ಲಿ ಜೀವನ ಮಾಡೋದು ಹೇಗೆ? ಆಟೊ ಚಾಲನೆ ಬಿಟ್ಟು ಬೇರೆ ಕೆಲಸ ಗೊತ್ತಿಲ್ಲ. ಎಲ್‌ಪಿಜಿ ಸಮಸ್ಯೆಯಿಂದ ನಿತ್ಯ ತೊಂದರೆ ಅನುಭವಿಸುವಂತಾಗಿದೆ. ಇದೇ ಪರಿಸ್ಥಿತಿ ಮುಂದುವರೆದರೆ ಹಳ್ಳಿಗೆ ಹೋಗಿ ವ್ಯವಸಾಯ ಮಾಡುತ್ತೇನೆ’ ಎಂದು ಆಟೊರಿಕ್ಷಾ ಚಾಲಕ ಕಿರಣ್ ಹೇಳಿದರು.

‘30ಗಳಿಗೆ ₹15 ಸಾವಿರ ಪರಿಹಾರ ನೀಡಿ’

‘ಬೆಂಗಳೂರು ನಗರದಲ್ಲಿ 3 ಲಕ್ಷಕ್ಕೂ ಅಧಿಕ ಆಟೊಗಳಿದ್ದು, ಅದರಲ್ಲಿ ಬಹುತೇಕ ಎಲ್‌ಪಿಜಿ ಮೇಲೆ ಅವಲಂಬಿತವಾಗಿವೆ. ಐದು ದಿನಗಳಿಂದ ಎಲ್‌ಪಿಜಿ ಸಿಗದೆ ಸಮಸ್ಯೆ ತೀವ್ರವಾಗುತ್ತಿದೆ. ಅನಿಲ ತುಂಬಿಸಲು 3–4 ಬಂಕ್ ಅಲೆದಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ ದಿನದಲ್ಲಿ ₹600ರಿಂದ ₹700 ನಷ್ಟ ಉಂಟಾಗುತ್ತಿದೆ. ಸಮಸ್ಯೆ ಬಗೆಹರಿಯುವವರೆಗೆ ₹15 ಸಾವಿರ ಪರಿಹಾರ ನೀಡುವಂತೆ ಆಹಾರ ಸಚಿವರಿಗೆ ಮನವಿ ಮಾಡಲಾಗಿದೆ’ ಎಂದು ಪೀಸ್ ಆಟೊ ಅಂಡ್ ಟ್ಯಾಕ್ಸಿ ಡ್ರೈವರ್ಸ್ ಅಸೋಸಿಯೇಷನ್ ಅಧ್ಯಕ್ಷ ರಘು ತಿಳಿಸಿದರು. ‘ಗ್ಯಾಸ್ ಅಭಾವದಿಂದ ಅಂದಾಜು 50 ಸಾವಿರ ಆಟೊಗಳ ಸಂಚಾರ ಬಂದ್ ಆಗಿದೆ. ದಿನಕ್ಕೆ ಅಂದಾಜು ₹6 ಕೋಟಿ ನಷ್ಟವಾಗುತ್ತಿದೆ. ದಿನಕ್ಕೆ 4,500 ಸಿಲಿಂಡರ್ ಪೂರೈಸಬೇಕು. ಆದರೆ ಸದ್ಯ 3 ಸಾವಿರ ಸಿಲಿಂಡರ್ ಪೂರೈಕೆ ಆಗುತ್ತಿದೆ’ ಎಂದು ಹೇಳಿದರು.

ಚಾಮರಾಜಪೇಟೆಯ ಎಲ್‌ಪಿಜಿ ಸ್ಟೇಷನ್ ಎದುರು ಸಾಲುಗಟ್ಟಿ ನಿಂತಿರುವ ಆಟೊಗಳು

ಹೋಟೆಲ್ ಗ್ರಾಹಕರ ಸಂಖ್ಯೆ ಇಳಿಕೆ

ವಾಣಿಜ್ಯ ಸಿಲಿಂಡರ್ ಲಭ್ಯವಾಗದೆ ಸಣ್ಣ, ಮಧ್ಯಮ ಹೋಟೆಲ್‌ಗಳು ನಿರ್ವಹಣೆ ಸಾಧ್ಯವಾಗದೆ ಬಾಗಿಲು ಬಂದ್ ಮಾಡಿವೆ. ಕೆಲವು ದರ್ಶಿನಿ, ಹೋಟೆಲ್, ರೆಸ್ಟೋರೆಂಟ್‌ಗಳು ಹಾಗೂ ಮಾಂಸಾಹಾರಿ ಹೋಟೆಲ್‌ಗಳಲ್ಲಿ ಸೌದೆಯಿಂದಲೇ ಅಡುಗೆ ಮಾಡುವುದು ಮುಂದುವರಿದಿದೆ.

ಸಣ್ಣ ಹೋಟೆಲ್‌ಗಳು, ಫಾಸ್ಟ್‌ಫುಡ್ ಸೆಂಟರ್, ಕ್ಯಾಂಟೀನ್ ನಡೆಸುವವರಿಗೆ ತೊಂದರೆಯಾಗಿದೆ. ಕೆಲವರು ಗೃಹ ಬಳಕೆ ಸಿಲಿಂಡರ್ ಬಳಸುತ್ತಿದ್ದಾರೆ. ಫಾಸ್ಟ್‌ಫುಡ್ ಸೆಂಟರ್‌ಗಳನ್ನು ನಂಬಿ ಬದುಕು ಕಟ್ಟಿಕೊಂಡವರು ಪರದಾಡುತ್ತಿದ್ದಾರೆ. ಕಾಫಿ, ಟೀ ಸೇರಿ ಊಟದ ದರವೂ ದುಬಾರಿಯಾಗಿದ್ದು, ಇದರಿಂದ ಹೋಟೆಲ್‌ಗಳಿಗೆ ಬರುವ ಗ್ರಾಹಕರ ಸಂಖ್ಯೆಯೂ ಇಳಿಮುಖವಾಗಿದೆ. ಜತೆಗೆ ಮೆನುವಿನಲ್ಲಿ ಕಡಿತ ಮಾಡಲಾಗಿದೆ.

ಕೇಳಿ ಕೇಳಿ ಕೇಳುವ ಕಥೆಯು!

• ಕೃಷ್ಣಭಟ್

ಮೊನ್ನೆ ಮೊನ್ನೆಯವರೆಗೂ ನಮಗೆ ಒಂದು 'ವಾಕ್‌ಮನ್' ಎಂಬ ಅಂಗೈಗಿಂತ ಸ್ವಲ್ಪ ದೊಡ್ಡ ಸಾಧನವೊಂದಕ್ಕೆ ಮಾರುದ್ದ 'ಕೇಬಲ್' ಅನ್ನು ಸುತ್ತುಕೊಂಡು ಕಿಸೆಯಲ್ಲಿಟ್ಟುಕೊಂಡು, ಬೇಕಾದಾಗ ಅದರ ಕೇಬಲ್ ಅನ್ನು ಕಿವಿಗೆ ಸಿಕ್ಕಿಸಿಕೊಂಡು ಸಂಗೀತ ಕೇಳಿಸಿಕೊಳ್ಳುತ್ತಿದ್ದ ಕಾಲ ನೆನಪಿದೆ. ಈಗ ಮಾರ್ಕೆಟ್‌ನಲ್ಲಿ ಯಥೇಚ್ಛವಾಗಿ ಸಿಗುವ 'ಟಿಡಬ್ಲ್ಯುಎಸ್ ಇಯರ್‌ಬಡ್'ಗಳನ್ನು ಕಿವಿಯಲ್ಲಿಟ್ಟುಕೊಂಡು ಕೇಳಿಸಿಕೊಳ್ಳುವಾಗ ಅದು ಯಾವುದೋ ಓಬಿರಾಯನ ಕಾಲ ಎನ್ನಿಸೀತು!

ನಮ್ಮ ಕಿವಿಗೂ ಎಲೆಕ್ಟ್ರಾನಿಕ್ ಡಿವೈಸ್‌ಗೂ ಸಂಬಂಧ ಕಲ್ಪಿಸುತ್ತಿದ್ದ 3.5 ಎಂಎಂ ಜಾಕ್ ಅನ್ನು ನಾಪತ್ತೆ ಮಾಡಿದ ತಂತ್ರಜ್ಞಾನಕ್ರಾಂತಿಯೇ ಈಗ ಇಡೀ ಆಡಿಯೊ ಸಾಧನವನ್ನೇ ಕಾಣೆಯಾಗಿಸುವ ಹಂತಕ್ಕೆ ಬೆಳೆದು ನಿಂತಿದೆ. ವೈರ್‌ಲೆಸ್ ಆಡಿಯೊ ಜನಪ್ರಿಯವಾಗುತ್ತಿದ್ದ ಹಾಗೆಯೇ 3.5 ಎಂಎಂ ಜಾಕ್ ನೇಪಥ್ಯಕ್ಕೆ ಸರಿಯುತ್ತ ಸಾಗಿತು. ಈಗ ಬಹುಶಃ ಯಾರ ಬಳಿಯೂ ಈ 3.5 ಎಂಎಂ ಜಾಕ್ ಇರುವ ಇಯರ್‌ಫೋನ್‌ಗಳು ಹುಡುಕಿದರೂ ಸಿಗದಿರಬಹುದು!

ಈ ಶ್ರವಣಪಯಣಕ್ಕೆ 40-50 ವರ್ಷಗಳ ಇತಿಹಾಸವಿದೆ. 1979ರಲ್ಲಿ ಮಾರುಕಟ್ಟೆಗೆ ಬಂದ 'ಸೋನಿ ವಾಕ್‌ಮನ್' ಬಹುಶಃ ಶ್ರವಣ ಕ್ರಾಂತಿಯ ಆರಂಭದ ಹೆಜ್ಜೆ ಎಂದೇ ಹೇಳಬಹುದು. ಅಲ್ಲಿಯವರೆಗೂ ಸಂಗೀತ ಎಂಬುದು ಖಾಸಗಿ ಸಂಗತಿಯಾಗಿರಲಿಲ್ಲ; ಸುಮ್ಮನೆ ಮನೆಯ ಮೂಲೆಯಲ್ಲಿ ಕುಳಿತು ನಮ್ಮಷ್ಟಕ್ಕೆ ನಾವು ಸಂಗೀತ ಕೇಳಿಸಿಕೊಳ್ಳಲು ಸಾಧ್ಯವಿರಲಿಲ್ಲ. ಆದರೆ, ಸೋನಿ ವಾಕ್‌ಮನ್ ಈ ಅನುಕೂಲವನ್ನು ಕಲ್ಪಿಸಿ, ಅಪಾರ ಯಶಸ್ಸನ್ನು ಸಾಧಿಸಿತು. ಆದರೆ, ನಾವು ಈ ಕೇಬಲ್‌ಗಳ ಸಂಗ ತೊರೆದಿರಲಿಲ್ಲ. 3.5 ಜಾಕ್ ಕರುಳಬಳ್ಳಿಯ ಹಾಗೆ ಎಲೆಕ್ಟ್ರಾನಿಕ್ ಸಾಧನಕ್ಕೂ ನಮ್ಮ ಶ್ರವಣದಾಹಕ್ಕೂ ಒಂದು ಕೊಂಡಿಯ ಹಾಗೆ ಕೆಲಸ ಮಾಡುತ್ತಿತ್ತು. ಈ ತಂತಿಯ ಸಂಬಂಧ 2016ರವರೆಗೂ ಮುಂದುವರಿಯಿತು. ಅದರ ರೂಪ, ಗಾತ್ರ, ಆಕಾರ ಬದಲಾಗಿರಬಹುದು. ವಾಕ್‌ಮನ್‌ಗಳು ಹೋಗಿ, ಇಯರ್‌ಫೋನ್‌ಗಳು ಬಂದವು. ಮೊಬೈಲ್ ಡಿವೈಸ್‌ಗೆ 3.5 ಎಂಎಂ ಜಾಕ್‌ಗಳನ್ನು ಸಿಕ್ಕಿಸಿಕೊಂಡು ರೇಡಿಯೊವನ್ನೋ ಸಂಗೀತವನ್ನೋ ಕೇಳುವುದಕ್ಕೆ ಅನುಕೂಲವಾಯಿತು.

ಆದರೆ, 2016ರಲ್ಲಿ ಮಹತ್ವದ ಬದಲಾವಣೆಯಾಯಿತು. ಅದು 'ವೈರ್‌ಲೆಸ್' ಅಥವಾ 'ಬ್ಲ್ಯೂಟೂತ್' ಎಂಬುದು ಅಲ್ಲಿಯವರೆಗೆ ಲಕ್ಷುರಿಯಾಗಿದ್ದುದು, ನಿಧಾನವಾಗಿ ಸಾಮಾನ್ಯ ಎಂಬಂತಾಯಿತು. ಈ 3.5 ಎಂಎಂ ಜಾಕ್ ಎಂಬುದು ಸ್ಮಾರ್ಟ್‌ಫೋನ್‌ನಿಂದ ಕಣ್ಮರೆ ಆಗುವುದಕ್ಕೆ ಶುರುವಾಯಿತು. 2025ರ ಹೊತ್ತಿಗೆ 15 ಕೋಟಿಗಿಂತಲೂ ಹೆಚ್ಚು ಇಯರ್‌ಬಡ್‌ಗಳು ಮಾರಾಟವಾಗಿವೆ ಎಂಬುದನ್ನು ನೋಡಿದರೆ, ಈ 'ಟ್ರ್ಯೂ ವೈರ್‌ಲೆಸ್ ಸ್ಟೀರಿಯೋ' ಮಾರುಕಟ್ಟೆ ಯಾವ ಪರಿ ಬೆಳೆದು ನಿಂತಿದೆ ಎಂಬುದನ್ನು ನಾವು ಅರಿಯಬಹುದು.

ಈ ಜಗತ್ತಿನ ಎಲ್ಲ ಜಂಜಡಗಳಿಗೂ ಕಿವುಡರಾಗಿರುವುದಕ್ಕೇ ನಾವು ದುಡ್ಡು ಕೊಟ್ಟಿದ್ದೆವು! 'ಆಕ್ಟಿವ್ ನಾಯ್ಸ್ ಕ್ಯಾನ್ಸಲೇಶನ್' ಎಂಬುದು ಟೆಕ್ ಕಂಪನಿಗಳಿಗೆ ಈಗಲೂ ಅತಿದೊಡ್ಡ ಸೆಲ್ಲಿಂಗ್ ಪಾಯಿಂಟ್! ಟ್ರಾಫಿಕ್ ಗದ್ದಲ ಕೇಳಿಸದ, ಪಕ್ಕದಲ್ಲೇ ಹೈ ಡೆಸಿಬಲ್‌ನಲ್ಲಿ ವಾಹನವೊಂದು ಹಾರ್ನ್ ಮಾಡುತ್ತಿದ್ದರೂ ಅದು ನಮ್ಮ ಕಿವಿಯ ತಮಟೆಯವರೆಗೂ ತಲುಪದಂತೆ ತಡೆದು, ಬರಿ ನಮಗೆ ಬೇಕಾದ ಸಂಗೀತವನ್ನಷ್ಟೇ ಕೇಳಿಸುವಂತೆ ಮಾಡುವ ಎಎನ್‌ಸಿ ಈಗಿನ ಸದ್ಯದ ಜನಪ್ರಿಯ ಟ್ರೆಂಡ್! ಆದರೆ, ನಿಧಾನಕ್ಕೆ ಜನರು ಮತ್ತೆ ಜಗತ್ತಿನ ಜಂಜಡಗಳಿಗೆ ಕಿವಿ ಒಡ್ಡುತ್ತಿದ್ದಾರೆ ಎಂದರೆ ಅಚ್ಚರಿಯಾಗಬಹುದು! ಈಗ ಓಪನ್ ಇಯರ್ ಶ್ರವಣಸಾಧನಗಳು ಮುನ್ನೆಲೆಗೆ ಬರುತ್ತಿವೆ. ಮಾರುಕಟ್ಟೆಯಲ್ಲಿ ಈಗ ಎಎನ್‌ಸಿ ಕ್ರೇಜ್ ಕಡಿಮೆಯಾಗುತ್ತಿದೆ. ಈ ಓಪನ್ ಏರ್ ಇಯರ್‌ಬಡ್‌ಗಳ ಬಗ್ಗೆ ಒಲವು ಹೆಚ್ಚುತ್ತಿದೆ. ಕಚೇರಿಯಲ್ಲೋ ಮನೆಯಲ್ಲೋ ಮೀಟಿಂಗ್‌ನಲ್ಲಿ ಕುಳಿತ ಮನುಷ್ಯನಿಗೆ ಪಕ್ಕದಲ್ಲಿ ಕುಳಿತ ಸಹೋದ್ಯೋಗಿಯ ಮಾತುಗಳನ್ನೋ, ಮನೆಯಲ್ಲಿರುವ ಮಕ್ಕಳ ಮಾತನ್ನೋ ಕೇಳಿಸಿಕೊಳ್ಳುವ ಅಗತ್ಯ ಇರುತ್ತದೆ. ಆಗ ಈ ಎಎನ್‌ಸಿ ಪ್ರಯೋಜನಕ್ಕೆ ಬರದು. ಹೀಗಾಗಿ, ಓಪನ್ ಇಯರ್ ತಂತ್ರಜ್ಞಾನ ಪ್ರಚಲಿತಕ್ಕೆ ಬಂದಿದೆ. ಇವು ನಮ್ಮ ಕಿವಿಯ ತಮಟೆಯ ಬಳಿಯೇ ಧ್ವನಿಯನ್ನು ಬಿತ್ತರಿಸುವುದರ ಬದಲಿಗೆ 1-2 ಸೆಂ.ಮೀ. ದೂರದಲ್ಲಿ ಧ್ವನಿಯನ್ನು ಬೀಳಿಸುತ್ತವೆ. ಇದರಿಂದ ನಮ್ಮ ಸುತ್ತ ಏನು ನಡೆಯುತ್ತಿದೆಯೋ ಅದರ ಧ್ವನಿಯೂ ಕೇಳಿಸುತ್ತಲೇ ಇರುತ್ತದೆ. ಇದರ ಜೊತೆಗೆ, 'ಬೋನ್ ಕಂಡಕ್ಷನ್' ತಂತ್ರಜ್ಞಾನ ಕೂಡ ಆಸಕ್ತಿಯನ್ನು ಕೆರಳಿಸುತ್ತಿದೆ. ಆರಂಭದಲ್ಲಿ ಕೇವಲ ಈಜುವವರು, ಸೈಕ್ಲಿಸ್ಟ್‌ಗಳು ಹಾಗೂ ರನ್ ಮಾಡುವವರು ಇತ್ಯಾದಿ ಕ್ರೀಡಾಪಟುಗಳಿಗಷ್ಟೇ ಸೂಕ್ತ ಎಂಬಂತಿದ್ದ ಬೋನ್ ಕಂಡಕ್ಷನ್ ನಿಧಾನವಾಗಿ ಇತರರಿಗೂ ಸೂಕ್ತವಾಗುವಂತೆ ಬದಲಾಗುತ್ತಿದೆ. ಬೇಸ್‌ಗೆ ಮೂಳೆಯ ಕಂಪನಗಳು ಹಾಗೂ ಟ್ವೀಟರ್‌ಗಳಿಗೆ ಮೈಕ್ರೋ ಎಲೆಕ್ಟ್ರೋ ಮೆಕ್ಯಾನಿಕಲ್ ಸಿಸ್ಟಮ್ ಗಳನ್ನು ಬಳಸುವ ಇವು ಹೊಸ ಕಾಲದ ಫ್ಯಾಷನ್ ಆಗುವ ಕಡೆಗೆ ಒಂದೊಂದೇ ಹೆಜ್ಜೆ ಮುಂದಿಡುತ್ತಿವೆ.

ನಾವು ಈಗ ಬಳಸುತ್ತಿರುವ ಧ್ವನಿ ಉತ್ಪಾದನೆ ತಂತ್ರಜ್ಞಾನವಿದೆಯಲ್ಲ. ಅಂದರೆ, ತಾಮ್ರದ ತಂತಿಗಳ ಸುರುಳಿ ಹಾಗೂ ಅಯಸ್ಕಾಂತ ವನ್ನು ಬಳಸಿ ಧ್ವನಿ ಉತ್ಪಾದನೆ ಮಾಡುವ ಅತ್ಯಂತ ಪುರಾತನ ತಂತ್ರಜ್ಞಾನವೂ 3.5 ಎಂಎಂ ಜಾಕ್ ಹಿಡಿದ ದಾರಿಯನ್ನೇ ತುಳಿಯುವ ದಿನ ದೂರವಿದ್ದಂತಿಲ್ಲ. ಎಂಇಎಂಎಸ್ ಡ್ರೈವರ್‌ಗಳು ಸದ್ಯ ಶ್ರವಣಸಾಧನ ಪ್ರಿಯರ ಹೊಸ ಟ್ರೆಂಡ್. ಸದ್ಯ ಇದು ಸಾಮಾನ್ಯ ಜನರ ಕೈಗೆಟಕುವ ಮಟ್ಟದಲ್ಲಿಲ್ಲ. ಆದರೆ, ಸಾಂಪ್ರದಾಯಿಕ ವಿಧಾನಕ್ಕಿಂತ 150 ಪಟ್ಟು ವೇಗದ, 10 ಪಟ್ಟು ಹೆಚ್ಚು ನಿಖರವಾದ ಧ್ವನಿಯನ್ನು ಉತ್ಪಾದನೆ ಮಾಡುವ ಸಾಮರ್ಥ್ಯವನ್ನು ಹೊಂದಿರುವ ಈ ಹೊಸ ತಂತ್ರಜ್ಞಾನ ಎಷ್ಟು ನಿಖರ ಎಂದರೆ, 1990ರ ಕಾಲದಲ್ಲಿ ಸ್ಟುಡಿಯೋದಲ್ಲಿ ಬಳಕೆಯಾಗುತ್ತಿದ್ದ ಉನ್ನತ ದರ್ಜೆಯ ಸ್ಪೀಕರ್‌ಗಳಷ್ಟೇ ಗುಣಮಟ್ಟದ ಧ್ವನಿಯನ್ನು ನಮ್ಮ ಕಿವಿಗೇ ತಂದು ತಲುಪಿಸಬಲ್ಲ ಸಾಮರ್ಥ್ಯವನ್ನು ಹೊಂದಿವೆ. ಅದೂ ಅಲ್ಲದೇ, ಈ ತಂತಿಗಳ ಸುರುಳಿ ಹಾಗೂ ಅಯಸ್ಕಾಂತದ ತಂತ್ರಜ್ಞಾನದಲ್ಲಿ ಇದ್ದ ಗಾತ್ರದ ಮಿತಿಯನ್ನು ಮೀರಿ, ಇವು ಅತಿ ಸಣ್ಣ ಸಾಧನವಾಗಿ ನಮ್ಮ ಕಿವಿಯನ್ನು ತಲುಪಲ್ಲದು. ನಮ್ಮ ಕಿವಿಯಲ್ಲೋ, ಕಿವಿಯ ಬಳಿಯೋ ಇತರರಿಗೆ ಕಾಣಿಸದಷ್ಟು ಅತಿ ಸಣ್ಣ ರೂಪದಲ್ಲಿ ಇದ್ದುಕೊಂಡೂ ಇಡೀ ಬ್ರಹ್ಮಾಂಡದ ಧ್ವನಿಯನ್ನೇ ನಮಗೆ ಕೇಳಿಸಬಲ್ಲ ಅದ್ಭುತ ಇದರಲ್ಲಿದೆ. ಈ ತಂತ್ರಜ್ಞಾನಕ್ಕೆ 2026 ಸಿಇಎಸ್ ಇನ್ನೋವೇಷನ್ ಪುರಸ್ಕಾರ ಕೂಡ ಸಿಕ್ಕಿದೆ. ಇದು ನಮ್ಮ ಕಿವಿಯನ್ನು ತಲುಪುವುದಕ್ಕೆ ಇನ್ನೊಂದು 10 ವರ್ಷಗಳು ಬೇಕಾಗಬಹುದು.

ಇನ್ನು, 'ಔರಾಕಾಸ್ಟ್' ಎಂಬ ತಂತ್ರಜ್ಞಾನ ಈಗಾಗಲೇ ನಮ್ಮ ಕಿವಿಯಲ್ಲೇ ಇದ್ದರೂ, ಅದು ಇನ್ನೂ ಅಷ್ಟು ಜನಪ್ರಿಯವಾಗಲಿಲ್ಲ. ಈ ಔರಾಕಾಸ್ಟ್ ಕೆಲಸ ಮಾಡುವ ಪರಿಯೇ ಅದ್ಭುತ! ಇದು ಪರಿಣಾಮಕಾರಿಯಾಗಿ ಜಾರಿಗೆ ಬಂದರೆ ಇಡೀ ಜಗತ್ತೇ ಮೌನ ತಾಳಿಬಿಡಬಹುದು! ಉದಾಹರಣೆಗೆ, ನಾವು ಜಿಮ್‌ನಲ್ಲಿ ವ್ಯಾಯಾಮ ಮಾಡುತ್ತಿದ್ದಾಗ, ಅಲ್ಲಿಯ ಗೋಡೆಯ ಮೇಲೆ ಅಳವಡಿಸಿದ ಟಿ.ವಿ. ಮ್ಯೂಟ್ ಆಗಿರುತ್ತದೆ. ಆದರೆ, ನಾವು ನಮ್ಮ ಕಿವಿಗೆ ತಗುಲಿಸಿಕೊಂಡ ಇಯರ್‌ಬಡ್‌ನಲ್ಲಿ ಆ ಟಿ.ವಿ.ಯಲ್ಲಿ ಪ್ರಸಾರವಾಗುತ್ತಿರುವ ಕಾರ್ಯಕ್ರಮದ ಧ್ವನಿ ಕೇಳುತ್ತದೆ. ಬೇಕಾದರೆ, ಜಿಮ್ ಟ್ರೇನರ್ ಮೈಕ್ ಹಿಡಿದುಕೊಂಡು ಮಾತನಾಡುತ್ತಿದ್ದಾಗ ಆತನ ಧ್ವನಿಯನ್ನೂ ಕೇಳಿಸಿಕೊಳ್ಳುವ ಹಾಗೆ ಟ್ಯೂನ್ ಮಾಡಿಕೊಳ್ಳಬಹುದು. ಹಿಂದೆ ರೇಡಿಯೊದಲ್ಲಿನ ಒಂದು ಡಯಲ್ ತಿರುಗಿಸಿ ಬೇರೆ ರೇಡಿಯೊ ಸ್ಟೇಷನ್ ಕೇಳಿಸಿಕೊಳ್ಳುತ್ತಿದ್ದೆವಲ್ಲ, ಅದೇ ರೀತಿ! ಯಾವುದೂ ಬೇಡ ಎಂದು, ಇಯರ್‌ಬಡ್ ಅನ್ನು ಕಿವಿಯಿಂದ ತೆಗೆದರೆ ಇಡೀ ಜಗತ್ತೇ ನಿಶ್ಶಬ್ದ!

ಅಚ್ಚರಿಯ ಸಂಗತಿಯೆಂದರೆ, ಈ ಬ್ಲ್ಯೂಟೂತ್ ಔರಾಕಾಸ್ಟ್ ಈಗಾಗಲೇ ನಮ್ಮ ಕಿವಿಯಲ್ಲಿದೆ. ಅಂದರೆ, ನಮ್ಮ ಬಳಿ ಇರುವ ಟಿಡಬ್ಲ್ಯುಎಸ್ ಇಯರ್‌ಬಡ್ ಗಳಲ್ಲಿ ಈಗಾಗಲೇ ಇದೆ. ಆದರೆ, ಶೇ 99ರಷ್ಟು ಸಾಧನಗಳಲ್ಲಿ ಈ ಸೌಲಭ್ಯವನ್ನು ಆಕ್ಟಿವೇಟ್ ಮಾಡಲಿಲ್ಲ.

ಬಹುಶಃ ಎಂಇಎಂಎಸ್ ಎಂಬ ತಂತ್ರಜ್ಞಾನ ನಮ್ಮ ಕೈಗೆಟುಕುವ ಹಂತಕ್ಕೆ ಬಂದ ಮೇಲೆ, ಇನ್ನೊಂದು 10 ವರ್ಷಗಳ ನಂತರ 'ಹಿಂದೆ, ನಾವೆಲ್ಲ ಸ್ಪೀಕರ್ ಹಾಗೂ ಇಯರ್ ಬಡ್‌ಗಳಲ್ಲಿ ಸಂಗೀತ ಕೇಳುತ್ತಿದ್ದೆವು...' ಎಂದು ನೆನಪಿಸಿಕೊಳ್ಳುವ ಸನ್ನಿವೇಶ ಬರಬಹುದು! ❖



'ಜಿಪಿಯು' ಎನ್ನುವ ಕಾರ್ಯಾಸುರ!

• ವಿಕ್ರಮ ಜೋಶಿ

ಚಿತ್ರಮಂದಿರದಲ್ಲಿ ಕುಳಿತು 'ಅವತಾರ್' ಅಥವಾ 'ಬಾಹುಬಲಿ' ಸಿನಿಮಾದ ದೃಶ್ಯಗಳನ್ನು ನೋಡಿ ಮನಮುಗ್ಧರಾಗಿದ್ದೀರಾ? ಚಾಟ್‌ಜಿಪಿಟಿ ಬಳಸುತ್ತಾ ಇದು ಮನುಷ್ಯರಂತೆಯೇ ವ್ಯವಹರಿಸುತ್ತದೆಯಲ್ಲಾ ಎಂದು ಮೂಕವಿಸ್ಮಿತರಾಗಿರುವಿರಾ? ಮಾರಕರೋಗಕ್ಕೆ ಔಷಧದ ಸಂಶೋಧನೆಯ ವೇಗ ಹೆಚ್ಚುತ್ತಿದೆಯಾ? ಪ್ಲೇ ಸ್ಟೇಷನ್‌ನಲ್ಲಿ ಮಕ್ಕಳು ವಿಡಿಯೊ ಗೇಮನ್ನು ಆಡುತ್ತಾ ಜಗವನ್ನೇ ಮರೆತಿದ್ದಂತೂ ನೋಡಿಯೇ ಇರುತ್ತೀರಿ; ಇವೆಲ್ಲವೂ ಸಾಧ್ಯವಾಗುತ್ತಿರುವುದು, ಇವೆಲ್ಲದರ ಬೆನ್ನೆಲುಬು 'ಜಿಪಿಯು' (ಗ್ರಾಫಿಕಲ್ ಪ್ರೊಸೆಸ್ಸಿಂಗ್ ಯುನಿಟ್)!

ಇಂದು ಜಿಪಿಯು ಇಲ್ಲದೇ ಹೋದರೆ 'ಎಐ'ಯೂ ಇಲ್ಲ, 'ಬಿಐ' ಕೂಡ ಇಲ್ಲ! 'ಪಿಸಿ'(ಪರ್ಸನಲ್ ಕಂಪ್ಯೂಟರ್)ಯಲ್ಲಿ 'ಸಿಪಿ'ಯು (ಸೆಂಟ್ರಲ್ ಪ್ರೊಸೆಸ್ಸಿಂಗ್' ಯುನಿಟ್) ಇರುತ್ತದೆ ಎನ್ನುವುದು ನಮಗೆಲ್ಲಾ ಗೊತ್ತಿರುವ ವಿಷಯವೇ ಆಗಿದೆ. ಹಾಗೆಯೇ ಜಿಪಿಯುಗಳು ಡಾಟಾ ಸೆಂಟರ್‌ಗಳಲ್ಲಿ, ಇಲ್ಲವೇ ಅತ್ಯಾಧುನಿಕ ಸೂಪರ್ ಕಂಪ್ಯೂಟರ್‌ಗಳಲ್ಲಿರುತ್ತವೆ. ಸಿಪಿಯುವಿನ ಕಾರ್ಯವೈಖರಿಯೆಂದರೆ ಒಂದಾದನಂತರ ಇನ್ನೊಂದು ಹೀಗೆ ಸರಣಿರೂಪದಲ್ಲಿ ಲೆಕ್ಕಾಚಾರವನ್ನು ನಿರ್ವಹಿಸುವುದು. ಆದರೆ ಜಿಪಿಯು ಒಂದೇ ಕಾಲದಲ್ಲಿ ಸಮಾನಾಂತರವಾಗಿ ಸಾವಿರಾರು ಕಾರ್ಯಗಳನ್ನು ಮಾಡಬಲ್ಲ ಸಾಮರ್ಥ್ಯವನ್ನು ಹೊಂದಿರುತ್ತದೆ. ಗಣಕವಿಜ್ಞಾನದಲ್ಲಿ ಜಿಪಿಯು ಎನ್ನುವುದು ಹೊಸದಾದ ವಾಸ್ತುಶಿಲ್ಪ! ಸಿಪಿಯುವಿನ ಕ್ಷಮತೆಯನ್ನು ಅಳೆಯುವ ಮಾಪನ ಅದು 'ಒಂದು ಕೆಲಸವನ್ನು ಎಷ್ಟು ವೇಗವಾಗಿ' ಮಾಡುತ್ತದೆಯೆಂದಾದರೆ, 'ಎಷ್ಟು ಕೆಲಸವನ್ನು ಒಂದು ನಿರ್ದಿಷ್ಟ ಸಮಯದಲ್ಲಿ' ಮಾಡುತ್ತದೆ ಎನ್ನುವುದು ಜಿಪಿಯುವಿನ ಕಾರ್ಯನಿರ್ವಹಣೆಯನ್ನ ಅಳೆಯುವ ಮಾಪನ. ಸಾಮಾನ್ಯವಾಗಿ ಸಿಪಿಯುವನ್ನು 'GHz'ನಲ್ಲಿ ಅಳೆದರೆ ಜಿಪಿಯುವನ್ನು 'TFLOPS' (ಟೆರಾಫ್ಲಾಪ್ಸ್)ನಲ್ಲಿ ಅಳೆಯುತ್ತಾರೆ.

ಜಿಪಿಯುವಿನ ಆವಿಷ್ಕಾರವು ಕೃತಕ ಬುದ್ಧಿಮತ್ತೆಯ ಸಲುವಾಗಿ ಆಗಿರಲಿಲ್ಲ; ಅದರ ಮೊದಲ ಉಪಯೋಗ ಆಗಿದ್ದು ಗ್ರಾಫಿಕ್ಸ್ ನಿರೂಪಣೆಗೆ; ಅದನ್ನು 'ಗ್ರಾಫಿಕ್ಸ್ ರೆಂಡರಿಂಗ್' ಎನ್ನುತ್ತಾರೆ. ಜಿಪಿಯು ಇಮೇಜ್ ಹಾಗೂ ವಿಡಿಯೊ ಸೃಷ್ಟಿಯ ವೇಗವನ್ನು ಗಣನೀಯವಾಗಿ ಹೆಚ್ಚಿಸುತ್ತದೆ. ಇದಕ್ಕಾಗಿಯೇ ವಿಡಿಯೊ ಗೇಮಿಂಗ್‌ನಲ್ಲೂ ಜಿಪಿಯು ಬಳಕೆ ಜನಪ್ರಿಯ. ಎಲ್ಲೆಲ್ಲಿ ಡಾಟಾದ ತೀವ್ರತೆ ಹೆಚ್ಚಿದೆಯೋ, ಹೇರಳವಾದ ಗಣಕಶಕ್ತಿಯ ಅವಶ್ಯಕತೆಯಿದೆಯೋ ಅಲ್ಲೆಲ್ಲಾ ಜಿಪಿಯುವೇ ರಾಮಬಾಣ. ಜಿಪಿಯು ರಾತ್ರೋರಾತ್ರಿ ಹುಟ್ಟಿಕೊಂಡಿಲ್ಲ, ಇದಕ್ಕೂ ಬಹು ದೀರ್ಘಕಾಲದ ಇತಿಹಾಸವಿದೆ. ಇಪ್ಪತ್ತನೆಯ ಶತಮಾನದ ಮಧ್ಯಭಾಗದಲ್ಲಿ 'ಡಾಟ್ ಮ್ಯಾಟ್ರಿಕ್ಸ್ ಸ್ಕ್ರೀನ್' ಎನ್ನುವ ಉಪಕರಣವಿತ್ತು. ಇದು ಜಿಪಿಯುವಿನ ಬ್ಯಾಕ್ಟೀರಿಯಾ ರೂಪ! ಅದರ ನಂತರ ಬಂದಿದ್ದು ವೆಕ್ಟರ್ ಹಾಗೂ ರೊಸ್ಟರ್ ಡಿಸ್ಪ್ಲೇಗಳು. ಮುಂದೆ ನಮಗೆ ಗೊತ್ತಿರುವುದು ವಿಡಿಯೊ ಗೇಮ್ ಕನ್ಸೋಲ್. ಗ್ರಾಫಿಕ್ಸ್ ಕಂಟ್ರೋಲರ್ ಯುನಿಟ್; ಇದು ಜಿಪಿಯುವಿನ ಹಿಂದಿನ ಪೀಳಿಗೆ. ಅದರ ನಂತರದ್ದೇ ಎನ್ವಿಡಿಯಾದ ಜಿಪಿಯು! 1999ರಲ್ಲಿಯೇ ಎನ್ವಿಡಿಯಾ ಕಂಪನಿಯು ತನ್ನ ಮೊದಲ ಜಿಪಿಯು(GeFrorce256)ವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿತ್ತು. ಆದರೆ ಜಿಪಿಯು ಜನಪ್ರಿಯತೆ ಪಡೆದಿದ್ದು ಕೃತಕ ಬುದ್ಧಿಮತ್ತೆಯ ಬಳಕೆಯಲ್ಲಿ ಬೇಡಿಕೆ ಹೆಚ್ಚಿದಾಗಿನಿಂದ ಅದಕ್ಕೆ ಕಾರಣ ಎನ್ವಿಡಿಯಾ ಕಂಪನಿಯದ್ದೇ ಆದ CUDA (ಕಂಪ್ಯೂಟರ್ ಯುನಿಫೈಡ್ ಡಿವೈಸ್ ಆರ್ಕಿಟೆಕ್ಚರ್) ಸಾಫ್ಟ್‌ವೇರ್. ಅದು ಹೊರಗಡೆಗೆ ಬಂದಿದ್ದು 2007ರಲ್ಲಿ. ಇಂದು ಬಹುತೇಕ ಎಲ್ಲಾ ರಚನಾಶೀಲ ಕೃತಕ ಬುದ್ಧಿಮತ್ತೆ ಮಾದರಿಗಳು ಎನ್ವಿಡಿಯಾ ಜಿಪಿಯುಗಳ ಮೇಲೆಯೇ ರೂಪಿತಗೊಂಡಿವೆ! ಹೀಗೆ ವಿಡಿಯೊ ಗೇಮ್‌ನಿಂದ ಶುರುವಾಗಿ, ಗ್ರಾಫಿಕ್ಸ್ ರೆಂಡರಿಂಗ್‌ನಲ್ಲಿ ಬೆಳೆದು ಈಗ ಕೃತಕ ಬುದ್ಧಿಮತ್ತೆಯ ಬಳಕೆಯಲ್ಲಿ ಹೆಮ್ಮರವಾಗಿ ಆಗಸಕ್ಕೆ ಮುಖಮಾಡಿ ನಿಂತಿದೆ.

ಜಿಪಿಯುವಿನಲ್ಲಿ ಮುಖ್ಯವಾಗಿ ಮೂರು ಭಾಗಗಳಿರುತ್ತವೆ. ಮೊದಲನೆಯದು 'ಸಿಲಿಕಾನ್ ವೆಫರ್'. ಜೇನುಗೂಡಿನ ಹಾಗೆಯೇ ಇದು ನೂರಾರು ಕೋಟಿ ಟ್ರಾನ್ಸಿಸ್ಟರ್‌ಗಳ ಗೂಡು! ಅಲ್ಲಿಯ ಪ್ರತಿಯೊಂದು ಟ್ರಾನ್ಸಿಸ್ಟರ್ ಕೂಡ ಎಲೆಕ್ಟ್ರಾನಿಕ್ ಸಿಗ್ನಲ್‌ಗಳನ್ನು ನಿಯಂತ್ರಿಸಬಲ್ಲ ದ್ವಾರವಾಗಿರುತ್ತದೆ. ಆ ಎಲ್ಲಾ ಟ್ರಾನ್ಸಿಸ್ಟರ್ ದ್ವಾರಗಳು ನಮ್ಮ ಕಣ್ಣಿಗೆ ಕಾಣದಷ್ಟು ಚಿಕ್ಕ ಗಾತ್ರದ ಸೂಕ್ಷ್ಮವಾದ ತಂತಿಗಳ ಮೂಲಕ ಸಂಪರ್ಕದಲ್ಲಿರುತ್ತವೆ; ಅದನ್ನು 'ಇಂಟರ್ ಕನೆಕ್ಟರ್' ಎನ್ನುತ್ತಾರೆ; ಇದು ಎರಡನೆಯ ಭಾಗ. ಮೂರನೆಯ ಭಾಗ 'ಪ್ಯಾಕೇಜ್'; ಎಲ್ಲವನ್ನೂ ಭದ್ರವಾಗಿಟ್ಟಿರುವ ಹೊರಕವಚ. ಅದರಲ್ಲಿ ತಾಪಮಾನವನ್ನು ನಿಯಂತ್ರಿಸಬಲ್ಲ ಥರ್ಮಲ್ ಸರ್ಕ್ಯೂಟ್ ಕೂಡ ಇರುತ್ತದೆ. ಇವೇ ಸೇರಿ 'ಜಿಪಿಯು' ಎಂದು ಕರೆಯಲ್ಪಡುತ್ತದೆ. ಎನ್ವಿಡಿಯಾದ H100 ಜಿಪಿಯುವಿನ ಬೆಲೆ ಏನಿಲ್ಲವೆಂದರೂ ಸುಮಾರು 30,000 ಡಾಲರ್‌ಗಳು (₹ 25 ಲಕ್ಷ)! ಇಷ್ಟು ದುಬಾರಿಯಾದ ಜಿಪಿಯುವಿನ ಬಳಕೆ ಹಲವಾರು ಅತ್ಯಾಧುನಿಕ ತಂತ್ರಜ್ಞಾನ ಬೆಳವಣಿಗೆಯಲ್ಲಿ ಬಳಸಲಾಗುತ್ತಿದೆ. ವಿಡಿಯೊ ಗೇಮ್, ಉತ್ಕೃಷ್ಟ ಮಟ್ಟದ ದೃಶ್ಯೀಕರಣ, ಮಷಿನ್ ಲರ್ನಿಂಗ್, ಬ್ಲಾಕ್ ಚೈನ್ ತಂತ್ರಜ್ಞಾನ, ಹಾಗೂ ಸಿಮ್ಯುಲೇಶನ್ – ಕೆಲವು ಉದಾಹರಣೆಗಳು.

ಜಿಪಿಯುವಿನ ಉಪಯೋಗ ಎಲ್ಲೇ ಇರಲಿ ಅದರ ಕಾರ್ಯವೈಖರಿಯು ಮಾತ್ರ ಒಂದೇ ಸಮಯದಲ್ಲಿ ಲಕ್ಷಾಂತರ ಕಾರ್ಯಗಳನ್ನು ನಿರ್ವಹಿಸುವುದು. ಇದನ್ನು ಅರ್ಥಮಾಡಿಸಲು ನಿದರ್ಶನವಾಗಿ ಯಾವುದಾದರೂ ದೊಡ್ಡ ಕೆಲಸವನ್ನು ತೆಗೆದುಕೊಳ್ಳೋಣ. ಆ ಕೆಲಸವನ್ನು ಸಣ್ಣ ಸಣ್ಣ ನೂರಾರು ಕಾರ್ಯಗಳನ್ನಾಗಿ ವಿಭಜಿಸಿ ಬೇರೆ ಬೇರೆ ಜನರಿಗೆ ಹಂಚಿದರೆ ಏನಾಗುತ್ತದೆ ಹೇಳಿ? ಒಂದೇ ಸಮಯದಲ್ಲಿ ಅವರೆಲ್ಲರೂ ಆ ಕೆಲಸವನ್ನು ಮಾಡಬಹುದು; ಇದರಿಂದಾಗಿ ಆ ಕೆಲಸವನ್ನು ಬಹು ವೇಗದಲ್ಲಿ ಮತ್ತು ಪರಿಣಾಮಕಾರಿಯಾಗಿ ಸಂಪೂರ್ಣಗೊಳಿಸಬಹುದು. ಇದನ್ನೇ ಕಂಪ್ಯೂಟರ್ ಜಗತ್ತಿನಲ್ಲಿ ಇಟ್ಟು ನೊಡೋಣ. ಇಲ್ಲಿ ಒಂದು ದೊಡ್ಡ ಕೆಲಸವನ್ನು ಚಿಕ್ಕ ಟಾಸ್ಕ್ ಆಗಿ ವಿಂಗಡಿಸಿ ಜಿಪಿಯುವಿನ ಬೇರೆ ಬೇರೆ ಕೋರ್‌ಗಳಿಗೆ ವರ್ಗಾಯಿಸಲಾಗುತ್ತದೆ. ಅವು ಒಂದೇ ಕಾಲದಲ್ಲಿ ತಮಗೆ ನೀಡಿದ ಕಾರ್ಯವನ್ನು ಮಾಡಿ ಮುಗಿಸುತ್ತವೆ. ಈ ತಂತ್ರದ ಮೂಲಕ ಮನುಷ್ಯನ ಹತ್ತಿರ ಆಗದ ಕೆಲಸವನ್ನು ಇದು ಅತ್ಯಂತ ವೇಗದಲ್ಲಿ ಹಾಗೂ ದಕ್ಷತೆಯಿಂದ ಮಾಡಬಲ್ಲದು.

H100 ಜಿಪಿಯುವನ್ನು ತೆಗೆದುಕೊಂಡು ವಿಶ್ಲೇಷಿಸಿದರೆ ಅದು ಒಂದು ಸೆಕೆಂಡ್‌ಗೆ ನಾಲ್ಕು ಕ್ವಾಡ್ರಿಲಿಯನ್ ಲೆಕ್ಕವನ್ನು ಮುಗಿಸುತ್ತದೆ (1 Quadrillion ಅಂದರೆ ಒಂದರ ಮುಂದೆ 15 ಸೊನ್ನೆಗಳು!). ಇದನ್ನು ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ ಮನುಷ್ಯ ಸಣ್ಣದೊಂದು ಲೆಕ್ಕವನ್ನು (8 x 7 = 56) ಒಂದು ಸೆಕೆಂಡ್‌ನಲ್ಲಿ ಮಾಡಬಲ್ಲ ಅದೇ H100 ಜಿಪಿಯು ಅಂತಹ 3,958,000,000,000,000 ಲೆಕ್ಕಗಳನ್ನು ಮಾಡಬಲ್ಲದು! ಈ ವೇಗವು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ, ಇದೇ ಕಾರಣಕ್ಕೆ ಕೃತಕ ಬುದ್ಧಿಮತ್ತೆಯ ಅಭಿವೃದ್ಧಿ ಕೂಡ ಹೊಸ ಆಯಾಮಗಳನ್ನು ಕಾಣಲು ಸಾಧ್ಯವಾಗುತ್ತಿರುವುದು! ನಿಮಗೆ ಅಚ್ಚರಿ ಎನಿಸಬಹುದು ಕಳೆದ ಎಂಟು ವರ್ಷಗಳಲ್ಲಿ ಜಿಪಿಯುವಿನ ಗಣಕ ಸಾಮರ್ಥ್ಯವು 1000 ಪಟ್ಟು ಹೆಚ್ಚಾಗಿದೆ. ಒಂದು ಮಾತಂತೂ ನಿಜ - 'ಮೂರ್ಸ್ ಲಾ'ವನ್ನು ಮೀರಬಹುದು; ಆದರೆ ಮುರಿಯುವುದು ಸಾಧ್ಯವಿಲ್ಲ! ❖

'ನೀಟ್' ದಿಕ್ಸೂಚಿ — ಪಿಯುಸಿ/ಸಿಇಟಿ ದಿಕ್ಸೂಚಿ

ಎಸ್ಎಸ್ಎಲ್‌ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

PHYSICS

11) When a potential difference of 10^3V is applied between A and B, a charge of 0.75 mC is value of C is (in μ F)

(............Contd)

Expln- In given circuit, 2 μ F & 2 μ F capacitors are in series

$$\therefore C_S = \frac{2\times 2}{2+2} = 1\,\mu F$$

So, equivalent circuit will be



Now C μ F and 1 μ F are in parallel which is in series with 1 μ F

$$\therefore C_{eff} = \frac{(C+1)\times 1}{(C+1)+1} = \frac{C+1}{C+2}$$

Given, $q = 0.75\times 10^{-3}\,C = 750\times 10^{-6}\,C, V = 10^3\,V$

So, $C_{eff} = \frac{q}{v}$

$$\Rightarrow \frac{C+1}{C+2} = \frac{750\times 10^{-6}}{10^3} = 750\times 10^{-3}\,F = 0.75\,\mu F$$

$$\Rightarrow 0.75 = \frac{C+1}{C+2} \Rightarrow \frac{3}{4} = \frac{C+1}{C+2} \Rightarrow 3C+6 = 4C+4 \Rightarrow C = 2\,\mu F$$

7) A wheel of a bullock cart is rolling on a level road as shown in the figure below. If its linear speed is v in the direction shown, which one of the following options is correct (P and Q are any highest and lowest points on the wheel, respectively)?



(a) Point P moves slower than point Q
(b) Point P moves faster than point Q
(c) Both the points P and Q move with equal speed
(d) Point P has zero speed

Ans (b)

Expln:- In the case of pure rolling,



The topmost point will have velocity 2v while point Q i.e. lowest point will have zero velocity. Hence point P moves faster than point Q.

10) A constant voltage of 50 V is maintained between the points A and B of the circuit shown in the figure. The current through the branch CD of the circuit is:



(a) 3.0 A (b) 1.5 A
(c) 2.0 A (d) 2.5 A

Ans:- (c)

Expln:-



R_{AB} = (1Ω/3Ω) in series with (2Ω/4Ω)

$$= \frac{3\times 1}{3+1} + \frac{2\times 4}{2+4}$$

$$= \frac{3}{4} + \frac{8}{6} = \frac{9+16}{12} = \frac{25}{12}\Omega$$

Now total current through cell

$$I = \frac{50}{25/12} = 24A$$

$$I_{1\Omega} = \frac{3}{4}\times 24 = 18A,\ I_{3\Omega} = \frac{1}{4}\times 24 = 6A$$

$$I_{2\Omega} = \frac{4}{6}\times 24 = 16A,\ I_{4\Omega} = \frac{2}{6}\times 24 = 8A$$

Using junction rule at C, ICD = 18 – 16 = 2A (From C to D)

8) In the circuit diagram, heat produces in R, 2R and 1.5 R are in the ratio of



(a) 4 : 2 : 3 (b) 8 : 4 : 27
(c) 2 : 4 : 3 (d) 27 : 8 : 4

Ans:- (b) (Contd.....)

CHEMISTRY

MULTIPLE CHOICE QUESTIONS

50) In $H_2 - O_2$ fuel cell the reaction occurring at cathode is

a) $O_2(g) + 2H_2O\ (l) + 4e^- \rightarrow 4\overline{O}H\ (aq)$
b) $H^+(aq) + \overline{O}H\ (aq) \rightarrow H_2O\ (l)$

(........Contd)

c) $2H_2\ (g) + O_2(g) \rightarrow 2\ H_2O\ (l)$
d) $H^+ + e^- \rightarrow \frac{1}{2}H_2$

Ans:- a

51) Which one of the following statements is true?

a) Drying of oil involves hydrolysis
b) Saponification of oil yields a diol
c) Refining of oil involves hydrogenation
d) Addition of antioxidant to oil minimizes rancidity

Ans:- d

52) The distinguishing test between methanoic acid and ethanoic acid is

a) Tollen's test b) Sodium bicarbonate test
c) Litmus test d) Esterification test

Ans:- a {**Expln:-** Methanoic acid is an example for bifunctional compound containing –CHO group,

$$\begin{array}{c} O \\ \| \\ H-C-O-H. \end{array}$$

hence it reduces Tollen's reagent to shining silver mirror.}

53) Which one of the following is an example for homogeneous catalysis?

a) Manufacture of ammonia by Haber's process
b) Manufacture of sulphuric acid by contact process
c) Hydrogenation of oil
d) Hydrolysis of sucrose in the presence of dil. HCl

Ans:- d

54) Negative deviation from Raoult's Law is observed in which of the following binary liquid mixtures:

a) ethanol and acetone **b)** benzene and toluene
c) acetone and chloroform
d) chloroethane and bromoethane

Ans:- c

55) Mercury is a liquid metal because...........

a) it has a completely filled s – orbital
b) it has a small atomic size
c) it has a completely filled d – orbital that prevents d-d overlapping of orbitals
d) it has a completely filled d – orbital that causes d-d overlapping

Ans:- c

56)



Y is ....



Ans:- a



57) Power alcohol is a mixture of ....

a) 80% Petrol + 20% Benzene + Small quantity of Ethanol
b) 80% Petrol + 20% Ethanol + Small quantity of Benzene
c) 80% Ethanol + 20% Benzene + Small quantity of Petrol
d) 50% Petrol + 50% Ethanol + Small quantity of Benzene

Ans:- b

58) Dalda is prepared from oils by -.........

a) oxidation b) reduction
c) hydrolysis d) distillation

Ans:- b

59) In the brown ring test, the brown colour of the ring is due to ....

a) ferrous nitrate b) a mixture of NO and NO_2
c) ferric nitrate d) nitroso ferrous sulphate

Ans:- d

60) On heating with concentrated NaOH solution in an inert atmosphere of CO_2, white phosphorus gives a gas. Which of the following statement is incorrect about gas?

a) It is highly poisonous and has smell like fish.
b) It's solution in water decomposes in the presence of light.
c) It is more basic than NH_3.
d) It is less basic than NH_3.

Ans:- c

61) 8.8 g of monohydric alcohol added to ethyl magnesium iodide in ether liberates 2240 cm^3 of ethane at STP. This monohydric alcohol when oxidised using pyridinium-chloromate, forms a carbonyl compound that answers silver mirror test (Tollen's test). The monohydric alcohol is

(A) butan-2-ol (B) 2, 2-dimethyl propan-1-ol
(C) pentan-2-ol (D) 2, 2-dimethyl ethan-1-ol

Ans:-B

Expln:- *(Contd....)*



Inspiration for Dalit Entrepreneurs

Sri. C.G. Srinivasan

felicitation Ceremony

ದಲಿತ ಉದ್ದಿಮೆದಾರರ ಆಶಾಕಿರಣ

ಶ್ರೀ ಸಿ. ಜಿ. ಶ್ರೀನಿವಾಸನ್

ಅಭಿನಂದನಾ ಸಮಾರಂಭ

Date: 09-04-2026, Thursday @11am

Venue : Dr. Ambedkar Bhavana, Vasantanagara, Bengaluru

A felicitation program has been organized to honor the lifetime achievements of Shri C.G. Srinivasan, who has made significant contributions to social service, industrial development, and the promotion of Dalit entrepreneurs.

For the past 17 years, Shri C.G. Srinivasan, through his continuous efforts under the guidance of Dr. L. Hanumantaiah through Karnataka Dalit Entrepreneurs Association(KDEA), has worked towards realizing the vision of Dr. B.R. Ambedkar for achieving economic self-reliance among Dalit communities.

With the support of all the Government in the state of Karnataka, he has been instrumental in formulating the following schemes for the economic upliftment of Dalits:

- Industrial Land / Industrial Shed upfront Subsidy up to 75%.
- Interest Subsidy Loan scheme at 4% upto 10 crores
- 4% interest subsidy scheme for certain commercial/business/Services and Hospitality activities up to Rs 1 crore.
- Textile-Related Industry Subsidy at 75% subsidy up to Rs. 2 crore.
- Karnataka State Collateral Security Support upto Rs 2 crores.
- Soft Seed Capital – Interest-Free Loan up to Rs. 75 lakh
- Capital Investment Subsidy up to Rs. 225 lakh.
- Exemption of Stamp Duty up to 100% & Concessional Registration Charges
- 50% Power Subsidy for Textile Units Using 20 HP to 200 HP.
- Power Subsidy at Rs 2 per unit for the first 5 years.
- Exemption on Tax on Electricity Tariff.
- Full Reimbursement of Loan processing fee, legal fee, loan disbursement fee.

ದಿನಾಂಕ 09–04–2026, ಗುರುವಾರ ಬೆಳಿಗ್ಗೆ 11ಕ್ಕೆ

ಸ್ಥಳ: ಡಾ. ಅಂಬೇಡ್ಕರ್ ಭವನ, ವಸಂತನಗರ, ಬೆಂಗಳೂರು

ಸಮಾಜ ಸೇವೆ, ಕೈಗಾರಿಕಾ ಅಭಿವೃದ್ಧಿ ಮತ್ತು ದಲಿತ ಉದ್ಯಮಿಗಳ ಪ್ರೋತ್ಸಾಹದಲ್ಲಿ ಅಪಾರ ಕೊಡುಗೆ ನೀಡಿದ ಶ್ರೀ ಸಿ.ಜಿ. ಶ್ರೀನಿವಾಸನ್ ಅವರ ಜೀವನ ಸಾಧನೆಗಳನ್ನು ಗೌರವಿಸುವ ಉದ್ದೇಶದಿಂದ ಅಭಿನಂದನಾ ಸಮಿತಿಯಿಂದ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಸನ್ಮಾನ್ಯ ಶ್ರೀ ಸಿ.ಜಿ. ಶ್ರೀನಿವಾಸನ್ ಅವರು, ಸತತ 17 ವರ್ಷಗಳ ಅವಿರತ ಪ್ರಯತ್ನದಿಂದ ಡಾ. ಎಲ್. ಹನುಮಂತಯ್ಯನವರ ಮಾರ್ಗದರ್ಶನದಲ್ಲಿ ಕರ್ನಾಟಕ ದಲಿತ ಉದ್ದಿಮೆದಾರರ ಸಂಘದ ಮುಖಾಂತರ ಡಾ. ಬಿ.ಆರ್. ಅಂಬೇಡ್ಕರ್ ಅವರ ಆಶಯದಂತೆ ಕರ್ನಾಟಕ ಸರ್ಕಾರದ ಎಲ್ಲ ಸರ್ಕಾರಗಳ ಸಹಕಾರದೊಂದಿಗೆ ದಲಿತ ಉದ್ದಿಮೆದಾರರ ಆರ್ಥಿಕ ಸ್ವಾವಲಂಬನೆಗಾಗಿ ರೂಪಗೊಂಡ ಯೋಜನೆಗಳು.

- ಕೈಗಾರಿಕಾ ಭೂಮಿ/ಶೆಡ್‌ಗಳಿಗೆ 75%ವರೆಗೆ ಮುಂಗಡ ಅನುದಾನ
- 10 ಕೋಟಿ ವರೆಗೆ 4% ಬಡ್ಡಿದರ ಸಬ್ಸಿಡಿ ಸಾಲ ಯೋಜನೆ
- 1 ಕೋಟಿ ವರೆಗೆ 4% ಬಡ್ಡಿದರ ಸಬ್ಸಿಡಿ ವಾಣಿಜ್ಯ/ಸೇವಾ/ ಆತಿಥ್ಯ ಕ್ಷೇತ್ರಗಳಿಗೆ
- 2 ಕೋಟಿ ವರೆಗೆ 75% ವಸ್ತ್ರೋದ್ಯಮಕ್ಕೆ ಅನುದಾನ
- 2 ಕೋಟಿ ವರೆಗೆ ಕರ್ನಾಟಕ ರಾಜ್ಯ ಪೂರಕ ಭದ್ರತಾ ಜಾಮೀನು ಬೆಂಬಲ
- 75 ಲಕ್ಷದ ವರೆಗೆ ಬಡ್ಡಿರಹಿತ ಸಾಫ್ಟ್ ಸೀಡ್ ಕ್ಯಾಪಿಟಲ್ ನೆರವು
- 225 ಲಕ್ಷದ ವರೆಗೆ ಮೂಲಧನ ಹೂಡಿಕೆ ಅನುದಾನ
- 25 ಲಕ್ಷ ವರೆಗೆ ವಿಶೇಷ ಕ್ರೆಡಿಟ್ ಲಿಂಕ್‌ಡ್ ಕ್ಯಾಪಿಟಲ್ ಸಬ್ಸಿಡಿ, 100% ವರೆಗೆ ಸ್ಟಾಂಪ್ ಡ್ಯೂಟಿ ವಿನಾಯಿತಿ, ಮತ್ತು ನೊಂದಣಿ ಶುಲ್ಕ, ರಿಯಾಯಿತಿ
- 1 ಹೆಚ್‌ಪಿ ವಿದ್ಯುತ್‌ಗೆ 2 ರೂ ವಿದ್ಯುತ್ ದರ ಸಬ್ಸಿಡಿ, ವಿದ್ಯುತ್ ತೆರಿಗೆ ವಿನಾಯಿತಿ ಮೊದಲ 5 ವರ್ಷಗಳ ವರೆಗೆ
- ಸಾಲ ಪ್ರೊಸೆಸಿಂಗ್/ಕಾನೂನು/ಡಿಸ್ಬರ್ಸ್ಮೆಂಟ್ ಶುಲ್ಕಗಳ ಸಂಪೂರ್ಣ ಮರುಪಾವತಿ
- 20 ಹೆಚ್‌ಪಿ ಯಿಂದ 200 ಹೆಚ್‌ಪಿ ವರೆಗೆ ಬಳಕೆ ಮಾಡುವ ಜವಳಿ ಉದ್ಯಮ ಘಟಕಗಳಿಗೆ 50% ವಿದ್ಯುತ್ ಸಬ್ಸಿಡಿ, ಇತ್ಯಾದಿ

ಶ್ರೀ ಸಿ.ಜಿ. ಶ್ರೀನಿವಾಸನ್ ಅವರು ಕೈಗಾರಿಕಾ ವಲಯದಲ್ಲಿ ಧೀರ್ಘಕಾಲ ಸೇವೆ ಸಲ್ಲಿಸಿ, ವಿಶೇಷವಾಗಿ ದಲಿತ ಉದ್ಯಮಿಗಳಿಗೆ ಮಾರ್ಗದರ್ಶನ ನೀಡುವಲ್ಲಿ ಮಹತ್ವದ ಪಾತ್ರವಹಿಸಿದ್ದಾರೆ. ಅವರ ಸೇವೆಗಳನ್ನು ಗುರುತಿಸಿ ಈ ಗೌರವ ಸಮಾರಂಭವನ್ನು ಆಯೋಜಿಸಲಾಗಿದೆ.

ಎಲ್ಲರೂ ಅಪಾರ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ವಿನಂತಿ

Adarsh Yellappa
Managing Partner

ARIA
Infrastruture Solutions, Bengaluru
Pioneering in Industrial & PEB Building's

Vijay Rangappa
Managing Partner

ಮಹಿಳಾ ಸಬಲೀಕರಣಕ್ಕೆ ನಮ್ಮ ಆದ್ಯತೆ: ಮೋದಿ

ನವದೆಹಲಿ (ಪಿಟಿಐ): 'ನಮ್ಮ ಸರ್ಕಾರ ಪ್ರತಿ ಹಂತದಲ್ಲಿಯೂ ಮಹಿಳಾ ಸಬಲೀಕರಣಕ್ಕೆ ಆದ್ಯತೆ ನೀಡಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಪ್ರತಿಪಾದಿಸಿದರು.

PUBLIC NOTICE

Publics are hereby informed that my client **M/s DS-Max Properties Pvt. Ltd.**, having its office at No. 1794, 14th Main, 30th Cross, HBR Layout, 1st Stage, 5th Block, Bengaluru - 43 and intend to enter into Absolute Sale Deed with Owner/s **Sri S.R.Lakshmeesa** s/o Late Rama Subba Rao, **Smt H.N.Jayanthi** w/o Sri S.R.Lakshmesh, **Sri Sheshappa** s/o Late Yelanagappa, **Sri Varun Kumar.B.** s/o Late Bathyappa are the absolute joint owner/s of Agricultural land property bearing Sy. No. **96/10**, which measuring **37 guntas** and exclusive of **1 gunta** of 'B' Kharab Land, Sy.No.**96/11**, which measuring **1 acre 32 guntas** and exclusive of **03 guntas** of 'B' Kharab Land, old Sy.No.**96/11**, New Sy. No.**96/18**, which measuring **20 guntas**, situated at **Medimallasandra Village**, Anugondanahalli Hobli, Hoskote Taluk, Bengaluru Rural District, which total measuring **03 Acres 09 guntas** and exclusive of **04 guntas** of 'B' Kharab Land in Sy.No.96/10 and Sy.No.96/11 and commonly bounded on **East by:** Land of Sy.No. 44 and Kalkunte Agrahara Gadi, **West by:** Road, **North by:** Land of Sy. No. 96/2 of Syed Riyaz & Sy.No.96/8 of Syed Pacha Land, **South by:** Land of Sy. No. 96/12 of Syed Ghouse Pheer of children's land and referred to as **"composite schedule property".**

Any person or Any Authority or Any promoters having any asserting right, title, interest and claims to oppose for Absolute Sale Deed of property and further having any manner of right, title, claims etc., and may lodge their objections, claims over the property along with relevant papers in support of their claims, right to the below address within **10** days from the date of this notice, if any objections fails to comply, my client shall take further steps and deemed for entering into Absolute Sale Deed of property.

LINGARAJ. S. NADAGOUDA., ADVOCATE
No.1854, 17th Main, 30th 'B' Cross,
HBR Layout, 1st Stage, 5th Block,
Bangalore - 560 043.
Mob : 96204 74780 , 94481 35970

₹8 ಕೋಟಿ ಆಸ್ತಿ: ಸ್ವಯಂ ನಿವೃತ್ತಿ

ಭ್ರಷ್ಟಾಚಾರ: ನಿರ್ಮಿತಿ ಕೇಂದ್ರದ ಸಿಬ್ಬಂದಿ ಸೇರಿ 7 ಅಧಿಕಾರಿಗಳ ಮೇಲೆ ದಾಳಿ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ನಿರ್ಮಿತಿ ಕೇಂದ್ರದಲ್ಲಿ ಅಕೌಂಟೆಂಟ್ ಆಗಿದ್ದು, ಸ್ವಯಂ ನಿವೃತ್ತಿ ಪಡೆದಿರುವ ಸುಶೀಲಮ್ಮ ಅವರ ನಿವಾಸಗಳ ಮೇಲೆ ಲೋಕಾಯುಕ್ತ ಪೊಲೀಸರು ಮಂಗಳವಾರ ದಾಳಿ ನಡೆಸಿ ಪರಿಶೀಲಿಸಿದರು. ಈ ವೇಳೆ ಒಟ್ಟು ₹7.90 ಕೋಟಿ ಮೌಲ್ಯದ ಆಸ್ತಿ ಪತ್ತೆಯಾಗಿದೆ.

ಸುಶೀಲಮ್ಮ

ಮದೇಹಳ್ಳಿಯಲ್ಲಿರುವ ಮನೆ, ಹಿರಿಯೂರು ತಾಲ್ಲೂಕು ಯಾದಲ ಘಟ್ಟದ ತೋಟದ ಮನೆಯಲ್ಲಿ ಶೋಧ ನಡೆಯಿತು. 6 ತೋಟದ ಮನೆ, 11 ನಿವೇಶನ, 29 ಎಕರೆ ಕೃಷಿ ಭೂಮಿ, ₹1 ಕೋಟಿ ಮೌಲ್ಯದ ವಾಣಿಜ್ಯ ಮಳಿಗೆ, ಇದೆ. ₹43 ಲಕ್ಷದ ವಾಹನಗಳು ಇರುವುದು ಪತ್ತೆಯಾಗಿದೆ. ಆದಾಯಕ್ಕಿಂತ ಶೇ 481ರಷ್ಟು ಹೆಚ್ಚು ಆಸ್ತಿ ಗಳಿಸಿರುವುದು ಗೊತ್ತಾಗಿದೆ.

'ಸುಶೀಲಮ್ಮ ಸೇವೆಯಲ್ಲಿದ್ದಾಗಲೇ ಭ್ರಷ್ಟಾಚಾರದ ಆರೋಪ ಇತ್ತು. ನಿರ್ಮಿತಿ ಕೇಂದ್ರದ ಸಿಬ್ಬಂದಿ ಸಾರ್ವಜನಿಕ ಸೇವೆಯ ಸಿಬ್ಬಂದಿಯಲ್ಲ ಎಂಬ ಕಾರಣದಿಂದ ದಾಳಿಯಿಂದ ತಪ್ಪಿಸಿಕೊಂಡಿದ್ದರು. ಅವರೂ ಸಾರ್ವಜನಿಕ ಸೇವಾ ವಲಯದ ಸಿಬ್ಬಂದಿ ಎಂಬ ಇತ್ತೀಚಿನ ಹೈಕೋರ್ಟ್ ಆದೇಶದ ಕಾರಣ ಶೋಧ ನಡೆಸಲಾಗಿದೆ. ದಾಳಿ ಸುಳಿವಿದ್ದ ಸುಶೀಲಮ್ಮ ಸ್ವಯಂ ನಿವೃತ್ತಿ ಪಡೆದಿದ್ದರು' ಎಂದು ಲೋಕಾಯುಕ್ತ ಎಸ್‌.ಪಿ ವಾಸುದೇವರಾಮ್ ತಿಳಿಸಿದರು.

ಆಸ್ತಿಯ ದಾಖಲೆಗಳನ್ನು ಪ್ರಸ್ತುತ ಸೇರಿದಂತೆ ಹಲವರಿಗೆ ನೀಡಿ ಬಚ್ಚಿಟ್ಟಿದ್ದರು ಎಂದು ಪೊಲೀಸರು ಹೇಳಿದರು. ಲೋಕಾಯುಕ್ತ ಡಿವೈಎಸ್‌ಪಿ ಮೃತ್ಯುಂಜಯ ಸೇರಿ 30 ಪೊಲೀಸ್ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

44 ಎಕರೆ ಜಮೀನು, 14 ನಿವೇಶನ

ಬಳ್ಳಾರಿ: ಮೀನುಗಾರಿಕೆ ಇಲಾಖೆ ಉಪನಿರ್ದೇಶಕ ಶಿವಣ್ಣ ಅವರ ನಿವಾಸ, ಕಚೇರಿ ಸೇರಿ 3 ಕಡೆ ಮಂಗಳವಾರ ಶೋಧ ನಡೆಸಿದ್ದು, ಆದಾಯ ಮೀರಿದ ಶೇ 120ರಷ್ಟು ಆಸ್ತಿ ಪತ್ತೆ ಆಗಿದೆ.

ಶಿವಣ್ಣ

ಬಳ್ಳಾರಿ ನಗರದ ಸಿದ್ಧಾರ್ಥ ನಗರದಲ್ಲಿರುವ ಶಿವಣ್ಣ ನಿವಾಸ, ಹೊಸಪೇಟೆ ರಸ್ತೆಯಲ್ಲಿರುವ ಮೀನುಗಾರಿಕೆ ಇಲಾಖೆ ಕಚೇರಿ ಮತ್ತು ಸಂಬಂಧಿಯೊಬ್ಬರ ಮನೆ ಮೇಲೆ ಲೋಕಾಯುಕ್ತ ಅಧಿಕಾರಿಗಳ ತಂಡ ಏಕಕಾಲಕ್ಕೆ ದಾಳಿ ನಡೆಸಿತು.

'ಶಿವಣ್ಣ ಮತ್ತು ಕುಟುಂಬಸ್ಥರ ಹೆಸರಿನಲ್ಲಿ 14 ನಿವೇಶನ, 44 ಎಕರೆ ಜಮೀನು, ₹8.50 ಲಕ್ಷ ನಗದು, ವಿವಿಧ ಬ್ಯಾಂಕ್‌ಗಳಲ್ಲಿ ಠೇವಣಿ ಇಡಲಾಗಿದ್ದ ₹20 ಲಕ್ಷ ಹಣ, 600 ಗ್ರಾಂ ಚಿನ್ನ, ದ್ವಿಚಕ್ರ ವಾಹನಗಳು, ಹಲವು ಕಾರುಗಳು ಪತ್ತೆಯಾಗಿವೆ. ಒಟ್ಟಾರೆ ಮೌಲ್ಯ ₹2 ಕೋಟಿಗೂ ಹೆಚ್ಚಿದೆ' ಎಂದು ಲೋಕಾಯುಕ್ತ ಎಸ್‌ಪಿ ವಾಸುದೇವರಾಮ್ 'ಪ್ರಜಾವಾಣಿ'ಗೆ ತಿಳಿಸಿದರು.

ಎಇ ಮನೆಯಲ್ಲಿ ₹ 2.96 ಕೋಟಿ ಮೌಲ್ಯದ ಚಿನ್ನಾಭರಣ

ಮೈಸೂರು: ಲೋಕೋಪಯೋಗಿ ಇಲಾಖೆಯ ಎಇ ಜಿ.ಕೆ.ರೇವನ್ ಕುಮಾರ್ ಮನೆಯಲ್ಲಿ ಲೋಕಾಯುಕ್ತ ಪೊಲೀಸರ ದಾಳಿ ವೇಳೆ ₹2.96 ಕೋಟಿ ಮೌಲ್ಯದ ಚಿನ್ನಾಭರಣ ಪತ್ತೆಯಾಗಿದೆ.

ಅಧಿಕಾರಿಗೆ ಸೇರಿದ ಮಂಡ್ಯದಲ್ಲಿನ 2 ಮನೆ, ಮೈಸೂರಿನ ಕಚೇರಿ ಮೇಲೆ ಪೊಲೀಸರು ದಾಳಿ ನಡೆಸಿದ್ದಾರೆ. ಪರಿಶೀಲನೆ ವೇಳೆ ₹2,96,05,185 ಮೌಲ್ಯದ ಚಿನ್ನಾಭರಣ ಪತ್ತೆಯಾಗಿದೆ.

ಮೈಸೂರಿನ ಮಾನಸಿನಗರ ಹಾಗೂ ಪೊಲೀಸ್ ಬಡಾವಣೆ, ಮಂಡ್ಯ ಜಿಲ್ಲೆಯಲ್ಲಿ ₹40.73 ಲಕ್ಷ ಮೌಲ್ಯದ 4 ನಿವೇಶನ, ₹30 ಲಕ್ಷ ಮೌಲ್ಯದ ಮನೆ, ₹4.72 ಲಕ್ಷ ಮೌಲ್ಯದ ಕೃಷಿ ಭೂಮಿ ಸೇರಿ ಒಟ್ಟು ₹75.45 ಲಕ್ಷ ಮೌಲ್ಯದ ಸ್ಥಿರಾಸ್ತಿ ಪತ್ತೆಯಾಗಿದೆ. ₹42.20 ಲಕ್ಷ ಮೌಲ್ಯದ ವಿಲಾಸಿ ವಾಹನಗಳು, ₹35 ಸಾವಿರ ನಗದು ಸೇರಿ ₹3.52 ಕೋಟಿಯ ಚರಾಸ್ತಿ ಹೊಂದಿದ್ದಾರೆ.

'ಆದಾಯಕ್ಕಿಂತ ಶೇ 327 ರಷ್ಟು ಹೊಂದಿದ್ದು, ₹4.27 ಕೋಟಿ ಮೌಲ್ಯದ ಆಸ್ತಿ ಅಕ್ರಮ ಎಂದು ವರದಿ ಮಾಡಿಕೊಳ್ಳಲಾಗಿದೆ' ಎಂದು ಲೋಕಾಯುಕ್ತ ಎಸ್ಪಿ ಟಿ.ಜೆ.ಉದೇಶ್ ತಿಳಿಸಿದರು.

ಲೋಕೋಪಯೋಗಿ ಇಲಾಖೆಯ ಸಹಾಯಕ ಎಂಜಿನಿಯರ್ ಜಿ.ಕೆ.ರೇವನ್ ಕುಮಾರ್ ಮನೆಯಲ್ಲಿ ಪತ್ತೆಯಾದ ಚಿನ್ನಾಭರಣ

ಮಹಿಳಾ ಅಧಿಕಾರಿ ಬಳಿ ಶೇ 200ರಷ್ಟು ಅಧಿಕ ಆಸ್ತಿ

ಶಿವಮೊಗ್ಗ: ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಕೆ.ಆರ್. ಶೋಭಾ ಅವರ ಶಿವಮೊಗ್ಗದ ನಿವಾಸ ಸೇರಿದಂತೆ ಏಳು ಸ್ಥಳಗಳ ಮೇಲೆ ಲೋಕಾಯುಕ್ತ ಪೊಲೀಸರ ಆರು ತಂಡಗಳು ಮಂಗಳವಾರ ದಾಳಿ ನಡೆಸಿದವು.

ಶಿಕಾರಿಪುರದ ಚನ್ನಕೇಶವನಗರದ 16ನೇ ಕ್ರಾಸ್‌ನ ಶೋಭಾ ಅವರ ಮನೆ, ಅತ್ತೆಯ ಮನೆ ತರ್ಲಘಟ್ಟ ತಾಂಡಾದಲ್ಲಿನ ಮನೆ, ತೋಟದ ಮನೆ, ಶಿವಮೊಗ್ಗದ ನವುಲೆಯ ಮನೆ, ಬಾಲರಾಜ್ ಅರಸ್ ರಸ್ತೆಯ ಕಚೇರಿ, ಸಾಗರ ತಾಲ್ಲೂಕಿನ ಆನಂದಪುರ ಬಳಿಯ ಆಚಾಪುರದಲ್ಲಿನ ಶಾಲೆ, ಸಹೊದ್ಯೋಗಿ ರಾಘವೇಂದ್ರ ಅವರ ನಿವಾಸಗಳ ಮೇಲೆ ದಾಳಿ ನಡೆದಿದೆ.

ಹಾಸ್ಟೆಲ್ ವಾರ್ಡನ್ ಆಗಿ 24 ವರ್ಷಗಳ ಹಿಂದೆ ಹಿಂದುಳಿದ ವರ್ಗಗಳ ಇಲಾಖೆಯಲ್ಲಿ ಕೆಲಸಕ್ಕೆ ಸೇರ್ಪಡೆ ಆಗಿದ್ದ ಶೋಭಾ, ನಂತರ ತಾಲ್ಲೂಕು ಅಧಿಕಾರಿಯಾಗಿ ಬಡ್ತಿ ಹೊಂದಿದ್ದರು. ಐದು ವರ್ಷಗಳಿಂದ ಜಿಲ್ಲಾ ಅಧಿಕಾರಿಯಾಗಿ ಹೆಚ್ಚುವರಿ ಕಾರ್ಯಭಾರ ನಿಭಾಯಿಸುತ್ತಿದ್ದರು.


ಕೆ.ಆರ್. ಶೋಭಾ

ತರ್ಲಘಟ್ಟದಲ್ಲಿ 4 ಎಕರೆ ಜಮೀನು, ತೋಟದ ಮನೆ, ಶಿಕಾರಿಪುರದಲ್ಲಿ ₹1.5 ಕೋಟಿ ಮೊತ್ತದ 3 ಅಂತಸ್ತಿನ ಮನೆ, ಶಿಕಾರಿಪುರ, ಶಿವಮೊಗ್ಗದಲ್ಲಿ ₹ 60 ಲಕ್ಷ ಮೌಲ್ಯದ ಎರಡು ನಿವೇಶನ, ಆಚಾಪುರದಲ್ಲಿ ₹ 4.30 ಕೋಟಿ ವೆಚ್ಚದ ಶಾಲಾ ಕಟ್ಟಡ, ₹ 70 ಲಕ್ಷ ಮೌಲ್ಯದ 8 ಶಾಲಾ ಬಸ್‌ಗಳು, ₹ 34 ಲಕ್ಷ ಮೌಲ್ಯದ 2 ಕಾರು, 3 ದ್ವಿಚಕ್ರ ವಾಹನ ಪತ್ತೆಯಾಗಿವೆ.

250 ಗ್ರಾಂ ಚಿನ್ನಾಭರಣ, 2.5 ಕೆ.ಜಿ ಬೆಳ್ಳಿ, ₹60,000 ನಗದು ದೊರೆತಿದೆ. ಪ್ರಾಥಮಿಕ ತನಿಖೆ ಪ್ರಕಾರ, ಶೋಭಾ ಆದಾಯಕ್ಕಿಂತ ಶೇ 200ರಷ್ಟು ಹೆಚ್ಚು ಆಸ್ತಿ ಹೊಂದಿರುವುದು ಗೊತ್ತಾಗಿದೆ.

ಎಸ್‌ಪಿ ಎಂ.ಎಸ್.ಕೌಲಾಪುರೆ, ಡಿವೈಎಸ್ಪಿ ಬಿ.ಪಿ.ಚಂದ್ರಶೇಖರ್ ನೇತೃತ್ವದಲ್ಲಿ ಶಿವಮೊಗ್ಗ, ದಾವಣಗೆರೆ, ಹಾವೇರಿ ಜಿಲ್ಲೆಗಳ ಲೋಕಾಯುಕ್ತ ಪೊಲೀಸರ ಆರು ತಂಡಗಳು ದಾಳಿ ನಡೆಸಿವೆ.

ಲೋಕಾಯುಕ್ತ ದಾಳಿ ವೇಳೆ ಐ.ಕೆ. ಪುಟ್ಟಸ್ವಾಮಿ ಅವರ ನಿವಾಸದಲ್ಲಿ ದೊರೆತ ನಗದು, ಚಿನ್ನಾಭರಣಗಳು

ಎಇಇ ಬಳಿ ₹2.40 ಕೋಟಿ ಆಸ್ತಿ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಹಾರಂಗಿ ಜಲಾಶಯದ ಎಇಇ, ಕಾವೇರಿ ನೀರಾವರಿ ನಿಗಮದ ಪ್ರಭಾರ ಇಇ ಐ.ಕೆ.ಪುಟ್ಟಸ್ವಾಮಿ ಅವರ ಬಳಿ ಲೋಕಾಯುಕ್ತ ಪೊಲೀಸರ ದಾಳಿ ವೇಳೆ 2 ಕೆ.ಜಿಯ ಅಧಿಕ ಬೆಳ್ಳಿ, 6 ನಿವೇಶನ, 1 ಮನೆ, 1 ಐ20 ಕಾರು, ₹5.50 ಲಕ್ಷ ನಗದು ಪತ್ತೆಯಾಗಿದೆ.

ಪುಟ್ಟಸ್ವಾಮಿ

ಅಧಿಕಾರಿಗೆ ಸಂಬಂಧಿಸಿದ 4 ಸ್ಥಳಗಳ ಮೇಲೆ ಮಂಗಳವಾರ ದಾಳಿ ನಡೆದಿದ್ದು, ಇವರ ಬಳಿ 950 ಗ್ರಾಂ ಚಿನ್ನಾಭರಣಗಳಿದ್ದು, ಅದರಲ್ಲಿ ಅರ್ಧ ಕೆ.ಜಿ ಆಭರಣಗಳನ್ನು ಗಿರವಿ ಇಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದರು.

'ನಿಗದಿತ ಆದಾಯಕ್ಕಿಂತ ₹2.40 ಕೋಟಿ ಅಧಿಕ ಆಸ್ತಿ ಪತ್ತೆಯಾಗಿದೆ. ₹1.98 ಕೋಟಿ ಮೊತ್ತದ ಸ್ಥಿರಾಸ್ತಿ, ₹1.01 ಕೋಟಿ ಮೊತ್ತದ ಚರ ಆಸ್ತಿ ಇದೆ' ಎಂದು 'ಪ್ರಜಾವಾಣಿ'ಗೆ ತಿಳಿಸಿದರು.

ಕುಶಾಲನಗರದ ಹಾರಂಗಿ ಜಲಾಶಯದ ಕಚೇರಿ, ಕಾವೇರಿ ನೀರಾವರಿ ನಿಗಮದ ಕಚೇರಿ, ಹಾಸನದ ವಿದ್ಯಾನಗರದ ಸ್ವಂತ ಮನೆ ಹಾಗೂ ಮೈಸೂರಿನ ಬಾಡಿಗೆ ಮನೆಯಲ್ಲಿಯೂ ನಗದು, ಚಿನ್ನಾಭರಣ ಹಾಗೂ ಆಸ್ತಿಪತ್ರಗಳನ್ನು ಅಧಿಕಾರಿಗಳು ವಶಕ್ಕೆ ಪಡೆದರು.

ಲೋಕಾಯುಕ್ತ ಮೈಸೂರು ವಿಭಾಗದ ಎಸ್‌.ಪಿ. ಉದೇಶ್ ಮಾರ್ಗದರ್ಶನದಲ್ಲಿ ಡಿವೈಎಸ್‌ಪಿ ದಿನಕರಶೆಟ್ಟಿ ನೇತೃತ್ವದಲ್ಲಿ ದಾಳಿ ನಡೆಯಿತು.

ಅಪಾರ ಪ್ರಮಾಣದ ಚಿನ್ನ, ಆಸ್ತಿ ಪತ್ತೆ

ಬೆಳಗಾವಿ: ಜಿಲ್ಲಾ ನಗರಾಭಿವೃದ್ಧಿ ಕೋಶದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ (ಎಇಇ) ಅಜಯ್‌ಸಿಂಗ್ ರಜಪೂತ ಮನೆ ಮೇಲೆ ಮಂಗಳವಾರ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ, ಅಪಾರ ಪ್ರಮಾಣದ ಚಿನ್ನ ಮತ್ತು ಆಸ್ತಿ ಪತ್ತೆ ಮಾಡಿದ್ದಾರೆ.

ಬೆಳಗಾವಿಯ ಆಂಜನೇಯ ನಗರದಲ್ಲಿರುವ ಮೂರು ಮನೆಗಳು, ಹುಕ್ಕೇರಿ, ಅಥಣಿ ತಾಲ್ಲೂಕಿನಲ್ಲಿ ಇರುವ ಮನೆ ಸೇರಿ ಒಟ್ಟು ಏಳು ಕಡೆ ಏಕಕಾಲದಲ್ಲಿ ದಾಳಿ ನಡೆದಿದೆ. 498 ಗ್ರಾಂ ಚಿನ್ನಾಭರಣ, ₹6.22 ಲಕ್ಷ ನಗದು, 7 ಪ್ಲಾಟ್‌ಗಳು, 3 ಮನೆ, 12 ಎಕರೆ ಜಮೀನು, ತಲಾ ಒಂದು ಕಾರು, ದ್ವಿಚಕ್ರ ವಾಹನ ಸೇರಿ ಅಪಾರ ಪ್ರಮಾಣದ ಅಕ್ರಮ ಆಸ್ತಿ ಗಳಿಕೆ ಮಾಡಿರುವುದು ಪತ್ತೆಯಾಗಿದೆ ಎಂದು ಲೋಕಾಯುಕ್ತ ಅಧಿಕಾರಿಗಳು ತಿಳಿಸಿದ್ದಾರೆ.

ಲೋಕಾಯುಕ್ತ ಎಸ್‌ಪಿ ಪ್ರಸನ್ನ ದೇಸಾಯಿ, ಡಿಎಸ್ ಪಿ ಬಿ.ಎಸ್. ಪಾಟೀಲ, ಭರತ ರೆಡ್ಡಿ ನೇತೃತ್ವದಲ್ಲಿ ಕಾರ್ಯಾಚರಣೆ ನಡೆದಿದೆ.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಬಾಬು ಅವರ ಮನೆಗಳಿಗೆ ಲೋಕಾಯುಕ್ತ ಪೊಲೀಸರು ಮಂಗಳವಾರ ದಾಳಿ ನಡೆಸಿದಾಗ ಪತ್ತೆಯಾದ ನಗದು

ಸಹಾಯಕ ಔಷಧ ನಿಯಂತ್ರಕ ಬಳಿ ₹3.37 ಕೋಟಿ ಆಸ್ತಿ

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರದ ಪ್ರಾದೇಶಿಕ ಉಪ ಔಷಧ ನಿಯಂತ್ರಕರ ಕಚೇರಿಯ ಸಹಾಯಕ ಔಷಧ ನಿಯಂತ್ರಕ ಬಾಬು ಬಿ.ಎನ್ ಅವರ ಕಚೇರಿ, ಅವರ ಮನೆಗಳು ಹಾಗೂ ಅವರಿಗೆ ಸಂಬಂಧಿಸಿದ ವಿವಿಧ ಕಟ್ಟಡಗಳ ಮೇಲೆ ಮಂಗಳವಾರ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದು, ಈ ವೇಳೆ ಸ್ಥಿರಾಸ್ತಿ ಹಾಗೂ ಚರಾಸ್ತಿ ಸೇರಿ ಒಟ್ಟು ₹3.37 ಕೋಟಿ ಮೌಲ್ಯದ ಆಸ್ತಿ ಪತ್ತೆಯಾಗಿದೆ.

ಬಾಬು ಅವರು ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ಪಟ್ಟಣದಲ್ಲಿ ಹೊಂದಿರುವ ವಾಸದ ಮನೆ, ವಾಣಿಜ್ಯ ಮಳಿಗೆಗಳು, ಬೆಂಗಳೂರಿನಲ್ಲಿ ಹೊಂದಿರುವ ವಾಸದ ಮನೆಗಳು, ಪ್ಲ್ಯಾಟ್ ಹಾಗೂ ಮಂಗಳೂರಿನಲ್ಲಿನ ವಾಸದ ಮನೆ ಹಾಗೂ ಅವರ ಕಚೇರಿಯಲ್ಲಿ ಶೋಧ ನಡೆಯಿತು. ಅವರ ಬೆಂಗಳೂರಿನ ವಾಸದ ಮನೆಯಲ್ಲಿ ನಗದು, ಚಿನ್ನ ಮತ್ತು ಬೆಳ್ಳಿಯ ಆಭರಣಗಳು ಸೇರಿ ₹23.64 ಲಕ್ಷ ಮೌಲ್ಯದ ಚರಾಸ್ತಿಗಳು ಸಿಕ್ಕಿವೆ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಬಿ.ಪಿ.ದಿನೇಶ್ ಕುಮಾರ್ ಮಾರ್ಗದರ್ಶನದಲ್ಲಿ ವಿವಿಧ ಕಡೆಗಳಲ್ಲಿ ದಾಳಿ ನಡೆಯಿತು. ಡಿ.ವೈ.ಎಸ್.ಪಿಗಳಾದ ಗಾನ ಪಿ.ಕುಮಾರ್, ಸುರೇಶ್ ಕುಮಾರ್, ಲೋಕಾಯುಕ್ತ ಪೊಲೀಸ್ ಇನ್‌ಸ್ಪೆಕ್ಟರ್‌ಗಳಾದ ಮಂಜುನಾಥ, ಭಾರತಿ ಜಿ., ಶಿವರಾಜ್ ಕುಮಾರ್, ರಾಜೇಂದ್ರ ನಾಯ್ಕ್ ಹಾಗೂ ಸಿಬ್ಬಂದಿ ಭಾಗವಹಿಸಿ ದ್ದರು ಎಂದು ಲೋಕಾಯುಕ್ತ ಪೊಲೀಸರ ಪ್ರಕಟಣೆ ತಿಳಿಸಿದೆ.

ಮೂಡಬಿದಿರೆಯ ಇನ್‌ಸ್ಪೆಕ್ಟರ್ ಪಿ.ಜಿ. ಸಂದೇಶ್ ವಿರುದ್ಧದ ಪ್ರಕರಣ

ಅತ್ಯಾಚಾರ: ಪ್ರಕರಣ ರದ್ದತಿಗೆ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಠಾಣೆಗೆ ದೂರು ನೀಡಲು ಬಂದ ಮಹಿಳೆಯ ಮೇಲೆ ಅತ್ಯಾಚಾರ ಎಸಗಿದ ಆರೋಪ ಎದುರಿಸುತ್ತಿರುವ ದಕ್ಷಿಣ ಕನ್ನಡ ಜಿಲ್ಲೆ ಮೂಡಬಿದಿರೆಯ, ಅಮಾನತುಗೊಂಡಿರುವ ಇನ್‌ಸ್ಪೆಕ್ಟರ್ ಪಿ.ಜಿ.ಸಂದೇಶ್ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಪಡಿಸಲು ಹೈಕೋರ್ಟ್ ಸ್ಪಷ್ಟವಾಗಿ ನಿರಾಕರಿಸಿದೆ.

ತಮ್ಮ ವಿರುದ್ಧದ ಪ್ರಕರಣ ರದ್ದುಪಡಿಸುವಂತೆ ಕೋರಿ ಪಿ.ಜಿ. ಸಂದೇಶ್, ಸ್ಮಿತಾ ಪೂರ್ಣಿಮಾ ಆರ್ ಮಲ್ಯ ಮತ್ತು ಸುನೀತಾ ಲೋಬೊ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎಂ.ಆರ್. ಬಾಲಕೃಷ್ಣ, 'ದೂರುದಾರ ಮಹಿಳೆ 2022ರ ನವೆಂಬರ್‌ನಿಂದ 2023ರ ಜೂನ್ ನಡುವೆ ಅತ್ಯಾಚಾರ ನಡೆದಿದೆ ಎಂದಿದ್ದಾರೆ. ಆದರೆ, 2026 ಮಾರ್ಚ್ 21ರಂದು ಪ್ರಕರಣ ದಾಖಲಿಸಲಾಗಿದೆ. ಕೃತ್ಯ ನಡೆದ ಮೂರು ವರ್ಷಗಳ ಬಳಿಕ ಪ್ರಕರಣ ದಾಖಲಿಸಲಾಗಿದೆ. ಸಂದೇಶ್ ಅವರನ್ನು ಸಿಲುಕಿಸಲೆಂದೇ ಈ ಪಿತೂರಿ ಹೆಣೆಯಲಾಗಿದೆ' ಎಂದು ಆಕ್ಷೇಪಿಸಿದರು.

ಪ್ರತಿಯಾಗಿ ಸಂತ್ರಸ್ತೆ ಪರ ವಕೀಲರು 'ಅರ್ಜಿದಾರರು ಸಂತ್ರಸ್ತೆ ಜೊತೆ ಮಾತನಾಡಿರುವ 800ಕ್ಕೂ ಹೆಚ್ಚು ಮೊಬೈಲ್ ಫೋನ್ ಆಡಿಯೊ ರೆಕಾರ್ಡಿಂಗ್ ಇದೆ. ಸಂತ್ರಸ್ತೆ ಈಗಾಗಲೇ ಪೊಲೀಸರಿಗೆ ಹೇಳಿಕೆ ನೀಡಿದ್ದಾರೆ. ಸಂದೇಶ್ ವಿರುದ್ಧ ಇನ್ನೂ 2-3 ಪ್ರಕರಣ ದಾಖಲಾಗಿವೆ. ಪ್ರಕರಣವನ್ನು ಸಿಐಡಿಗೆ ತನಿಖೆಗೆ ವಹಿಸಲಾಗಿದೆ. 2 ಮತ್ತು 3ನೇ ಆರೋಪಿಗಳು ಸಂದೇಶ್ ಪರವಾಗಿ ಸಂತ್ರಸ್ತೆಗೆ ಬೆದರಿಕೆ ಹಾಕಿ, ದೂರು ಮುಂದುವರಿಸದಂತೆ ಹೆದರಿಸಿದ್ದಾರೆ' ಎಂದರು.

ಇದಕ್ಕೆ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, 'ಅರ್ಜಿದಾರ ಸಂದೇಶ್ ಪೊಲೀಸ್ ಅಧಿಕಾರಿ. ಅವರ ವಿರುದ್ಧ ಸಂತ್ರಸ್ತೆ, ಅಪರಾಧ ಪ್ರಕ್ರಿಯಾ ಸಂಹಿತೆ–1973ರ (ಸಿಆರ್‌ಪಿಸಿ) ಕಲಂ 183ರ ಅಡಿ ನೀಡಿರುವ ಹೇಳಿಕೆ ಇದೆ. ಹಾಗಾಗಿ, ತನಿಖೆ ನಡೆಯಬೇಕು' ಎಂದರು.

ಇದನ್ನು ಆಲಿಸಿದ ನ್ಯಾಯಪೀಠ ಪ್ರಕರಣಕ್ಕೆ ತಡೆ ಅಥವಾ ಎಫ್‌ಐಆರ್ ರದ್ದುಪಡಿಸಲು ಖಡಾಖಂಡಿತವಾಗಿ ನಿರಾಕರಿಸಿತು. ಇದಕ್ಕೆ ಸಂದೇಶ್ ಪರ ವಕೀಲರು ಅರ್ಜಿ ಹಿಂಪಡೆಯುವುದಾಗಿ ನ್ಯಾಯಪೀಠಕ್ಕೆ ತಿಳಿಸಿದರು. ಇದನ್ನು ಪರಿಗಣಿಸಿದ ನ್ಯಾಯಪೀಠ, 'ಅರ್ಜಿದಾರರ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಕೆಯಾದರೆ ಅದನ್ನು ಪ್ರಶ್ನಿಸಿ ಇದೇ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸುವ ಸ್ವಾತಂತ್ರ್ಯವನ್ನು ಅರ್ಜಿದಾರರು ಹೊಂದಿದ್ದಾರೆ' ಎಂದು ತಿಳಿಸಿ ಅರ್ಜಿ ವಜಾಗೊಳಿಸಿ ಆದೇಶಿಸಿತು.

ಲೈಂಗಿಕವಾಗಿ ಪೀಡಿಸಿದ ಆರೋಪದಡಿ ಸಂತ್ರಸ್ತ ಶಿಕ್ಷಕಿ ಸಂದೇಶ್ ವಿರುದ್ಧ ನೀಡಿದ ದೂರಿನ ಮೇರೆಗೆ ಬೆಳ್ತಂಗಡಿ ತಾಲ್ಲೂಕಿನ ವೇಣೂರು ಪೊಲೀಸ್ ಠಾಣೆಯಲ್ಲಿ, ಭಾರತೀಯ ನ್ಯಾಯ ಸಂಹಿತೆ–2023ರ (ಬಿಎನ್‌ಎಸ್) ಕಲಂ 376(2)(ಎ)(1), 376(2)(ಎನ್), 384, 506 ಅಡಿ ಎಫ್‌ಐಆರ್ ದಾಖಲಾಗಿದೆ.

ನಿಯಮಾನುಸಾರ ಕಾನ್‌ಸ್ಟೆಬಲ್ ವರ್ಗಾವಣೆ: ಪರಮೇಶ್ವರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವರ್ಗಾವಣೆ ನಿಯಮದ ಪ್ರಕಾರ, ಒಬ್ಬ ಸಿಬ್ಬಂದಿ ಕನಿಷ್ಠ ಏಳು ವರ್ಷ ಒಂದು ಜಿಲ್ಲೆಯಲ್ಲಿ ಕರ್ತವ್ಯ ಸಲ್ಲಿಸಿದ ನಂತರವಷ್ಟೇ ಅಂತರ್ ಜಿಲ್ಲಾ ವರ್ಗಾವಣೆಗೆ ಅರ್ಜಿ ಸಲ್ಲಿಸಲು ಅರ್ಹರಾಗುತ್ತಾರೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಅಂತರ್ ಜಿಲ್ಲಾ ವರ್ಗಾವಣೆ ಸಿಗದೆ ಕಂಗಾಲಾಗಿರುವ ಕಾನ್‌ಸ್ಟೆಬಲ್‌ಗಳು 'ದಯಾಮರಣ' ಕೋರಿ ರಾಜ್ಯಪಾಲರಿಗೆ ಪತ್ರ ಬರೆದಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಹಾಗೆಂದು, ಏಳು ವರ್ಷ ತುಂಬಿದ ತಕ್ಷಣ ವರ್ಗಾವಣೆ ಖಚಿತ ಎಂದಲ್ಲ. ಅರ್ಜಿದಾರರ ಹಿರಿತನ ಮತ್ತು ಆ ಜಿಲ್ಲೆಯಲ್ಲಿ ಲಭ್ಯವಿರುವ ಖಾಲಿ ಹುದ್ದೆಗಳನ್ನು ಪರಿಗಣಿಸಿ ಆದ್ಯತೆ ನೀಡಲಾಗುತ್ತದೆ. ನಿಯಮಾನುಸಾರವೇ ವರ್ಗಾವಣೆ ನಡೆಸಲಾಗುತ್ತದೆ' ಎಂದರು.

'ಇತ್ತೀಚಿನ 402 ಪಿಎಸ್‌ಐ ಹುದ್ದೆಗೆ ನೇಮಕಗೊಂಡವರಲ್ಲಿ ಶೇ 80ರಷ್ಟು ಅಭ್ಯರ್ಥಿಗಳು ಉತ್ತರ ಕರ್ನಾಟಕದವರು. ದಕ್ಷಿಣ ಕನ್ನಡ ಮತ್ತು ಕೊಡಗಿನಂತಹ ಜಿಲ್ಲೆಗಳಲ್ಲಿ ಸ್ಥಳೀಯ ಅಭ್ಯರ್ಥಿಗಳ ಆಯ್ಕೆ ಪ್ರಮಾಣ ತಲಾ ಶೇ 2 ರಷ್ಟಿದೆ. ಹೀಗಾಗಿ, ಉತ್ತರ ಕರ್ನಾಟಕದವರನ್ನು ಅನಿವಾರ್ಯವಾಗಿ ಇತರ ಜಿಲ್ಲೆಗಳಿಗೆ ನಿಯೋಜಿಸ ಬೇಕಾಗುತ್ತದೆ. ಅವರು ಏಳು ವರ್ಷ ಅಲ್ಲಿ ಕರ್ತವ್ಯ ಸಲ್ಲಿಸುವುದು ಅನಿವಾರ್ಯ' ಎಂದರು.

'ಕಾನ್‌ಸ್ಟೆಬಲ್‌ಗಳು ಹತಾಶೆಯ ನಿರ್ಧಾರಗಳನ್ನು ತೆಗೆದುಕೊಳ್ಳುವ ಅಗತ್ಯವಿಲ್ಲ. ಇಲಾಖೆ ಅವರ ಪರವಾಗಿದೆ. ನಿಯಮ ಉಲ್ಲಂಘಿಸಿ ಯಾರಿಗೂ ವರ್ಗಾವಣೆ ನೀಡಲು ಸಾಧ್ಯವಿಲ್ಲ. ಹಿರಿತನ ಆಧಾರದಲ್ಲಿ ಎಲ್ಲವನ್ನೂ ಸರಿಪಡಿಸಲಾಗುವುದು. ಯಾರೋ ಸೃಷ್ಟಿಸಿದ ಗೊಂದಲಕ್ಕೆ ಸಿಬ್ಬಂದಿ ಬಲಿ ಆಗಬಾರದು' ಎಂದರು.

ಸುಧಾ, ಮಯೂರ ಓದಿರಿ

ಸುಕನ್ಯಾಗೆ ಪ್ರಶಸ್ತಿ

ಮೈಸೂರು: ಪ್ರೊ. ರಾಜಪ್ಪ ದಳವಾಯಿ ಕುಟುಂಬ ನೀಡುವ 'ಚಳವಳಿಗಳ ಸಂಗಾತಿ ಮಂಜುಳಾ ಮೇಡಂ' ರಾಜ್ಯಮಟ್ಟದ ಪ್ರಶಸ್ತಿಗೆ ನಿವೃತ್ತ ಪ್ರಾಧ್ಯಾಪಕಿ ಸುಕನ್ಯಾ ಮಾರುತಿ ಆಯ್ಕೆ ಆಗಿದ್ದಾರೆ. ಪ್ರಶಸ್ತಿಯು ₹25 ಸಾವಿರ ನಗದು, ಇಳಕಲ್ ಸೀರೆ, ಸ್ಮರಣಿಕೆ ಒಳಗೊಂಡಿದೆ.

'ನಗರದಲ್ಲಿ ಏ. 19ರಂದು ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ' ಎಂದು ಮಂಜುಳಾ ಅವರ ಪತಿ ಪ್ರೊ.ರಾಜಪ್ಪ ತಿಳಿಸಿದ್ದಾರೆ.

ಪ್ರತಿಭಟನೆಗೆ ಅನುಮತಿ ನಿರಾಕರಣೆ

ಪ್ರಜಾವಾಣಿ ವಾರ್ತೆ

ಧಾರವಾಡ: ಕರ್ನಾಟಕ ಲೋಕಸೇವಾ ಆಯೋಗದಲ್ಲಿ (ಕೆಪಿಎಸ್‌ಸಿ) ನಡೆದ ಅಕ್ರಮಗಳ ತನಿಖೆಯನ್ನು ಸಿಬಿಐಗೆ ವಹಿಸಬೇಕು ಎಂದು ಒತ್ತಾಯಿಸಿ ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಸಂಘಟನೆ (ಅಕ್ಸಾ) ಬುಧವಾರ (ಏಪ್ರಿಲ್ 8) ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಹಮ್ಮಿಕೊಂಡಿದ್ದ ಅನಿರ್ದಿಷ್ಟಾವಧಿ ಪ್ರತಿಭಟನೆಗೆ ಪೊಲೀಸರು ಅನುಮತಿ ನೀಡಿಲ್ಲ.

'ಅಕ್ಸಾ ಈ ಹಿಂದೆ ಧಾರವಾಡದಲ್ಲಿ ನಡೆಸಿದ ಪ್ರತಿಭಟನೆಗಳಲ್ಲಿ ನಿಯಮಗಳ ಉಲ್ಲಂಘನೆ ಆಗಿವೆ. ಅದಕ್ಕೆ ಪ್ರತಿಭಟನೆಗೆ ಅನುಮತಿ ನಿರಾಕರಿಸಲಾಗಿದೆ' ಎಂದು ಹುಬ್ಬಳ್ಳಿ–ಧಾರವಾಡ ಮಹಾನಗರ ಪೊಲೀಸ್ ಕಮಿಷನರ್ ಎನ್.ಶಶಿಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಅನುಮತಿ ಸಿಗದ ಕಾರಣ ಬುಧವಾರ ಪ್ರತಿಭಟನೆ ಮಾಡಲ್ಲ. ಅನುಮತಿ ಕೋರಿ ಹೈಕೋರ್ಟ್ ಪೀಠಕ್ಕೆ ಅರ್ಜಿ ಸಲ್ಲಿಸುವೆ' ಎಂದು ಅಕ್ಸಾ ಅಧ್ಯಕ್ಷ ಕಾಂತಕುಮಾರ ತಿಳಿಸಿದರು.

ಕನ್ನಡದಲ್ಲಿ ಟಿಇಟಿ: ಮಹಾರಾಷ್ಟ್ರ ಸಿ.ಎಸ್‌ಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾರಾಷ್ಟ್ರದ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಾವಿರಾರು ಶಿಕ್ಷಕರ ಹಿತದೃಷ್ಟಿಯಿಂದ, ಅಲ್ಲಿನ ಶಿಕ್ಷಕರ ಅರ್ಹತಾ ಪರೀಕ್ಷೆಯನ್ನು (ಟಿಇಟಿ) ಕನ್ನಡ ಮಾಧ್ಯಮದಲ್ಲಿಯೂ ನಡೆಸಬೇಕು ಎಂದು ಅಲ್ಲಿನ ಸರ್ಕಾರದ ಮುಖ್ಯ ಕಾರ್ಯದರ್ಶಿ ರಾಜೇಶ್ ಅಗರವಾಲ್ ಅವರಿಗೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಪತ್ರ ಬರೆದು ಒತ್ತಾಯಿಸಿದ್ದಾರೆ.

ಶಾಲಿನಿ ರಜನೀಶ್

ಈ ವಿಚಾರವಾಗಿ 'ಆದರ್ಶ ಕನ್ನಡ ಬಳಗ ಮಹಾರಾಷ್ಟ್ರ' ಸಂಘಟನೆಯು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರಕ್ಕೆ ಪತ್ರ ಬರೆದು, ಗಡಿಭಾಗದ ಕನ್ನಡಿಗರು ಎದುರಿಸುತ್ತಿರುವ ತಾರತಮ್ಯವನ್ನು ಗಮನಕ್ಕೆ ತಂದಿತ್ತು. ಈ ಮನವಿಗೆ ಸ್ಪಂದಿಸಿ ಮುಖ್ಯ ಕಾರ್ಯದರ್ಶಿ ಮಂಗಳವಾರ ಪತ್ರ ಬರೆದು ತುರ್ತು ಕ್ರಮಕ್ಕೆ ಆಗ್ರಹಿಸಿದ್ದಾರೆ.

ಪತ್ರದಲ್ಲಿ ಏನಿದೆ?: 'ಮಹಾರಾಷ್ಟ್ರದ ಜತ್ತ, ಅಕ್ಕಲಕೋಟೆ, ದಕ್ಷಿಣ ಸೋಲಾಪುರ ಸೇರಿದಂತೆ ವಿವಿಧೆಡೆ ಸುಮಾರು 377 ಕನ್ನಡ ಮಾಧ್ಯಮ ಶಾಲೆಗಳಿದ್ದು, 44,860ಕ್ಕೂ ಹೆಚ್ಚು ವಿದ್ಯಾರ್ಥಿಗಳು ಓದುತ್ತಿದ್ದಾರೆ. ಸಂವಿಧಾನದ ವಿಧಿ 350ಎ ಅನ್ವಯ ಭಾಷಾ ಅಲ್ಪಸಂಖ್ಯಾತರಿಗೆ ಅವರದ್ದೇ ಮಾಧ್ಯಮದಲ್ಲಿ ಪರೀಕ್ಷೆ ಬರೆಯುವ ಹಕ್ಕಿದೆ' ಎಂದು ಪತ್ರದಲ್ಲಿ ಅವರು ಹೇಳಿದ್ದಾರೆ.

'ಸುಪ್ರೀಂ ಕೋರ್ಟ್ ಆದೇಶದಂತೆ 2027ರೊಳಗೆ ಶಿಕ್ಷಕರು ಟಿಇಟಿ ಪಾಸಾಗುವುದು ಕಡ್ಡಾಯ. ಪ್ರಸ್ತುತ ಮಹಾರಾಷ್ಟ್ರದಲ್ಲಿ ಟಿಇಟಿಗೆ ಅರ್ಜಿ ಸಲ್ಲಿಸಲು ಏಪ್ರಿಲ್ 16 ಕೊನೆಯ ದಿನ. ತಕ್ಷಣವೇ ಕನ್ನಡ ಮಾಧ್ಯಮದ ಆಯ್ಕೆಯನ್ನು ಒದಗಿಸಬೇಕು. ಕರ್ನಾಟಕ ಸರ್ಕಾರವು ಇಲ್ಲಿನ ಮರಾಠಿ ಭಾಷಿಕರಿಗಾಗಿ ಮರಾಠಿ ಮಾಧ್ಯಮದಲ್ಲೂ ಟಿಇಟಿ ನಡೆಸುತ್ತಿದೆ. ಅದೇ ಮಾದರಿಯ ಸೌಲಭ್ಯವನ್ನು ಮಹಾರಾಷ್ಟ್ರ ಸರ್ಕಾರವು ಅಲ್ಲಿನ ಕನ್ನಡಿಗರಿಗೂ ನೀಡಬೇಕು' ಎಂದಿದ್ದಾರೆ.

'ಪ್ರಸ್ತುತ ನಡೆಯುತ್ತಿರುವ ಟಿಇಟಿ ಪರೀಕ್ಷೆಯಲ್ಲಿ ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆ ಅವಕಾಶ ನೀಡಬೇಕು. ಭವಿಷ್ಯದ ಎಲ್ಲ ನೇಮಕಾತಿಗಳಲ್ಲಿ ಕನ್ನಡ ಮಾಧ್ಯಮವನ್ನು ಕಡ್ಡಾಯವಾಗಿ ಅಳವಡಿಸಬೇಕು. ಕನ್ನಡ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಆದ್ಯತೆಯ ಮೇರೆಗೆ ಭರ್ತಿ ಮಾಡಬೇಕು' ಎಂದೂ ಪತ್ರದಲ್ಲಿ ಶಾಲಿನಿ ರಜನೀಶ್ ಮನವಿ ಮಾಡಿದ್ದಾರೆ.

ಕರ್ನಾಟಕ ಸರ್ಕಾರ
ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ
No. KMC&RI/SUP(6)/ 10 /2026-27 Date: 07/04/2026.

ಇ–ಟೆಂಡರ್ ಪ್ರಕಟಣೆ (ಮಾನವ ಸಂಪನ್ಮೂಲ ಸೇವೆಗಳ ಟೆಂಡರ್)

1) PKG-06 ಇಂಡೆಂಟ್ ನಂ: DME/2026-27/SE0712
2) PKG-08 ಇಂಡೆಂಟ್ ನಂ: DME/2026-27/SE0711

2026–27 ನೇ ಸಾಲಿಗಾಗಿ ಕೆಎಂಸಿ&ಆರ್‌ಐ ಹುಬ್ಬಳ್ಳಿಯ ಆವರಣದಲ್ಲಿರುವ ವಿವಿಧ ಆಸ್ಪತ್ರೆ ಕಟ್ಟಡ ವಿಭಾಗಗಳಿಗೆ ಅಗತ್ಯವಿರುವ ಪಿ.ಡಬ್ಲ್ಯೂ.ಡಿ. ಮತ್ತು ಶುಶ್ರೂಷಕರ ಸೇವೆಗಳನ್ನು ಮಾನವ ಸಂಪನ್ಮೂಲ ಮೂಲಕ ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಒಟ್ಟು 02 ಪ್ಯಾಕೇಜ್‌ಗಳಿಗೆ ಈ ಟೆಂಡರ್ ಮೂಲಕ ಆಹ್ವಾನಿಸಲಾಗಿದೆ. ಪ್ರತ್ಯೇಕ ಇ.ಎಂ.ಡಿ ಮೊತ್ತದೊಂದಿಗೆ ಈ ಟೆಂಡರ್ ದ್ವಿ–ಲಕೋಟೆ ಪದ್ಧತಿಯಲ್ಲಿ ಸಲ್ಲಿಸತಕ್ಕದ್ದು, ಟೆಂಡರ್ ಶುಲ್ಕ ಮತ್ತು ಇತ್ಯಾದಿ ವಿವರಗಳನ್ನು https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸಹಿ/– (ನಿರ್ದೇಶಕರು)
ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ

ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ನಂ.16/ಐ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ,
ಬೆಂಗಳೂರು–560 052, ದೂ: 080–2226 0932/2209 6555/2209 6512
E-mail: admnkfcsc123@yahoo.com, mdkfcsc@yahoo.com
ಸಂಖ್ಯೆ: ಕಆನಾಸನಿನಿ/ಆಡಳಿತ/ನೇ.ನೇ./ಗು.ನಿ./84/2026–27 ದಿನಾಂಕ: 07.04.2026

ಪ್ರಕಟಣೆ

ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತದ 23 ಗುಣಮಟ್ಟ ನಿರೀಕ್ಷಕರ ಹುದ್ದೆಯ ನೇಮಕಾತಿಗೆ ಸಂಬಂಧಿಸಿದಂತೆ, ಪ್ರಕಟಿಸಲಾದ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಸ್ವೀಕೃತವಾದ ಆಕ್ಷೇಪಣೆಗಳನ್ನು ಪರಿಶೀಲಿಸಿ ನಿಯಮಾನುಸಾರ ಅಂತಿಮ ಆಯ್ಕೆ ಪಟ್ಟಿಯನ್ನು ಸಿದ್ದಪಡಿಸಿ ದಿನಾಂಕ 07.04.2026 ರಂದು ನಿಗಮದ ವೆಬ್‌ಸೈಟ್‌ನಲ್ಲಿ https://kfcsc.karnataka.gov.in ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ನಿಗಮದ website ವೀಕ್ಷಿಸುವುದು.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ಗೃಹ ಮಂಡಳಿ
Karnataka Housing Board Building Communities
3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು–560009

ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

ಕರ್ನಾಟಕ ಗೃಹ ಮಂಡಳಿಯಲ್ಲಿ ಪೂರ್ವಾರ್ಹತೆ ಪಡೆದಿರುವ ಗುತ್ತಿಗೆದಾರರು ಹಾಗೂ ಪಡೆಯಲು ಇಚ್ಚಿಸುವ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಕರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.

ಕರ್ನಾಟಕ ಗೃಹ ಮಂಡಳಿ ವತಿಯಿಂದ ರಾಜ್ಯ ವಿವಿದೆಡೆ RIDF Tranch-31 ರಡಿ ಪಶುಪಾಲನಾ ಮತ್ತು ಪಶು ವೈದ್ಯಕೀಯ ಇಲಾಖೆಗೆ ನಿರ್ಮಿಸಲು ಉದ್ದೇಶಿಸಿರುವ ಪಶು ಪೈದ್ಯಕೀಯ ಔಷದಾಲಯ/ಆಸ್ಪತ್ರೆ/ಪ್ರಾಥಮಿಕ ಪಶು ವೈದ್ಯಕೀಯ ಕೇಂದ್ರ ಕಟ್ಟಡ ನಿರ್ಮಾಣ ಕಾಮಗಾರಿಗಳ ವಿವರಗಳು ಕೆಳಕಂಡಂತಿವೆ.

ಕ್ರ.ಸಂ.	ಕಾಮಗಾರಿಯ ಹೆಸರು
1	ಬೀದರ್, ಯಾದಗಿರಿ ಹಾಗೂ ಕಲಬುರಗಿ ಜಿಲ್ಲೆಯ ವ್ಯಾಪ್ತಿಯಲ್ಲಿ. **Work Indent No.** KHB/2025-26/BD/work_indent 722/CALL-2 & IFT No: 165/2025-26 Date: 04.04.2026. **ಟೆಂಡರ್‌ಗಿಟ್ಟ ಮೊತ್ತ:** ರೂ.2,64,47,571/-.
2	ರಾಯಚೂರು, ವಿಜಯನಗರ ಮತ್ತು ವಿಜಯಪುರ ಜಿಲ್ಲೆಯ ವ್ಯಾಪ್ತಿಯಲ್ಲಿ **Work Indent No.** KHB/2025-26/BD/work_indent 723/CALL-2 & IFT No: 166/2025-26 Date: 04.04.2026. **ಟೆಂಡರ್‌ಗಿಟ್ಟ ಮೊತ್ತ:** ರೂ.2,26,79,261/-.
3	ಹಾವೇರಿ ಜಿಲ್ಲೆಯ ವ್ಯಾಪ್ತಿಯಲ್ಲಿ. **Work Indent No.** KHB/2025-26/BD/work_indent 724/CALL-2 & IFT No: 168/2025-26 Date: 04.04.2026. **ಟೆಂಡರ್‌ಗಿಟ್ಟ ಮೊತ್ತ:** ರೂ.Rs. 3,03,33,030/-.
4	ಉತ್ತರ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ **Work Indent No.** KHB/2025-26/BD/work_indent 725/CALL-2 & IFT No: 169/2025-26 Date: 04.04.2026. **ಟೆಂಡರ್‌ಗಿಟ್ಟ ಮೊತ್ತ:** ರೂ.2,27,44,433/-.
5	ದಾವಣಗೆರೆ ಜಿಲ್ಲೆಯ ವ್ಯಾಪ್ತಿಯಲ್ಲಿ. **Work Indent No.** KHB/2025-26/BD/work_indent 717/CALL-2 & IFT No: 161/2025-26 Date: 04.04.2026. **ಟೆಂಡರ್‌ಗಿಟ್ಟ ಮೊತ್ತ:** ರೂ.1,51,62,162/-.
6	ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ. **Work Indent No.**KHB/2025-26/BD/work_indent 721/CALL-2 & IFT No: 167/2025-26 Date: 04.04.2026. **ಟೆಂಡರ್‌ಗಿಟ್ಟ ಮೊತ್ತ:** ರೂ. Rs. 1,51,61,345/-.
7	ಧಾರವಾಡ ಜಿಲ್ಲಯ ವ್ಯಾಪ್ತಿಯಲ್ಲಿ. **Work Indent No.**KHB/2025-26/BD/work_indent 729/CALL-2 & IFT No: 173/2025-26 Date: 04.04.2026. **ಟೆಂಡರ್‌ಗಿಟ್ಟ ಮೊತ್ತ:** ರೂ.1,89,34,128/-.

ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 13.04.2026 ಸಂಜೆ 4.00 ಗಂಟೆಯವರೆಗೆ.

ಕಾಮಗಾರಿಗಳ ಬಗ್ಗೆ ಹಾಗೂ ಇನ್ನಿತರ ವಿವರಗಳನ್ನು ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080–22273511/ 080–22100077 website: https://kppp.karnataka.gov.in

ಸಹಿ/– ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/82/ಆಕಾರ್/2026–27

ಕರ್ನಾಟಕ ಸರ್ಕಾರ
ಶಾಲಾ ಶಿಕ್ಷಣ ಇಲಾಖೆ
ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು–1,
ಮೊಬೈಲ್: 9448999424 WEB SITE: (http://www.schooleducation.kar.nic.in)
No:DPI-CPI0PLN5/STT/2025-26 Dated : 07/04/2026

ಅಲ್ಪಾವಧಿ ಟೆಂಡರ್ ಅಧಿಸೂಚನೆ

ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಕರ್ನಾಟಕ ರಾಜ್ಯದ ಸರ್ಕಾರಿ ಶಾಲೆಗಳಿಗೆ **ಮೂರು ಮತ್ತು ನಾಲ್ಕು ಆಸನಗಳ ಡೆಸ್ಕ್–ಬೆಂಚ್‌ಗಳ ಪೂರೈಕೆಗಾಗಿ** ಆಸಕ್ತ ಬಿಡ್ಡರ್‌ಗಳಿಂದ ಅಲ್ಪಾವಧಿಯ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

1	ಟೆಂಡರ್ ಉಲ್ಲೇಖ ಸಂಖ್ಯೆ	**DPI/2026-27/IND0662**
2	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ವೆಬ್‌ಸೈಟ್ http://kppp.karnataka.gov.in ನಿಂದ ಟೆಂಡರ್ ದಾಖಲೆಯನ್ನು ಡೌನ್‌ಲೋಡ್ ಮಾಡುವ ಪ್ರಾರಂಭ ದಿನಾಂಕ:	**07/04/2026 ರಿಂದ**
3	ಬಿಡ್ ಪೂರ್ವಭಾವಿ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ	**13/04/2026 ಬೆಳಗ್ಗೆ 11:00 ಗಂಟೆಗೆ,** ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿಯ ಸಭಾಂಗಣ, ಮೊದಲನೆಯ ಮಹಡಿ, ಹೊಸ ಸಾರ್ವಜನಿಕ ಕಛೇರಿಗಳ ಕಟ್ಟಡ, ನೃಪತುಂಗ ರಸ್ತೆ ಬೆಂಗಳೂರು–560001
4	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಆನ್‌ಲೈನ್ ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ	**13/04/2026 ಸಂಜೆ 05:00 ಗಂಟೆಯವರೆಗೆ**
5	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಇ–ಟೆಂಡರನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ	**23/04/2026 ಸಂಜೆ 05:00 ಗಂಟೆಗೆ**
6	ತಾಂತ್ರಿಕ ಬಿಡ್‌ಗಳನ್ನು ಆನ್‌ಲೈನ್‌ನಲ್ಲಿ ತೆರೆಯುವ ದಿನಾಂಕ ಮತ್ತು ಸಮಯ	**24/04/2026 ಸಂಜೆ 05:10 ಗಂಟೆಗೆ**
7	ಡೆಸ್ಕ್–ಬೆಂಚ್ ಮಾದರಿಯನ್ನು ಸಲ್ಲಿಸಲು ಹಾಗೂ ಪ್ರದರ್ಶಿಸಲು ಕೊನೆಯ ದಿನಾಂಕ ಮತ್ತು ಸಮಯ	**24/04/2026 ಸಂಜೆ 05:30 ಗಂಟೆಗೆ**
8	ಸಂಪರ್ಕ ವಿಳಾಸ	ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಮೊದಲನೆಯ ಮಹಡಿ, ಹೊಸ ಸಾರ್ವಜನಿಕ ಕಛೇರಿಗಳ ಕಟ್ಟಡ, ನೃಪತುಂಗ ರಸ್ತೆ ಬೆಂಗಳೂರು–560001, ಇ–ಮೇಲ್: ddpiplanning@gmail.com ದೂರವಾಣಿ ಸಂಖ್ಯೆ : 9448999424

ಗಮನಿಸಿ: 1) ಪೂರ್ಣಗೊಂಡ ಟೆಂಡರ್‌ಗಳನ್ನು ಟೆಂಡರುದಾರರು ತಮ್ಮ ಬಳಕೆದಾರ ಐಡಿ ಬಳಸಿ ಕೊನೆಯ ದಿನಾಂಕ ಮತ್ತು ಸಮಯದ ಒಳಗೆ ಇ–ಟೆಂಡರಿಂಗ್ ವ್ಯವಸ್ಥೆಯ ಮೂಲಕ ಅಪ್‌ಲೋಡ್ ಮಾಡಬೇಕು.
2) ತಾಂತ್ರಿಕ ಬಿಡ್ ತೆರೆಯುವ ನಿರ್ದಿಷ್ಟ ದಿನಾಂಕವು ಖರೀದಿದಾರರಿಗೆ ರಜಾ ದಿನವೆಂದು ಘೋಷಿಸಲ್ಪಟ್ಟರೆ, ಮುಂದಿನ ಕೆಲಸದ ದಿನದಂದು ತಾಂತ್ರಿಕ ಬಿಡ್ ತೆರೆಯಲಾಗುತ್ತದೆ.

ಸಹಿ/–
ಉಪ ನಿರ್ದೇಶಕರು(ಯೋಜನೆ)
ವಾಸಾಸಂಇ/ವಾಪ್ರ/ಜಿಎ/103/2026–27

ಮಣಿಪುರದಲ್ಲಿ ದಾಳಿ: ಇಬ್ಬರು ಮಕ್ಕಳು ಬಲಿ

ಶಂಕಿತ ಕುಕಿ ಬಂಡುಕೋರರಿಂದ ಕೃತ್ಯ • ಸಿಆರ್‌ಪಿಎಫ್ ಯೋಧರಿಂದ ಪ್ರತಿಭಟನಕಾರರ ಮೇಲೆ ದಾಳಿ

ಪ್ರಮುಖ ಅಂಶಗಳು

- ಬಾಂಬ್ ದಾಳಿ, ಪ್ರತಿಭಟನೆ– ಮಕ್ಕಳು ಸೇರಿ 4 ಬಲಿ
- ಸುಳ್ಳು ವದಂತಿ ತಡೆಯಲು ಇಂಟರ್‌ನೆಟ್ ಸೇವೆ ಸ್ಥಗಿತ
- ಆಯಕಟ್ಟಿನ ಸ್ಥಳಗಳಲ್ಲಿ ಹೆಚ್ಚುವರಿ ಪಡೆಗಳ ನಿಯೋಜನೆ

ಇಂಫಾಲ್, ಮಣಿಪುರ (ಪಿಟಿಐ): ಇಲ್ಲಿನ ವಿಷ್ಣುಪುರ ಜಿಲ್ಲೆಯಲ್ಲಿ ಸೋಮವಾರ ತಡರಾತ್ರಿ ಮನೆಯೊಂದರ ಮೇಲೆ ನಡೆದ ಬಾಂಬ್ ದಾಳಿಯಲ್ಲಿ ಇಬ್ಬರು ಮಕ್ಕಳು ಮೃತಪಟ್ಟಿದ್ದು, ತಾಯಿ ತೀವ್ರವಾಗಿ ಗಾಯಗೊಂಡಿದ್ದಾರೆ. ಇದರ ಬೆನ್ನಲ್ಲೇ, ಸ್ಥಳೀಯರು ಬೀದಿಗಿಳಿದು ಪ್ರತಿಭಟನೆ ನಡೆಸಿದರು. ಪರಿಸ್ಥಿತಿ ನಿಯಂತ್ರಿಸಲು ಕೇಂದ್ರೀಯ ಮೀಸಲು ಪೊಲೀಸ್ ಪಡೆಯ (ಸಿಆರ್‌ಪಿಎಫ್) ಯೋಧರು ನಡೆಸಿದ ಗುಂಡಿನ ದಾಳಿಯಲ್ಲಿ ಇಬ್ಬರು ಪ್ರತಿಭಟನಕಾರರು ಮೃತಪಟ್ಟಿದ್ದಾರೆ.

‘ಜಿಲ್ಲೆಯ ಮೌರ್‍ಯಾಂಗ್ ಟ್ರೋಂಗ್ಲಾಬಿಯಲ್ಲಿ ಬೆಳಿಗ್ಗೆ ಒಂದು ಗಂಟೆ ಸುಮಾರಿಗೆ ಶಂಕಿತ ಕುಕಿ ಬಂಡುಕೋರರು ಬಾಂಬ್ ದಾಳಿ ನಡೆಸಿದ್ದಾರೆ. ತಾಯಿ ತನ್ನ ಇಬ್ಬರು ಮಕ್ಕಳೊಂದಿಗೆ ಕೋಣೆಯಲ್ಲಿ ಮಲಗಿದ್ದ ವೇಳೆ ಬಾಂಬ್ ಸ್ಫೋಟಗೊಂಡಿದೆ. ಇದರಿಂದ ನಿದ್ದೆಯಲ್ಲಿದ್ದ ಐದು ವರ್ಷದ ಮಗು ಹಾಗೂ ಆರು ತಿಂಗಳ ಮಗು ಸ್ಥಳದಲ್ಲಿಯೇ ಮೃತಪಟ್ಟಿವೆ’ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ದಾಳಿಯನ್ನು ‘ಅನಾಗರಿಕ ಕೃತ್ಯ’ ಎಂದು ಖಂಡಿಸಿದ ಮಣಿಪುರ ಮುಖ್ಯಮಂತ್ರಿ ವೈ. ಖೇಮಚಂದ್ ಸಿಂಗ್, ‘ರಾಜ್ಯದಲ್ಲಿ ಶಾಂತಿ ಸ್ಥಾಪಿಸುವ ಪ್ರಯತ್ನವನ್ನು ಹಳಿ ತಪ್ಪಿಸುವ ಕೃತ್ಯವಾಗಿದೆ. ಯಾವುದೇ ಸಂದರ್ಭದಲ್ಲಿಯೂ ಇಂತಹ ಭಯೋತ್ಪಾದಕ ಕೃತ್ಯವನ್ನು ಸಹಿಸಲು ಸಾಧ್ಯವಿಲ್ಲ. ತಪ್ಪಿತಸ್ಥರನ್ನು ಪತ್ತೆಹಚ್ಚಿ, ಕಾನೂನಿನ ಅಡಿಯಲ್ಲಿ ಶಿಕ್ಷೆಗೆ ಗುರಿಪಡಿಸಲಾಗುವುದು’ ಎಂದು ಎಚ್ಚರಿಕೆ ನೀಡಿದ್ದಾರೆ.

ತೀವ್ರವಾಗಿ ಗಾಯಗೊಂಡ ತಾಯಿಯನ್ನು ಇಂಫಾಲ್‌ನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಮುಖ್ಯಮಂತ್ರಿ ಭೇಟಿ ನೀಡಿ ಮಾಹಿತಿ ಪಡೆದುಕೊಂಡರು. ಗಾಯಗೊಂಡ ತಾಯಿಗೆ ಅತ್ಯುನ್ನತ ಮಟ್ಟದ ಚಿಕಿತ್ಸೆ ಕಲ್ಪಿಸಲು ಎಲ್ಲ ರೀತಿಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

‘ರಾಜ್ಯದ ಪ್ರತಿಯೊಬ್ಬ ನಾಗರಿಕರನ್ನು ರಕ್ಷಿಸಲು ಸರ್ಕಾರ ಬದ್ಧವಾಗಿದ್ದು, ಶಾಂತಿ, ಸ್ಥಿರತೆ ಕಾಪಾಡುವ ನಿಟ್ಟಿನಲ್ಲಿ ಎಲ್ಲ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ಸಾಮರಸ್ಯ ಕದಡಲು ಪ್ರಯತ್ನಿಸುತ್ತಿರುವವರ ವಿರುದ್ಧ ರಾಜ್ಯದ ಜನರು ಒಗ್ಗಟ್ಟಿನಿಂದ ಇರಬೇಕು’ ಎಂದು ಕರೆ ನೀಡಿದ್ದಾರೆ.

ಪ್ರತಿಭಟನೆ: ದಾಳಿಯ ಸುದ್ದಿ ತಿಳಿಯುತ್ತಿದ್ದಂತೆಯೇ, ಸ್ಥಳೀಯರು ಮಂಗಳವಾರ ಬೆಳಿಗ್ಗೆ ಬಿಷ್ಣುಪುರ ಜಿಲ್ಲೆ ಸೇರಿದಂತೆ ರಾಜ್ಯದಾದ್ಯಂತ ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಿದರು. ಇಂಫಾಲ್ ಪೂರ್ವ ಜಿಲ್ಲೆಯ ಪಂಗ್ಯೆ ಹಾಗೂ ಖುರೈ, ಪಶ್ಚಿಮ ಜಿಲ್ಲೆಯ ಲಂಗ್ತಾಬಲ್‌ನಲ್ಲಿ ವಾಹನಗಳ ಓಡಾಟ ತಡೆದರು. ಮೌರ್‍ಯಾಂಗ್ ಠಾಣೆಯ ಮುಂಭಾಗದಲ್ಲಿ ಟೈರ್‌ಗಳಿಗೆ ಬೆಂಕಿ ಹಚ್ಚಿದರು. ಇದರಿಂದ ಹೊರ ಠಾಣೆಯೂ ಸಂಪೂರ್ಣವಾಗಿ ನಾಶಗೊಂಡಿದೆ. ಪೆಟ್ರೋಲ್ ಪಂಪ್ ಸಮೀಪ ನಿಲ್ಲಿಸಿದ್ದ ಟ್ಯಾಂಕರ್‌ಗಳಿಗೆ ಬೆಂಕಿ ಹಚ್ಚಿದರು. ಪ್ರತಿಭಟನಕಾರರನ್ನು ನಿಯಂತ್ರಿಸಲು ಸಿಆರ್‌ಪಿಎಫ್‌ನ ಯೋಧರು ಗುಂಡಿನ ದಾಳಿ ನಡೆಸಿದ್ದರಿಂದ ಇಬ್ಬರು ಪ್ರತಿಭಟನಕಾರರು ಮೃತಪಟ್ಟಿದ್ದಾರೆ. ಸ್ಥಳದಲ್ಲಿ ಹೆಚ್ಚುವರಿ ಬಂದೋಬಸ್ತ್ ಕಲ್ಪಿಸಲಾಗಿದ್ದು, ಪರಿಸ್ಥಿತಿ ನಿಯಂತ್ರಣದಲ್ಲಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಕ್ಕಳ ಹತ್ಯೆ ಖಂಡಿಸಿ ಮಹಿಳೆಯರು ವಿಷ್ಣುಪುರದಲ್ಲಿ ರಸ್ತೆ ತಡೆ ನಡೆಸಿ ಪ್ರತಿಭಟಿಸಿದರು —ಪಿಟಿಐ ಚಿತ್ರ

> **ಈ ಹೇಯ ಕೃತ್ಯವು ಭಯೋತ್ಪಾದನೆಗಿಂತ ಕಡಿಮೆಯೇನಿಲ್ಲ. ಇಂತಹ ಅಮಾನವೀಯ ಕೃತ್ಯದಲ್ಲಿ ಸಮಾಜದಲ್ಲಿ ಜಾಗವಿಲ್ಲ. ಈ ಘಟನೆಯನ್ನು ಅತ್ಯಂತ ಕಟುವಾಗಿ ಖಂಡಿಸುತ್ತೇನೆ**
>
> **ಟಿ.ಎಚ್.ಶಾಂತಿ ಸಿಂಗ್,** ಸ್ಥಳೀಯ ಶಾಸಕ

ಆಗಿದ್ದೇನು...?: ಗುವಾಹಟಿ ಮೂಲದ ನರ್ಸ್ ಬಿನಿತಾ ಅವರು ಕಳೆದ ಜನವರಿ ತಿಂಗಳಲ್ಲಿ ಹೆರಿಗೆ ರಜೆಗಾಗಿ ಊರಿಗೆ ಮರಳಿದ್ದರು. ಇವರ ಪತಿ ಓಯಿನಾಮ್ ಮಂಗಲ್‌ಸನ್ ಅವರು ಗಡಿ ಭದ್ರತಾ ಪಡೆಯಲ್ಲಿದ್ದು (ಬಿಎಸ್‌ಎಫ್), ಬಿಹಾರದಲ್ಲಿ ಕೆಲಸ ಮಾಡುತ್ತಿದ್ದಾರೆ.

ಪತಿಯ ಊರಾದ ಮೌರ್‍ಯಾಂಗ್ ಟ್ರೋಂಗ್ಲಾಬಿಯಲ್ಲಿರುವ ನಿವಾಸದಲ್ಲಿ ಅತ್ತೆಯ ಜೊತೆಗೆ ನೆಲಸಿದ್ದರು.

‘ತಡರಾತ್ರಿ ವೇಳೆ ನನ್ನ ಸೊಸೆಗೆ ಸಹಾಯಕ್ಕಾಗಿ ಕಿರುಚಿಕೊಂಡರು. ಏನಾಯಿತು ಎಂದು ಪ್ರಶ್ನಿಸಿದ ವೇಳೆ ಬಾಂಬ್ ಸ್ಫೋಟವಾಗಿದೆ ಎಂದು ತಿಳಿಸಿದಳು. ನಾನು ಕೋಣೆಗೆ ಹೋಗಿ ನೋಡುವಷ್ಟರಲ್ಲಿ ಇಬ್ಬರು ಮಕ್ಕಳು ರಕ್ತದ ಮಡುವಿನಲ್ಲಿ ಬಿದ್ದಿದ್ದರು’ ಎಂದು ಬಿನಿತಾ ಅವರ ಅತ್ತೆ ಒಯಿನಮ್ ಬಾಲ ನೋವು ತೋಡಿಕೊಂಡಿದ್ದಾರೆ.

ದಾಳಿ ನಡೆದ ಕೆಲವು ಮೀಟರ್‌ಗಳ ದೂರದಲ್ಲಿ ಮಂಗಳವಾರ ಬೆಳಿಗ್ಗೆ ರಾಕೆಟ್ ಚಾಲಿತ ಜೀವಂತ ಗ್ರೆನೇಡ್ (ಆರ್‌ಪಿಜಿ) ಪತ್ತೆಯಾಗಿದ್ದು, ಸ್ಥಳೀಯ ನಿವಾಸಿಗಳು ಮನೆ ತೊರೆದಿದ್ದಾರೆ. ರಾಕೆಟ್‌ಗೆ ಸ್ವಯಂಚಾಲಿತ ಸಾಧನ ಅಳವಡಿಸಲಾಗಿದ್ದು, ಸುತ್ತಲಿನ ಮನೆಗಳನ್ನು ಗುರಿಯಾಗಿಸಲಾಗಿತ್ತು. ಮಕ್ಕಳ ಹತ್ಯೆ ಪ್ರಕರಣವನ್ನು ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್‌ಐಎ) ವರ್ಗಾಯಿಸಲಾಗಿದೆ.

ಮೌರ್‍ಯಾಂಗ್ ಟ್ರೋಂಗ್ಲಾಬಿ ಗ್ರಾಮದ ಚುರಾಚಂದಾಪುರದ ತಗ್ಗು ಪ್ರದೇಶದಲ್ಲಿದೆ. 2023ರಿಂದ 24ರವರೆಗೆ ಮೈತೇಯಿ ಹಾಗೂ ಕುಕಿ ಸಮುದಾಯಗಳ ಸಂಘರ್ಷಕ್ಕೆ ತುತ್ತಾದ ಪ್ರದೇಶದ ಸನಿಹದಲ್ಲಿದೆ. ಈ ಸಂಘರ್ಷದಲ್ಲಿ ಇದುವರೆಗೆ 260 ಮಂದಿ ಮೃತಪಟ್ಟಿದ್ದು, ಸಾವಿರಾರು ಮಂದಿ ನಿರ್ವಸತಿಗರಾಗಿದ್ದಾರೆ.

ಉನ್ನತ ಮಟ್ಟದ ಸಭೆ: ಐದು ಜಿಲ್ಲೆಗಳಲ್ಲಿ ಇಂಟರ್‌ನೆಟ್ ಸೇವೆ ಸ್ಥಗಿತ

ಇಂಫಾಲ್ (ಪಿಟಿಐ): ಮಕ್ಕಳ ಸಾವಿನ ಬೆನ್ನಲ್ಲೇ, ರಾಜ್ಯದಾದ್ಯಂತ ಬೃಹತ್ ಪ್ರತಿಭಟನೆಗಳು ನಡೆದವು. ಕಾನೂನು–ಸುವ್ಯವಸ್ಥೆಯ ಸ್ಥಿತಿಗತಿ ಕುರಿತಂತೆ ಮುಖ್ಯಮಂತ್ರಿ ವೈ.ಖೇಮಚಂದ್ ಸಿಂಗ್ ಅವರು ಉನ್ನತ ಮಟ್ಟದ ಸಭೆ ನಡೆಸಿದರು.

‘ರಾಜ್ಯದ ಶಾಂತಿ ಹಾಗೂ ಸ್ಥಿರತೆ ಕಾಪಾಡುವ ಸರ್ಕಾರದ ಪ್ರಮುಖ ಆದ್ಯತೆಯಾಗಿದೆ’ ಎಂದು ಅವರು ಭರವಸೆ ನೀಡಿದ್ದಾರೆ.

ಘಟನೆ ಬೆನ್ನಲ್ಲೇ, ರಾಜ್ಯ ಸರ್ಕಾರವು ಕಣಿವೆ ಭಾಗದ ಐದು ಜಿಲ್ಲೆಗಳಲ್ಲಿ ಮೊಬೈಲ್ ಡೇಟಾ ಸೇವೆ, ಬ್ರಾಂಡ್‌ಬ್ಯಾಂಡ್, ವಿಪಿಎನ್ ಸೇರಿದಂತೆ ಎಲ್ಲ ಮಾದರಿಯ ಇಂಟರ್‌ನೆಟ್ ಸೇವೆಯನ್ನು ಸ್ಥಗಿತಗೊಳಿಸಲಾಗಿದೆ ಎಂದು ಸರ್ಕಾರ ಅಧಿಕೃತ ಹೇಳಿಕೆಯಲ್ಲಿ ತಿಳಿಸಿದೆ.

ಕಾನೂನು ಹಾಗೂ ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದ, ವದಂತಿಗಳನ್ನು ಹರಡುವುದನ್ನು ತಡೆಯುವ ನಿಟ್ಟಿನಲ್ಲಿ ಮಣಿಪುರ ಇಂಫಾಲ್ ಪಶ್ಚಿಮ, ಪೂರ್ವ, ಥೌಬಾಲ್, ಕಾಕ್‌ಚಿಂಗ್ ಹಾಗೂ ವಿಷ್ಣುಪುರ ಜಿಲ್ಲೆಗಳಲ್ಲಿ ಮಂಗಳವಾರದಿಂದ ಮೂರು ದಿನಗಳ ಕಾಲ ಇಂಟರ್‌ನೆಟ್ ಸೇವೆ ಸ್ಥಗಿತಗೊಳಿಸಲಾಗಿದೆ ಎಂದು ಗೃಹ ಸಚಿವಾಲಯದ ಆಯುಕ್ತ ಎನ್. ಅಶೋಕ್ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಳಿ ಹುಲಿ ಅಭಯಾರಣ್ಯ: 663 ಚ.ಕಿ.ಮೀ ಪರಿಸರ ಸೂಕ್ಷ್ಮ ಪ್ರದೇಶ

ಪ್ರಜಾವಾಣಿ ವಾರ್ತೆ

ನವದೆಹಲಿ: ಉತ್ತರ ಕನ್ನಡ ಜಿಲ್ಲೆಯ ಕಾಳಿ ಹುಲಿ ಸಂರಕ್ಷಿತ ಪ್ರದೇಶದ 663 ಚದರ ಕಿ.ಮೀ. ಪ್ರದೇಶವನ್ನು ಪರಿಸರ ಸೂಕ್ಷ್ಮ ಪ್ರದೇಶವೆಂದು ಗುರುತಿಸಿ ಕೇಂದ್ರ ಅರಣ್ಯ ಹಾಗೂ ಪರಿಸರ ಸಚಿವಾಲಯ ಮಂಗಳವಾರ ಕರಡು ಅಧಿಸೂಚನೆ ಹೊರಡಿಸಿದೆ.

ಅರಣ್ಯದ ಅಂಚಿನಿಂದ 10 ಕಿ.ಮೀ. ವರೆಗಿನ ಪ್ರದೇಶವನ್ನು ಪರಿಸರ ಸೂಕ್ಷ್ಮ ಪ್ರದೇಶವೆಂದು ಗುರುತಿಸಲಾಗಿದೆ. ಭೀಮಗಢ ವನ್ಯಜೀವಿಧಾಮವು ಪಕ್ಕದಲ್ಲಿ ಇರುವುದರಿಂದ ಉತ್ತರ ಹಾಗೂ ಪಶ್ಚಿಮ ದಿಕ್ಕಿನಲ್ಲಿ ಪರಿಸರ ಸೂಕ್ಷ್ಮ ಪ್ರದೇಶವನ್ನು ಗುರುತಿಸಿಲ್ಲ. ಈಶಾನ್ಯದಲ್ಲಿ 5 ಕಿ.ಮೀ.ಯಿಂದ 10 ಕಿ.ಮೀ, ಪೂರ್ವದಲ್ಲಿ 1 ಕಿ.ಮೀ.ಯಿಂದ 7 ಕಿ.ಮೀ. ವರೆಗೆ ಪರಿಸರ ಸೂಕ್ಷ್ಮ ಪ್ರದೇಶ ಎಂದು ಗುರುತಿಸಲಾಗಿದೆ. ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಗೆ 75 ಚ.ಕಿ.ಮೀ ಕಂದಾಯ ಪ್ರದೇಶ, 84 ಚ.ಕಿ.ಮೀ ಕಂದಾಯ ಗ್ರಾಮಗಳು ಹಾಗೂ 503 ಚ.ಕಿ.ಮೀ. ಅರಣ್ಯ ಸೇರಿವೆ. ಆಕ್ಷೇಪಣೆ ಸಲ್ಲಿಕೆಗೆ 60 ದಿನಗಳ ಕಾಲಾವಕಾಶ ನೀಡಲಾಗಿದೆ.

ಅಂತಿಮ ಅಧಿಸೂಚನೆ ಪ್ರಕಟಗೊಂಡ ಬಳಿಕ ಎರಡು ವರ್ಷಗಳಲ್ಲಿ ರಾಜ್ಯ ಸರ್ಕಾರವು ವಲಯ ಮಾಸ್ಟರ್ ಪ್ಲಾನ್ ಸಿದ್ಧಪಡಿಸಬೇಕು. ಸ್ಥಳೀಯ ಜನರೊಂದಿಗೆ ಸಮಾಲೋಚಿಸಿ ಈ ಪ್ರಕ್ರಿಯೆ ನಡೆಸಬೇಕು‘ ಎಂದು ಸಚಿವಾಲಯ ಸೂಚಿಸಿದೆ.

ಯಾವ ಚಟುವಟಿಕೆಗಳಿಗೆ ನಿರ್ಬಂಧ

- ವಾಣಿಜ್ಯ ಗಣಿಗಾರಿಕೆ, ಕಲ್ಲುಗಣಿಗಾರಿಕೆ, ಕಲ್ಲು ಪುಡಿ ಮಾಡುವ ಘಟಕಗಳನ್ನು ಪೂರ್ಣ ನಿಷೇಧಿಸಲಾಗಿದೆ
- ಯಾವುದೇ ಹೊಸ ಉಷ್ಣ ವಿದ್ಯುತ್ ಯೋಜನೆಗಳನ್ನು ಕೈಗೆತ್ತಿಕೊಳ್ಳುವಂತಿಲ್ಲ
- ಮಾಲಿನ್ಯಕ್ಕೆ ಕಾರಣವಾಗುವ ಕೈಗಾರಿಕೆಗಳ ಸ್ಥಾಪನೆಗೆ ನಿರ್ಬಂಧ
- ಯಾವುದೇ ಅಪಾಯಕಾರಿ ವಸ್ತುಗಳ ಬಳಕೆ ಅಥವಾ ಉತ್ಪಾದನೆ ಅಥವಾ ಸಂಸ್ಕರಣೆಗೆ ನಿರ್ಬಂಧ
- ನೈಸರ್ಗಿಕ ಜಲಮೂಲಗಳು ಅಥವಾ ಭೂಮಿಯಲ್ಲಿ ಸಂಸ್ಕರಿಸದ ತ್ಯಾಜ್ಯಗಳ ವಿಸರ್ಜನೆ ನಿಷೇಧ
- ಹೊಸದಾಗಿ ಘನತ್ಯಾಜ್ಯ ವಿಲೇವಾರಿ ಘಟಕ ಮತ್ತು ಜೈವಿಕ ವೈದ್ಯಕೀಯ ತ್ಯಾಜ್ಯಕ್ಕೆ ಸುಡುವ ಘಟಕಕ್ಕಿಲ್ಲ ಅವಕಾಶ
- ಈಗಿರುವ ಹಾಗೂ ಹೊಸದಾಗಿ ಇಟ್ಟಿಗೆ ಗೂಡುಗಳ ಘಟಕ ಸ್ಥಾಪನೆಗೆ ನಿಷೇಧ
- ಮರದ ಮಿಲ್‌ಗಳಿಗೆ ನಿರ್ಬಂಧ
- ದೊಡ್ಡ ಪ್ರಮಾಣದಲ್ಲಿ ಜಾನುವಾರು, ಕೋಳಿ ಫಾರ್ಮ್‌ಗಳಿಗೆ ಅವಕಾಶ ಇಲ್ಲ
- ಮರ ಆಧಾರಿತ ಕೈಗಾರಿಕೆಗಳನ್ನು ಆರಂಭಿಸುವಂತಿಲ್ಲ
- ಪರಿಸರ ಸೂಕ್ಷ್ಮ ಪ್ರದೇಶದ ಒಂದು ಕಿ.ಮೀ. ವ್ಯಾಪ್ತಿಯೊಳಗೆ ಹೋಟೆಲ್‌ಗಳು ಹಾಗೂ ರೆಸಾರ್ಟ್‌ಗಳನ್ನು ತೆರೆಯುವಂತಿಲ್ಲ
- ಸಂರಕ್ಷಿತ ಪ್ರದೇಶದ ಗಡಿಯಿಂದ ಒಂದು ಕಿಲೋಮೀಟರ್ ಒಳಗೆ ಯಾವುದೇ ರೀತಿಯ ಹೊಸ ವಾಣಿಜ್ಯ ಕಟ್ಟಡಗಳ ನಿರ್ಮಾಣಕ್ಕೆ ಅನುಮತಿ ಇಲ್ಲ



ಪಂಚಮಸಾಲಿ ಶ್ರೀ ದೂರು–ಪ್ರತಿದೂರು

‘₹3 ಕೋಟಿಗೆ ಬ್ಲ್ಯಾಕ್‌ಮೇಲ್’

ಒಂದನೇ ಪುಟದಿಂದ...

‘ನಾನು ಹಣ ನೀಡದ ಕಾರಣ ರಾಜಕೀಯ ವ್ಯಕ್ತಿಗಳ ಪಿತೂರಿಯಿಂದ ನನ್ನ ತೇಜೋವಧೆ ಮಾಡುತ್ತಿದ್ದು, ಹಣಕ್ಕಾಗಿ ಪೀಡಿಸುತ್ತಿದ್ದಳು. ನನ್ನ ಮೇಲೆ ಇಲ್ಲ ಸಲ್ಲದ ಆರೋಪ ಮಾಡಿ, ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾಳೆ’ ಎಂದು ಆರೋಪಿಸಿದ್ದಾರೆ.

‘ಫೆಬ್ರುವರಿ 11 ರಂದು ನಾನು ವಿಜಯಪುರ ತಾಲ್ಲೂಕಿನ ಕಗ್ಗೋಡದಿಂದ ಬರುವಾಗ ವಾಹನ ಅಡ್ಡಗಟ್ಟಿ ಹಣಕ್ಕಾಗಿ ಬೆದರಿಸಿ ಬೇಡಿಕೆ ಇಟ್ಟರು. ಹಣ ನೀಡದ ಕಾರಣ ಕಾರಿನ ಗ್ಲಾಸಿಗೆ ಗುದ್ದಿದ್ದಾರೆ. ಈ ವೇಳೆ ಬೆಂಗಾವಲು ಸಿಬ್ಬಂದಿ ವಾತಾವರಣ ತಿಳಿಗೊಳಿಸಿದರು’ ಎಂದು ಹೇಳಿದ್ದಾರೆ.

‘ಬಳಿಕ ಕೆಲ ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಕೆಟ್ಟದಾಗಿ ಅಪಪ್ರಚಾರ ಮಾಡಿಸಿದ್ದರು. ಈ ಸಂಬಂಧ ಬೆಂಗಳೂರಿನ ಸಿಟಿ ಸಿವಿಲ್ ಕೋರ್ಟ್‌ನಲ್ಲಿ ತಡೆಯಾಜ್ಞೆ ತರಲಾಗಿದೆ. ಇಷ್ಟರ ಹೊರತಾಗಿಯೂ ಖಾಸಗಿ ವಾಹಿನಿಯಲ್ಲಿ ನನ್ನ ವಿರುದ್ಧ ಅಪಪ್ರಚಾರ ಮಾಡಿಸಿದ್ದಾಳೆ’ ಎಂದು ದೂರಿನಲ್ಲಿ ಆರೋಪಿಸಿದ್ದಾರೆ.

‘ನನ್ನ ಶಿಷ್ಯ ರಾಜಕುಮಾರ ಅವರ ಮೊಬೈಲ್ ಫೋನ್‌ಗೆ ಕರೆ ಮಾಡಿ ₹ 3 ಕೋಟಿ ಹಣಕ್ಕೆ ಬೇಡಿಕೆ ಇಟ್ಟಿದ್ದಾಳೆ. ಹಣ ನೀಡದಿದ್ದರೆ, ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಕೆಟ್ಟದಾಗಿ ಪ್ರಚಾರ ಮಾಡುತ್ತೇನೆಂದು ಹೇಳಿದ್ದಾಳೆ. ಅತ್ಯಾಚಾರದ ದೂರು ಹಾಕುತ್ತೇನೆಂದು ಬೆದರಿಕೆ ಹಾಕಿದ್ದಾಳೆ’ ಎಂದು ತಿಳಿಸಿದ್ದಾರೆ.

‘ಪಂಚಮಸಾಲಿ ಸಮಾಜದ ಹೋರಾಟ ಹತ್ತಿಕ್ಕಲು, ನನ್ನ ತೇಜೋವಧೆಗೆ ಪ್ರಯತ್ನ ನಡೆದಿದೆ. ಮಹಿಳೆ ಸೇರಿದಂತೆ ಆರೋಪಿಗಳಾದ ಪೃಥ್ವಿಗೌಡ, ಯಶವಂತ, ಎಂ.ಡಿ.ವೀರೇಶ ಇವರೆಲ್ಲರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಬೇಕು’ ಎಂದು ದೂರಿನಲ್ಲಿ ಒತ್ತಾಯಿಸಿದ್ದಾರೆ.

ಸ್ವಾಮೀಜಿ ತಡೆಯಾಜ್ಞೆ ತಂದಿದ್ದೇಕೆ?: ಕಾಶಪ್ಪನವರ

ಬಾಗಲಕೋಟೆ: ‘ಪಂಚಮಸಾಲಿ ಪೀಠದ ಹೆಸರು ಕೆಡದಿರಲಿ ಎಂದು ಸ್ವಾಮೀಜಿ ಅವರನ್ನು ಹೊರಹಾಕಿದ್ದೆವು. ಪ್ರತ್ಯೇಕ ಪೀಠ ಮಾಡುತ್ತೇವೆ ಎಂದು ಕರೆದೊಯ್ದವರು ಈಗ ಉತ್ತರಿಸಬೇಕು’ ಎಂದು ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಟ್ರಸ್ಟ್ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ಹೇಳಿದರು.

ಸ್ವಾಮೀಜಿ ವಿರುದ್ಧ ಮಹಿಳೆಯೊಬ್ಬರು ದೂರು ಸಲ್ಲಿಕೆ ಕುರಿತ ಸುದ್ದಿಗಾರರ ಪ್ರಶ್ನೆಗೆ ಅವರು, ‘ಅನ್ಯಾಯ ಆದ ಮಹಿಳೆ ನ್ಯಾಯ ಕೇಳುವುದು ಸಹಜ. ಚಾರಿತ್ರ್ಯ ಸ್ವಚ್ಛ ಇದ್ದರೆ ಸ್ವಾಮೀಜಿ ಏಕೆ ಕೋರ್ಟ್‌ನಿಂದ ತಡೆಯಾಜ್ಞೆ ತಂದರು’ ಎಂದು ಪ್ರಶ್ನಿಸಿದರು

‘ನಮ್ಮ ಸ್ವಚ್ಛ ಪೀಠ, ಬಸವಣ್ಣವರ ಐಕ್ಯ ಸ್ಥಳದಲ್ಲಿದೆ. ಆ ಕ್ಷೇತ್ರ ಅಪವಿತ್ರ ಆಗಬಾರದು ಎಂದು ಸಮುದಾಯದ ಮುಖಂಡರ ಗಮನಕ್ಕೆ ತಂದಿದ್ದೆ’ ಎಂದರು.

‘ಭಕ್ತರು ಕಾವಿ ಬಗ್ಗೆ ಅಪಾರ ಗೌರವ ಹೊಂದಿದ್ದಾರೆ. ಯಾವ ತತ್ವದ ಆಧಾರದ ಮೇಲೆ ಪೀಠಕ್ಕೆ ಬಂದಿದ್ದರೊ ಅದನ್ನು ಮಾಡಲಿಲ್ಲ. ಬೈ-ಲಾದಲ್ಲಿದ್ದ ಷರತ್ತುಗಳನ್ನು ಉಲ್ಲಂಘಿಸಿದ್ದರಿಂದ ಹೊರಹಾಕುವ ಕಠಿಣ ನಿರ್ಧಾರವನ್ನು ಟ್ರಸ್ಟ್ ತೆಗೆದುಕೊಂಡಿತು’ ಎಂದು ಹೇಳಿದರು.

ಚಿಕ್ಕಜಾಜೂರು ಠಾಣೆ ಬಳಿ ಘಟನೆ: ತನಿಖೆಗೆ ಸೂಚನೆ

ಬಿಸಿಲಲ್ಲಿ ಸಿಬ್ಬಂದಿ ನಿಲ್ಲಿಸಿದ ಎಸ್‌ಐ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಹೇಳಿದ ಕೆಲಸ ಮಾಡುತ್ತಿಲ್ಲ ಎಂಬ ಕಾರಣಕ್ಕೆ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕು ಚಿಕ್ಕಜಾಜೂರು ಠಾಣೆಯ ಸಬ್ ಇನ್‌ಸ್ಪೆಕ್ಟರ್ ಠಾಣೆಯ ಸಿಬ್ಬಂದಿಯನ್ನು 3 ಗಂಟೆ ಬಿಸಿಲಿನಲ್ಲಿ ನಿಲ್ಲಿಸಿದ್ದು ಆಕ್ರೋಶಕ್ಕೆ ಗುರಿಯಾಗಿದೆ. ಈ ಕುರಿತು ತನಿಖೆ ನಡೆಸಲು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು ಅವರು ಡಿವೈಎಸ್‌ಪಿಗೆ ಸೂಚಿಸಿದ್ದಾರೆ.

ಠಾಣೆಯ ಎಎಸ್‌ಐ ಸೇರಿದಂತೆ 16 ಜನ ಪುರುಷ ಸಿಬ್ಬಂದಿ, ನಾಲ್ವರು ಮಹಿಳಾ ಸಿಬ್ಬಂದಿಯನ್ನು ಸಬ್ ಇನ್‌ಸ್ಪೆಕ್ಟರ್ ಕೆ.ನೇತ್ರಾವತಿ ಅವರು ಬಿಸಿಲಿನಲ್ಲಿ ನಿಲ್ಲಿಸಿದ್ದಾರೆ ಎಂಬ ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.

ಬಿಸಿಲಲ್ಲಿ ಸಿಬ್ಬಂದಿ ಬಸವಳಿದರು, ಕೆಲವರು ನೀರು ಕೊಡುವಂತೆ ಮನವಿ ಮಾಡಿದರು. ಹಿರಿಯ ಸಿಬ್ಬಂದಿ ಕಣ್ಣೀರು ಹಾಕಿದರು. ಬಂದೂಕು ಹೊತ್ತು ನಿಂತಿದ್ದವರು ಸುಸ್ತಾದರು. ಆರೋಗ್ಯದಲ್ಲಿ ವ್ಯತ್ಯಾಸವಾದವರು ಆಸ್ಪತ್ರೆಗೆ ತೆರಳಿ ಚಿಕಿತ್ಸೆ ಪಡೆದರು ಎಂದೂ ಗೊತ್ತಾಗಿದೆ.

‘ಬಿಸಿಲಿನಲ್ಲಿ ನಿಲ್ಲಿಸಿದ್ದ ಬಗ್ಗೆ ಸಬ್ ಇನ್‌ಸ್ಪೆಕ್ಟರ್ ಅವರಿಂದ ಮಾಹಿತಿ ಕೇಳಿದ್ದೇನೆ. ಈ ಕುರಿತು ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಡಿವೈಎಸ್‌ಪಿ ಗಿರೀಶ್ ಗೌಡ ಅವರಿಗೆ ಸೂಚಿಸಿದ್ದೇನೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು ತಿಳಿಸಿದರು.

‘ವಾರದ ಸಭೆ ಸಂದರ್ಭ ಸಿಬ್ಬಂದಿ ಯೊಬ್ಬರು ಏಕವಚನದಲ್ಲಿ ನಿಂದಿಸಿದ್ದರು. ಪರೇಡ್ ವೇಳೆ ಅವರನ್ನು ಈ ಬಗ್ಗೆ ಪ್ರಶ್ನಿಸಿದೆ. ಆ ವೇಳೆ ಸ್ವಲ್ಪ ಹೊತ್ತು ಎಲ್ಲ ನಿಲ್ಲಬೇಕಾಯಿತು. ಅದು ಶಿಕ್ಷೆಯಲ್ಲ, ನಾನು ಶಿಕ್ಷೆ ನೀಡಿಲ್ಲ’ ಎಂದು ಸಬ್ ಇನ್‌ಸ್ಪೆಕ್ಟರ್ ಕೆ.ನೇತ್ರಾವತಿ ಸ್ಪಷ್ಟಪಡಿಸಿದರು.

ಚಿಕ್ಕಜಾಜೂರು ಪೊಲೀಸ್ ಠಾಣೆ ಸಬ್ ಇನ್‌ಸ್ಪೆಕ್ಟರ್ ನೇತ್ರಾವತಿ ಸಿಬ್ಬಂದಿಯನ್ನು ಬಿಸಿಲಿನಲ್ಲಿ ನಿಲ್ಲಿಸಿದ್ದರು ಎಂದು ಹೇಳಲಾದ ಚಿತ್ರ ಜಾಲತಾಣಗಳಲ್ಲಿ ಹರಿದಾಡುತ್ತಿದೆ

ಜಮ್ಮು –ಕಾಶ್ಮೀರ: ಪಾಕ್‌ನ ಇಬ್ಬರು ಉಗ್ರರು ಸೇರಿ ಐವರ ಬಂಧನ

ಪ್ರಜಾವಾಣಿ ವಾರ್ತೆ

ಶ್ರೀನಗರ: ಪಾಕಿಸ್ತಾನದ ಭಯೋತ್ಪಾದಕ ಸಂಘಟನೆ ಲಷ್ಕರ್–ಎ–ತಯಬಾದ ಅಂತರರಾಜ್ಯ ಜಾಲವೊಂದನ್ನು ಮಂಗಳವಾರ ಭೇದಿಸಿದ ಜಮ್ಮು ಮತ್ತು ಕಾಶ್ಮೀರ ಪೊಲೀಸರು ಪಾಕಿಸ್ತಾನದ ಇಬ್ಬರು ಭಯೋತ್ಪಾದಕರು ಸೇರಿದಂತೆ ಐವರನ್ನು ಬಂಧಿಸಿದ್ದಾರೆ.

ಪಾಕಿಸ್ತಾನದ ಅಬ್ದುಲ್ಲಾ ಅಲಿಯಾಸ್ ಅಬು ಹುರ್ರೈರಾ ಭಯೋತ್ಪಾದಕ ಚಟುವಟಿಕೆಗಳ ಪ್ರಮುಖ ಸಂಚುಕೋರನಾಗಿದ್ದ ಮತ್ತು 16 ವರ್ಷಗಳಿಂದ ಪೊಲೀಸರಿಂದ ತಲೆಮರೆಸಿಕೊಂಡಿದ್ದ. ಇನ್ನೊಬ್ಬ ಬಂಧಿತನನ್ನು ಪಾಕಿಸ್ತಾನದ ಉಸ್ಮಾನ್ ಅಲಿಯಾಸ್ ಖುಬೈಬ್ ಎಂದು ಗುರುತಿಸಲಾಗಿದೆ.

ಮೊಹಮ್ಮದ್ ನಕೀಬ್ ಭಟ್, ಅದಿಲ್ ರಶೀದ್ ಭಟ್ ಮತ್ತು ಗುಲಾಮ್ ಮೊಹಮ್ಮದ್ ಮೀರ್ ಇತರ ಮೂವರು ಬಂಧಿತರು. ಇವರು ಶ್ರೀನಗರ ನಿವಾಸಿಗಳಾಗಿದ್ದು, ಭಯೋತ್ಪಾದಕರಿಗೆ ವಸತಿ, ಆಹಾರ ವ್ಯವಸ್ಥೆ ಹಾಗೂ ವಸ್ತುಗಳ ಪೂರೈಕೆ ಮಾಡುತ್ತಿದ್ದರು.

ಕೇಂದ್ರೀಯ ತನಿಖಾ ಸಂಸ್ಥೆಗಳ ಮಾರ್ಗದರ್ಶನಲ್ಲಿ ಪಂಜಾಬ್ ಸೇರಿದಂತೆ ಇತರ ರಾಜ್ಯಗಳಲ್ಲೂ ಪೊಲೀಸರು ಕಾರ್ಯಾಚರಣೆ ನಡೆಸಿದ್ದರು.

ರಥೋತ್ಸವ

ಪ್ರಜಾವಾಣಿ ಚಿತ್ರ: ಸಂಗಮೇಶ ಹೂಗಾರ

ಬಾಗಲಕೋಟೆ ಜಿಲ್ಲೆಯ ಕೂಡಲಸಂಗಮದಲ್ಲಿ ಮಂಗಳವಾರ ಸಂಗಮೇಶ್ವರ ರಥೋತ್ಸವ ಸಂಭ್ರಮದಿಂದ ನಡೆಯಿತು

ಗೋಧಿ ಹೂತಿದ್ದ ಪ್ರಕರಣ: ಹಿಂದಿನ ಪ್ರಾಂಶುಪಾಲ ಅಮಾನತು

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ತರೀಕೆರೆ ತಾಲ್ಲೂಕಿನ ಎಚ್.ರಂಗಾಪುರ (ದೋರನಾಳು) ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಯ ಬಳಿ 80 ಚೀಲ ಗೋಧಿ ಹೂತಿದ್ದ ಪ್ರಕರಣದಲ್ಲಿ ಹಿಂದಿನ ಪ್ರಾಂಶುಪಾಲ ಬಿ.ಜೆ. ಹರೀಶ್ ಅವರನ್ನು ಅಮಾನತು ಮಾಡಲಾಗಿದ್ದು, ಇಬ್ಬರು ಶಿಕ್ಷಕರನ್ನು ವರ್ಗಾವಣೆ ಮಾಡಲಾಗಿದೆ.

2022ರ ನ.7ರಿಂದ 2025ರ ಜೂನ್ 23ರವರೆಗೆ ಬಿ.ಜೆ.ಹರೀಶ್ ಅವರು ಪ್ರಾಂಶುಪಾಲರಾಗಿದ್ದರು. ಆ ಅವಧಿಯಲ್ಲೇ ಗೋಧಿ ಚೀಲ ಹೂಳಲಾಗಿದೆ ಎಂದು ಆರೋಪಿಸಲಾಗಿದೆ. ಮೇಲಾಧಿಕಾರಿಗಳ ಗಮನಕ್ಕೆ ತಾರದೆ, ಯಾವುದೇ ನಿಯಮಗಳನ್ನು ಅನುಸರಿಸದೆ ಗೋಧಿಯನ್ನು ಹೂತು ಹಾಕಿರುವುದು ಮೇಲ್ನೋಟಕ್ಕೆ ತನಿಖೆಯಿಂದ ಗೊತ್ತಾಗಿದೆ. ಆದ್ದರಿಂದ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ ಎಂದು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ (ಕ್ರೈಸ್) ಕಾರ್ಯನಿರ್ವಾಹಕ ನಿರ್ದೇಶಕರು ಆದೇಶದಲ್ಲಿ ತಿಳಿಸಿದ್ದಾರೆ.

ಹರೀಶ್ ಅವರು ಈಗ ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನ ದಂಡಿನಶಿವರ ಗ್ರಾಮದ ಅಂಬೇಡ್ಕರ್ ವಸತಿ ಶಾಲೆಯ ಪ್ರಾಂಶುಪಾಲರಾಗಿದ್ದರು.

ದೈಹಿಕ ಶಿಕ್ಷಣ ಶಿಕ್ಷಕ ಬಿ.ಎಂ. ರವಿ ಅವರನ್ನು ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕಿನ ಹೆತ್ತೂರು, ಸಮಾಜ ವಿಜ್ಞಾನ ಶಿಕ್ಷಕ ಡಿ.ಲಿಂಗರಾಜ್ ಅವರನ್ನು ಬೆಂಗಳೂರು ದಕ್ಷಿಣ ಜಿಲ್ಲೆಯ ಮಾಗಡಿ ತಾಲ್ಲೂಕಿನ ತಿಪ್ಪಸಂದ್ರಕ್ಕೆ ವರ್ಗಾವಣೆ ಮಾಡಲಾಗಿದೆ.

ಇದೇ ಶಾಲೆಯ ಹೊರಗುತ್ತಿಗೆ ಅಡುಗೆ ಸಿಬ್ಬಂದಿ ವಿಶಾಲಮ್ಮ ಅವರನ್ನು ಸೇವೆಯಿಂದ ಬಿಡುಗಡೆ ಮಾಡಲಾಗಿದೆ. ವಿಶಾಲಮ್ಮ ಅವರು ಮೇಲಾಧಿಕಾರಿಗಳ ಆದೇಶ ಪಾಲಿಸುವುದಿಲ್ಲ, ಗುಂಪುಗಾರಿಕೆ ಮಾಡುತ್ತಾರೆ, ಸಮಯಕ್ಕೆ ಸರಿಯಾಗಿ ಶಾಲೆಗೆ ಬರುವುದಿಲ್ಲ ಎಂಬ ಕಾರಣ ನೀಡಿ ಬಿಡುಗಡೆ ಮಾಡಲಾಗಿದೆ.

ವಿಶ್ವಮಾನವ ಡಾ.ಭೀಮರಾವ್ ಅಂಬೇಡ್ಕರ್ ರಕ್ಷಣಾ ವೇದಿಕೆ ಉಪಾಧ್ಯಕ್ಷ ಎಸ್.ಶಿವಮೂರ್ತಿ ಅವರು ನೀಡಿದ್ದ ದೂರು ಆಧರಿಸಿ ಏ.1ರಂದು ಶಾಲೆಯ ಆವರಣದಲ್ಲಿ ಅಗೆಯಲಾಗಿತ್ತು. ಆಗ ಸುಮಾರು 80 ಚೀಲದಷ್ಟು ಗೋಧಿ ಸಿಕ್ಕಿತ್ತು.

ಕೇಂದ್ರದ ವಿರುದ್ಧ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಸುರ್ಜೇವಾಲಾ ಆರೋಪ

‘5 ಲಕ್ಷ ಆಟೊರಿಕ್ಷಾ ಚಾಲಕರಿಗೆ ಸಂಕಷ್ಟ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರ ಎಲ್‌ಪಿಜಿ, ಇಂಧನ ವ್ಯವಸ್ಥೆಯನ್ನು ಅಸಮರ್ಥವಾಗಿ ನಿರ್ವಹಣೆ ಮಾಡದಿರುವುದರಿಂದ ಕರ್ನಾಟಕದ 5 ಲಕ್ಷ ಆಟೊರಿಕ್ಷಾ ಚಾಲಕರ ಜೀವನ ನಾಶವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ದೂರಿದ್ದಾರೆ.



ಈ ಕುರಿತು ಜಂಟಿ ಹೇಳಿಕೆ ಬಿಡುಗಡೆ ಮಾಡಿರುವ ಅವರು, ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಉದಾಸೀನ, ಅಹಂಕಾರ, ಆಡಳಿತಾತ್ಮಕ ದುರಂತಕ್ಕೆ ದೇಶದ ಇಂಧನ ವ್ಯವಸ್ಥೆ ಸಾಕ್ಷಿಯಾಗಿದೆ.

ಮುಖ್ಯಾಂಶಗಳು

- ಪ್ರತಿ ವಾಹನಕ್ಕೆ ₹400 ಮೌಲ್ಯದ ಅನಿಲ ವಿತರಣೆ
- ‘ಆಟೊಗ್ಯಾಸ್’ ದರ ಲೀಟರ್‌ಗೆ ₹105ರಿಂದ ₹120ಕ್ಕೆ ಏರಿಕೆ
- ಬೆಂಗಳೂರಿನಲ್ಲಿ ಅನಿಲ ಪೂರೈಕೆಯ 80 ಕೇಂದ್ರಗಳು ಬಂದ್

ಮಾರ್ಚ್ 2026ರಲ್ಲಿ ‘ಆಟೊಗ್ಯಾಸ್’ ದರ ಲೀಟರ್‌ಗೆ ₹58 ರಿಂದ ₹61 ಇತ್ತು. ಈಗ ₹105 ರಿಂದ ₹120ಕ್ಕೆ ಏರಿಕೆಯಾಗಿದೆ. ಅಂದರೆ ನಾಲ್ಕು ವಾರಗಳಲ್ಲಿ ಶೇ 106 ಏರಿಕೆಯಾಗಿದೆ. ಖಾಸಗಿ ಅನಿಲ ಪೂರೈಕೆ ಕೇಂದ್ರಗಳಲ್ಲಿ ಲೀಟರ್‌ಗೆ ₹125 ರಿಂದ ₹135 ಹಣ ವಸೂಲಿ ಮಾಡಲಾಗುತ್ತಿದೆ. ಸಿಎನ್‌ಜಿ ಆಟೊಗಳು ತೀವ್ರ ಕೊರತೆ ಎದುರಿಸುತ್ತಿವೆ. ಕಡಿಮೆ ಬೆಲೆಗೆ ಅನಿಲ ಪೂರೈಕೆ ಮಾಡುವ ಸರ್ಕಾರಿ ಕೇಂದ್ರಗಳು ಬಾಗಿಲು ಮುಚ್ಚಿವೆ. ಬೆಂಗಳೂರಿನಲ್ಲಿ 100 ಕೇಂದ್ರಗಳಿದ್ದವು. ಈಗ 10 ರಿಂದ 15 ಮಾತ್ರ ಕಾರ್ಯನಿರ್ವಹಿಸುತ್ತಿವೆ. ಸುಮಾರು 80 ಬಂದ್ ಆಗಿವೆ ಎಂದಿದ್ದಾರೆ.

ದೈನಂದಿನ ಪೂರೈಕೆ 12,000 ಲೀಟರ್‌ನಿಂದ 6,000 ಲೀಟರ್‌ಗೆ ಕುಸಿದಿದೆ. ಪ್ರತಿ ವಾಹನಕ್ಕೆ ₹400 ಮೌಲ್ಯದ ಅನಿಲ ವಿತರಿಸಲಾಗುತ್ತಿದೆ. ಪ್ರತಿ ದಿನ ಬೆಳಿಗ್ಗೆ 5ಕ್ಕೆ ಸುಮಾರು 3 ಕಿ.ಮೀ ವರೆಗೆ ಸರದಿ ನಿಲ್ಲಬೇಕಿದೆ. ಅಷ್ಟೂ ಸಮಯ ಅವರ ಕುಟುಂಬದ ಅನ್ನವನ್ನು ಕೇಂದ್ರ ಸರ್ಕಾರ ಕಸಿಯುತ್ತಿದೆ. ಮೋದಿ ಸರ್ಕಾರದ ‘ಪೆಟ್ರೋಲ್’ಗೆ ಬದಲಾಗಿ ಎಂಬ ಪುಕ್ಕಟೆ ಸಲಹೆಯು ಅಜ್ಞಾನ ಮತ್ತು ಕ್ರೌರ್ಯವಾಗಿದೆ. ಇಷ್ಟಾದರೂ ಬಿಜೆಪಿ ನಾಯಕರು ಬಾಯಿಗೆ ಬೀಗ ಹಾಕಿಕೊಂಡಿದ್ದಾರೆ ಎಂದು ಆರೋಪಿಸಿದ್ದಾರೆ.

ಇದು ಕೇವಲ ಇಂಧನದ ಬಿಕ್ಕಟ್ಟಲ್ಲ, ಕೋಟ್ಯಂತರ ಜನರ ಬದುಕಿನ ತುರ್ತು ಪರಿಸ್ಥಿತಿ. ಕರ್ನಾಟಕದ ಶ್ರಮಿಕ ವರ್ಗವನ್ನು ಹತಾಶೆಗೆ ನೂಕಿ, ಕೇಂದ್ರ ಮೂಕ ಪ್ರೇಕ್ಷಕನಂತೆ ನೋಡುತ್ತಿದೆ. ಖಾಲಿಯಾಗಿರುವ ಪ್ರತಿಯೊಂದು ಎಲ್‌ಪಿಜಿ ಸಿಲಿಂಡರ್ ಒಂದು ಕುಟುಂಬವನ್ನು ಹಸಿವಿನ ಕೂಪಕ್ಕೆ ನೂಕುತ್ತಿದೆ. ಪ್ರತಿ ಸರದಿ ಸಾಲು ಕೇಂದ್ರ ಸರ್ಕಾರದ ವೈಫಲ್ಯದ ಸಂಕೇತವಾಗಿದೆ. ಕರ್ನಾಟಕದ ಜನರು ಕೇಂದ್ರದ ಇಂತಹ ದ್ರೋಹವನ್ನು ಕ್ಷಮಿಸುವುದಿಲ್ಲ. ರಾಜ್ಯವನ್ನು ಪ್ರತಿನಿಧಿಸುವ ಕೇಂದ್ರ ಸಚಿವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

‘ಚುನಾವಣೆ ನಂತರ ಇನ್ನಷ್ಟು ಏರಿಕೆ’

ವಿವಿಧ ರಾಜ್ಯಗಳಲ್ಲಿ ನಡೆಯುತ್ತಿರುವ ಚುನಾವಣೆಯ ನಂತರ ಬೆಲೆಗಳು ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ ಎಂದು ಸಿದ್ದರಾಮಯ್ಯ, ಶಿವಕುಮಾರ್, ಸುರ್ಜೇವಾಲಾ ಹೇಳಿದ್ದಾರೆ.

ವಾಣಿಜ್ಯ ಸಿಲಿಂಡರ್ ಬೆಲೆ ₹2,000 ದಾಟಿದೆ. ಕಾಳಸಂತೆಯಲ್ಲಿ ಒಂದು ಸಿಲಿಂಡರ್ ₹6,000ಕ್ಕೆ ಮಾರಾಟವಾಗುತ್ತಿದೆ. ಲಕ್ಷಾಂತರ ಸಣ್ಣ ಹೋಟೆಲ್‌ಗಳು, ರಸ್ತೆಬದಿಯ ಡಾಬಾ, ತಳ್ಳುಗಾಡಿ ವ್ಯಾಪಾರಿಗಳು, ಗಿಗ್ ಕಾರ್ಮಿಕರ ಜೀವನ ಅಸ್ತವ್ಯಸ್ತಗೊಂಡಿದೆ. ಭಾರತದಲ್ಲಿ ಎಲ್‌ಪಿಜಿ ಪೂರೈಕೆಯನ್ನು ಒಎಂಸಿಗಳ ಮೂಲಕ ನಿಯಂತ್ರಿಸುತ್ತದೆ. ಇದರ ಸಂಪೂರ್ಣ ಜವಾಬ್ದಾರಿ ಕೇಂದ್ರದ್ದು. ರಾಜ್ಯ ಸರ್ಕಾರದ ಪಾತ್ರವಿಲ್ಲ. ಖಾಸಗಿ ತೈಲ ಕಂಪನಿಗಳು ಇಂಧನ ಬೆಲೆ ಏರಿಕೆ ಮಾಡಿವೆ ಎಂದು ದೂರಿದ್ದಾರೆ.

ಗೋ ಹತ್ಯೆ ತಡೆಗೆ ಸಾರ್ವಜನಿಕ ಅರಿವು ಅಗತ್ಯ: ಭಾಗವತ್

ಮಥುರಾ (ಪಿಟಿಐ): ‘ರಾಮಮಂದಿರದ ಕುರಿತು ಸಾರ್ವಜನಿಕರಿಗಿದ್ದ ಅರಿವು ಗೋ ಹತ್ಯೆಯ ಕುರಿತೂ ಇದ್ದರೆ, ಗೋಹತ್ಯೆ ತಡೆಯಲು ಸಾಧ್ಯವಾಗುತ್ತದೆ’ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಅವರು ಮಂಗಳವಾರ ಪ್ರತಿಪಾದಿಸಿದರು.

‘ಸಮಾಜ ಗೋವುಗಳನ್ನು ಪೂಜಿಸುವಂತಾಗಬೇಕು. ಆಗ ಗೋಹತ್ಯೆ ತಕ್ಷಣ ನಿಲ್ಲುತ್ತದೆ. ಈ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು’ ಎಂದರು. ಗೋಶಾಲೆಗಳನ್ನು ಬೆಂಬಲಿಸುವಂತೆ ಜನರಿಗೆ ಸಲಹೆ ನೀಡಿದರು.

ವೃಂದಾವನದ ಮಾಲೂಕ್ ಪೀಠದ ಮಾಲುಕ್ ದಾಸ್ ಜಿ ಮಹಾರಾಜ್ ಅವರ ಜನ್ಮದಿನಾಚರಣೆಯಲ್ಲಿ ಮಾತನಾಡಿದ ಅವರು, ‘ಸಾರ್ವಜನಿಕರ ಭಾವನೆ ಅಸ್ತಿತ್ವದಲ್ಲಿದ್ದರೆ, ವ್ಯವಸ್ಥೆಯೂ ಒಪ್ಪಿಕೊಳ್ಳುತ್ತದೆ. ರಾಮಮಂದಿರ ನಿರ್ಮಾಣದ ಕುರಿತು ಜನರಲ್ಲಿದ್ದ ಭಾವನೆ ಈ ವಿಷಯದಲ್ಲೂ ಬರಲಿ ಎಂದು ಹಾರೈಸುತ್ತೇನೆ’ ಎಂದರು.

ಉದ್ಯೋಗ ವಾಣಿ

ಕರ್ನಾಟಕ ಗ್ರಾಮೀಣ ಬ್ಯಾಂಕ್
KARNATAKA GRAMEENA BANK
SCHEDULED BANK OWNED BY GOVERNMENT

HEAD OFFICE: BALLARI — ಪ್ರಧಾನ ಕಚೇರಿ : ಬಳ್ಳಾರಿ

ಕರ್ನಾಟಕ ಗ್ರಾಮೀಣ ಬ್ಯಾಂಕ್, ಪ್ರಧಾನ ಕಚೇರಿ, ಬಳ್ಳಾರಿ, ಪರಾಮರ್ಶಕರು (CONSULTANTS) / ಗುತ್ತಿಗೆದಾರರು (CONTRACTORS) / ಸರಬರಾಜುದಾರರು (VENDORS)/ ವಿತರಕರು ಹಾಗೂ ಸೇವೆ ಒದಗಿಸುವವರನ್ನು (SERVICE PROVIDERS) ಪ್ಯಾನೆಲ್‌ಗೆ ಸೇರಿಸುವ (EMPANELMENT) ಕುರಿತು ಅರ್ಜಿಗಳನ್ನು ಆಹ್ವಾನಿಸಿರುತ್ತದೆ.

ಕರ್ನಾಟಕ ರಾಜ್ಯದ ವ್ಯಾಪ್ತಿಯಲ್ಲಿನ ವಿವಿಧ ಶಾಖೆಗಳು / ಕಚೇರಿಗಳಲ್ಲಿ ಕಾರ್ಯ ನಿರ್ವಹಣೆ / ಸರಬರಾಜು ಕಾರ್ಯಗಳನ್ನು ಕೈಗೊಳ್ಳಲು ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಹಾಗೂ ದಾಖಲೆಗಳನ್ನು ಡೌನ್‌ಲೋಡ್ ಮಾಡಲು ಬ್ಯಾಂಕ್‌ನ ವೆಬ್‌ಸೈಟ್ https://karnatakagb.bank.in/tenders ಗೆ ಭೇಟಿ ನೀಡಬಹುದು.

ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ 28.04.2026 ಸಂಜೆ 05.00 ಗಂಟೆಯವರೆಗೆ.

ಸ್ಥಳ: ಬಳ್ಳಾರಿ
ದಿನಾಂಕ : 07.04.2026
Sd/-
ಮಹಾ ಪ್ರಬಂಧಕರು

Career Opportunity

A leading Co-operative Bank is looking for Experienced Bankers for following positions :

General Manager, Deputy General Manager, Assistant General Manager, Chief Manager, Manager, Recovery Personnel, Fraud Risk Management Personnel

Location : Maharashtra, Gujarat, Karnataka, Andhra Pradesh, Telangana, Tamil Nadu, Madhya Pradesh.

Eligible Candidates may apply on our website up to 14.04.2026. The details of positions and Prescribed Application Form are available on the Career Page of the Bank's website https://www.cosmos.bank.in

THE COSMOS CO-OP. BANK LTD.
(Multistate Scheduled Bank)
Enriching Life!

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್, ಒಂದು ನವರತ್ನ ಕಂಪನಿ ಮತ್ತು ರಕ್ಷಣಾ ಮಂತ್ರಾಲಯದ ಅಧೀನ ಭಾರತದ ಪ್ರಮುಖ ವೃತ್ತಿಪರ ಎಲೆಕ್ಟ್ರಾನಿಕ್ಸ್ ಕಂಪನಿಗೆ, ಬೆಂಗಳೂರು ಸಂಕೀರ್ಣದ ಅಭಿಯಂತರ ಸೇವೆಗೆ ಈ ಕೆಳಕಂಡ ವೃತ್ತಿಪರರ ಅವಶ್ಯಕತೆ ಇದೆ.

ಹುದ್ದೆ / ಶ್ರೇಣಿ	ವಿದ್ಯಾರ್ಹತೆ	01.04.2026 ರಂತೆ ಅರ್ಹತೋತ್ತರ ಅನುಭವ	ಹುದ್ದೆಗಳ ಸಂಖ್ಯೆ
ಖಾಯಂ ಆಧಾರದ ಮೇಲಿನ ಹುದ್ದೆಗಳು:			
ಉಪ ವ್ಯವಸ್ಥಾಪಕರು / (E-IV)	ಬಿ. ಆರ್ಕ್	8–9 ವರ್ಷಗಳ ಸಂಗತ ಅನುಭವ	1
ಹಿರಿಯ ಅಭಿಯಂತರರು / (E-III)	ಎಲೆಕ್ಟ್ರಿಕಲ್ ನಲ್ಲಿ ಬಿ.ಇ / ಬಿ.ಟೆಕ್ / ಬಿ.ಎಸ್ ಸಿ ಇಂಜಿನಿಯರಿಂಗ್	4–5 ವರ್ಷಗಳ ಸಂಗತ ಅನುಭವ	1
	ಮೆಕ್ಯಾನಿಕಲ್ ನಲ್ಲಿ ಬಿ.ಇ / ಬಿ.ಟೆಕ್ / ಬಿ.ಎಸ್ ಸಿ ಇಂಜಿನಿಯರಿಂಗ್		1
ನಿಗದಿತ ಅವಧಿಯ ಆಧಾರದ ಮೇಲಿನ ಹುದ್ದೆ:			
ಹಿರಿಯ ಅಭಿಯಂತರರು / (E-III)	ಸಿವಿಲ್ ನಲ್ಲಿ ಬಿ.ಇ / ಬಿ.ಟೆಕ್ / ಬಿ.ಎಸ್ ಸಿ ಇಂಜಿನಿಯರಿಂಗ್‌ನ ಪೂರ್ವ ವಿದ್ಯಾರ್ಹತೆಯೊಂದಿಗೆ ಎಮ್.ಇ/ ಎಮ್.ಟೆಕ್ ಪರಿಸರದ ಇಂಜಿನಿಯರಿಂಗ್	2 ವರ್ಷಗಳ ಸಂಗತ ಅನುಭವ	1

* ಈ ಮೇಲೆ ಸೂಚಿಸಿರುವ ಹುದ್ದೆಗಳು, ನೇಮಕಾತಿ ಆಗದೆ ಖಾಲಿ ಉಳಿದಿರುವ ಹುದ್ದೆಗಳಾಗಿರುತ್ತವೆ. ವಿಸ್ತೃತ ಜಾಹಿರಾತು ಮತ್ತು ಅರ್ಜಿ ಸಲ್ಲಿಸುವ ವಿವರಗಳಿಗಾಗಿ ದಯವಿಟ್ಟು ನಮ್ಮ ವೆಬ್ ಸೈಟ್ www.bel-india.in ನಲ್ಲಿ “Careers” ಭಾಗವನ್ನು ವೀಕ್ಷಿಸಿ.

‘Har Ek Kaam Desh Ke Naam’

2026 ಜನತಂತ್ರದ ಹಬ್ಬ

ಪ್ರಜಾ ಮತ

ಕರ್ನಾಟಕ ತಮಿಳುನಾಡು ಪಶ್ಚಿಮ ಬಂಗಾಳ ಅಸ್ಸಾಂ ಕೇರಳ ಪುದುಚೇರಿ

ಬಿಜೆಪಿ ಬಿಗಿಪಟ್ಟಿನೆದುರು 'ಕೈ' ಸೆಣಸೀತೆ?

ಅಸ್ಸಾಂ: 35ರಿಂದ 22ಕ್ಕೆ ಇಳಿದ ಮುಸ್ಲಿಂ ಪ್ರಾಬಲ್ಯದ ಕ್ಷೇತ್ರಗಳು ಹಿಮಂತ ಬಿಸ್ವಾ ಶರ್ಮಾ ಜನಪ್ರಿಯತೆಯ ಪರೀಕ್ಷೆ

• ಬಿ.ಎಸ್. ಅರುಣ್

2023ರಲ್ಲಿ ಅಸ್ಸಾಂನಲ್ಲಿ ಕೈಗೊಂಡ ಕ್ಷೇತ್ರ ಪುನರ್ ವಿಂಗಡಣೆ ಮತ್ತು ನಂತರದ ಮತದಾರರ ಪಟ್ಟಿಯ ಪರಿಶೀಲನೆ, ಏಪ್ರಿಲ್ 9ರಂದು ನಡೆಯುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಅದರ 'ಇಂಡಿಯಾ' ಮಿತ್ರಪಕ್ಷಗಳಿಗೆ ಮಾರಕವಾಗಲಿದೆಯೆ? ಅಸ್ಸಾಂನ 126 ವಿಧಾನಸಭೆ ಮತ್ತು 14 ಲೋಕಸಭೆ ಸೀಟುಗಳಲ್ಲಿ ನಡೆದ ವಿಂಗಡಣೆಯಲ್ಲಿ ಮಹತ್ತರವಾದ ಬದಲಾವಣೆಗಳಾಗಿದೆಯೆಂದೂ, ಅದು ಬಿಜೆಪಿಗೆ ಸಹಾಯಕವಾಗಲಿದೆಯೆಂದೂ ಹೇಳಲಾಗಿದೆ. 2014ರಿಂದೀಚೆಗೆ ಸತತವಾಗಿ ಎಲ್ಲಾ ಚುನಾವಣೆಗಳನ್ನೂ ಸೋಲುತ್ತಾ ಬಂದಿರುವ ಕಾಂಗ್ರೆಸ್‌ಗೆ ಧರ್ಮಾಧಾರಿತ ಧ್ರುವೀಕರಣ, ಬಿಜೆಪಿ-ಆರೆಸ್ಸೆಸ್‌ನ ಬಲಿಷ್ಠ ತಳಮಟ್ಟದ ಸಂಘಟನೆ ಹಾಗೂ ಕ್ಷೇತ್ರ ಮರು ವಿಂಗಡಣೆ–ಈ ಎಲ್ಲವೂ ಗೆಲುವನ್ನು ಮರೀಚಿಕೆಯಾಗಿಸಬಹುದೇ?

ದೇಶದ ಎಲ್ಲೆಡೆ ಕ್ಷೇತ್ರಗಳ ಮರು ವಿಂಗಡಣೆ 2008ರಲ್ಲೇ ಆಗಿದ್ದರೂ, ಅಸ್ಸಾಂ ಮತ್ತು ಜಮ್ಮು-ಕಾಶ್ಮೀರದಲ್ಲಿ ಮುಂದೂಡಲಾಗಿತ್ತು. ಮರು ವಿಂಗಡಣೆಯ ನಂತರ ಈ ಈಶಾನ್ಯ ರಾಜ್ಯದ ಮುಸ್ಲಿಂ ಬಾಹುಳ್ಯದ, ಬಾಂಗ್ಲಾದೇಶ ಮತ್ತು ಪಶ್ಚಿಮ ಬಂಗಾಳದ ಜೊತೆ ಗಡಿ ಪ್ರದೇಶ ಹಂಚಿಕೊಂಡಿರುವ ದಕ್ಷಿಣ ಅಸ್ಸಾಂ ಭಾಗಗಳನ್ನು ಸುಮಾರು ಎರಡು ಲೋಕಸಭಾ ಹಾಗೂ 20 ವಿಧಾನಸಭಾ ಸ್ಥಾನಗಳಲ್ಲಿ ವಿಂಗಡಣೆ ಮಾಡಲಾಗಿದೆ.

ಮುಸ್ಲಿಮರು ಫಲಿತಾಂಶದ ಮೇಲೆ ಪ್ರಭಾವ ಬೀರುತ್ತಾರೆ ಎನ್ನಲಾದ ಸುಮಾರು 35 ಕ್ಷೇತ್ರಗಳು ಕಡಿಮೆಯಾಗಿ, ಈಗ 22ಕ್ಕೆ ಇಳಿದಿವೆ. ಕಾಂಗ್ರೆಸ್ ಈ ಕ್ಷೇತ್ರಗಳಲ್ಲಿ ಮೇಲುಗೈ ಸಾಧಿಸಿದರೂ, ಉಳಿದ ಮಧ್ಯ ಮತ್ತು ಉತ್ತರ ಅಸ್ಸಾಂ, ಬರಾಕ್ ಕಣಿವೆಯ ಸುಮಾರು 100 ಕ್ಷೇತ್ರಗಳಲ್ಲಿ ಬಿಜೆಪಿ ಉತ್ತಮ ಸ್ಥಿತಿಯಲ್ಲಿದೆ ಎಂದು ಹೇಳಲಾಗಿದೆ. ಅಹೋಂ ಸಮುದಾಯದವರು ಸಾಕಷ್ಟು ಸಂಖ್ಯೆಯಲ್ಲಿದ್ದ ರಾಜ್ಯದ ಸುಮಾರು 40 ಸ್ಥಾನಗಳು ಈಗ ಕಡಿಮೆಯಾಗಿದೆ ಎನ್ನಲಾಗಿದೆ. ಒಟ್ಟಿನಲ್ಲಿ ಕ್ಷೇತ್ರಗಳ ಮರು ವಿಂಗಡಣೆ ಅನೇಕ ಕ್ಷೇತ್ರಗಳ ಫಲಿತಾಂಶ ನಿರ್ಧರಿಸುವ ಸಾಧ್ಯತೆ ಇದೆ.

2.43 ಲಕ್ಷ ಮತದಾರರ ಕೈಬಿಡಲಾಗಿದೆ

2.5 ಕೋಟಿ ಮತದಾರರಿರುವ ಈ ರಾಜ್ಯದಲ್ಲಿ ಒಂದು ಹಂತದ ಮತದಾನ ಗುರುವಾರ ನಡೆಯಲಿದೆ. ಇಲ್ಲಿ ಬೇರೆ ರಾಜ್ಯಗಳಲ್ಲಿ ನಡೆದ/ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಬದಲು ಅದರ ಪರಿಶೀಲನೆ ನಡೆದು 2.43 ಲಕ್ಷ ಮತದಾರರನ್ನು ಕೈಬಿಡಲಾಗಿದೆ. 126 ವಿಧಾನಸಭಾ ಸ್ಥಾನಗಳಿಗೆ ನಡೆದ 2021ರ ಚುನಾವಣೆಯಲ್ಲಿ ಎನ್‌ಡಿಎ 75 (ಬಿಜೆಪಿ 60) ಸ್ಥಾನಗಳನ್ನು ಗೆದ್ದು ಶೇ 44.51ರಷ್ಟು ಮತ ಪಡೆದಿತ್ತು ಹಾಗೂ ಮಹಾಜೋಟ್ 50 (ಕಾಂಗ್ರೆಸ್ 29) ಗಳಿಸಿ ಶೇ 43.68ರಷ್ಟು ಮತ ಪಡೆದಿತ್ತು. ಕಾಂಗ್ರೆಸ್‌ಗೆ 29 ಸ್ಥಾನಗಳು ಅಸ್ಸಾಂನ 35 ಜಿಲ್ಲೆಗಳ ಪೈಕಿ 13ರಿಂದ ಮಾತ್ರ ಬಂದಿತ್ತು. ಅಂದರೆ, ಉಳಿದ 22 ಜಿಲ್ಲೆಗಳಲ್ಲಿ ಪಕ್ಷ ಸೊನ್ನೆ ಸುತ್ತಿತ್ತು. ಇದು ಕೂಡ ಪಕ್ಷಕ್ಕೆ ಈ ಚುನಾವಣೆ ಗೆಲ್ಲುವುದು ಬೆಟ್ಟ ಏರಿದಷ್ಟು ಕಷ್ಟವಾಗಬಹುದು ಎನ್ನುವುದನ್ನೂ ಸೂಚಿಸುತ್ತದೆ.

ರಾಜ್ಯದಲ್ಲಿ ಮುಸ್ಲಿಮರ ಜನಸಂಖ್ಯೆ ಸುಮಾರು ಶೇ 35ರಷ್ಟಿದೆ. ಅಸ್ಸಾಂನಲ್ಲಿ 1979-85ರಲ್ಲಿ ನಡೆದ ವಿದೇಶಿ ವಿರೋಧಿ ಆಂದೋಲನ ಭಾರಿ ಸಂಚಲನ ಸೃಷ್ಟಿಸಿತು. ಇದು ಬಾಂಗ್ಲಾದೇಶದಿಂದ ವಲಸೆ ಬಂದ ಮುಸ್ಲಿಮರ ವಿರುದ್ಧ ನಡೆದ ಚಳವಳಿ. ಇದರ ನೇತೃತ್ವ ವಹಿಸಿದ್ದ ವಿದ್ಯಾರ್ಥಿಗಳು ತಮ್ಮದೇ ರಾಜಕೀಯ ಪಕ್ಷ–ಅಸೋಂ ಗಣ ಪರಿಷದ್ - ಸ್ಥಾಪಿಸಿ ಅಧಿಕಾರಕ್ಕೂ ಬಂದರು. ಈಗ ಬಹಳ ದುರ್ಬಲವಾಗಿರುವ ಎಜಿಪಿ ಬಿಜೆಪಿಯ ಮಿತ್ರಪಕ್ಷವಾಗಿದೆ.

ಅನೇಕ ದಶಕಗಳಿಂದ ಬಾಂಗ್ಲಾದೇಶಿ ಒಳನುಸುಳುವಿಕೆ ಬಹು ದೊಡ್ಡ ವಿಷಯ/ಸಮಸ್ಯೆಯಾಗಿರುವ ಈ ರಾಜ್ಯದಲ್ಲಿ ಚುನಾವಣಾ ಪ್ರಚಾರದಲ್ಲಿಯೂ ಸಂಪೂರ್ಣ ಧ್ರುವೀಕರಣವಾಗಿದೆ. ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ಬಂಗಾಳಿ ಮಾತನಾಡುವ ಅಸ್ಸಾಂನ ಮುಸ್ಲಿಮರನ್ನು ಉದ್ದೇಶಿಸಿ ನೀಡಿರುವ ವಿವಾದಾಸ್ಪದ ಮಿಯಾ ಮುಸ್ಲಿಂ ಹೇಳಿಕೆ, ಮುಸ್ಲಿಮರನ್ನೇ ಟಾರ್ಗೆಟ್ ಮಾಡಿ ಅನೇಕ ಕಡೆ ಒಕ್ಕಲೆಬ್ಬಿಸುತ್ತಿದ್ದಾರೆಂದು ಆಪಾದಿಸುತ್ತಿರುವ ಕಾಂಗ್ರೆಸ್, ರಾಜ್ಯ ಸರ್ಕಾರ ಕೈಗೊಂಡಿರುವ ನೇರ ನಗದು ವರ್ಗಾವಣೆಯಲ್ಲಿನ ಕಾರ್ಯಕ್ರಮಗಳು, ಮಹಿಳೆಯರ ಪರವಾಗಿರುವ ಸೌಲಭ್ಯಗಳು, ಮೂಲಸೌಕರ್ಯ ಯೋಜನೆಗಳು, ಗಾಯಕ ಜುಬೀನ್ ಗರ್ಗ್ ಸಂಶಯಾಸ್ಪದ ಸಾವಿನ ಪ್ರಕರಣದ ಮಂದಗತಿಯ ತನಿಖೆ– ಈ ಎಲ್ಲವೂ ಚುನಾವಣಾ ಪ್ರಚಾರದ ಭಾಗಗಳಾಗಿವೆ.

ಈ ಚುನಾವಣೆ ಶರ್ಮಾ ಅವರ ಜನಪ್ರಿಯತೆಯ ಪರೀಕ್ಷೆಯೂ ಹೌದು. ಇವರು ಬಹುಶಃ ಅಸ್ಸಾಂ ಕಂಡ ಅತ್ಯಂತ ವಿವಾದಾತ್ಮಕ ರಾಜಕಾರಣಿ. 2015ರಲ್ಲಿ ಕಾಂಗ್ರೆಸ್‌ನಿಂದ ಹೊರಬಂದು ಬಿಜೆಪಿ ಸೇರಿದ ಶರ್ಮಾ ಈಗ ಈಶಾನ್ಯ ರಾಜ್ಯಗಳ ಕೇಸರಿ ಪಕ್ಷದ ಮುಖ್ಯ ನೇತಾರರೂ ಹೌದು. 2021ರಲ್ಲಿ ಆಗಿನ ಮುಖ್ಯಮಂತ್ರಿ ಸರ್ಬಾನಂದ ಸೋನೋವಾಲ್ ನೇತೃತ್ವದಲ್ಲಿ ಜಯಗಳಿಸಿದ್ದ ಬಿಜೆಪಿಯನ್ನು ಈ ಬಾರಿ ಗೆಲ್ಲಿಸುವ ಜವಾಬ್ದಾರಿ ಶರ್ಮಾ ಅವರ ಮೇಲಿದೆ. ಇದಕ್ಕಾಗಿ ಇವರು ಕಂಡುಕೊಂಡಿರುವ ಮಾರ್ಗ: ರಸ್ತೆ, ಸೇತುವೆ, ವಿಮಾನ ನಿಲ್ದಾಣ ಮೊದಲಾದ ಮೂಲಸೌಕರ್ಯಗಳ ಬಗ್ಗೆ ಒತ್ತು ಮತ್ತು ಧ್ರುವೀಕರಣ. ಇವೆರಡನ್ನೂ ಉಪಯೋಗಿಸಿ ಶರ್ಮಾ ಎಷ್ಟರಮಟ್ಟಿಗೆ ಅಸ್ಸಾಮಿ ಜನರ ಮತ ಸೆಳೆಯುತ್ತಾರೆ ಎನ್ನುವುದನ್ನು ನೋಡಬೇಕು. ಬಿಜೆಪಿ ಗೆದ್ದರೆ ಹ್ಯಾಟ್ರಿಕ್ ಸಾಧಿಸಿದಂತೆ; ಆಗ ಶರ್ಮಾ ಎರಡನೇ ಬಾರಿಗೆ ಮುಖ್ಯಮಂತ್ರಿಯಾಗುವುದರಲ್ಲಿ ಸಂಶಯವಿಲ್ಲ.

2001ರಿಂದ ಸತತ ಮೂರು ಬಾರಿ ಮುಖ್ಯಮಂತ್ರಿಯಾಗಿದ್ದ ತರುಣ್ ಗೊಗೊಯಿಯವರ ಪಟ್ಟಾ ಶಿಷ್ಯನಾಗಿದ್ದ ಶರ್ಮಾ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಜೊತೆಗಿನ ವೈಮನಸ್ಸಿನಿಂದಾಗಿ ಕಾಂಗ್ರೆಸ್ ತೊರೆದರು. 2021ರಲ್ಲಿ ಮುಖ್ಯಮಂತ್ರಿಯಾದಾಗಿನಿಂದ ಒಂದಲ್ಲಾ ಒಂದು ವಿಷಯದಲ್ಲಿ ವಿವಾದದಲ್ಲಿರುವ ಶರ್ಮಾ, ಬಿಜೆಪಿ ಈಶಾನ್ಯದ ಅನೇಕ ರಾಜ್ಯಗಳಲ್ಲಿ ನೆಲೆಯೂರಲು ರಾಜಕೀಯ ತಂತ್ರ ರೂಪಿಸುವುದರಲ್ಲಿ 2015ರಿಂದಲೂ ಪ್ರಮುಖ ಪಾತ್ರ ವಹಿಸಿದ್ದಾರೆ.

ಅಸ್ಸಾಂ ವಿಧಾನಸಭೆ ಚುನಾವಣೆ ಅಂಗವಾಗಿ ಗುವಾಹಟಿಯಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರ ಕೈ ಕುಲುಕಿದ ಅಭಿಮಾನಿಗಳು– ಪಿಟಿಐ ಚಿತ್ರ

ಚುನಾವಣಾ ವಿಶ್ಲೇಷಣೆ

ದಶಕದ ನಂತರ ಅಧಿಕಾರದ ಗದ್ದುಗೆ ಎದುರು ನೋಡುತ್ತಿರುವ ಕಾಂಗ್ರೆಸ್ ತನ್ನ ಆಂತರಿಕ ಸಮಸ್ಯೆಯಿಂದ ತತ್ತರಿಸಿದೆ. ಇದನ್ನು ಸರಿಪಡಿಸಲು ಪಕ್ಷದ ಹೈಕಮಾಂಡ್ ಸಂಸದ ಗೌರವ್ ಗೊಗೊಯಿ ಅವರನ್ನು ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಮಾಡಿತು. ಇತ್ತೀಚೆಗೆ ಇಬ್ಬರು ಪ್ರಮುಖ ನಾಯಕರು – ರಾಜ್ಯ ಕಾಂಗ್ರೆಸ್‌ನ ಮಾಜಿ ಅಧ್ಯಕ್ಷ ಭೂಪೇನ್ ಬೋರಾ, ಲೋಕಸಭಾ ಸದಸ್ಯ ಪ್ರದ್ಯುತ್ ಬೋರ್ದೋಲಾಯಿ ಸೇರಿದಂತೆ ಮೂವರು ಶಾಸಕರು ಪಕ್ಷ ತೊರೆದು ಬಿಜೆಪಿ ಸೇರಿದ್ದಾರೆ.

ಬಾಂಗ್ಲಾದೇಶಕ್ಕೆ ಹೊಂದಿಕೊಂಡಂತಹ ದುಬರಿ ಲೋಕಸಭಾ ಕ್ಷೇತ್ರದಲ್ಲಿ 2024ರಲ್ಲಿ ಕಾಂಗ್ರೆಸ್‌ನ ರಕೀಬುಲ್ ಹುಸೇನ್ 10 ಲಕ್ಷಕ್ಕೂ ಹೆಚ್ಚು ಮತಗಳ ಅಂತರದಿಂದ ಗೆದ್ದರು. ಇಂದೋರ್ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಸಮರ್ಥ ಎದುರಾಳಿ ಇಲ್ಲದೆ 11.75 ಲಕ್ಷ ಮತಗಳ ಅಂತರದಿಂದ ಜಯಗಳಿಸಿದ್ದನ್ನು ಹೊರತುಪಡಿಸಿದರೆ, ದುಬರಿ ಅಂತರವೇ ಇದುವರೆಗಿನ ಲೋಕಸಭಾ ಚುನಾವಣೆಗಳಲ್ಲಿ ಅತಿ ಹೆಚ್ಚು. ಉತ್ತರದ ಜೋರ್ಹಾಟ್‌ನಲ್ಲಿ ತರುಣ್ ಗೊಗೊಯಿ ಅವರ ಪುತ್ರ ಗೌರವ್, ಹಿಮಂತ ಶರ್ಮಾರ ಒಡ್ಡಿದ್ದ ಸವಾಲು ಎದುರಿಸಿ ಗೆದ್ದರು.

ಆದರೆ ಇದರಿಂದ ಕಾಂಗ್ರೆಸ್ ಅತೀವ ಸಂತೋಷ ಪಡುವ ಅಗತ್ಯವಿಲ್ಲ. ಕಾರಣ ರಾಜ್ಯದ ಒಟ್ಟು 14 ಕ್ಷೇತ್ರಗಳಲ್ಲಿ ಅದು 3ರಲ್ಲಿ ಮಾತ್ರ ಜಯಗಳಿಸಿತು. ಎನ್‌ಡಿಎ 11ರಲ್ಲಿ ಗೆದ್ದು ಮತ್ತೆ ತನ್ನ ಸಾರ್ವಭೌಮತ್ವ ಸ್ಥಾಪಿಸಿತು. 2024ರ ಲೋಕಸಭೆ ಚುನಾವಣೆಯಲ್ಲಿ ಮುಸ್ಲಿಂ ಸಮುದಾಯದ ಮತಗಳು ಕಾಂಗ್ರೆಸ್‌ಗೆ ವಾಪಸ್ ಬಂದಿದ್ದು ಮಾತ್ರ ಅದಕ್ಕೆ ಸಮಾಧಾನ. ಅಸ್ಸಾಂನ ದಕ್ಷಿಣ ಭಾಗದಲ್ಲಿ ಕಾಂಗ್ರೆಸ್‌ನ ಪರಿಸ್ಥಿತಿ ಸುಧಾರಿಸಿದೆಯಾದರೂ, ಮಧ್ಯ ಮತ್ತು ಉತ್ತರ ಅಸ್ಸಾಂನ ಅನೇಕ ಕ್ಷೇತ್ರಗಳ ತಳಮಟ್ಟದಲ್ಲಿ ಕಾಂಗ್ರೆಸ್ ಅಥವಾ ಅದರ ಮಿತ್ರಪಕ್ಷಗಳ ಕಾರ್ಯಕರ್ತರೇ ಇಲ್ಲದಂತಹ ಪರಿಸ್ಥಿತಿಯೂ ಇದೆ. ಬಿಜೆಪಿಯ ಮತಬೇಟೆಗೆ ಕಾರ್ಯಕರ್ತರ ದಂಡೇ ಅಲ್ಲದೆ ಅನೇಕ ನಾಯಕರು ಅಲ್ಲೇ ಬೀಡು ಬಿಟ್ಟಿದ್ದಾರೆ. ಕಾಂಗ್ರೆಸ್‌ನಲ್ಲಿ ಕಾರ್ಯಕರ್ತರ ಹಾಗೂ ನಾಯಕರ ಅನುಪಸ್ಥಿತಿ ಎದ್ದು ಕಾಣಿಸುತ್ತಿದೆ. ಈ ಚುನಾವಣೆಯಲ್ಲಿ ಕೊನೇ ಗಳಿಗೆಯಲ್ಲಿ ಕಾಂಗ್ರೆಸ್ ಇತರ ಪಕ್ಷಗಳ ಜೊತೆ ಹೊಂದಾಣಿಕೆ ಘೋಷಣೆ ಮಾಡಿತು. ವಿಪರ್ಯಾಸವೆಂದರೆ ಕಾಂಗ್ರೆಸ್ ಮತ್ತು ಮಿತ್ರಪಕ್ಷಗಳಾದ ರೈಜೋರ್ ದಳ ಹಾಗೂ ಅಸ್ಸಾಂ ಜಾತೀಯ ಪರಿಷದ್‌ನ ಅಧ್ಯಕ್ಷರು ಒಂದೇ ಸಮುದಾಯಕ್ಕೆ– ಅಹೋಂ– ಸೇರಿದವರು.

ಅಸ್ಸಾಂನಲ್ಲಿ ಒಟ್ಟು ಬುಡಕಟ್ಟು ಜನಾಂಗದ 14 ಸಮುದಾಯದ ಜನಸಂಖ್ಯೆ ಸುಮಾರು 40 ಲಕ್ಷದಷ್ಟಿದೆ (ಶೇ 12). ಈಗ ಅಹೋಂ ಸೇರಿದಂತೆ ಆರು ಸಮುದಾಯಗಳು ತಮ್ಮನ್ನು ಪರಿಶಿಷ್ಟ ವರ್ಗಗಳ ಪಟ್ಟಿಯಲ್ಲಿ ಸೇರಿಸಬೇಕೆಂದು ಒತ್ತಾಯಿಸುತ್ತಿವೆ. ಈ ವಿಷಯದಲ್ಲಿ ಬಿಜೆಪಿ ಸರ್ಕಾರ ಇಕ್ಕಟ್ಟಿನಲ್ಲಿ ಸಿಲುಕಿದೆ. ಎಸ್‌ಟಿಯಲ್ಲಿ ಹೊಸ ಸಮುದಾಯಗಳನ್ನು ಸೇರಿಸಿದರೆ ಈಗಿರುವ 14 ಸಮುದಾಯಗಳ ಕೋಪ, ಇಲ್ಲದಿದ್ದಲ್ಲಿ ಒತ್ತಾಯ ಮಾಡುತ್ತಿರುವ 6 ಸಮುದಾಯಗಳ ಸಿಟ್ಟನ್ನು ಸರ್ಕಾರ ಎದುರಿಸಬೇಕಾಗುತ್ತದೆ.

(ಲೇಖಕ: ಹಿರಿಯ ಪತ್ರಕರ್ತ)

ಸುದ್ದಿ 2 ನಿಮಿಷ

'ಜನರ ಭಾವನೆ ಗೌರವಿಸಿ, ನಾಮಪತ್ರ ಹಿಂತೆಗೆದುಕೊಳ್ಳಿ'

ಠಾಣೆ(ಪಿಟಿಐ): ಕಾಂಗ್ರೆಸ್ ಪಕ್ಷ 'ಜನರ ಭಾವನೆಗಳನ್ನು ಗೌರವಿಸುವುದಾದರೆ, ಬಾರಾಮತಿ ಕ್ಷೇತ್ರದ ಉಪಚುನಾವಣೆಯಲ್ಲಿ ಎನ್‌ಸಿಪಿ ಅಧ್ಯಕ್ಷೆ ಸುನೇತ್ರಾ ಪವಾರ್ ವಿರುದ್ಧ ಕಣಕ್ಕಿಳಿಸಿರುವ ತಮ್ಮ ಅಭ್ಯರ್ಥಿಯ ನಾಮಪತ್ರ ಹಿಂತೆಗೆದುಕೊಂಡು, ಆ ಕ್ಷೇತ್ರದಲ್ಲಿ ಅವಿರೋಧ ಆಯ್ಕೆಗೆ ಅವಕಾಶ ಮಾಡಿಕೊಡುತ್ತದೆ' ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಆಶಿಸಿದ್ದಾರೆ.

ಇಲ್ಲಿ ಮಂಗಳವಾರ ಕಾರ್ಯಕ್ರಮವೊಂದರ ಉದ್ಘಾಟನೆ ನಂತರ ಸುದ್ದಿಗಾರರೊದಿಗೆ ಮಾತನಾಡಿದ ಅವರು, 'ದುರ್ಘಟನೆ ನಡೆದಿರುವಂತಹ ಸಂದರ್ಭದಲ್ಲಿ ಬಾರಾಮತಿಯ ಜನರು ಒಮ್ಮತದ ಅಭ್ಯರ್ಥಿಯನ್ನು ಆಯ್ಕೆ ಮಾಡಲು ಬಯಸುತ್ತಾರೆ' ಎಂದು ಹೇಳಿದರು.

ಸುನೇತ್ರಾ ಪವಾರ್ ಅವರ ಬಗ್ಗೆ ಜನರಲ್ಲಿ ಅನುಕಂಪವಿದೆ. ಕಾಂಗ್ರೆಸ್ ಪಕ್ಷ ಕೂಡ ಸಾರ್ವಜನಿಕರ ಭಾವನೆಗಳನ್ನು ಗೌರವಿಸುತ್ತದೆ ಎಂದು ನಿರೀಕ್ಷಿಸಿದ್ದೇನೆ. ಕಾಂಗ್ರೆಸ್ ಪಕ್ಷ ಉಪಚುನಾವಣಾ ಕಣದಿಂದ ಹಿಂದೆ ಸರಿದರೆ, ಅದು ಅಜಿತ್ ಪವಾರ್ ಅವರ ಸ್ಮರಣೆಯನ್ನು ಗೌರವಿಸಿದಂತೆ' ಎಂದು ಫಡಣವೀಸ್ ಹೇಳಿದರು.



ಕಾಂಗ್ರೆಸ್ ಅಭ್ಯರ್ಥಿ ಆಕಾಶ್ ಮೋರೆ ಅವರು ಸುನೇತ್ರಾ ಪವಾರ್ ವಿರುದ್ಧ ನಾಮಪತ್ರ ಸಲ್ಲಿಸಿದ್ದರು. ಅಭ್ಯರ್ಥಿಗಳು ಚುನಾವಣಾ ಕಣದಿಂದ ಹಿಂದೆ ಸರಿಯಲು ಏಪ್ರಿಲ್ 9 ಕೊನೇ ದಿನ.

ಓಡಿಹೋದ ಪವನ್ ಖೇರಾ: ಹಿಮಂತ ಶರ್ಮಾ ಕಿಡಿ

ಶಿವಸಾಗರ್ (ಪಿಟಿಐ): ಧೈರ್ಯವಿದ್ದರೆ ಬಂಧಿಸಿ ಎಂದು ಪೊಲೀಸರಿಗೆ ಸವಾಲು ಹಾಕಿದ್ದ ಕಾಂಗ್ರೆಸ್ ನಾಯಕ ಪವನ್ ಖೇರಾ ಹೈದರಾಬಾದ್‌ಗೆ ಓಡಿಹೋಗಿದ್ದಾರೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಮಂಗಳವಾರ ಲೇವಡಿ ಮಾಡಿದ್ದಾರೆ.

ಹಿಮಂತ ಮತ್ತು ಅವರ ಕುಟುಂಬದ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಅಸ್ಸಾಂ ಪೊಲೀಸರ ತಂಡವೊಂದು ಮಂಗಳವಾರ ಬೆಳಿಗ್ಗೆ ಪವನ್ ಖೇರಾ ಅವರ ದೆಹಲಿ ನಿವಾಸಕ್ಕೆ ಭೇಟಿ ನೀಡಿ ವಿಚಾರಣೆ ನಡೆಸಿತ್ತು.

ಶಿವಸಾಗರ್‌ನಲ್ಲಿ ಪಿಟಿಐ ಜೊತೆ ಮಾತನಾಡಿದ ಹಿಮಂತ, 'ಪವನ್ ಅವರು ನಿನ್ನೆಯೇ ಓಡಿ ಹೋಗಿದ್ದರೂ, ಪೊಲೀಸರು ಅವರ ಮನೆಗೆ ಯಾಕೆ ಹೋದರು ಎಂದು ನನಗೆ ಗೊತ್ತಿಲ್ಲ. ನಿನ್ನೆಯವರೆಗೂ ನನ್ನನ್ನು ಬಂಧಿಸಿ ಎಂದು ಅವರು ಹೇಳುತ್ತಿದ್ದರು' ಎಂದು ಹೇಳಿದ್ದಾರೆ.

ಮುಖ್ಯಮಂತ್ರಿ ಹಿಮಂತ ಅವರ ಪತ್ನಿ ರಿನಿಕಿ ಭುಯಾನ್ ಶರ್ಮಾ ಅವರು ಹಲವು ಪಾಸ್‌ಪೋರ್ಟ್‌ಗಳನ್ನು ಮತ್ತು ವಿದೇಶಿ ಆಸ್ತಿಗಳನ್ನು ಹೊಂದಿದ್ದಾರೆ, ಆದರೆ ಮುಖ್ಯಮಂತ್ರಿ ಇದನ್ನು ಚುನಾವಣಾ ಅಫಿಡವಿಟ್‌ನಲ್ಲಿ ಉಲ್ಲೇಖಿಸಿಲ್ಲ ಎಂದು ಪವನ್ ಭಾನುವಾರ ಆರೋಪಿಸಿದ್ದರು. ಈ ಆರೋಪವನ್ನು ಹಿಮಂತ ಅವರು ಸುಳ್ಳು ಎಂದು ಪ್ರತಿಪಾದಿಸಿದ್ದಾರೆ.

'ಗ್ಯಾರಂಟಿ' ಸ್ಥಗಿತಕ್ಕೆ ಷಡ್ಯಂತ್ರ: ಡಿ.ಕೆ.ಶಿ

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಪಂಚ ಗ್ಯಾರಂಟಿ' ಯೋಜನೆಗಳಿಗೆ ಹಣ ಬಿಡುಗಡೆಗೆ ಆಕ್ಷೇಪಿಸಿ ಚುನಾವಣಾ ಆಯೋಗಕ್ಕೆ ದೂರು ನೀಡಿರುವ ಬಿಜೆಪಿ, ಬಡವರು ಹಾಗೂ ಮಹಿಳೆಯರ ಪರವಾದ ಯೋಜನೆ ನಿಲ್ಲಿಸುವ ಷಡ್ಯಂತ್ರ ರೂಪಿಸಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ದೂರಿದರು.

ನೀತಿ ಸಂಹಿತೆ ಮುಗಿಯುವವರೆಗೂ 'ಗೃಹಲಕ್ಷ್ಮಿ' ಹಾಗೂ 'ಯುವನಿಧಿ' ಅನುದಾನ ಬಿಡುಗಡೆ ಮಾಡದಂತೆ ದಾವಣಗೆರೆಯ ಬಿಜೆಪಿ ಯುವ ಮುಖಂಡ ಗೌತಮ್ ಜೈನ್ ಚುನಾವಣಾ ಆಯೋಗಕ್ಕೆ ದೂರು ನೀಡಿದ್ದರು. ಇದರ ಆಧಾರದ ಮೇರೆಗೆ ಆಯೋಗ ಸರ್ಕಾರಕ್ಕೆ ಬರೆದಿರುವ ಪತ್ರವನ್ನು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ದೂರು ನೀಡಿರುವ ಕ್ರಮದಿಂದ ಬಿಜೆಪಿಯ ಮುಖವಾಡ ಕಳಚಿದೆ. ಬಿಜೆಪಿಯವರ ನಡೆ ಮತ್ತು ಆಲೋಚನೆ ಖಂಡನೀಯ' ಎಂದು ಟೀಕಿಸಿದರು.

> **ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಬಗ್ಗೆ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಆಡಿರುವ ಮಾತುಗಳು ಖಂಡನೀಯ. ಕೂಡಲೇ ಅವರು ಕ್ಷಮೆಯಾಚಿಸಬೇಕು**
> **ಡಿ.ಕೆ.ಶಿವಕುಮಾರ್,** ಉಪ ಮುಖ್ಯಮಂತ್ರಿ

'ಗ್ಯಾರಂಟಿ ಯೋಜನೆ ಉಪ ಚುನಾವಣೆಗೆ ಘೋಷಿಸಿದ ಕಾರ್ಯಕ್ರಮವಲ್ಲ. ಈ ಯೋಜನೆಗಳಿಗೆ ಈವರೆಗೆ ₹ 1.25 ಲಕ್ಷ ಕೋಟಿ ವ್ಯಯಿಸಲಾಗಿದೆ ಎಂಬುದಾಗಿ ರಾಜ್ಯ ಸರ್ಕಾರ ಆಯೋಗಕ್ಕೆ ಉತ್ತರ ನೀಡಿದೆ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯೆ ನೀಡಿದರು.

'ಕಳೆದ ತಿಂಗಳವರೆಗೆ ಗೃಹಲಕ್ಷ್ಮಿ ಯೋಜನೆ ಕಂತು ಬಿಡುಗಡೆ ಮಾಡಲಾಗಿದೆ. ಗ್ಯಾರಂಟಿ ಯೋಜನೆ ನಿಂತು ಹೋಗಲಿದೆ ಎಂಬ ಚಿಂತೆ ಬೇಡ. ಜನರಲ್ಲಿ ಅನಗತ್ಯ ಆತಂಕ ಸೃಷ್ಟಿಸುತ್ತಿರುವವರು ಈ ಚುನಾವಣೆಯಲ್ಲಿ ಗೆಲ್ಲಲ್ಲ' ಎಂದರು.

'ಇಂಧನ, ಎಲ್‌ಪಿಜಿ ಹಂಚಿಕೆಯಲ್ಲಿ ತಾರತಮ್ಯ'

'ಇಂಧನ ಮತ್ತು ಎಲ್‌ಪಿಜಿ ಸಿಲಿಂಡರ್ ಹಂಚಿಕೆಯಲ್ಲಿ ಕೇಂದ್ರ ಸರ್ಕಾರವು ತಾರತಮ್ಯ ಮಾಡುತ್ತಿದೆ' ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್. ಮುನಿಯಪ್ಪ ಆರೋಪಿಸಿದರು.

'ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳಿಗೆ ನೀಡುವಷ್ಟು ಆದ್ಯತೆಯನ್ನು ಕರ್ನಾಟಕಕ್ಕೆ ಕೊಟ್ಟಿಲ್ಲ. ಈ ಕುರಿತು ರಾಜ್ಯ ಸರ್ಕಾರವು ಎರಡು ಬಾರಿ ಪತ್ರ ಬರೆದರೂ ಸರಿಯಾಗಿ ಸ್ಪಂದಿಸಿಲ್ಲ' ಎಂದು ಅವರು ದೂರಿದರು.

ಬಂಗಾಳ: 91 ಲಕ್ಷ ಹೆಸರಿಗೆ ಕೊಕ್

ಚುನಾವಣೆಗೆ ದಿನಗಣನೆ ನಡೆಯುತ್ತಿರುವಾಗಲೇ ಹೊರಬಿದ್ದ ಅಂಕಿ ಅಂಶ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಬಳಿಕ ಸುಮಾರು 91 ಲಕ್ಷ ಮತದಾರರ ಹೆಸರನ್ನು ಪಟ್ಟಿಯಿಂದ ತೆಗೆದುಹಾಕಲಾಗಿದೆ ಎಂದು ಚುನಾವಣಾ ಆಯೋಗದ ಅಂಕಿಅಂಶಗಳು ತಿಳಿಸಿವೆ. ರಾಜ್ಯದಲ್ಲಿ ವಿಧಾನಸಭೆ ಚುನಾವಣೆಗೆ ದಿನಗಣನೆ ನಡೆಯುತ್ತಿರುವಾಗಲೇ ಈ ಮಾಹಿತಿ ಹೊರಬಿದ್ದಿದೆ.

ಪುನರ್‌ಪರಿಶೀಲನೆ ನಂತರದ ಪರಿಷ್ಕೃತ ಮತದಾರರ ಪಟ್ಟಿಯನ್ನು ಆಯೋಗವು ಇನ್ನಷ್ಟೇ ಪ್ರಕಟಿಸಬೇಕಿದೆ.

ಲಭ್ಯವಿರುವ ಅಂಕಿಅಂಶಗಳ ಪ್ರಕಾರ, ರಾಜ್ಯದಲ್ಲಿ ಕಳೆದ ವರ್ಷ ಅಕ್ಟೋಬರ್ ಅಂತ್ಯದವರೆಗೆ ಗುರುತಿಸಲಾಗಿದ್ದ ಒಟ್ಟು 7.66 ಕೋಟಿ ಮತದಾರರ ಪೈಕಿ ಶೇ 11.85ರಷ್ಟು ಹೆಸರುಗಳನ್ನು ಪಟ್ಟಿಯಿಂದ ಅಳಿಸಲಾಗಿದೆ. ಎಸ್‌ಐಆರ್ ಆರಂಭವಾದಾಗಿನಿಂದ ಈವರೆಗೆ ಒಟ್ಟು 90.83 ಲಕ್ಷ ಮತದಾರರ ಹೆಸರನ್ನು ಪಟ್ಟಿಯಿಂದ ಕೈಬಿಡಲಾಗಿದೆ.

ನ್ಯಾಯಾಂಗ ಅಧಿಕಾರಿಗಳು ನಡೆಸಿದ ಪರಿಶೀಲನೆ ಬಳಿಕ ವಿಚಾರಣೆ ಹಂತದಲ್ಲಿದ್ದ 60.6 ಲಕ್ಷ ಮತದಾರರ ಪೈಕಿ ಸುಮಾರು 27.16 ಲಕ್ಷ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕಲಾಗಿದೆ ಮತ್ತು 32.68 ಲಕ್ಷ ಹೆಸರುಗಳನ್ನು ಪಟ್ಟಿಯಲ್ಲಿಯೇ ಉಳಿಸಿಕೊಳ್ಳಲಾಗಿದೆ ಎಂದು ಆಯೋಗ ತಿಳಿಸಿದೆ.

ಮುಸ್ಲಿಂ ಮತ್ತು ಮತುವಾ ಸಮುದಾಯದ ಜನಸಂಖ್ಯೆ ಹೆಚ್ಚಿರುವ ಜಿಲ್ಲೆಗಳಲ್ಲಿ ಗರಿಷ್ಠ ಸಂಖ್ಯೆಯಲ್ಲಿ ಮತದಾರರ ಹೆಸರನ್ನು ಕೈಬಿಡಲಾಗಿದೆ. ಮುರ್ಷಿದಾಬಾದ್‌ನಲ್ಲಿ ವಿಚಾರಣೆ ಹಂತದಲ್ಲಿದ್ದ 11.01 ಲಕ್ಷ ಮತದಾರರ ಪೈಕಿ 4.55 ಲಕ್ಷ ಹೆಸರನ್ನು ಅಳಿಸಿಹಾಕಲಾಗಿದೆ. ಉತ್ತರ 24 ಪರಗಣ ಜಿಲ್ಲೆಯಲ್ಲಿ 3.5 ಲಕ್ಷ ಮತ್ತು ಮಾಲ್ಡಾದಲ್ಲಿ 2.39 ಲಕ್ಷ ಜನರ ಹೆಸರನ್ನು ಕೈಬಿಡಲಾಗಿದೆ.

ಫೆಬ್ರುವರಿ 28ರಂದು ಆಯೋಗವು ಬಿಡುಗಡೆ ಮಾಡಿದ ಪಟ್ಟಿಯಲ್ಲಿ, ರಾಜ್ಯದಲ್ಲಿ 63.66 ಲಕ್ಷ ಹೆಸರುಗಳನ್ನು ಕೈಬಿಡಲಾಗಿತ್ತು.ಮತದಾರರ ಸಂಖ್ಯೆ 7.66 ಕೋಟಿಯಿಂದ 7.04 ಕೋಟಿಗೆ ಇಳಿಕೆಯಾಗಿತ್ತು. 'ವಿಚಾರಣೆ ಹಂತದಲ್ಲಿದ್ದ' 60.06 ಲಕ್ಷ ಮತದಾರರ ಹೆಸರುಗಳನ್ನು 7.04 ಕೋಟಿ ಮತದಾರರಿರುವ ಪಟ್ಟಿಯಲ್ಲಿಯೇ ಸೇರಿಸಲಾಗಿತ್ತು.

'ಮತದಾರರ ಪಟ್ಟಿಯ ಪರಿಷ್ಕರಣೆ ಪ್ರಕ್ರಿಯೆಯನ್ನು ಹಂತ ಹಂತವಾಗಿ ಮತ್ತು ಪಾರದರ್ಶಕವಾಗಿ ನಡೆಸಲಾಗಿದೆ. ಜಿಲ್ಲಾವಾರು ಅಂಕಿಅಂಶಗಳನ್ನು ಪ್ರಕಟಿಸಲಾಗಿದೆ' ಎಂದು ಚುನಾವಣಾ ಆಯೋಗದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ಹಂತದಲ್ಲಿ ಮತದಾರರ ಹೊಸ ಸೇರ್ಪಡೆಯು ಕಾನೂನು ನಿಬಂಧನೆ ಮತ್ತು ಸಕ್ಷಮ ಅಧಿಕಾರಿಗಳ ನಿರ್ದೇಶನಗಳಿಗೆ ಒಳಪಟ್ಟಿರುತ್ತದೆ ಎಂದು ಅವರು ತಿಳಿಸಿದ್ದಾರೆ.

'ಇ-ಸಹಿ ಸೇರಿದಂತೆ ಕೆಲವು ತಾಂತ್ರಿಕ ಪ್ರಕ್ರಿಯೆಗಳು ಬಾಕಿ ಇರುವುದರಿಂದ ಅಂತಿಮ ಸಂಖ್ಯೆಯಲ್ಲಿ ಅಲ್ಪ ಬದಲಾವಣೆಗಳಾಗಬಹುದು. ಸದ್ಯಕ್ಕೆ ಮತದಾರರ ಪಟ್ಟಿಗೆ ಯಾವುದೇ ಹೊಸ ಸೇರ್ಪಡೆ ಇರುವುದಿಲ್ಲ' ಎಂದೂ ಅವರು ಸ್ಪಷ್ಟಪಡಿಸಿದ್ದಾರೆ.

ಇನ್ನು ಮುಂದೆ ಯಾವುದೇ ಬದಲಾವಣೆಗಳಿದ್ದರೂ ಅದು ಸುಪ್ರೀಂ ಕೋರ್ಟ್ ನೀಡುವ ಹೊಸ ನಿರ್ದೇಶನಗಳ ಮೇಲೆ ಅವಲಂಬಿತವಾಗಿರುತ್ತದೆ. ಪಶ್ಚಿಮ ಬಂಗಾಳ ಎಸ್‌ಐಆರ್‌ಗೆ ಸಂಬಂಧಿಸಿದಂತೆ ಏಪ್ರಿಲ್ 13ರಂದು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ನಡೆಯಲಿದೆ.

ಮತುವಾ, ಅಲ್ಪಸಂಖ್ಯಾತರ ಗುರಿ: ಮಮತಾ ಬ್ಯಾನರ್ಜಿ

ಕೋಲ್ಕತ್ತ: ಮತುವಾ ಮತ್ತು ಅಲ್ಪಸಂಖ್ಯಾತ ಸಮುದಾಯದ ಜನರ ಹೆಸರುಗಳನ್ನೇ ಹೆಚ್ಚಾಗಿ ಮತದಾರರ ಪಟ್ಟಿಯಿಂದ ಅಳಿಸಿಹಾಕಲಾಗಿದೆ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮಂಗಳವಾರ ಆರೋಪಿಸಿದರು.

ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, 'ಮತದಾರರ ಪಟ್ಟಿಯಿಂದ ಹೊರಗಿಟ್ಟ ಜನರ ಪರವಾಗಿ ಟಿಎಂಸಿ ನಿಲ್ಲಲಿದೆ' ಎಂದು ಭರವಸೆ ನೀಡಿದರು.

'ಸುಪ್ರೀಂ ಕೋರ್ಟ್ ಮಧ್ಯಪ್ರವೇಶದ ಬಳಿಕ ವಿಚಾರಣೆ ಹಂತದಲ್ಲಿದ್ದ 60 ಲಕ್ಷ ಪ್ರಕರಣಗಳ ಪೈಕಿ 32 ಲಕ್ಷ ಹೆಸರುಗಳನ್ನು ಸೇರ್ಪಡೆ ಮಾಡಲಾಗಿದೆ. ವಿಶೇಷ ಸಮುದಾಯಗಳನ್ನೇ ಗುರಿಯಾಗಿಸಿ ಮತದಾರರ ಪಟ್ಟಿಯಿಂದ ಹೆಸರನ್ನು ಅಳಿಸಲಾಗಿದೆ' ಎಂದು ದೂರಿದರು.

'ಈ ತಾರತಮ್ಯ ಏಕೆ? ಮತುವಾ, ಅಲ್ಪಸಂಖ್ಯಾತರನ್ನು ಹೊರಗಿಟ್ಟಿರುವುದು ಏಕೆ? ಜನರಿಗೆ ಇದೆಲ್ಲಾ ಅರ್ಥವಾಗುವುದಿಲ್ಲ ಎಂದು ತಿಳಿದಿದ್ದೀರಾ' ಎಂದು ಪ್ರಶ್ನಿಸಿದ್ದಾರೆ.

> **'ನುಸುಳುಕೋರರ ಮತಬ್ಯಾಂಕ್' ಅನ್ನು ಎಸ್‌ಐಆರ್ ಬಹಿರಂಗಗೊಳಿಸುತ್ತಿದೆ ಎಂದು ಟಿಎಂಸಿ ಆತಂಕಗೊಂಡಿದೆ. ನೈಜ ಮತದಾರರು ಫಾರ್ಮ್ 6 ಸಲ್ಲಿಸಿ, ಅರ್ಜಿ ಸಲ್ಲಿಸಬಹುದು. ಒಳನುಸುಳಿರುವ ಬಾಂಗ್ಲಾದೇಶದ ಮುಸ್ಲಿಮರು ಇನ್ನೂ ಏಕೆ ರಾಜ್ಯದ ಮತದಾರರ ಪಟ್ಟಿಯಲ್ಲಿ ಇರಬೇಕು?**
> **ಸುವೇಂದು ಅಧಿಕಾರಿ,** ವಿರೋಧ ಪಕ್ಷದ ನಾಯಕ

90.83 ಲಕ್ಷ	ಪಟ್ಟಿಯಿಂದ ಕೈಬಿಟ್ಟ ಮತದಾರರ ಸಂಖ್ಯೆ
63.66 ಲಕ್ಷ	ಫೆ.28ರಂದು ಬಿಡುಗಡೆ ಮಾಡಿದ ಪಟ್ಟಿಯಲ್ಲಿ ಅಳಿಸಲಾದ ಹೆಸರುಗಳು
60.06 ಲಕ್ಷ	ವಿಚಾರಣೆ ಹಂತದಲ್ಲಿದ್ದ ಮತದಾರರು
32.68 ಲಕ್ಷ	ವಿಚಾರಣೆ ಹಂತದಿಂದ ಮತದಾರರ ಪಟ್ಟಿಗೆ ಸೇರ್ಪಡೆಯಾದವರ ಸಂಖ್ಯೆ
27.16 ಲಕ್ಷ	ಪಟ್ಟಿಯಿಂದ ಕೈಬಿಟ್ಟವರಲ್ಲಿ ವಿಚಾರಣೆ ಹಂತದಲ್ಲಿ ಇದ್ದವರ ಸಂಖ್ಯೆ

22 ರಾಜ್ಯಗಳಲ್ಲಿ ಅಂತಿಮ ಹಂತದ ಎಸ್‌ಐಆರ್ ಜಾರಿಗೆ ಸಿದ್ಧತೆ

ನವದೆಹಲಿ (ಪಿಟಿಐ): ಈ ತಿಂಗಳು ನಡೆಯುವ ಐದು ವಿಧಾನಸಭಾ ಚುನಾವಣೆಗಳ ಬಳಿಕ, ಚುನಾವಣಾ ಆಯೋಗವು ದೆಹಲಿ ಸೇರಿದಂತೆ ಉಳಿದ 22 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ಮೂರನೇ ಮತ್ತು ಅಂತಿಮ ಹಂತದ ಪ್ರಕ್ರಿಯೆಯನ್ನು ಜಾರಿಗೊಳಿಸುವ ಸಾಧ್ಯತೆ ಇದೆ.

ಕೇರಳ, ಅಸ್ಸಾಂ, ಪುದುಚೇರಿ, ತಮಿಳುನಾಡು ಮತ್ತು ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಗಳು ನಡೆಯುತ್ತಿದ್ದು, ಮೇ 4ರಂದು ಮತ ಎಣಿಕೆ ನಡೆಯಲಿದೆ.

ಚುನಾವಣೆಗಳು ಏಪ್ರಿಲ್ 29ರಂದು ಮುಗಿಯಲಿದ್ದು, ಆನಂತರ ಎಸ್‌ಐಆರ್ ಜಾರಿಗೆ ಬರಬಹುದು. ಫಲಿತಾಂಶ ಪ್ರಕಟಗೊಂಡ ಬಳಿಕ, ದೊಡ್ಡ ಮಟ್ಟದಲ್ಲಿ ಎಸ್‌ಐಆರ್ ಪ್ರಕ್ರಿಯೆ ಪ್ರಾರಂಭಿಸುವ ಸಾಧ್ಯತೆಯೂ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈವರೆಗೆ 10 ರಾಜ್ಯಗಳು ಮತ್ತು ಮೂರು ಕೇಂದ್ರಾಡಳಿತ ಪ್ರದೇಶಗಳಲ್ಲಿ ಎಸ್‌ಐಆರ್ ನಡೆಸಲಾಗಿದೆ. ಅಸ್ಸಾಂನಲ್ಲಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ನಡೆಸಲಾಗಿದೆ.

ಉತ್ತರ ಪ್ರದೇಶ ಹೊರತುಪಡಿಸಿ, ಎಸ್‌ಐಆರ್ ಪ್ರಕ್ರಿಯೆ ನಡೆಸಿದ್ದ ರಾಜ್ಯಗಳಲ್ಲಿ ಅಂತಿಮ ಮತದಾರರ ಪಟ್ಟಿಗಳನ್ನು ಪ್ರಕಟಿಸಲಾಗಿದೆ.

ಸುಮಾರು 99 ಕೋಟಿ ಮತದಾರರ ಪೈಕಿ 60 ಕೋಟಿ ಜನರನ್ನು ಎಸ್‌ಐಆರ್ ಅಭಿಯಾನದಲ್ಲಿ ಒಳಗೊಳ್ಳುವಂತೆ ಮಾಡಲಾಗಿದೆ. ಇನ್ನುಳಿದ 39 ಕೋಟಿ ಮತದಾರರು 17 ರಾಜ್ಯಗಳು ಮತ್ತು ಐದು ಕೇಂದ್ರಾಡಳಿತ ಪ್ರದೇಶಗಳಲ್ಲಿ ಹಮ್ಮಿಕೊಳ್ಳುವ ಉದ್ದೇಶಿತ ಅಭಿಯಾನದಲ್ಲಿ ಒಳಗೊಳ್ಳಲಿದ್ದಾರೆ.

ಬಿಹಾರ, ತಮಿಳುನಾಡು ಮತ್ತು ಪಶ್ಚಿಮ ಬಂಗಾಳದ ರಾಜಕೀಯ ಪಕ್ಷಗಳು ಎಸ್‌ಐಆರ್ ಪ್ರಕ್ರಿಯೆಯನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದವು. ಇತ್ತೀಚೆಗೆ, ತೃಣಮೂಲ ಕಾಂಗ್ರೆಸ್ ಅಧ್ಯಕ್ಷೆ ಮತ್ತು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ತಮ್ಮ ರಾಜ್ಯದಲ್ಲಿ ನಡೆಯುತ್ತಿರುವ ಎಸ್‌ಐಆರ್ ವಿರುದ್ಧ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಪೀಠದ ಮುಂದೆ ಖುದ್ದಾಗಿ ವಾದ ಮಂಡಿಸಿದ್ದರು.

ಬಿಹಾರದಲ್ಲಿ ಎಸ್‌ಐಆರ್ ಪ್ರಕ್ರಿಯೆಗೆ ಚುನಾವಣಾ ಆಯೋಗವು ಸಿದ್ಧತೆ ನಡೆಸುತ್ತಿದ್ದಾಗ, ಬಾಂಗ್ಲಾದೇಶ, ನೇಪಾಳ ಮತ್ತು ಮ್ಯಾನ್ಮಾರ್‌ನ ಹಲವು ನಾಗರಿಕರ ಹೆಸರು ಮತದಾರರ ಪಟ್ಟಿಯಲ್ಲಿರುವುದನ್ನು ಸ್ಥಳೀಯ ಅಧಿಕಾರಿಗಳು ಪತ್ತೆಹಚ್ಚಿರುವುದಾಗಿ ಆಯೋಗದ ಅಧಿಕಾರಿಗಳು ತಿಳಿಸಿದ್ದರು. ಆದರೆ, ಮತದಾನಕ್ಕೆ ಅರ್ಹರಲ್ಲದ ಅಂತಹ ವ್ಯಕ್ತಿಗಳ ಸಂಖ್ಯೆಯನ್ನಾಗಲಿ ಅಥವಾ ಯಾವುದೇ ಸಾಕ್ಷ್ಯಗಳನ್ನಾಗಲಿ ಚುನಾವಣಾ ಆಯೋಗವು ಹಂಚಿಕೊಂಡಿಲ್ಲ.

'ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳ ಪರವಿಲ್ಲದ ಮತದಾರರ ಹೆಸರನ್ನು ಪಟ್ಟಿಯಿಂದ ತೆಗೆಯಲು ಎಸ್‌ಐಆರ್ ಪ್ರಕ್ರಿಯೆ ನಡೆಸಲಾಗುತ್ತಿದೆ' ಎಂದು ವಿರೋಧ ಪಕ್ಷಗಳು ಚುನಾವಣಾ ಆಯೋಗದ ವಿರುದ್ಧ ಆರೋಪಿಸಿದ್ದವು.

ವಿಜಯ್ ಹೆಸರಿನ ನಾಲ್ವರು ಕಣಕ್ಕೆ

ಪ್ರಜಾವಾಣಿ ವಾರ್ತೆ

ಚೆನ್ನೈ: ಟಿವಿಕೆ ಮುಖ್ಯಸ್ಥ, ನಟ ವಿಜಯ್ ಪ್ರತಿಸ್ಪರ್ಧಿಯಾಗಿ ಅವರದ್ದೇ ಹೆಸರಿನ ನಾಲ್ವರು ಸ್ವತಂತ್ರ ಅಭ್ಯರ್ಥಿಗಳು ಪೆರಂಬೂರು ಕ್ಷೇತ್ರದಲ್ಲಿ ಕಣಕ್ಕಿಳಿಯುವ ಮೂಲಕ ಅವರನ್ನು ಇಕ್ಕಟ್ಟಿಗೆ ಸಿಲುಕಿಸಲು ಮುಂದಾಗಿದ್ದಾರೆ.

ವಿಜಯ್

ವಿಜಯ್ ಅವರ ಪೂರ್ಣ ಹೆಸರು ಸಿ. ಜೋಸೆಫ್ ವಿಜಯ್ ಆಗಿದ್ದು, ವಿಜಯ್ ಮತ್ತು ಜೋಸೆಫ್ ಹೆಸರಿನ ನಾಲ್ವರು ಅವರಿಗೆ ಪ್ರತಿಸ್ಪರ್ಧಿಗಳಾಗಿರಲಿದ್ದಾರೆ.

ಗೆಲ್ಲುವ ಸಂಭಾವ್ಯ ಅಭ್ಯರ್ಥಿಯ ಹೆಸರನ್ನು ಹೊಂದಿರುವ ಅಭ್ಯರ್ಥಿಗಳನ್ನು ಕಣಕ್ಕಿಳಿಸಿ ಮತದಾರರನ್ನು ಗೊಂದಲಕ್ಕೀಡು ಮಾಡುವುದು ರಾಜಕೀಯದ ಹಳೆಯ ತಂತ್ರವಾಗಿದೆ. ಆದರೆ ಈ ಬಾರಿ ಚುನಾವಣಾ ಆಯೋಗವು ಎಲೆಕ್ಟ್ರಾನಿಕ್ ಮತಯಂತ್ರದಲ್ಲಿ ಅಭ್ಯರ್ಥಿಯ ಭಾವಚಿತ್ರವನ್ನು ಅಳವಡಿಸಲು ಮುಂದಾಗಿರುವುದರಿಂದ ಈ ತಂತ್ರ ಫಲಿಸುವ ಸಾಧ್ಯತೆ ಕಡಿಮೆ. ಟಿವಿಕೆ ಪಕ್ಷದ ಚಿಹ್ನೆಯಾದ ಸೀಟಿ(ವಿಸಿಲ್)ಯು ರಾಜ್ಯದಲ್ಲಿ ಜನಪ್ರಿಯವಾಗಿದೆ.

ಬಹಿರಂಗ ಪ್ರಚಾರ ಅಂತ್ಯ...

ಒಂದನೇ ಪುಟದಿಂದ...

ಬೇರೆ, ಬೇರೆ ಜಿಲ್ಲೆಗಳ ಪಕ್ಷದ ಪದಾಧಿಕಾರಿಗಳು ಪ್ರಚಾರದಲ್ಲಿ ಪಾಲ್ಗೊಂಡು ಚುನಾವಣೆ ಪ್ರಚಾರದ ಕಾವು ಹೆಚ್ಚಿಸಿದ್ದರು.

ಬಹಿರಂಗ ಪ್ರಚಾರ ಅಂತ್ಯಗೊಳ್ಳುವ ವೇಳೆಗೆ ಕ್ಷೇತ್ರದಲ್ಲಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರಾದ ಶಿವಾನಂದ ಪಾಟೀಲ, ಸತೀಶ ಜಾರಕಿಹೊಳಿ, ಮಾಜಿ ಸಚಿವ ಬಿ. ಶ್ರೀರಾಮುಲು, ಎನ್. ಮಹೇಶ ಸೇರಿ ಮುಖಂಡರ ದಂಡೇ ಕ್ಷೇತ್ರದಿಂದ ಹೊರನಡೆಯಿತು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಸೇರಿ ಸಚಿವ ಸಂಪುಟದ ಅರ್ಧದಷ್ಟು ಸಚಿವರು ಪ್ರಚಾರದಲ್ಲಿ ಭಾಗಿಯಾದ್ದರು. ಸುತ್ತಮುತ್ತಲಿನ ಜಿಲ್ಲೆಗಳ ಶಾಸಕರ ದಂಡೇ ಬೀಡು ಬಿಟ್ಟಿತ್ತು.

ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರ ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ವಿ. ಸೋಮಣ್ಣ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ರಾಜ್ಯ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಸಂಸದರಾದ ಬಸವರಾಜ ಬೊಮ್ಮಾಯಿ, ಜಗದೀಶ ಶೆಟ್ಟರ್, ಗೋವಿಂದ ಕಾರಜೋಳ ಸೇರಿದಂತೆ ಹಲವರು ಭಾಗಿಯಾಗಿದ್ದರು.

ದಾವಣಗೆರೆ ದಕ್ಷಿಣ ವಿಧಾನಸಭಾ ಚುನಾವಣೆಯ ಬಹಿರಂಗ ಪ್ರಚಾರದ ಕೊನೇ ದಿನವಾದ ಮಂಗಳವಾರ ರೋಡ್ ಶೋ ನಡೆಸಿದ ತೆಲಂಗಾಣ ಸಚಿವ ಮೊಹಮ್ಮದ್ ಅಜರುದ್ದೀನ್ ಅವರು ಅಭಿಮಾನಿಯೊಬ್ಬರ ಬ್ಯಾಟ್ ಮೇಲೆ ಹಸ್ತಾಕ್ಷರ ಹಾಕಿದರು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ಅಭ್ಯರ್ಥಿ ಸಮರ್ಥ್, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇದ್ದಾರ – ಪ್ರಜಾವಾಣಿ ಚಿತ್ರ/ಸತೀಶ್ ಬಡಿಗೇರ

'ಖರ್ಗೆ ಹೇಳಿಕೆ: ಕೋಮು ಹಿಂಸೆಗೆ ಪ್ರಚೋದನೆ'

ನವದೆಹಲಿ (ಪಿಟಿಐ): 'ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಬಿಜೆಪಿ ಮತ್ತು ಆರ್‌ಎಸ್‌ಎಸ್ ಅನ್ನು ಸಮೀಕರಿಸಿ ಇವುಗಳು 'ವಿಷಕಾರಿ ಹಾವುಗಳು' ಎಂದಿದ್ದಾರೆ. ಇದು ಕೋಮು ಹಿಂಸೆಗೆ ಪ್ರಚೋದನೆ ನೀಡುವ ಹೇಳಿಕೆಯಾಗಿದೆ' ಎಂದು ವಿಶ್ವ ಹಿಂದೂ ಪರಿಷತ್ ಮಂಗಳವಾರ ಆರೋಪಿಸಿದೆ.

'ನಿಮ್ಮ ಮುಂದೆ ಆರ್‌ಎಸ್‌ಎಸ್ ಮತ್ತು ಬಿಜೆಪಿ ಸದಸ್ಯರು ಬಂದರೆ, ನೀವು ನಮಾಜ್ ಮಾಡುತ್ತಿದ್ದರೂ ಅದನ್ನು ಬಿಟ್ಟು ಇವರ ಮೇಲೆ ದಾಳಿ ನಡೆಸಬೇಕು ಎಂದು ಖರ್ಗೆ ಅವರು ಅಸ್ಸಾಂನಲ್ಲಿ ಪ್ರಚಾರ ಸಭೆಯೊಂದರಲ್ಲಿ ಹೇಳಿದ್ದಾರೆ. ಈ ಹೇಳಿಕೆಯು ನೇರಾನೇರಾ ಹಿಂಸೆಗೆ ಪ್ರಚೋದಿಸುತ್ತದೆ. ಹಿಂದೂ ಮತ್ತು ಮುಸ್ಲಿಮರಲ್ಲಿ ದ್ವೇಷ ಹರಡುತ್ತದೆ' ಎಂದು ವಿಎಚ್‌ಪಿ ಅಧ್ಯಕ್ಷ ಅಲೋಕ್ ಕುಮಾರ್ ಆರೋಪಿಸಿದರು.

'ಒಂದು ವೇಳೆ ನೀವು ಕೊಲ್ಲದಿದ್ದರೆ, ನೀವೇ ಹತ್ಯೆಯಾಗುತ್ತೀರಿ ಎಂದು ಖರ್ಗೆ ಹೇಳಿದ್ದಾರೆ. ಇವರ ಹೇಳಿಕೆಗೆ ಕುರಾನ್‌ನನ್ನು ಉಲ್ಲೇಖಿಸಿದ್ದಾರೆ. ಈ ಹೇಳಿಕೆ ಬಳಿಕ ಎಲ್ಲಾದರೂ ಹಿಂಸಾಚಾರವಾದರೆ, ಅದಕ್ಕೆ ಖರ್ಗೆ ಅವರೇ ನೇರ ಹೊಣೆ' ಎಂದೂ ಹೇಳಿದರು.

ದೂರು: ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಕೇಂದ್ರ ಸಚಿವ ಹರ್ಷ ಮಲ್ಹೋತ್ರಾ ನೇತೃತ್ವದಲ್ಲಿ ಬಿಜೆಪಿ ನಿಯೋಗವು ಪೊಲೀಸ್ ಕಮಿಷನರ್‌ಗೆ ದೂರು ನೀಡಿದೆ.

'ಉಪ ಚುನಾವಣೆ: ಸರ್ಕಾರ ಕಿತ್ತೊಗೆಯಲು ಮುನ್ನುಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಉಪಚುನಾವಣೆಯು ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆಯುವುದಕ್ಕೆ ಮುನ್ನುಡಿ ಹಾಡಲು ಜನರಿಗೆ ಸುವರ್ಣ ಅವಕಾಶ ಸಿಕ್ಕಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ದಾವಣಗೆರೆಯಲ್ಲಿ ಸಾಮಾನ್ಯ ವ್ಯಕ್ತಿಗೆ ಟಿಕೆಟ್ ನೀಡಿದ್ದೇವೆ. ಕಾಂಗ್ರೆಸ್ ಬಲಾಢ್ಯರಿಗೆ ಟಿಕೆಟ್ ನೀಡಿದೆ. ಕಾಂಗ್ರೆಸ್ ಎರಡೂ ಕಡೆ ವಂಶಾಡಳಿತಕ್ಕೆ ಅವಕಾಶ ನೀಡಿದೆ. ಆದ್ದರಿಂದ ಎರಡೂ ಕಡೆ ಬಿಜೆಪಿಗೆ ಗೆಲ್ಲುವ ಅವಕಾಶವಿದೆ. ಸರ್ಕಾರದ ಭ್ರಷ್ಟಾಚಾರ ಮತ್ತು ಗ್ಯಾರಂಟಿಗಳ ಅಸಮರ್ಪಕ ಜಾರಿಯಿಂದಾಗಿ ಜನವಿರೋಧಿ ಅಲೆ ಉಂಟಾಗಿದೆ. ಬಜೆಟ್ ಮಂಡನೆ ಬಳಿಕ ಎಲ್ಲದಕ್ಕೂ ತೆರಿಗೆ ಹೇರುವ ಕೆಲಸ ಮಾಡುತ್ತಿದ್ದಾರೆ. ರಾಜ್ಯದಲ್ಲಿ ಯುವ ಜನರು ಉದ್ಯೋಗವಿಲ್ಲದೆ ಬೀದಿಗಿಳಿದು ಹೋರಾಟ ಮಾಡುತ್ತಿದ್ದಾರೆ' ಎಂದು ಹೇಳಿದರು.

ಸಿದ್ದರಾಮಯ್ಯ ಈಗ ಹಿಂದುಳಿದ ನಾಯಕ ಅಲ್ಲ. ಅವರ ಬಟ್ಟೆ, ಶಾಲು, ಪೆನ್ನು ಮತ್ತು ಜೀವನ ಶೈಲಿ ಮುಂದುವರಿದವರಂತೆ ಇದೆ. ಆದರೆ, ಓಟಿಗೆ ಮಾತ್ರ ಹಿಂದುಳಿದವರುಬೇಕು. ಆದ್ದರಿಂದ ಇವರು ಹಿಂದುಳಿದ ವರ್ಗದ ಮುಂದುವರಿದ ನಾಯಕ ಎಂದು ಹೇಳಿದರು.

ಮಲ್ಲಿಕಾರ್ಜುನ ಖರ್ಗೆ ಅವರು ಬಿಜೆಪಿ ಮತ್ತು ಆರ್‌ಎಸ್‌ಎಸ್ ಅನ್ನು ಟೀಕಿಸಿದ್ದಾರೆ. ಬಾಂಬ್ ಇಡುವ ಭಯೋತ್ಪಾದಕರು ಇವರಿಗೆ ದೇವದೂತರಂತೆ ಕಾಣುತ್ತಾರೆ. ಈಗ ಎಲ್ಲ ರಾಜ್ಯಗಳಿಂದ ವಿಷದ ಹಾವುಗಳು ಮುಕ್ತವಾಗುತ್ತಿವೆ. ಇನ್ನು ಮೂರು ರಾಜ್ಯಗಳಲ್ಲಿರುವ ಹಾವುಗಳನ್ನು ಓಡಿಸಬೇಕಿದೆ. ಮಗನಿಂದ ಪ್ರೇರಣೆ ಪಡೆದ ಅವರು ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ ಎಂದು ಹರಿಹಾಯ್ದರು.

ರೇವಂತ್ ರೆಡ್ಡಿ ವಿರುದ್ಧ ಪಿಣರಾಯಿ ವಾಗ್ದಾಳಿ

ಕಣ್ಣೂರು (ಪಿಟಿಐ): ತೆಲಂಗಾಣ ಮುಖ್ಯಮಂತ್ರಿ ರೇವಂತ ರೆಡ್ಡಿ ಅವರ ವಿರುದ್ಧ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಮಂಗಳವಾರ ವಾಗ್ದಾಳಿ ನಡೆಸಿದರು.

ರೇವಂತ ರೆಡ್ಡಿ ಅವರ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಪಿಣರಾಯಿ ಅವರು, 'ಮುಖ್ಯಮಂತ್ರಿ ಅವರಿಗೆ ಮೂಲತಃ ಸನ್ನಡತೆ ಇರಬೇಕು. ಆನಂತರ ಅದು ಪಾಲನೆಯಾಗುತ್ತಿದೆಯೇ ಎಂದು ಪ್ರಶ್ನಿಸಬೇಕು' ಎಂದು ಹೇಳಿದರು. ಬಳಿಕ 'ಸರಿಯಾದ ಸಮಯದಲ್ಲಿ ಪ್ರತಿಕ್ರಿಯೆ ನೀಡುತ್ತೇನೆ' ಎಂದೂ ಹೇಳಿದರು.

ಪಿಣರಾಯಿ ವಿಜಯನ್

'ತೆಲಂಗಾಣ ಮುಖ್ಯಮಂತ್ರಿ ಅವರಿಗೆ ತಪ್ಪಾದ ಮಾಹಿತಿ ಲಭ್ಯವಾಗಿದೆ. ಅವರು ತಮ್ಮ ರಾಜ್ಯದ ದೌರ್ಬಲ್ಯವನ್ನು ಮರೆಮಾಚುವ ಪ್ರಯತ್ನದಲ್ಲಿ ಕೇರಳ ಮತ್ತು ಅದರ ಜನರನ್ನು ಅಣಕ ಮಾಡಿದ್ದಾರೆ' ಎಂದು ಆರೋಪಿಸಿದರು.

ಮಾಧ್ಯಮಗಳ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ರೇವಂತ್ ರೆಡ್ಡಿ ಅವರನ್ನು ಉಲ್ಲೇಖಿಸಿ ಮಲಯಾಳ ಭಾಷೆಯಲ್ಲಿ ಕೆಟ್ಟ ಪದವನ್ನು ಬಳಕೆ ಮಾಡಿದರು.

ಏಪ್ರಿಲ್ 1ರಂದು ತಿರುವನಂತಪುರನಲ್ಲಿ ನಡೆದ ಯುಡಿಎಫ್ ಚುನಾವಣಾ ರ‍್ಯಾಲಿ ವೇಳೆ ರೇವಂತ್ ಅವರು, 'ನೀ ಪೊ ಮೋನೆ ವಿಜಯ್' (ನೀನು ಹೋಗು ಮಗನೇ) ಎಂದು ಮಲಯಾಳದ 'ನರಸಿಂಹ' ಸಿನಿಮಾದ ಸಂಭಾಷಣೆಯನ್ನು ಉಲ್ಲೇಖಿಸಿ ಹೇಳಿದ್ದರು.

ಬಳಿಕ, 'ವಿಜಯನ್ ಅವರ ಸಮಯ ಮುಗಿದಿದೆ. ಯುಡಿಎಫ್ ಸಮಯ ಆರಂಭವಾಗಿದೆ' ಎಂದೂ ಹೇಳಿದ್ದರು.

ಕಲಬುರಗಿ, ಗದಗದಲ್ಲಿ ತಾಪಮಾನ ಹೆಚ್ಚಳ

ಬೆಂಗಳೂರು: ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಬುಧವಾರ ಗುಡುಗು ಸಹಿತ ಮಳೆ ಆಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕೋಲಾರ, ಚಿಕ್ಕಬಳ್ಳಾಪುರ, ಚಾಮರಾಜನಗರ ಜಿಲ್ಲೆಗಳಿಗೆ ಯೆಲ್ಲೊ ಅಲರ್ಟ್ ಘೋಷಿಸಲಾಗಿದೆ. ಬೆಂಗಳೂರು ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಹಲವು ಪ್ರದೇಶಗಳಲ್ಲಿ ಗಾಳಿ ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ.

ಬೆಂಗಳೂರು ನಗರ ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ತಾಪಮಾನ ಹೆಚ್ಚಾಗಿದೆ. ಕೆಲವೆಡೆ ಗರಿಷ್ಠ ಉಷ್ಣಾಂಶ 35 ಡಿಗ್ರಿ ಸೆಲ್ಸಿಯಸ್ ಆಸುಪಾಸಿನಲ್ಲಿದ್ದರೆ, ಕಲಬುರಗಿಯಲ್ಲಿ 37.22 ಡಿಗ್ರಿ ಸೆಲ್ಸಿಯಸ್ ತಲುಪಿದೆ. ಬೆಂಗಳೂರಿನಲ್ಲಿ 35.2, ಗದಗದಲ್ಲಿ 34, ಚಿತ್ರದುರ್ಗ 33, ಮಂಗಳೂರು 32 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ.

'ಈ ವರ್ಷ ತಾಪಮಾನ ಸಾಮಾನ್ಯವಾಗಿರಲಿದೆ. ಪ್ರಸ್ತುತ ಕಲಬುರಗಿ, ಗದಗ, ಬೆಂಗಳೂರಿನಲ್ಲಿ ಬಿಸಿಲು ಹೆಚ್ಚಾಗಿದೆ' ಎಂದು ಹವಾಮಾನ ತಜ್ಞ ಸಿ.ಎಸ್.ಪಾಟೀಲ ತಿಳಿಸಿದರು.

'ಬೇಸಿಗೆಯಲ್ಲಿ ಬೆಳಿಗ್ಗೆ 11ರಿಂದ ಸಂಜೆ 4ರವರೆಗೆ ಬಿಸಿಲಿನ ತೀವ್ರತೆ ಹೆಚ್ಚಿರುವ ಕಾರಣ, ನೀರನ್ನು ಆಗಾಗ ಕುಡಿಯಬೇಕು. ಸಡಿಲವಾದ ತೆಳ್ಳನೆ ಬಟ್ಟೆಯನ್ನು ಧರಿಸಬೇಕು. ತಂಪು ಪಾನೀಯ ಸೇವಿಸಬೇಕು' ಎಂದು ಸಲಹೆ ನೀಡಿದರು.

ಕಾವ್ಯಾನಂದ ಪುರಸ್ಕಾರಕ್ಕೆ ಕೃತಿಗಳ ಆಹ್ವಾನ

ಬೆಂಗಳೂರು: ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ್ 'ಕಾವ್ಯಾನಂದ ಪುರಸ್ಕಾರ'ಕ್ಕೆ ಕೃತಿಗಳನ್ನು ಆಹ್ವಾನಿಸಿದೆ.

2024 ಹಾಗೂ 2025ರಲ್ಲಿ ಪ್ರಕಟಗೊಂಡ ನಾಟಕ ಅಥವಾ ನಾಟಕದ ವಿಮರ್ಶೆಗೆ ಸಂಬಂಧಿಸಿದ ಕೃತಿಗಳನ್ನು ಪುರಸ್ಕಾರಕ್ಕೆ ಪರಿಗಣಿಸಲಾಗುತ್ತದೆ. ಈ ಪುರಸ್ಕಾರವು ₹50 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ.

ಆಸಕ್ತರು, ಕೃತಿಯ ಮೂರು ಪ್ರತಿಗಳನ್ನು ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ್, ಶ್ರೀಗಿರಿ, 4/5ಎ, ಅಲಿ ಅಸ್ಗರ್ ರಸ್ತೆ, ಬೆಂಗಳೂರು–560052 ಈ ವಿಳಾಸಕ್ಕೆ ಜೂನ್ 30ರೊಳಗೆ ಕಳುಹಿಸುವಂತೆ ಟ್ರಸ್ಟಿನ ಅಧ್ಯಕ್ಷೆ ವಿಜಯಾ ನಂದೀಶ್ವರ ತಿಳಿಸಿದ್ದಾರೆ. ಮಾಹಿತಿಗೆ: 080–22264361

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ
KUIDFC
(ಕರ್ನಾಟಕ ರಾಜ್ಯ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಗರಾಭಿವೃದ್ಧಿ ಭವನ, ಸಂ.22, 17 "ಎಫ್" ಕ್ರಾಸ್, ಹಳೆ ಮದ್ರಾಸ್ ರಸ್ತೆ, ಇಂದಿರಾನಗರ 2ನೇ ಹಂತ, ಬೆಂಗಳೂರು – 560 038.
ಅಂತರ್ಜಾಲ ವಿಳಾಸ: www.kuidfc.com ಇ–ಮೇಲ್ ವಿಳಾಸ: info@kuidfc.com

ಸಂ: ಕ.ನ.ಮೂಸೌ.ಅ.ಹ.ನಿ.ನಿ/ಆಡಳಿತ/ಹೆಚ್.ಕೆ.ಪಿ/ಟೆಂಡರ್/ಸಿಆರ್–291/2026–27 ದಿ: 04.04.2026

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಕೆಯುಐಡಿಎಫ್ ಸಿಯ **ಹೌಸ್ ಕೀಪಿಂಗ್, ಕಛೇರಿ ಅಟೆಂಡರ್ ಹಾಗೂ ಗಾರ್ಡನರ್ ಸೇವೆಯನ್ನು ಎರಡು ವರ್ಷದ ಅವಧಿಗೆ** ಪಡೆಯಲು ಅಧಿಕೃತ ಮಾನವ ಸಂಪನ್ಮೂಲ ಪೂರೈಸುವ ಸಂಸ್ಥೆಗಳಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ವಿವರಗಳು ವೆಬ್ ಸೈಟ್ ವಿಳಾಸ: **https://kppp.Karnataka.gov.in** ನಲ್ಲಿ ದಿನಾಂಕ: **08.04.2026 to 22.04.2026** ರ ಸಂಜೆ **5.30** ಗಂಟೆಯವರೆಗೂ ಲಭ್ಯವಿರುತ್ತದೆ. ಆಸಕ್ತ ಬಿಡ್ಡುದಾರರು ಇ–ಪ್ರೋಕ್ಯುರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರವೇ ಪ್ರಸ್ತಾವನೆಗಳನ್ನು ಸಲ್ಲಿಸಬಹುದಾಗಿದೆ. ಇದರ ಬಗ್ಗೆ ಮುಂದಿನ ಯಾವುದೇ ಪ್ರಕಟಣೆಗಳನ್ನು ಇ–ಪ್ರೋಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿದುಕೊಳ್ಳಬಹುದು.

ಸಹಿ/– ಪ್ರಧಾನ ವ್ಯವಸ್ಥಾಪಕರು (ಆಡಳಿತ)

DIPR/CP/MIA/75/2026-27

ಕರ್ನಾಟಕ ಸರ್ಕಾರ
ಶಾಲಾ ಶಿಕ್ಷಣ ಇಲಾಖೆ
ಆಯುಕ್ತರ ಕಛೇರಿ, ಕೆ.ಆರ್. ವೃತ್ತ, ನೃಪತುಂಗ ರಸ್ತೆ, ಬೆಂಗಳೂರು–560 001.ದೂರವಾಣಿ: 080–22291847

ಸಂಖ್ಯೆ : ಶಾಶಿಇ/2026–27/ಇಂಡ್0661 ದಿನಾಂಕ:06.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

2026–27 ನೇ ಸಾಲಿನ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಶೂ ಮತ್ತು ಸಾಕ್ಸ್‌ಗಳನ್ನು ವಿತರಿಸುವ ಸಂಬಂಧ ಅಲ್ಪಾವಧಿ ಟೆಂಡರ್ **(DPI/2026-27/IND0661)** ಅನ್ನು ಆಯುಕ್ತರು ಶಾಲಾ ಶಿಕ್ಷಣ ಇಲಾಖೆ ಬೆಂಗಳೂರು ರವರ ಕಛೇರಿಯಿಂದ ಸರಬರಾಜಿಗೆ ಕರ್ನಾಟಕ ಸರ್ಕಾರದ ಇ–ಪೋರ್ಟಲ್ ಪ್ಲಾಟ್‌ಫಾರಂ **https:/kppp.karnataka.gov.in** ಮುಖಾಂತರ ಆಹ್ವಾನಿಸಲಾಗಿದ್ದು, **ದಿನಾಂಕ:27.04.2026ರ ಸಂಜೆ 5.00 ಗಂಟೆಯೊಳಗೆ** ಇ–ಪೋರ್ಟಲ್‌ನಲ್ಲಿ ಅರ್ಜಿಯನ್ನು ಅಪ್‌ಲೋಡ್ ಮಾಡಬಹುದಾಗಿದೆ.
ವಿವರವಾದ ದಸ್ತಾವೇಜುಗಳನ್ನು ವೆಬ್‌ಸೈಟ್ **https:/kppp.karnataka.gov.in** ಮೂಲಕ ಡೌನ್‌ಲೋಡ್ ಮಾಡಿಕೊಂಡು ಇ–ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಬಹುದು.

ಸಹಿ/–
ನಿರ್ದೇಶಕರು (ಮೈನಾರಿಟಿ)
ಆಯುಕ್ತರ ಕಚೇರಿ, ಶಾಲಾ ಶಿಕ್ಷಣ ಇಲಾಖೆ

ವಾಸಾಸಂಇ/ವಾಪ್ರ/ಜೆಎ/76/2026–27

ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಕುಂದಾಪುರ ವಿಭಾಗ, ಕುಂದಾಪುರ
ದೂರವಾಣಿ: (ಕಛೇರಿ) 08254–230349 ಫ್ಯಾಕ್ಸ್: 232720
ಈ–ಮೇಲ್: kpurforest@yahoo.com, dcfknd@aranya.gov.in

ಸಂ. ಸ.ಅ.ಸಂ./ವಿವ–169/ಇ–ಟೆಂಡರು/2025–26 ದಿನಾಂಕ: 31–03–2026

ಸಂಕ್ಷೇಪ್ತ ಇ–ಟೆಂಡರ್ ಅಧಿಸೂಚನೆ

ಈ ಮೂಲಕ ಸಾರ್ವಜನಿಕರಿಗೆ/ಈ ವಿಭಾಗದ ನೋಂದಾಯಿತ ಅರಣ್ಯ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ, 2026–27ನೇ ಸಾಲಿನ ಮಳೆಗಾಲದಲ್ಲಿ ಕುಂದಾಪುರ ಉಪ ವಿಭಾಗದ ಅರಣ್ಯ ಪ್ರದೇಶಗಳಲ್ಲಿ ವಿವಿಧ ಯೋಜನೆಯಡಿ ನೆಡುತೋಪು ನಿರ್ಮಾಣ, ಪೋಷಣೆ ಹಾಗೂ ಇತ್ಯಾದಿ ಕೆಲಸಗಳಿಗೆ ಸಂಬಂಧಿಸಿದ ಈ ಕೆಳಗಿನ ಅರಣ್ಯ ಕಾಮಗಾರಿಗಳನ್ನು ನಿರ್ವಹಿಸಲು ಅನುಭವ ಹೊಂದಿರುವವರು ಅಥವಾ ಅಂಗೀಕೃತ ಸಂಸ್ಥೆಗಳಿಂದ ಮಾತ್ರ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ ಇ–ಟೆಂಡರನ್ನು ದಿನಾಂಕ: 15–04–2026 ರಂದು ಸಂಜೆ 4.00 ರವರೆಗೆ ಆಹ್ವಾನಿಸಲಾಗಿದೆ.
ಒಂದು ವೇಳೆ ಸದ್ರಿ ದಿನಾಂಕದಂದು ಯಾವುದೇ ಟೆಂಡರ್ ಬಾರದೇ ಇದ್ದಲ್ಲಿ, ಇದೇ ಕಾಮಗಾರಿಗಳಿಗೆ ಮತ್ತು ಈ ಟೆಂಡರ್ ಅಧಿಸೂಚನೆಯಲ್ಲಿ ಇರುವ ಎಲ್ಲಾ ಷರತ್ತುಗಳನ್ನು ಒಳಗೊಂಡಂತೆ ಮರು ಟೆಂಡರನ್ನು ದಿನಾಂಕ: 02–05–2026 ರಂದು ಸಂಜೆ 4.00 ವರೆಗೆ ನಡೆಸಲಾಗುವುದು.
ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ತಾಂತ್ರಿಕ ಸಹಾಯಕರು, ಕುಂದಾಪುರ ವಿಭಾಗ, ಕುಂದಾಪುರ. ದೂರವಾಣಿ ಸಂ: 08254: 230349 ಫ್ಯಾಕ್ಸ್: 232720

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ತಾಂತ್ರಿಕ ಸಹಾಯಕರು, ಕುಂದಾಪುರ ವಿಭಾಗ, ಕುಂದಾಪುರ.

ವಾಸಾಇ/ಸನಿಉ/ಕೆಎಸ್‌ಎಂಸಿಎ/13/26–27 ದಿ: 07–04.2026

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
"ಸಂಪರ್ಕ ಸೌಧ", ಸರ್ವೆ ನಂ.8, ಡಾ॥ ರಾಜ್ ಕುಮಾರ್ ರಸ್ತೆ, ರಾಜಾಜಿನಗರ 1ನೇ ಹಂತ, ಬೆಂಗಳೂರು–560010. ಫೋನ್ ನಂ. 080–22024000.
ಇ–ಮೇಲ್: cekrdcl@gmail.com, ವೆಬ್‌ಸೈಟ್: http://www.krdcl.in

ಸಂಖ್ಯೆ: KRDCL/IFB/2026-27/01 ದಿನಾಂಕ: 01.04.2026

ಅಲ್ಪಾವಧಿ ಟೆಂಡರ್ ಅಧಿಸೂಚನೆ (ಕೆಪಿಪಿ ಪೋರ್ಟಲ್)

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ [ಕೆಆರ್‌ಡಿಸಿಎಲ್] ಸಂಸ್ಥೆಗೆ, ವಾಣಿಜ್ಯ ಪ್ರಯಾಣಿಕ ವಾಹನಗಳು (ಕಾರ್‌ಗಳು) – ಡೀಸೆಲ್/ ಪೆಟ್ರೋಲ್ ಚಾಲಿತ ಸ್ವಿಫ್ಟ್ ಡಿಜೈರ್/ ಟೊಯೋಟಾ ಇಟಿಯೋಸ್/ ಟೊಯೋಟಾ ಇನ್ನೋವಾ ಅಥವಾ ಸಮಾನ ಸಾಮರ್ಥ್ಯದ ವಾಹನಗಳನ್ನು, ನಿಗಮವು ಬಯಸಿದ ಎಲ್ಲಾ ಮಾನದಂಡಗಳಿಗೆ ಅನುಗುಣವಾಗಿ ಒದಗಿಸುವಲ್ಲಿ ಅನುಭವ ಹೊಂದಿರುವ ಪ್ರತಿಷ್ಠಿತ ಕಂಪನಿಗಳು/ ಏಜೆನ್ಸಿಗಳಿಂದ, ಒಂದು (01) ವರ್ಷದ ಅವಧಿಗೆ ಕೆಳಗೆ ವಿವರಿಸಿರುವಂತೆ ದ್ವಿ–ಲಕೋಟೆ (Two Cover System) ಪದ್ಧತಿಯಲ್ಲಿ ಆಫರ್‌ಗಳನ್ನು ಆಹ್ವಾನಿಸಲಾಗುತ್ತದೆ.
ಕಾಮಗಾರಿ ವಿವರ: **ಕರ್ನಾಟಕ ರಾಜ್ಯದಲ್ಲಿ ಒಂದು (01) ವರ್ಷಗಳ ಅವಧಿಗೆ ಬಾಡಿಗೆ ಆಧಾರದ ಮೇಲೆ KRDCL ಗೆ ವಾಣಿಜ್ಯ ಪ್ರಯಾಣಿಕ (CARS) ವಾಹನಗಳನ್ನು ಒದಗಿಸುವುದು**. ಇಎಂಡಿ **ರೂ. 2,25,000.00**. ಸೇವೆಯ ಅವಧಿ: **ಒಂದು (01) ವರ್ಷ**.
1. ಆಸಕ್ತ ಅರ್ಜಿದಾರರು ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್ **www.kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಬಿಡ್‌ಗಳು ಮತ್ತು ಇಎಂಡಿಯನ್ನು (ಎಲೆಕ್ಟ್ರಾನಿಕ್ ಮೂಲಕ) ಸಲ್ಲಿಸಬಹುದು. **3.** ವಿವಿಧ ಚಟುವಟಿಕೆ ದಿನಾಂಕಗಳ ವೇಳಾಪಟ್ಟಿಯನ್ನು ಕೆಪಿಪಿ ಪೋರ್ಟಲ್‌ನಲ್ಲಿ ಪಡೆಯಬಹುದು.
ಸೂಚನೆ: ಇನ್ನುಮುಂದೆ ಟೆಂಡರ್‌ನಲ್ಲಿ ಯಾವುದೇ ಬದಲಾವಣೆಗಳು ಅಥವಾ ತಿದ್ದುಪಡಿಗಳಿದ್ದಲ್ಲಿ ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಅಳವಡಿಸಲಾಗುವುದು.

ಸಹಿ/– ಮುಖ್ಯ ಅಭಿಯಂತರರು, ಕೆಆರ್‌ಡಿಸಿಎಲ್, ಬೆಂಗಳೂರು

ವಾಸಾಸಂಇ/ವಾ.ಪ್ರ/ಎಎಎ/92/2026–27

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೬೧ Volume 161	ಬೆಂಗಳೂರು, ಸೋಮವಾರ, ೦೬ ಏಪ್ರಿಲ್, ೨೦೨೬ (ಚೈತ್ರ ೧೬, ಶಕವರ್ಷ ೧೯೪೮) BENGALURU, MONDAY, 06 APRIL, 2026 (CHAITHRA, 16, SHAKAVARSHA 1948)	ಸಂಚಿಕೆ ೬೫ Issue 65

ಭಾಗ 3

ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

ನಮೂನೆ–V

ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು.

[ಕರ್ನಾಟಕ ತಿದ್ದುಪಡಿ ನಿಯಮ–5, 20(1) (ಬಿ)]

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ–2013ರ ಕಲಂ –11(1)ರ ಮೇರೆಗೆ ಅಧಿಸೂಚನೆ

ಸಂಖ್ಯೆ: ಕಗೃಮಂ/ ಭೂಸ್ವಾವಿ/ಬೀದರ್ /ಅಲಿಯಂಬರ್/2025–26/E-295537 **ದಿನಾಂಕ: 01–04–2026**

ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ವಸತಿ ಯೋಜನೆಗಾಗಿ ಬೀದರ್ ಜಿಲ್ಲೆ, ಬೀದರ್ ತಾಲ್ಲೂಕು, ಜನವಾಡ ಹೋಬಳಿ, ಅಲಿಯಂಬರ್ ಗ್ರಾಮದ ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿರುವ ಜಮೀನುಗಳ ಸ್ವಾಧೀನತೆಯ ಅವಶ್ಯಕತೆ ಇರುತ್ತದೆಯೆಂದು ಸರ್ಕಾರವು ಭಾವಿಸುತ್ತದೆ. ಈ ಯೋಜನೆಗೆ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ–2013 (2013 ರ ಕೇಂದ್ರ ಅಧಿನಿಯಮ ಸಂಖ್ಯೆ 30) ಕ್ಕೆ ಅನುಗುಣವಾಗಿ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ ದಿನಾಂಕ: 23–07–2019 ರಿಂದ ಜಾರಿಗೆ ಬಂದಿರುವ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು ಪುನರ್ ವಸತಿ ಮತ್ತು ಪುನರ್ ನಿರ್ಮಾಣ (ಕರ್ನಾಟಕ ತಿದ್ದುಪಡಿ) ಕಾಯ್ದೆ–2019 (2019 ರ ಕರ್ನಾಟಕ ಅಧಿನಿಯಮ ಸಂಖ್ಯೆ 16) ರ ಕಲಂ–10(ಎ) ರಡಿ ಮೂಲ ಕಾಯ್ದೆಯ ಅಧ್ಯಾಯ II & III ರಲ್ಲಿನ ಉಪಬಂಧಗಳನ್ನು ಅನ್ವಯಿಸುವುದರಿಂದ ವಿನಾಯಿತಿ ನೀಡಿ **ಸರ್ಕಾರದ ಸಂಖ್ಯೆ: ಆರ್‌ಡಿ 03 ಎಕ್ಯೂಬಿಐ 2026 ದಿ: 13–03–2026** ರಲ್ಲಿ ಸರ್ಕಾರದ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಈ ಅಧಿಸೂಚನೆ **ರಾಜ್ಯ ಪತ್ರದಲ್ಲಿ ದಿನಾಂಕ: 01–04–2026** ರಂದು ಪ್ರಕಟವಾಗಿರುತ್ತದೆ.

ಆದುದರಿಂದ ಈ ಮೂಲಕ ತಿಳಿಸುವುದೇನೆಂದರೆ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ–2013 (2013 ರ ಕೇಂದ್ರ ಅಧಿನಿಯಮ ಸಂಖ್ಯೆ 30)ರ ಕಲಂ 12 ರ ಮೇರೆಗೆ ಪ್ರದತ್ತವಾದ ಅಧಿಕಾರ ಚಲಾಯಿಸುವಂತೆ ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರಿಗೆ ಅಧಿಕಾರ ನೀಡಲಾಗಿದೆ.

ಈ ಜಮೀನುಗಳ ಸ್ವಾಧೀನ ಕೆಲಸ ನಿರ್ವಹಿಸುವಲ್ಲಿ ಸರ್ಕಾರದಿಂದ ನೇಮಿಸಲ್ಪಟ್ಟ ಮೋಜಣಿದಾರರಿಗಾಗಲಿ ಅಥವಾ ಈ ಕೆಲಸ ಮಾಡುವವರಿಗಾಗಲೀ ಯಾರೂ ಅಡ್ಡಿ ಮಾಡಕೂಡದೆಂದು ಎಚ್ಚರಿಸಲಾಗಿದೆ. ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ,ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣದ ಕಾಯ್ದೆ–2013 (2013ರ ಕೇಂದ್ರ ಅಧಿನಿಯಮದ ಸಂಖ್ಯೆ 30) ರ ಕಲಂ–11(1) ಮೇರೆಗೆ ಈ ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ಸದರಿ ಸ್ವಾಧೀನಪಡಿಸಿಕೊಳ್ಳಲಿರುವ ಭೂಮಿಯನ್ನು ಒಪ್ಪಂದದ ಮೇರೆಗೆ ವಿಕ್ರಯಿಸುವ, ಭೋಗ್ಯಕ್ಕೆ ಅಡವಿಡುವ, ಅನುಭವಿಸುವ ,ಬದಲಾಯಿಸುವ ಅಥವಾ ಇನ್ನೂ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳದಂತೆ ನಿರ್ಬಂಧಿಸಿದೆ. ಅಂತಹ ಯಾವುದೇ ಕ್ರಮ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಲ್ಲಿ ಅದನ್ನು ಐತೀರ್ಪು ರಚಿಸುವಾಗ ಗಣನೆಗೆ ತೆಗೆದುಕೊಳ್ಳದೇ ಅಂತಿಮವಾಗಿ ಸದರಿ ಕಾಯ್ದೆಯನ್ವಯ ಭೂ ಸ್ವಾಧೀನಪಡಿಸಿಕೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ–2013 (2013 ರ ಕೇಂದ್ರ ಅಧಿನಿಯಮ ಸಂಖ್ಯೆ 30) ರ ಕಲಂ 15(1) ರ ಮೇರೆಗೆ ಆಸಕ್ತಿಯುಳ್ಳವರು ತಮ್ಮ ಆಕ್ಷೇಪವಿದ್ದಲ್ಲಿ ಆಕ್ಷೇಪಣೆಗಳನ್ನು ಈ ಅಧಿಸೂಚನೆ ಪ್ರಕಟಗೊಂಡ 60 ದಿನಗಳೊಳಗಾಗಿ ಈ ಕಾರ್ಯಾಲಯಕ್ಕೆ ಸಲ್ಲಿಸಬೇಕು. ತದನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಯಾವುದೇ ಮುನ್ಸೂಚನೆ ನೀಡದೇ ವಿಲೇಯಕ್ಕೆ ಹಾಕಲಾಗುವುದು.

ಸದರಿ ಪ್ರಕರಣದಲ್ಲಿ ಭೂ ಸ್ವಾಧೀನಕ್ಕೆ ಒಳಪಡುವ ಜಮೀನಿನ ಒಂದು ನಕ್ಷೆಯನ್ನು ವಿಶೇಷ ಭೂಸ್ವಾಧೀನಾಧಿಕಾರಿ–2, ಕರ್ನಾಟಕ ಗೃಹ ಮಂಡಳಿ ಬೆಂಗಳೂರು ಇವರ ಕಾರ್ಯಾಲಯದಲ್ಲಿ ಪರಿಶೀಲನೆಗಾಗಿ ಇಡಲಾಗಿದೆ.

ಅನುಸೂಚಿ

ಜಿಲ್ಲೆ: ಬೀದರ್ ತಾಲ್ಲೂಕು: ಬೀದರ್ ಹೋಬಳಿ: ಜನವಾಡ ಗ್ರಾಮ: ಅಲಿಯಂಬರ್

ಕ್ರ ಸಂ.	ಖಾತೆದಾರರ ಹೆಸರು (ಪಹಣಿಯಂತೆ)		ಸರ್ವೆ / ಖಾತಾ ನಂಬರ್	ಸರ್ವೆ/ಖಾತಾ ನಂಬರಿನಲ್ಲಿನ ಒಟ್ಟು ವಿಸ್ತೀರ್ಣ (ಪಹಣಿ/ಉತಾರ ಅನ್ವಯ)		ಸ್ವಾಧೀನಕ್ಕೊಳಪಡುವ ಒಟ್ಟು ವಿಸ್ತೀರ್ಣ		ತರಹೆ	ಚಕ್ಕುಬಂದಿ /ಸರಹದ್ದು				ಷರಾ
	ಭೂಮಾಲೀಕರ / ಹಿಡುವಳಿದಾರರ ಹೆಸರು	ಅನುಭವದಾರರ ಹೆಸರು		ಕೃಷಿ / ಕೃಷಿಯೇತರ ಜಮೀನು (ಎ–ಗುಂ)	ಖರಾಬು (ಎ–ಗುಂ)	ಕೃಷಿ / ಕೃಷಿಯೇತರ ಜಮೀನು (ಎ–ಗುಂ)	ಖರಾಬು (ಎ–ಗುಂ)		ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	
1	2	3	4	5	6	7	8	9	10	11	12	13	14
1.	ಜ್ಯೋತಿ ಗಂ ಶಿವಶಂಕರ ಪುಲ್ಸೆ (ತಾಯಿ ರುಕ್ಮಿಣಿಬಾಯಿ ಗಂ ಸುಧಾಕರಸ ಪಾರಲಕರ)	ಜ್ಯೋತಿ ಗಂ ಶಿವಶಂಕರ ಪುಲ್ಸೆ (ತಾಯಿ ರುಕ್ಮಿಣಿಬಾಯಿ ಗಂ ಸುಧಾಕರಸ ಪಾರಲಕರ)	231/1	1–35	0–00	1–35	0–00	ಖುಷ್ಕಿ	ಸ ನಂ 231/4 ರಸ್ತೆ	ಸ ನಂ. 250	ಸ ನಂ. 232	ಸ ನಂ. 231/2	
2.	ಜ್ಯೋತಿ ಗಂ ಶಿವಶಂಕರ ಪುಲ್ಸೆ (ತಾಯಿ ರುಕ್ಮಿಣಿಬಾಯಿ ಗಂ ಸುಧಾಕರಸ ಪಾರಲಕರ)	ಜ್ಯೋತಿ ಗಂ ಶಿವಶಂಕರ ಪುಲ್ಸೆ (ತಾಯಿ ರುಕ್ಮಿಣಿಬಾಯಿ ಗಂ ಸುಧಾಕರಸ ಪಾರಲಕರ)	231/2	1–35	0–00	1–35	0–00	ಖುಷ್ಕಿ	ಸ ನಂ 231/4 ರಸ್ತೆ	ಸ ನಂ. 250	ಸ ನಂ. 231/2	ಸ ನಂ. 231/3	
3.	ಜ್ಯೋತಿ ಗಂ ಶಿವಶಂಕರ ಪುಲ್ಸೆ (ತಾಯಿ ರುಕ್ಮಿಣಿಬಾಯಿ ಗಂ ಸುಧಾಕರಸ ಪಾರಲಕರ)	ಜ್ಯೋತಿ ಗಂ ಶಿವಶಂಕರ ಪುಲ್ಸೆ (ತಾಯಿ ರುಕ್ಮಿಣಿಬಾಯಿ ಗಂ ಸುಧಾಕರಸ ಪಾರಲಕರ)	231/3	1–35	0–00	1–35	0–00	ಖುಷ್ಕಿ	ಸ ನಂ 231/4 ರಸ್ತೆ	ಸ ನಂ. 250, 228	ಸ ನಂ. 231/2	ಸ ನಂ. 228	
4.	ಶಿವಶಂಕರ ಹೆಚ್ ಫುಲ್ಸೆ ಬಿನ್ ಹಿರಾಲಾಲ್ ಎ ಫುಲ್ಸೆ	ಶಿವಶಂಕರ ಹೆಚ್ ಫುಲ್ಸೆ ಬಿನ್ ಹಿರಾಲಾಲ್ ಎ ಫುಲ್ಸೆ	231/5	3–09	0–00	3–09	0–00	ಖುಷ್ಕಿ	ಸ ನಂ 231/6,7,8	ಸ ನಂ. 231/4	ಸ ನಂ. 232	ಸ ನಂ. 230	
5.	ಶಿವಶಂಕರ ಹೆಚ್ ಫುಲ್ಸೆ ಬಿನ್ ಹಿರಾಲಾಲ್ ಎ ಫುಲ್ಸೆ	ಶಿವಶಂಕರ ಹೆಚ್ ಫುಲ್ಸೆ ಬಿನ್ ಹಿರಾಲಾಲ್ ಎ ಫುಲ್ಸೆ	231/7	1–36	0–00	1–36	0–00	ಖುಷ್ಕಿ	ಸ ನಂ 231/9 ರಸ್ತೆ	ಸ ನಂ. 231/5	ಸ ನಂ. 231/6	ಸ ನಂ. 231/8	
6.	ಜ್ಯೋತಿ ಗಂ ಶಿವಶಂಕರ ಪುಲ್ಸೆ (ತಾಯಿ ರುಕ್ಮಿಣಿಬಾಯಿ ಗಂ ಸುಧಾಕರಸ ಪಾರಲಕರ)	ಜ್ಯೋತಿ ಗಂ ಶಿವಶಂಕರ ಪುಲ್ಸೆ (ತಾಯಿ ರುಕ್ಮಿಣಿಬಾಯಿ ಗಂ ಸುಧಾಕರಸ ಪಾರಲಕರ)	232/1	1–30	0–00	1–30	0–00	ಖುಷ್ಕಿ	ಸ ನಂ 232/4,5 ರಸ್ತೆ	ಸ ನಂ. 249	ಸ ನಂ. 248	ಸ ನಂ. 232/2	
7.	ಜ್ಯೋತಿ ಗಂ ಶಿವಶಂಕರ ಪುಲ್ಸೆ (ತಾಯಿ ರುಕ್ಮಿಣಿಬಾಯಿ ಗಂ ಸುಧಾಕರಸ ಪಾರಲಕರ)	ಜ್ಯೋತಿ ಗಂ ಶಿವಶಂಕರ ಪುಲ್ಸೆ (ತಾಯಿ ರುಕ್ಮಿಣಿಬಾಯಿ ಗಂ ಸುಧಾಕರಸ ಪಾರಲಕರ)	232/2	1–30	0–00	1–30	0–00	ಖುಷ್ಕಿ	ಸ ನಂ 232/6 ರಸ್ತೆ	ಸ ನಂ. 249	ಸ ನಂ. 232/1	ಸ ನಂ. 232/3	
8.	ಜ್ಯೋತಿ ಗಂ ಶಿವಶಂಕರ ಪುಲ್ಸೆ (ತಾಯಿ ರುಕ್ಮಿಣಿಬಾಯಿ ಗಂ ಸುಧಾಕರಸ ಪಾರಲಕರ)	ಜ್ಯೋತಿ ಗಂ ಶಿವಶಂಕರ ಪುಲ್ಸೆ (ತಾಯಿ ರುಕ್ಮಿಣಿಬಾಯಿ ಗಂ ಸುಧಾಕರಸ ಪಾರಲಕರ)	232/3	1–30	0–00	1–30	0–00	ಖುಷ್ಕಿ	ಸ ನಂ 232/6	ಸ ನಂ. 249	ಸ ನಂ. 232/2	ಸ ನಂ. 231	
9.	ಶಿವಶಂಕರ ಹೆಚ್ ಫುಲ್ಸೆ ಬಿನ್ ಹಿರಾಲಾಲ್ ಎ ಫುಲ್ಸೆ	ಶಿವಶಂಕರ ಹೆಚ್ ಫುಲ್ಸೆ ಬಿನ್ ಹಿರಾಲಾಲ್ ಎ ಫುಲ್ಸೆ	232/6	4–00	0–00	4–00	0–00	ಖುಷ್ಕಿ	ಸ ನಂ 233, 232/7,8 ರಸ್ತೆ	ಸ ನಂ. 232/2,3	ಸ ನಂ. 232/5	ಸ ನಂ. 231	
10.	ಜ್ಯೋತಿ ಗಂ ಶಿವಶಂಕರ	ಜ್ಯೋತಿ ಗಂ ಶಿವಶಂಕರ	233/2	4–16	0–00	4–16	0–00	ಖುಷ್ಕಿ	ಸ ನಂ 233/3	ಸ ನಂ.233/1	ಸ ನಂ. 237	ಸ ನಂ.233/3	
11.	ಶಿವಶಂಕರ ಹೆಚ್ ಫುಲ್ಸೆ ಬಿನ್ ಹಿರಾಲಾಲ್ ಎ ಫುಲ್ಸೆ	ಶಿವಶಂಕರ ಹೆಚ್ ಫುಲ್ಸೆ ಬಿನ್ ಹಿರಾಲಾಲ್ ಎ ಫುಲ್ಸೆ	233/6	5–00	0–00	5–00	0–00	ಖುಷ್ಕಿ	ಸ ನಂ 233/4, 236	ಸ ನಂ. 232/4	ಸ ನಂ.236, 237/3	ಸ ನಂ. 214/2,3	
12.	ಶಿವಶಂಕರ ಹೆಚ್ ಫುಲ್ಸೆ ಬಿನ್ ಹಿರಾಲಾಲ್ ಎ ಫುಲ್ಸೆ	ಶಿವಶಂಕರ ಹೆಚ್ ಫುಲ್ಸೆ ಬಿನ್ ಹಿರಾಲಾಲ್ ಎ ಫುಲ್ಸೆ	236/1	2–00	0–00	2–00	0–00	ಖುಷ್ಕಿ	ಸ ನಂ 236/3	ಸ ನಂ.232	ಸ ನಂ.232	ಸ ನಂ.236/3	
13.	ಶಿವಶಂಕರ ಹೆಚ್ ಫುಲ್ಸೆ ಬಿನ್ ಲೇಟ್ ಹಿರಾಲಾಲ್ ಎ ಫುಲ್ಸೆ	ಶಿವಶಂಕರ ಹೆಚ್ ಫುಲ್ಸೆ ಬಿನ್ ಲೇಟ್ ಹಿರಾಲಾಲ್ ಎ ಫುಲ್ಸೆ	237/1	2–00	0–00	2–00	0–00	ಖುಷ್ಕಿ	ಸ ನಂ 236	ಸ ನಂ. 237/2	ಸ ನಂ. 237/6,9	ಸ ನಂ. 237/5	
14.	ಶಿವಶಂಕರ ಪೂಲ್ಸೆ ಬಿನ್ ದಿ ಹಿರಾಲಾಲ ಪೂಲ್ಸೆ	ಶಿವಶಂಕರ ಪೂಲ್ಸೆ ಬಿನ್ ದಿ ಹಿರಾಲಾಲ ಪೂಲ್ಸೆ	237/2	15–16	0–00	15–16	0–00	ಖುಷ್ಕಿ	ಸ ನಂ 237/ 1,5,3, 236	ಸ ನಂ. 248, 232	ಸ ನಂ. 237/5,9	ಸ ನಂ. 237/3	
15.	ರುಕ್ಮೀಣಿಬಾಯಿ ಗಂ ಸುಧಾಕರ ಸಪಾರಳಕರ ಪರವಾಗಿ ಎಸ್ ಪಿ ಎ ಹೋಲ್ಡರ್ ಜ್ಯೋತಿ ತಂ ಸುಧಾಕರಸ ಪಾರಳಕರ ಗಂ ಶಿವಕುಮಾರ	ರುಕ್ಮೀಣಿಬಾಯಿ ಗಂ ಸುಧಾಕರ ಸಪಾರಳಕರ ಪರವಾಗಿ ಎಸ್ ಪಿ ಎ ಹೋಲ್ಡರ್ ಜ್ಯೋತಿ ತಂ ಸುಧಾಕರಸ ಪಾರಳಕರ ಗಂ ಶಿವಕುಮಾರ	237/3 ಪೈಕಿ	4–00	0–00	2–00	0–00	ಖುಷ್ಕಿ	ಸ ನಂ 236/2	ಸ ನಂ. 233/3	ಸ ನಂ. 237/2	ಸ ನಂ. 236/3	
16.	ಪದ್ಮಾವತಿ ಗಂ ಶಂಕರೆಪ್ಪಾ	ಪದ್ಮಾವತಿ ಗಂ ಶಂಕರೆಪ್ಪಾ	237/6	1–15	0–00	1–15	0–00	ಖುಷ್ಕಿ	ಸ ನಂ 236	ಸ ನಂ. 237/4	ಸ ನಂ. 238	ಸ ನಂ. 237/1	
17.	ಶಿವಶಂಕರ ಪೂಲ್ಸೆ ಬಿನ್ ದಿ ಹಿರಾಲಾಲ ಪೂಲ್ಸೆ	ಶಿವಶಂಕರ ಪೂಲ್ಸೆ ಬಿನ್ ದಿ ಹಿರಾಲಾಲ ಪೂಲ್ಸೆ	246/2	8–20	0–01	8–19	0–01	ಖುಷ್ಕಿ	ಸ ನಂ 246/5	ಸ ನಂ.246/4 253	ಸ ನಂ. 255	ಸ ನಂ. 248	
18.	ಶಿವಶಂಕರ ಹೆಚ್ ಫುಲ್ಸೆ ಬಿನ್ ಹಿರಾಲಾಲ್ ಎ ಫುಲ್ಸೆ	ಶಿವಶಂಕರ ಹೆಚ್ ಫುಲ್ಸೆ ಬಿನ್ ಹಿರಾಲಾಲ್ ಎ ಫುಲ್ಸೆ	246/5	2–00	0–00	2–00	0–00	ಖುಷ್ಕಿ	ಸ ನಂ 246/6	ಸ ನಂ. 246/2	ಸ ನಂ. 255	ಸ ನಂ. 248	
19.	ಶಿವಶಂಕರ ಹೆಚ್ ಫುಲ್ಸೆ ಬಿನ್ ಹಿರಾಲಾಲ್ ಎ ಫುಲ್ಸೆ	ಶಿವಶಂಕರ ಹೆಚ್ ಫುಲ್ಸೆ ಬಿನ್ ಹಿರಾಲಾಲ್ ಎ ಫುಲ್ಸೆ	246/6	2–00	0–00	2–00	0–00	ಖುಷ್ಕಿ	ಸ ನಂ 246/7	ಸ ನಂ. 246/5	ಸ ನಂ. 255, 256	ಸ ನಂ. 248	
20.	ಶಿವಶಂಕರ ಹೆಚ್ ಫುಲ್ಸೆ ಬಿನ್ ಹಿರಾಲಾಲ್ ಎ ಫುಲ್ಸೆ	ಶಿವಶಂಕರ ಹೆಚ್ ಫುಲ್ಸೆ ಬಿನ್ ಹಿರಾಲಾಲ್ ಎ ಫುಲ್ಸೆ	246/7	1–29	0–00	1–29	0–00	ಖುಷ್ಕಿ	ಸ ನಂ 246/3	ಸ ನಂ. 246/6	ಸ ನಂ. 256	ಸ ನಂ. 248	
21.	ಅಭಯ ಫುಲ್ಸೆ ತಂ ಶಿವಶಂಕರ ಫುಲ್ಸೆ	ಅಭಯ ಫುಲ್ಸೆ ತಂ ಶಿವಶಂಕರ ಫುಲ್ಸೆ	248/1	17–00	0–28	16–12	0–28	ಖುಷ್ಕಿ	ಸ ನಂ 248/2	ಸ ನಂ. 232	ಸ ನಂ. 253, 246	ಸ ನಂ. 232	
22.	ಶಿವಶಂಕರ ಪೂಲ್ಸೆ ಬಿನ್ ದಿ ಹಿರಾಲಾಲ ಪೂಲ್ಸೆ	ಶಿವಶಂಕರ ಪೂಲ್ಸೆ ಬಿನ್ ದಿ ಹಿರಾಲಾಲ ಪೂಲ್ಸೆ	248/2	3–15	0–23	2–32	0–23	ಖುಷ್ಕಿ	ಸ ನಂ 248/3 247	ಸ ನಂ. 248/1	ಸ ನಂ. 246	ಸ ನಂ. 247	
23.	ಜ್ಯೋತಿ ಗಂ ಶಿವಕುಮಾರ	ಜ್ಯೋತಿ ಗಂ ಶಿವಕುಮಾರ	253/6	7–37	0–00	7–37	0–00	ಖುಷ್ಕಿ	ಸ ನಂ 246	ಸ ನಂ. 252	ಸ ನಂ. 253/1	ಸ ನಂ. 253/7	
	ಒಟ್ಟು					93–16	1–12						

ಘೋಷ್ವಾರೆ

ಕ್ರ ಸಂ.	ಗ್ರಾಮಗಳು	ಜಾತಾ ವಿಸ್ತೀರ್ಣ (ಎ–ಗು		ಖರಾಬು ಎ–ಗು		ಒಟ್ಟು ವಿಸ್ತೀರ್ಣ ಎ–ಗು	
1.	ಅಲಿಯಂಬರ್	93	16	1	12	94	28

ಸಹಿ/– ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.

(ವಿ.ಸೂ: ಅಧಿಸೂಚನೆಯಲ್ಲಿ ತಿಳಿಸಿರುವಂತೆ ಆಸಕ್ತಿಯುಳ್ಳವರು ತಮ್ಮ ಆಕ್ಷೇಪಣಾ ಅರ್ಜಿಯಲ್ಲಿ ಅಂಚೆ ವಿಳಾಸ ಮತ್ತು ಮೊಬೈಲ್‌ನಂಬರನ್ನು ತಪ್ಪದೇ ಸ್ಪಷ್ಟವಾಗಿ ನಮೂದಿಸಿ ಸಲ್ಲಿಸುವುದು)

DIPR/CP/RO87/AAPL/2026-27

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಗಟ್ಟಿ ಯಾವುದು, ಜೊಳ್ಳು ಯಾವುದು ಎಂಬುದನ್ನು ತಿಳಿದು ಶಾಶ್ವತವಾದ ಸತ್ಯವನ್ನು ಹುಡುಕುವುದು ನಮ್ಮ ಧರ್ಮವಾಗಬೇಕು.
–ಬಿ.ಎಂ. ಶ್ರೀಕಂಠಯ್ಯ

ಸಂಪಾದಕೀಯ

ಮರಣದಂಡನೆ ಶಿಕ್ಷೆ ಅಮಾನವೀಯ ತಪ್ಪು ಸಂದೇಶದ ದುರ್ಬಲ ತೀರ್ಪು

ತಮಿಳುನಾಡಿನ ತೂತುಕುಡಿ ಜಿಲ್ಲೆಯ ಸಾತನ್‌ಕುಳಂ ಠಾಣೆಯಲ್ಲಿ ಘಟಿಸಿದ್ದ ತಂದೆ–ಮಗನ 'ಲಾಕಪ್ ಡೆತ್' ಪ್ರಕರಣದಲ್ಲಿ, ಮೊದಲನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ಒಂಬತ್ತು ಪೊಲೀಸರಿಗೆ ಮರಣದಂಡನೆ ವಿಧಿಸಿರುವುದು ಅತ್ಯಂತ ಅಪರೂಪದ ತೀರ್ಪು. ಆದರೆ, ಮರಣದಂಡನೆಗೆ ಬಲವಾದ ಕಾರಣಗಳಿಲ್ಲದ ಈ ತೀರ್ಪು ಅಮಾನವೀಯವಾದುದೂ ಹೌದು. ಒಂದು ತಪ್ಪನ್ನು ಇನ್ನೊಂದು ತಪ್ಪಿನಿಂದ ಅಥವಾ ಪ್ರತೀಕಾರದ ಕ್ರಮದಿಂದ ಸರಿಪಡಿಸಲು ಸಾಧ್ಯವಿಲ್ಲ ಎನ್ನುವುದರ ಹಿನ್ನೆಲೆಯಲ್ಲಿ ಈ ತೀರ್ಪನ್ನು ನೋಡಬೇಕಾಗಿದೆ. ದೇಶದ ಪೊಲೀಸ್ ವ್ಯವಸ್ಥೆಗೆ ಲಾಕಪ್ ಡೆತ್ ಪ್ರಕರಣಗಳು ಕಳಂಕವಾಗಿ ಉಳಿದಿದ್ದು, ಪೊಲೀಸರ ಚಿತ್ರಹಿಂಸೆಗೆ ಜನಸಾಮಾನ್ಯರು ಬಲಿಯಾಗುವ ವಿದ್ಯಮಾನಗಳು ದೇಶದ ವಿವಿಧೆಡೆ ನಡೆಯುತ್ತಲೇ ಇವೆ. ಲಾಕಪ್‌ಡೆತ್ ಪ್ರಕರಣಗಳು ದೇಶಕ್ಕೆ ಹೊಸತೂ ಅಲ್ಲ. 2020ರ ಕೊರೊನಾ ಲಾಕ್‌ಡೌನ್ ಸಂದರ್ಭದಲ್ಲಿ ಅವಧಿ ಮೀರಿ ಅಂಗಡಿ ತೆರೆದಿದ್ದ ಆರೋಪದಡಿ ಮೊಬೈಲ್ ವ್ಯಾಪಾರಿಗಳಾದ ಜಯರಾಜ್ ಹಾಗೂ ಅವರ ಪುತ್ರ ಬೆನ್ನಿಕ್ಸ್ ಅವರನ್ನು ಪೊಲೀಸರು ಬಂಧಿಸಿದ್ದರು. ಪೊಲೀಸ್ ವಶದಲ್ಲಿದ್ದ ಅವರನ್ನು ನ್ಯಾಯಾಂಗ ಬಂಧನಕ್ಕೆ ನೀಡಿದ ಮಾರನೇ ದಿನವೇ ಸಾವನ್ನಪ್ಪಿದ್ದರು. ಆ ಸಾವುಗಳನ್ನು ಲಾಕಪ್ ಡೆತ್ ಎಂದು ಮೃತರ ಸಂಬಂಧಿಗಳು ಆರೋಪಿಸಿದ್ದರು. ಆ ಪ್ರಕರಣದ ತನಿಖೆಯನ್ನು ಮದ್ರಾಸ್ ಹೈಕೋರ್ಟ್ ಸಿಬಿಐಗೆ ವಹಿಸಿತ್ತು. ಬಂಧಿತರನ್ನು ಮನಬಂದಂತೆ ಥಳಿಸಲಾಗಿತ್ತು; ಠಾಣೆಯ ಪೀಠೋಪಕರಣ, ಲಾಠಿಗಳೆಲ್ಲ ರಕ್ತಸಿಕ್ತವಾಗಿದ್ದವು ಎಂದು ಓರ್ವ ಮಹಿಳಾ ಕಾನ್‌ಸ್ಟೆಬಲ್ ಸಿಬಿಐ ಮುಂದೆ ಹೇಳಿಕೆ ನೀಡಿದ್ದರು. ಸಿ.ಸಿ. ಟಿ.ವಿ. ಕ್ಯಾಮೆರಾಗಳಲ್ಲಿನ ದೃಶ್ಯಗಳನ್ನು ಅಳಿಸಲಾಗಿತ್ತು. ಪ್ರಕರಣ ಸಂಬಂಧ ನೂರಕ್ಕೂ ಹೆಚ್ಚು ಸಾಕ್ಷಿಗಳ ವಿಚಾರಣೆ ನಡೆಸಿದ್ದ ಸಿಬಿಐ, ಬಂಧಿತರನ್ನು ತೀವ್ರ ಚಿತ್ರಹಿಂಸೆಗೆ ಗುರಿಪಡಿಸುವುದರ ಜೊತೆಗೆ ವೈದ್ಯಕೀಯ ನೆರವನ್ನೂ ನಿರಾಕರಿಸಿದ ಪೊಲೀಸರಿಗೆ, ಪೆರೋಲ್‌ಗೂ ಅವಕಾಶ ನೀಡದೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ನ್ಯಾಯಾಲಯಕ್ಕೆ ಮನವಿ ಮಾಡಿಕೊಂಡಿತ್ತು. ಈಗ ಅಪರಾಧಿಗಳಿಗೆ ಮರಣದಂಡನೆ ವಿಧಿಸಲಾಗಿದೆ.

ಒಂಬತ್ತು ಪೊಲೀಸರಿಗೆ ಮರಣದಂಡನೆ ವಿಧಿಸಿರುವ ತಮಿಳುನಾಡು ನ್ಯಾಯಾಲಯದ ತೀರ್ಪು ಮಹತ್ವದ್ದು. ಆದರೆ, ಪ್ರೌಢ ನ್ಯಾಯವ್ಯವಸ್ಥೆಗೆ ತಕ್ಕುದಲ್ಲದ ಈ ತೀರ್ಪು, 'ಕಣ್ಣಿಗೆ ಕಣ್ಣು' ಎನ್ನುವ ಪ್ರತೀಕಾರದ ಧೋರಣೆ ಒಳಗೊಂಡಿದೆ.

ಆದರೆ, ಸಾತನ್‌ಕುಳಂ ಲಾಕಪ್‌ಡೆತ್ ಘಟನೆಯನ್ನು, ಸುಪ್ರೀಂ ಕೋರ್ಟ್ ಹೇಳಿರುವಂತೆ, ಮರಣದಂಡನೆ ವಿಧಿಸಬಹುದಾದ ಅಪರೂಪದಲ್ಲಿ ಅಪರೂಪವಾದ ಪ್ರಕರಣವೇನೂ ಅಲ್ಲ.

ಸಾಮಾನ್ಯ ನಾಗರಿಕರು ಈ ಅಪರಾಧ ಎಸಗಿದ್ದಲ್ಲಿ ಅವರಿಗೆ ಸಾಮಾನ್ಯ ಶಿಕ್ಷೆಯನ್ನೇ ವಿಧಿಸಲಾಗುತ್ತಿತ್ತು; ಆದರೆ, ಈ ಹತ್ಯೆಯಲ್ಲಿ ಪೊಲೀಸರು ಭಾಗಿಯಾಗಿದ್ದಾರೆ ಎನ್ನುವ ವಿಷಯವನ್ನು ಕೋರ್ಟ್ ಒತ್ತಿ ಹೇಳಿದೆ. ಈ ಹೋಲಿಕೆಯ ಮೂಲಕ, ಅಪರಾಧಿಗಳು ಪೊಲೀಸರಾಗಿರುವುದರಿಂದ ಅವರಿಗೆ ಅಸಾಮಾನ್ಯ ಶಿಕ್ಷೆ ಅಗತ್ಯವೆಂದು ಕೋರ್ಟ್ ಭಾವಿಸಿರುವಂತಿದೆ. ಈ ವಾದವು, ಸಮಾನ ಅಪರಾಧಗಳಿಗೆ ಭಿನ್ನವಾದ ಶಿಕ್ಷೆ ನೀಡುವುದು ಸರಿ ಎಂದು ಹೇಳುವಂತಿದೆ. ಆದರೆ, ಇಂಥ ಅಭಿಪ್ರಾಯಗಳನ್ನು ದೇಶದ ನ್ಯಾಯವ್ಯವಸ್ಥೆ ಒಪ್ಪುವುದಿಲ್ಲ. ಜನಸಾಮಾನ್ಯರಿಗೆ ಪೊಲೀಸರು ನೀಡುವ ಚಿತ್ರಹಿಂಸೆ ಹಾಗೂ ಲಾಕಪ್‌ಡೆತ್‌ಗಳನ್ನು ಮರಣದಂಡನೆ ಶಿಕ್ಷೆಯ ಮೂಲಕ ತಡೆಯಬಹುದು ಎನ್ನುವ ಅಭಿಪ್ರಾಯಕ್ಕೂ ಇಂಥ ತೀರ್ಪುಗಳು ಅವಕಾಶ ಕಲ್ಪಿಸಲಿವೆ. ಮರಣದಂಡನೆಯಿಂದ ಅಪರಾಧಗಳನ್ನು ತಡೆಯುವುದು ಸಾಧ್ಯವಿಲ್ಲ ಎಂದು ಅನೇಕ ಅಧ್ಯಯನಗಳು ಸಾಬೀತುಪಡಿಸಿವೆ. ಹಾಗಾಗಿ, ತಮಿಳುನಾಡು ನ್ಯಾಯಾಲಯದ ತೀರ್ಪು ಮಾನವೀಯವಾದುದು ಎಂದು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರನ್ನು ಅಪರಾಧಿಗಳೆಂದು ಗುರ್ತಿಸಿ ತೀರ್ಪು ನೀಡಿರುವುದು ಸ್ವಾಗತಾರ್ಹ. ಆದರೆ, ಅಪರಾಧಕ್ಕೆ ವಿಧಿಸಿರುವ ಶಿಕ್ಷೆಯ ಸ್ವರೂಪವು ತೀರ್ಪು ನೀಡಲು ಉದ್ದೇಶಿಸಿರುವ ಸಂದೇಶವನ್ನು ದುರ್ಬಲಗೊಳಿಸುವಂತಿದೆ.

ಕಾನೂನು ಮತ್ತು ಮಾನವಹಕ್ಕುಗಳ ಉಲ್ಲಂಘನೆಯಾದ ಲಾಕಪ್‌ಡೆತ್ ಕೃತ್ಯಗಳನ್ನು ನಾಗರಿಕ ಸಮಾಜ ಒಪ್ಪುವುದಕ್ಕೆ ಸಾಧ್ಯವಿಲ್ಲ. ಇಂಥ ಬಹುತೇಕ ಪ್ರಕರಣಗಳಲ್ಲಿ ದಲಿತರು, ಬಡವರು, ಅಲ್ಪಸಂಖ್ಯಾತರಂತಹ ದುರ್ಬಲ ಸಮುದಾಯಗಳಿಗೆ ಸೇರಿದವರೇ ಬಲಿಪಶುಗಳಾಗಿರುತ್ತಾರೆ ಎನ್ನುವುದು ಕಾಕತಾಳೀಯವೇನಲ್ಲ. ಪೊಲೀಸ್ ಠಾಣೆಗಳಲ್ಲಿನ ಹಿಂಸೆ ಮತ್ತು ಸಾವುಗಳ ಬಗ್ಗೆ ಸುಪ್ರೀಂ ಕೋರ್ಟ್ ಹಲವು ಪ್ರಕರಣಗಳಲ್ಲಿ ಗಂಭೀರವಾಗಿ ಪ್ರತಿಕ್ರಿಯಿಸಿದೆ ಮತ್ತು ಪೊಲೀಸರ ನಡವಳಿಕೆಗೆ ಸಂಬಂಧಿಸಿದಂತೆ ಮಾರ್ಗಸೂಚಿಯನ್ನು ನೀಡಿದೆ. ಆದರೆ, ಆ ಮಾರ್ಗಸೂಚಿಯು ಪೊಲೀಸರ ಮೇಲೆ ಪರಿಣಾಮ ಬೀರಿಲ್ಲ ಎನ್ನುವುದನ್ನು ಹೆಚ್ಚುತ್ತಲೇ ಇರುವ ಲಾಕಪ್ ಡೆತ್‌ಗಳು ಸೂಚಿಸುವಂತಿವೆ. ಪ್ರತಿಯೊಂದು ಕಸ್ಟಡಿ ಹತ್ಯೆಯೂ ನಾಗರಿಕರ ಜೀವನ ಮತ್ತು ಹಕ್ಕುಗಳ ಮೇಲೆ ಎರಗುವ ಘೋರ ದಾಳಿಯಾಗಿದೆ. ಆದರೆ, ಅಪರಾಧ ಎಷ್ಟೇ ಕ್ರೌರ್ಯದಿಂದ ಕೂಡಿದ್ದರೂ ಅದಕ್ಕೆ ಮರಣದಂಡನೆ ಉತ್ತರವಾಗುವುದಿಲ್ಲ. ನ್ಯಾಯವು ಪ್ರತೀಕಾರದ ಮೇಲೆ ಆಧಾರಿತವಾಗಿಲ್ಲ. ಕಣ್ಣಿಗೆ ಕಣ್ಣು ಎನ್ನುವ ಪ್ರತೀಕಾರದ ಧೋರಣೆ ಪ್ರಬುದ್ಧ ನ್ಯಾಯವ್ಯವಸ್ಥೆಗೆ ಶೋಭೆಯನ್ನೂ ತರುವುದಿಲ್ಲ. ವಿಶ್ವದಲ್ಲಿ ನೂರಕ್ಕೂ ಹೆಚ್ಚು ದೇಶಗಳು ಮರಣದಂಡನೆ ಶಿಕ್ಷೆಯನ್ನು ರದ್ದುಪಡಿಸಿವೆ. ಇನ್ನೂ ಕೆಲವು ದೇಶಗಳು ಈ ಶಿಕ್ಷೆಯನ್ನು ರದ್ದುಪಡಿಸುವ ಸಾಧ್ಯತೆಗಳನ್ನು ಪರಿಶೀಲಿಸುತ್ತಿವೆ. ಕಾನೂನು ವ್ಯವಸ್ಥೆಯಲ್ಲಿ ಮರಣದಂಡನೆಗೆ ಅವಕಾಶ ಇರುವ ದೇಶಗಳಲ್ಲೂ, ಆ ಶಿಕ್ಷೆ ತೀರಾ ಅಪರೂಪದ ಸಂದರ್ಭಗಳಲ್ಲಷ್ಟೇ ಜಾರಿಯಾಗುತ್ತಿದೆ. ದುರದೃಷ್ಟವಶಾತ್, ಭಾರತದಲ್ಲಿ ಅಪರಾಧವನ್ನು ಪ್ರತೀಕಾರದ ಭಾವದಲ್ಲಿ ಹತ್ತಿಕ್ಕುವ ಸಾರ್ವಜನಿಕ ಚರ್ಚೆಗಳು ಭಾವುಕ ನೆಲೆಗಟ್ಟಿನಲ್ಲಿ ಆಗಾಗ ನಡೆಯುತ್ತಿರುತ್ತವೆ. ಮರಣದಂಡನೆ ಶಿಕ್ಷೆಯನ್ನು ರದ್ದುಪಡಿಸುವ ನಿಟ್ಟಿನಲ್ಲಿ ಭಾರತದಲ್ಲೂ ಚರ್ಚೆಗಳು ನಡೆಯಬೇಕಾಗಿದೆ. ದೇಶದ ನ್ಯಾಯಾಲಯಗಳು ಮರಣದಂಡನೆ ಶಿಕ್ಷೆ ವಿಧಿಸುವ ಪ್ರವೃತ್ತಿಗೆ ವಿರುದ್ಧವಾಗಿ ನಿಲ್ಲಬೇಕಾಗಿದೆ. ಅಪರಾಧಿಗೆ ಮರಣದಂಡನೆ ವಿಧಿಸುವುದರಿಂದ ನಿಜವಾದ ನ್ಯಾಯ ದೊರೆಯುವುದಿಲ್ಲ ಎನ್ನುವುದನ್ನು ಪುನರುಚ್ಚರಿಸುವ ಮೂಲಕ ನ್ಯಾಯಾಂಗದ ದಿಕ್ಕನ್ನು ಮಾನವೀಯಗೊಳಿಸಬೇಕಾಗಿದೆ.

ಶೌಚಾಲಯ ಸ್ವಚ್ಛತೆ ಕಲಿಕೆ ಅಲ್ಲವೆ?

ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ಶಾಲೆಗಳಲ್ಲಿ ಮಕ್ಕಳಿಂದ ಶ್ರಮದ ಕೆಲಸಗಳನ್ನು ಮಾಡಿಸುವ ಬಗ್ಗೆ ಹೆಚ್ಚಿನ ಜನರಿಗೆ ತಕರಾರಿಲ್ಲ. ಆದರೆ, ಮಕ್ಕಳಿಂದ ಶೌಚಾಲಯ ಸ್ವಚ್ಛ ಮಾಡಿಸುವುದರ ಬಗ್ಗೆ ಹಲವರಿಗೆ ತಕರಾರಿದೆ. ಇಂಥ ಸಮಸ್ಯೆಗಳನ್ನು ಶಿಕ್ಷಕರು ವಿವೇಕದಿಂದ ನಿರ್ವಹಿಸಬೇಕು. ಸ್ವಚ್ಛತಾ ಕಾರ್ಯಗಳಲ್ಲಿ ಸ್ವತಃ ಶಿಕ್ಷಕರೂ ತೊಡಗಿಕೊಂಡಾಗ ಮಕ್ಕಳಿಗೆ ಯಾವುದೂ ಅವಮಾನ ಎನ್ನಿಸುವುದಿಲ್ಲ.

ವಿದ್ಯಾರ್ಥಿಗಳು ಶಾಲೆಗಳಲ್ಲಿ ಸ್ವಚ್ಛತಾ ಕೆಲಸಗಳನ್ನು ಮಾಡುವ ಬಗ್ಗೆ ವಿಧಾನಮಂಡಲದಲ್ಲಿ ಇತ್ತೀಚೆಗೆ ಚರ್ಚೆ ನಡೆಯಿತು. ವಿಷಯದ ಹಿನ್ನೆಲೆಯನ್ನು ಗಮನಿಸದೆ ಚರ್ಚೆಯ ಮಹತ್ವ ಕಂಡುಕೊಳ್ಳಲು ಸಾಧ್ಯವಿಲ್ಲ.

ವಿದ್ಯಾರ್ಥಿಗಳು ತರಗತಿಯ ಕಸ ಗುಡಿಸುವುದು, ಅವರ ಶೌಚಾಲಯಗಳನ್ನು ಸ್ವಚ್ಛಗೊಳಿಸುವುದು ಮುಂತಾದ ಶ್ರಮದ ಕೆಲಸಗಳನ್ನು ಮಾಡುವುದು ಇಡೀ ಸಮಾಜದಲ್ಲಿ ಒಂದು ರೀತಿಯ ಅನಪೇಕ್ಷಣೀಯ ಭಾವನೆ ಇರುವಂತಿದೆ. ವಾಸ್ತವದಲ್ಲಿ ಇದು ದೊಡ್ಡ ಶೈಕ್ಷಣಿಕ ಸಮಸ್ಯೆ ಅಲ್ಲ. ಬಹುತೇಕ ಶಾಲೆಗಳಲ್ಲಿ ಕಸ ಹೆಕ್ಕುವ, ಕೈತೋಟ ಬೆಳೆಸುವ ಕೆಲಸಗಳನ್ನು ಇಂದಿಗೂ ಮಕ್ಕಳೇ ನಿರ್ವಹಿಸುತ್ತಿದ್ದಾರೆ. ಮಕ್ಕಳು, ಪಾಲಕರು, ಅಧಿಕಾರಿಗಳು, ರಾಜಕಾರಣಿಗಳು, ಮಕ್ಕಳ ಹಕ್ಕುಗಳ ಸಂಘಟನೆಯವರು ಇದಕ್ಕೆ ವಿರೋಧ ಮಾಡಿಲ್ಲ.

ಟಾಯ್ಲೆಟ್ ಶುಚಿಯ ವಿಚಾರದಲ್ಲಿ ಸ್ವಚ್ಛತಾ ಸಿಬ್ಬಂದಿ ಇರುವ ಕಡೆಗಳಲ್ಲಿ ಅವರೇ ಸ್ವಚ್ಛ ಮಾಡುತ್ತಾರೆ. ಇಲ್ಲದೇ ಇರುವಲ್ಲಿ 'ಅಕ್ಷರ ದಾಸೋಹ'ದ ಸಿಬ್ಬಂದಿಯಲ್ಲೇ ಒಬ್ಬರು, ಕೆಲವೊಮ್ಮೆ ಅಧ್ಯಾಪಕರು ಸ್ವಚ್ಛಗೊಳಿಸುತ್ತಾರೆ. ಕೆಲವು ಶಾಲೆಯಲ್ಲಿ ಮಕ್ಕಳು ಸ್ವಚ್ಛಗೊಳಿಸುವ ಕ್ರಮವೂ ಇದೆ. ಮಕ್ಕಳು ಟಾಯ್ಲೆಟ್ ಸ್ವಚ್ಛಗೊಳಿಸುವ ವಿಚಾರದಲ್ಲಿ ಬಹುತೇಕವಾಗಿ ಸಮಾಜದಲ್ಲಿ ಒಪ್ಪಿಗೆ ಇಲ್ಲ. ಸ್ವಚ್ಛಗೊಳಿಸಲು ಸಿಬ್ಬಂದಿ ಇಲ್ಲದಿದ್ದಾಗ ಏನು ಮಾಡಬೇಕೆಂದು ಯಾರೂ ಹೇಳುವುದಿಲ್ಲ. ಆದರೆ, ಸೂಕ್ತ ಸಿಬ್ಬಂದಿ ಇಲ್ಲದಿದ್ದಾಗಲೂ ಮಕ್ಕಳು ಟಾಯ್ಲೆಟ್ ಸ್ವಚ್ಛಗೊಳಿಸಬಾರದು ಎಂದು ಹೇಳುವಾಗ ತಾನೇ ತಾನಾಗಿ ಅಲ್ಲಿರುವ ಸಿಬ್ಬಂದಿ ಅಧ್ಯಾಪಕರು ಮಾತ್ರವೇ ಆಗಿರುವುದರಿಂದ, ಅವರೇ ಸ್ವಚ್ಛಗೊಳಿಸಬೇಕು ಎನ್ನುವುದೇ ಅಂತರಂಗದ ಮಾತೆಂದು ಯಾರಿಗಾದರೂ ಅರ್ಥ ಆಗುತ್ತದೆ.

ಅಧ್ಯಾಪಕರ ಟಾಯ್ಲೆಟ್ ಅನ್ನು ಅಧ್ಯಾಪಕರೇ ಸ್ವಚ್ಛಗೊಳಿಸಬೇಕು ಎನ್ನುವುದು ಸ್ಪಷ್ಟ. ಆಗ ಮಕ್ಕಳ ಟಾಯ್ಲೆಟ್ ಅನ್ನು ಮಕ್ಕಳೇಕೆ ಸ್ವಚ್ಛಗೊಳಿಸಬಾರದು ಎನ್ನುವ ಪ್ರಶ್ನೆ ತಾರ್ಕಿಕವೇ ಇದ್ದರೂ, ಮಕ್ಕಳಿಗೆ ಟಾಯ್ಲೆಟ್ ಸ್ವಚ್ಛಗೊಳಿಸಲು ಬೇಕಾದ ಆರೋಗ್ಯ ರಕ್ಷಣೆಯನ್ನು ಮಾಡಿಕೊಳ್ಳುವ ಸಾಮರ್ಥ್ಯ ಇದೆಯೇ ಎಂಬ ಪ್ರಶ್ನೆ ಉಳಿಯುತ್ತದೆ. ಆದ್ದರಿಂದ, ಮಕ್ಕಳು ಟಾಯ್ಲೆಟ್ ಸ್ವಚ್ಛಗೊಳಿಸುವುದು ಬೇಡ ಎನ್ನುವುದು ಸ್ವೀಕಾರಾರ್ಹವಾಗಿದೆ. ಆದರೆ, ಈ ನಿಲುವನ್ನು ಎಲ್ಲ ದೈಹಿಕ ಶ್ರಮದ ಕೆಲಸಗಳಿಗೂ ಅನ್ವಯ ಮಾಡಿದಾಗ ಸಮಸ್ಯೆ ಉಂಟಾಗುತ್ತದೆ.

ವಾಸ್ತವದಲ್ಲಿ ಶಾಲೆಗಳಲ್ಲಿ ಮಕ್ಕಳು ಮಾಡುವ ಶ್ರಮದ ಕೆಲಸಗಳು ಸಮಸ್ಯೆಯಲ್ಲದೆ ಇದ್ದರೂ ಅಲ್ಲಲ್ಲಿ ನಡೆಯುವ ಕೆಲವು ಅಹಿತಕಾರಿ ನಡವಳಿಕೆಗಳು ಇದನ್ನು ಬೃಹತ್ ಶೈಕ್ಷಣಿಕ ಸಮಸ್ಯೆ ಎಂಬರ್ಥದಲ್ಲಿ ಕಾಣಿಸುತ್ತಿವೆ. ಅದಕ್ಕೆ ಕಾರಣ, ಮಾಧ್ಯಮಗಳು ಗಂಭೀರ ವಿಚಾರಗಳನ್ನು ಕ್ಷುಲ್ಲಕ ಸಂಗತಿಗಳಂತೆ, ಸಣ್ಣ ಸಂಗತಿಗಳನ್ನು ರಾಷ್ಟ್ರೀಯ ಸಮಸ್ಯೆಗಳಂತೆ ಬಿಂಬಿಸುತ್ತಿರುವುದು. ಅಧ್ಯಾಪಕರ ಮೇಲೆ ಶಾಲಾ ಸನ್ನಿವೇಶದಲ್ಲಿ ಅಸಮಾಧಾನ ಇದ್ದಾಗ ಅಥವಾ ಶಾಲಾಭಿವೃದ್ಧಿ ಸಮಿತಿಯ ಸದಸ್ಯರಲ್ಲಿ ಸಹಮತ ಇಲ್ಲದಿದ್ದಾಗ 'ಶಾಲೆ ಸರಿಯಿಲ್ಲ' ಎನ್ನುವ ಭಾವನೆಯನ್ನು ಸೃಷ್ಟಿಸಲು ಅಥವಾ ಅಧ್ಯಾಪಕರಿಗೆ ಬುದ್ಧಿ ಕಲಿಸಲು ಇಂತಹದ್ದನ್ನೆಲ್ಲ ತಂತ್ರಗಳಾಗಿ ಬಳಸಲಾಗುತ್ತದೆ. ಆ ತಂತ್ರ ಯಶಸ್ವಿಯಾಗಬೇಕಾದರೆ ಮಕ್ಕಳ ದೈಹಿಕ ಶ್ರಮದ ಕೆಲಸವನ್ನು ಅಪರಾಧದಂತೆ ಬಿಂಬಿಸಲು ಮಾಧ್ಯಮಗಳ ಸಹಾಯ ಬೇಕಾಗುತ್ತದೆ. ಆ ಸುದ್ದಿ ಸಾಮಾಜಿಕ ಜಾಲತಾಣಗಳಿಗೂ ಹರಡಿಆಡಳಿತಾತ್ಮಕ ವ್ಯವಸ್ಥೆ ಏನಾದರೊಂದು ಮಾಡಲೇಬೇಕಾದ ಒತ್ತಡಕ್ಕೆ ಸಿಲುಕುತ್ತದೆ. ಆಗ ಶಾಲೆಯ ಕಾಯಂ ಸಿಬ್ಬಂದಿಯಾದರೆ ಅಧ್ಯಾಪಕರ ಅಮಾನತು, ತಾತ್ಕಾಲಿಕ ಅಧ್ಯಾಪಕರಾದರೆ ಕೆಲಸದಿಂದ ತೆಗೆಯುವುದು, ಇಂತಹ ಕ್ರಮ ಜರುಗುತ್ತದೆ.

ಅಮಾನತು, ನಿಜವಾಗಿ ಒಂದು ಶಿಕ್ಷೆಯಲ್ಲ. ಆರೋಪ ಬಂದಾಗ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ವಿಚಾರಣೆ ನಡೆಯುವ ತನಕ ಸಂಬಂಧಪಟ್ಟ ಉದ್ಯೋಗಿ ಅದೇ ಸ್ಥಳದಲ್ಲಿದ್ದರೆ ಸಾಕ್ಷ್ಯವನ್ನು ತಿರುಚುವ ಸಾಧ್ಯತೆ ಇದೆ ಎನ್ನುವ ಕಾರಣಕ್ಕೆ, ವಿಚಾರಣೆ ನಡೆಸುವ ತನಕ ಉದ್ಯೋಗದಿಂದ ದೂರ ಇರಿಸುವುದು ಆಡಳಿತಾತ್ಮಕ ನಿಲುವು. ಆದರೆ, ಸಮಾಜದಲ್ಲಿ ಅಮಾನತು ದೊಡ್ಡ ಶಿಕ್ಷೆ ಎಂಬ ಭಾವನೆ ಇದೆ. ಉದ್ಯೋಗಿ ಅಮಾನತಾದ ತಕ್ಷಣ, ಆರೋಪ ಮಾಡಿದವರಿಗೆ ಶಿಕ್ಷೆ ಕೊಡಿಸಿದ ಭಾವನೆ ಮತ್ತು ಆಡಳಿತ ಚೆನ್ನಾಗಿ ಕೆಲಸ ಮಾಡಿದೆ ಎಂಬ ಮೆಚ್ಚುಗೆ ಬರುತ್ತದೆ. ಅಮಾನತಾದವನಿಗೆ, ತನಗೆ ಕಾರಣವಿಲ್ಲದೆ ಶಿಕ್ಷೆ ಆಯಿತು ಅನ್ನಿಸುತ್ತದೆ. ಅಮಾನತೇ ಶಿಕ್ಷೆ ಎಂಬ ನಂಬಿಕೆ ಇರುವುದರಿಂದ, ಇಲಾಖಾ ವಿಚಾರಣೆಯಲ್ಲಿ ಆರೋಪಿ ತಪ್ಪಿತಸ್ಥನೆಂದು ಸಾಬೀತಾಯಿತೊ ಇಲ್ಲವೊ ಎಂದು ಯಾರೂ ಕೇಳಲು ಹೋಗುವುದಿಲ್ಲ. ಆದರೆ, ಸಣ್ಣ ವಿಚಾರಗಳಿಗೆಲ್ಲ ಅಮಾನತು ಮಾಡುತ್ತಾ ಹೋದಾಗ, 'ಮಕ್ಕಳು ದೈಹಿಕ ಶ್ರಮದ ಕೆಲಸ ಮಾಡಲೇ ಕೂಡದಾ?' ಎಂಬ ಚರ್ಚೆ ಶುರುವಾಗಿ, ವಿಧಾನಮಂಡಲವನ್ನೂ ಆ ಚರ್ಚೆ ಪ್ರವೇಶಿಸುತ್ತದೆ.

ಶೈಕ್ಷಣಿಕ ದೃಷ್ಟಿಯಿಂದ, ಶ್ರಮದ ಕೆಲಸಗಳೆಲ್ಲವೂ ಕಲಿಕೆಯೇ. ಕಸ ಗುಡಿಸುವುದು, ಗಿಡ ನೆಡುವುದು, ಮುಂತಾದವೆಲ್ಲ ಸ್ವಾವಲಂಬಿಯಾಗಿ ಒಂದು ಮನೆಯನ್ನು ನಿರ್ವಹಿಸಲು ಅಗತ್ಯವಾದ ಕಲಿಕೆಗಳಾಗಿವೆ. ಟಾಯ್ಲೆಟ್ ಸ್ವಚ್ಛತೆಯೂ ಮಹತ್ವದ ಕಲಿಕೆಯೇ. ಗಾಂಧೀಜಿಯವರು ಮಾತ್ರ ಅಲ್ಲ, ಅವರ ಆಶ್ರಮದಲ್ಲಿ ಜವಾಹರಲಾಲ್ ನೆಹರೂ ಕೂಡ ಆ ಸ್ವಚ್ಛತೆಯನ್ನು ಮಾಡಿದವರೇ. ಸರ್ದಾರ್ ಪಟೇಲ್, ಸರೋಜಿನಿ ನಾಯ್ಡು, ಕಾರ್ನಾಡ್ ಸದಾಶಿವ ರಾವ್, ಕಸ್ತೂರ್ ಗಾಂಧಿ, ಯಶೋಧರಮ್ಮ ದಾಸಪ್ಪ ಇವರೆಲ್ಲರೂ ಟಾಯ್ಲೆಟ್ ಸ್ವಚ್ಛತೆಯನ್ನು ಮಾಡಿದವರೇ. ಟಾಯ್ಲೆಟ್ ಅನ್ನು ಅಧ್ಯಾಪಕರಾಗಲಿ, ಮಕ್ಕಳಾಗಲಿ ಸ್ವಚ್ಛ ಮಾಡುವುದರಲ್ಲಿ ತಪ್ಪೇನಿಲ್ಲ. ಅದನ್ನೊಂದು ಅಪಮಾನವೆಂದು ಭಾವಿಸಬೇಕಾಗಿಲ್ಲ. ಆದರೆ, ಆರೋಗ್ಯ ರಕ್ಷಣಾ ಪದ್ಧತಿಗಳನ್ನು ಅನುಸರಿಸಬೇಕು ಅಷ್ಟೆ.

ದೈಹಿಕ ಶ್ರಮದ ಕೆಲಸಗಳನ್ನು ಮಕ್ಕಳಿಗೆ ಕಲಿಸಬೇಕೆಂದು ಶಿಕ್ಷಣ ನೀತಿಗಳೂ ಹೇಳುತ್ತವೆ. 1986ರ ರಾಷ್ಟ್ರೀಯ ಶಿಕ್ಷಣ ನೀತಿ ದೈಹಿಕ ಶ್ರಮದ ಕೆಲಸಗಳಿಗಾಗಿ 'ಕಾರ್ಯಾನುಭವ ತರಗತಿ' ಎನ್ನುವ ತರಗತಿಯನ್ನು ಶಾಲೆಯ ವೇಳಾಪಟ್ಟಿಯಲ್ಲೇ ಕೊಟ್ಟಿತ್ತು. 2020ರ ರಾಷ್ಟ್ರೀಯ ಶಿಕ್ಷಣ ನೀತಿ, ಗಾಂಧೀಜಿಯವರ 'ನಯೀ ತಾಲೀಂ' ಮಾದರಿಯಲ್ಲಿ ಕೌಶಲಗಳನ್ನು ಕಲಿಸಬೇಕು ಎಂದು ಹೇಳಿದೆ.

ಶಿಕ್ಷಣವು ಬುದ್ಧಿ–ಭಾವ ಎರಡಕ್ಕೂ ಸಂಬಂಧಿಸಿದ್ದಾಗಿದೆ. ಇದನ್ನು ನಿರ್ದಿಷ್ಟ ಸನ್ನಿವೇಶದಲ್ಲಿನ ನಿರ್ವಹಣೆಯಿಂದ ಕಂಡುಕೊಳ್ಳಬಹುದು. ಉದಾಹರಣೆಗೆ, ಅಧ್ಯಾಪಕರು 'ಬನ್ನಿ ಟಾಯ್ಲೆಟ್ ಸ್ವಚ್ಛ ಮಾಡೋಣ' ಎಂದು ಮಕ್ಕಳೊಂದಿಗೆ ಸೇರಿಕೊಂಡು ತಾವೂ ಟಾಯ್ಲೆಟ್ ಸ್ವಚ್ಛಗೊಳಿಸಲು ಹೋದರೆ ಮಕ್ಕಳಿಗದು ಕಲಿಕೆಯ ಅನುಭವವಾಗುತ್ತದೆ. ತಾವು ತೊಡಗಿಕೊಳ್ಳದೆ ಅಧ್ಯಾಪಕರು ಮಕ್ಕಳನ್ನೇ ಕರೆದು, 'ಹೋಗಿ, ಟಾಯ್ಲೆಟ್ ಸ್ವಚ್ಛ ಮಾಡಿ' ಎಂದರೆ ಅವರಿಗೆ ಅಪಮಾನದ ಅನುಭವವಾಗಲು ಸಾಧ್ಯವಿದೆ.

ಶಾಲೆಯಲ್ಲೊಂದು ಸಭಾ ಕಾರ್ಯಕ್ರಮ ಮಾಡುವಾಗ ಕುರ್ಚಿಗಳ ಕೊರತೆಯಿಂದ ಅಧ್ಯಾಪಕರು ಮಾತ್ರ ಕುರ್ಚಿಗಳಲ್ಲಿ ಕುಳಿತರೆ, 'ಮಕ್ಕಳನ್ನು ನೆಲದಲ್ಲಿ ಕೂರಿಸಿದರು' ಎನ್ನುವ ದೂರು ಆಗುತ್ತದೆ. ಬದಲಿಗೆ, ಒಬ್ಬ ಅಧ್ಯಾಪಕ ಮಕ್ಕಳೊಂದಿಗೆ ನೆಲದಲ್ಲಿ ಕುಳಿತರೂ, 'ಕುರ್ಚಿಯಿಲ್ಲ, ಏನು ಮಾಡಲು ಸಾಧ್ಯ. ಮೇಷ್ಟ್ರು ಕೂಡ ಮಕ್ಕಳೊಂದಿಗೆ ನೆಲದಲ್ಲೇ ಕುಳಿತಿದ್ದರು. ಶಾಲೆಗೆ ಬೇಕಾದಷ್ಟು ಕುರ್ಚಿಗಳ ವ್ಯವಸ್ಥೆ ಮಾಡಬೇಕಾಗಿದೆ' ಎಂಬ ವಿಚಾರ ಹುಟ್ಟುತ್ತದೆ.

ಮುಖ್ಯೋಪಾಧ್ಯಾಯರೇ ಹೋಗಿ ಮಕ್ಕಳೊಂದಿಗೆ ಕುಳಿತರೆ ಅವರಿಗೆ ಪರಮ ಸಂತೋಷ ಆಗಿರುತ್ತದೆ. ಬಸಳೆಗೆ ಚಪ್ಪರ ಹಾಕಲು ಹೋದಾಗ ಒಂದು ಕಂಬ ಮಗುವಿಗೆ ಎತ್ತಲಾರದಷ್ಟು ಭಾರದ್ದಾಗಿತ್ತು ಎಂದರೆ ಅದು ದೂರು. ಮಕ್ಕಳ ಸಾಮರ್ಥ್ಯವನ್ನು ಮೀರಿದ ಕೆಲಸ ಕೊಡಬಾರದು. ಅದು ಕಾನೂನುಬಾಹಿರ. ಆದರೆ, ಮಗುವಿಗೆ ಭಾರವಾಗದ ಕಂಬವನ್ನು ಬಳಸಿ ಬಸಳೆ ಚಪ್ಪರ ಹಾಕಿಸಿದರೆ ಅದು ಕಲಿಕೆ. ಶೈಕ್ಷಣಿಕ ಸಂಗತಿಗಳು ಈ ರೂಪದ್ದಾಗಿರುವುದರಿಂದ 'ಇಂತಹದನ್ನು ಮಾಡಬೇಕು, ಮಾಡಬಾರದು' ಎಂದು ಸಾರ್ವತ್ರಿಕ ನೆಲೆಯಲ್ಲಿ ಮಾನದಂಡ ರೂಪಿಸಲಾಗದು. ನಿರ್ದಿಷ್ಟ ಸನ್ನಿವೇಶದಲ್ಲಿ ಸರಿ ಯಾವುದೆಂದು ಕಂಡುಕೊಳ್ಳಲು ಆಗುತ್ತದೆ. ಆ ಕೆಲಸವನ್ನು ಮಾಡಬೇಕಾದ್ದು ಶಾಲೆಯ ತಕ್ಷಣದ ಮೇಲಧಿಕಾರಿಗಳು. ರಾಜಕೀಯ ಒತ್ತಡ ಬೀಳದೆ ವಾಸ್ತವದಲ್ಲಿ ಆಗಿರುವಷ್ಟಕ್ಕೆ ಕ್ರಮ ತೆಗೆದುಕೊಳ್ಳಲು ಬಿಟ್ಟರೆ ಅಧಿಕಾರಿಗಳು ಪ್ರಕರಣವನ್ನು ಚೆನ್ನಾಗಿಯೇ ನಿರ್ವಹಿಸಬಲ್ಲರು. ಆದರೆ, ಅಧಿಕಾರಿಗಳ ಮೇಲೆ ಒತ್ತಡ ಹಾಕುವ ಶಕ್ತಿಗಳು ಹೆಚ್ಚಾದಾಗ, ಸಂಬಂಧಪಟ್ಟ ಅಧ್ಯಾಪಕರನ್ನು ಅಮಾನತು ಮಾಡುವುದು, ನಂತರ ಅಧ್ಯಾಪಕರ ಸಂಘದವರು ಒತ್ತಡ ಹಾಕಿದಾಗ ಅಮಾನತನ್ನು ತೆರವುಗೊಳಿಸುವ ರೀತಿಯ ನಿರ್ವಹಣೆಗಳಾಗುತ್ತವೆ.

ಮಕ್ಕಳ ದೈಹಿಕ ಶ್ರಮದ ಕೆಲಸಗಳ ವಿಚಾರವನ್ನು ಕಾನೂನಿನ ಮೂಲಕ ಸರಿಪಡಿಸಲು ಆಗುವುದಿಲ್ಲ. ಶಾಲಾ ಸನ್ನಿವೇಶವನ್ನು ನಿರ್ವಹಿಸುವವರು ವಿವೇಕದಿಂದ ಕೆಲಸ ಮಾಡುವುದು ಅಗತ್ಯ. ಮಕ್ಕಳು ಕಸ ಗುಡಿಸುವಂತಹ ವಿಷಯಗಳಲ್ಲೆಲ್ಲ ಶಿಕ್ಷಣ ಸಚಿವರು ಏನು ಹೇಳುತ್ತಾರೆ ಎಂದು ಮಾಧ್ಯಮದವರು ಹೋಗಿ ಸಚಿವರ ಪ್ರತಿಕ್ರಿಯೆ ಕೇಳುವ ಸಂದರ್ಭ ಇದೆ. ಹೆಚ್ಚೆಂದರೆ, ವಿದ್ಯಾಂಗ ಉಪನಿರ್ದೇಶಕರ ಮಟ್ಟದಲ್ಲಿ ಮುಗಿಯಬೇಕಾದ ವಿಚಾರವಿದು. ಶಾಸಕರು ಮನಸ್ಸು ಮಾಡಿದರೆ ಇಂತಹ ವಿಷಯಗಳಿಗೆ ಸರ್ಕಾರವೇ ಗಮನಹರಿಸುವಂತೆ ಮಾಡದೆ ಇರಬಹುದು. ಶಾಲೆಯ ಸಮಸ್ಯೆಗಾಗಿ ಸೃಷ್ಟಿಯಾಗುವ ಒತ್ತಡ ಗುಂಪುಗಳು ಶಾಸಕರ ಗಮನಕ್ಕೆ ಬಾರದೆ ಸಚಿವರ ಬಳಿಗೆ ಹೋಗಲು ಸಾಮಾನ್ಯವಾಗಿ ಆಗುವುದಿಲ್ಲ. ಶಾಸಕರುಗಳು ತಮ್ಮನ್ನು ದಾಟಿ ಇದು ಮುಂದಕ್ಕೆ ಹೋಗದಂತೆ ಒಂದಷ್ಟು ಸಮಯ ನಿರ್ವಹಿಸಿದರೆ ಆಮೇಲೆ ಅದೇ ರೂಢಿಯಾಗುತ್ತದೆ. ಈಗ ಶಾಸಕರೇ ವಿಧಾನಮಂಡಲದಲ್ಲಿ ಈ ಬಗ್ಗೆ ಚರ್ಚೆ ನಡೆಸಿರುವುದರಿಂದ, ಇಂತಹ ಸಮಸ್ಯೆಗಳು ತಮ್ಮ ಮಟ್ಟವನ್ನು ದಾಟದಂತೆ ನೋಡಿಕೊಂಡಾರೆಂದು ನಿರೀಕ್ಷಿಸಬಹುದೇನೊ?

ವಾಚಕರ ವಾಣಿ

ಕೆಪಿಎಸ್‌ಸಿ: ರಾಜ್ಯಪಾಲರ ಮೌನ ಸರಿಯೆ?

ಕೆಪಿಎಸ್‌ಸಿ ಭ್ರಷ್ಟಾಚಾರದ ವಿರುದ್ಧ ಉದ್ಯೋಗಾಕಾಂಕ್ಷಿಗಳು ಹಲವು ಬಾರಿ ಹೋರಾಟ ನಡೆಸಿದ್ದಾರೆ. ಆದರೂ, ಈ ವಿಷಯವು ರಾಜ್ಯಪಾಲರ ಗಮನಕ್ಕೆ ಬಾರದಿರುವುದು ಸೋಜಿಗ. ರಾಜಕಾರಣಿಗಳಿಗೆ ಯುವಜನರ ಹಿತ ಬೇಡವಾಗಿದೆ. ಖಾಲಿ ಆಗುವ ರಾಜಕೀಯ ಸ್ಥಾನಗಳನ್ನು ತಮ್ಮ ಮಕ್ಕಳಿಗೆ ಮತ್ತು ಕುಟುಂಬಕ್ಕೆ ಹೇಗೆ ದಕ್ಕಿಸಿಕೊಳ್ಳಬೇಕು ಎಂಬುದಷ್ಟೇ ಅವರ ಕಾಯಕವಾಗಿದೆ. ಸರ್ಕಾರದ ಆಡಳಿತಾತ್ಮಕ ನೀತಿಗಳಲ್ಲಿ ರಾಜ್ಯಪಾಲರು ಇತ್ತೀಚಿನ ದಿನಗಳಲ್ಲಿ ಹೆಚ್ಚು ಪ್ರವೇಶಿಸುತ್ತಿದ್ದಾರೆ. ಯುವಜನರ ಹಿತದೃಷ್ಟಿಯಿಂದ ಕೆಪಿಎಸ್‌ಸಿಯ ಜವಾಬ್ದಾರಿಗಳನ್ನು ಯುಪಿಎಸ್‌ಸಿಗೆ ವಹಿಸುವ ಕುರಿತಂತೆಯೂ ರಾಜ್ಯಪಾಲರು ರಾಷ್ಟ್ರಪತಿಗೆ ವರದಿ ಸಲ್ಲಿಸಲಿ.

ದಿವ್ಯಾ ಎಚ್., ತುಮಕೂರು

ಶಾಸನ ಪಠ್ಯಗಳ ಗೊಂದಲವನ್ನು ಬಗೆಹರಿಸಿ

ಸೋಮನಾಥಪುರದ ಹೊಯ್ಸಳರ ಕಾಲದ ಕೇಶವ ದೇವಾಲಯದ ಆವರಣದಲ್ಲಿ ಕ್ರಿ.ಶ. 1268ರಲ್ಲಿ ಕೆತ್ತಿಸಿದ ಹೊಯ್ಸಳರ ರಾಜ ಮೂರನೇ ನರಸಿಂಹನಿಗೆ ಸೇರಿದ 2.8 ಮೀಟರ್ ಎತ್ತರದ ಚಪ್ಪಡಿಯ ಮೂಲ ಶಾಸನವನ್ನು ನಿಲ್ಲಿಸಲಾಗಿದೆ. ಇದೇ ಶಾಸನದ ಕನ್ನಡ ಪಾಠದ 11, 12, 13 ಮತ್ತು 14ನೇ ಸಾಲಿನಲ್ಲಿ ಈ ಶಾಸನವು ಅಗ್ರಹಾರದಲ್ಲಿರುವ ಕೇಶವ ದೇವರು ಮತ್ತು ಇತರೆ ದೇವರುಗಳಿಗೆ ಪೂಜೆ, ನೈವೇದ್ಯಕ್ಕಾಗಿ ಮೂರನೇ ನರಸಿಂಹನಿಗೆ ಅರಮನೆಯಿಂದ ಉಡುಗೊರೆ ರೂಪದಲ್ಲಿ ಮೂರು ಸಾವಿರ ಸಂದಾಯವಾಗಿರುವ ಬಗ್ಗೆ ಮುದ್ರಿಸಲಾಗಿದೆ. ಆದರೆ, ಶಾಸನದ ಆಂಗ್ಲಭಾಷೆಯ ಪಾಠದ 8, 9, 10 ಮತ್ತು 11ನೇ ಸಾಲುಗಳಲ್ಲಿ ಮೂರನೇ ನರಸಿಂಹ ಉಡುಗೊರೆ ಕೊಟ್ಟಂತೆ ಇದೆ. ಸಂಬಂಧಪಟ್ಟ ಇಲಾಖೆಯು ಈ ಗೊಂದಲ ಸರಿಪಡಿಸಬೇಕಿದೆ.

ತಿಮ್ಮ ನಾಯಕ್ ಸಿಂಗಟಗೆರೆ, ಬೆಂಗಳೂರು

ಗುಡಾರ ಹೊಕ್ಕ ಒಂಟೆಯಿಂದ ಕ್ರೌರ್ಯ

'ಪ್ಯಾಲೆಸ್ಟೀನ್ ಕಣ್ಣೀರು' ಲೇಖನ (ಲೇ: ಎ.ವಿ.ಎಸ್. ನಂಬೂದರಿ, ಪ್ರ.ವಾ., ಏ. 7) ಓದಿ ಮನಸ್ಸು ಕದಡಿತು. 'ದೇವರು ಕೊಟ್ಟ ರಾಜ್ಯ'ವೆಂದು ಪುರಾಣ ಕಥೆ ಹೇಳಿ ಈಗಿನ ಇಸ್ರೇಲ್ ಭೂಭಾಗವನ್ನು ಮಾತೃಭೂಮಿ ಆಗಿಸಿಕೊಂಡಿರುವ ಯಹೂದಿಗಳು, ಸ್ವತಃ ಹಿಟ್ಲರ್ ಆಡಳಿತ ಜರ್ಮನಿಯಲ್ಲಿ ನಡೆಸಿದ್ದ ಇತಿಹಾಸದ ಕ್ರೂರ ನರಮೇಧದ ಸಂತ್ರಸ್ತರು. ಆ ಘೋರಕೃತ್ಯದಿಂದ ಅವರಿಗೆ ಆದ ಅನುಭವವು ಇಂಥ ನರಮೇಧ ಕೃತ್ಯಗಳ ಕುರಿತಾಗಿ ಅವರಲ್ಲಿ ನೈತಿಕವಾದ ಜುಗುಪ್ಸೆಯನ್ನು ಹುಟ್ಟುಹಾಕಬೇಕಿತ್ತು. ಜನಾಂಗೀಯ ಹತ್ಯೆಯಂತಹ ಪೈಶಾಚಿಕ ಕೃತ್ಯ ತಿರಸ್ಕರಿಸುವ ಮತ್ತು ಆ ಕುರಿತ ಸಂವೇದನೆ ಹೊಂದಿದವರಲ್ಲಿ ಇಸ್ರೇಲಿಗರು ಮುಂಚೂಣಿಯಲ್ಲಿ ಇರಬೇಕಿತ್ತು. ಇಂತಹ ಹಿಂಸಾಚಾರವೇ ಪ್ರಸ್ತುತ ಇಸ್ರೇಲ್‌ನ ನೀತಿಯಾಗಿದೆ. ಈ ದುರಂತ ಕಥನ ಹೇಗಿದೆಯೆಂದರೆ ಸಹಾನುಭೂತಿಯಿಂದ ಒಂಟೆಗೆ ಮೂತಿ ತೂರಿಸಲು ಕೊಂಚ ಜಾಗ ಕೊಟ್ಟರೆ ಅದು ಕ್ರಮೇಣ ಆ ಗುಡಾರವನ್ನೇ ಎತ್ತಿ ಹಾಕಿತು ಎಂಬ ಕ್ರೌರ್ಯವನ್ನು ಬಿಂಬಿಸುತ್ತದೆ.

ಪ್ರೊ. ಶಿವರಾಮಯ್ಯ, ಬೆಂಗಳೂರು

ಉದ್ಯೋಗ ಕೊರತೆ: ಸಂಕಷ್ಟದ ತೂಗುಕತ್ತಿ

ಮನರೇಗಾ ಮತ್ತು 'ವಿಬಿ-ಜಿ ರಾಮ್ ಜಿ' ನಡುವಿನ ತಿಕ್ಕಾಟದಲ್ಲಿ ಗ್ರಾಮೀಣ ಜನರ ಬದುಕು ಕಮರುತ್ತಿದೆ. ಯಾವುದೇ ಹೊಸ ಯೋಜನೆ ಜಾರಿಗೊಳಿಸುವಾಗ ಹಳೆಯ ವ್ಯವಸ್ಥೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸುವುದು ಸರಿಯಲ್ಲ. ಬರೀ ಅಂಕಿ–ಅಂಶಗಳ ಅಭಿವೃದ್ಧಿಗಿಂತ ಗ್ರಾಮೀಣ ಬಡವರ ಹಸಿವು ಮತ್ತು ಉದ್ಯೋಗದ ಭದ್ರತೆಗೆ ಆದ್ಯತೆ ನೀಡಬೇಕಿದೆ. ಸರ್ಕಾರಗಳು ರಾಜಕೀಯ ಭಿನ್ನಾಭಿಪ್ರಾಯ ಮರೆತು ಶ್ರಮಿಕ ವರ್ಗಕ್ಕೆ ಅನ್ಯಾಯವಾಗದಂತೆ ಪರ್ಯಾಯ ಉದ್ಯೋಗದ ವ್ಯವಸ್ಥೆ ಕಲ್ಪಿಸಬೇಕಿದೆ. ಉದ್ಯೋಗ ಖಾತರಿಯು ಕೇವಲ ಯೋಜನೆಯಾಗಿ ಉಳಿಯದೆ, ಗ್ರಾಮೀಣರ ಬದುಕಿನ ಆಧಾರಸ್ತಂಭವಾಗಬೇಕಿದೆ.

ಐ. ಅಜಯಕುಮಾರ್, ಹೂವಿನಹಡಗಲಿ

ಪೊಲೀಸ್ ಹಿಂಸೆ–ದೌರ್ಜನ್ಯ: ಮಿತಿ ಇಲ್ಲವೆ?

ತಮಿಳುನಾಡಿನ ಸಾತನ್‌ಕುಳಂ ಠಾಣೆಯಲ್ಲಿ ನಡೆದ ಲಾಕಪ್ ಡೆತ್ ಪ್ರಕರಣದಲ್ಲಿ ಒಂಬತ್ತು ಪೊಲೀಸರಿಗೆ ನ್ಯಾಯಾಲಯವು ಮರಣದಂಡನೆ ವಿಧಿಸಿದೆ. ನಾಗರಿಕರ ರಕ್ಷಣೆಗೆ ಇರಬೇಕಾದ ಪೊಲೀಸ್ ವ್ಯವಸ್ಥೆಯ ನೈತಿಕತೆ ಕುಸಿದಿರುವುದಕ್ಕೆ ಈ ತೀರ್ಪು ನಿದರ್ಶನದಂತಿದೆ. ಉನ್ನತ ಪೊಲೀಸ್ ಅಧಿಕಾರಿಗಳೇ ಭ್ರಷ್ಟಾಚಾರದಲ್ಲಿ ತೊಡಗುವುದು, ರೌಡಿಗಳು, ಡ್ರಗ್ ಪೆಡ್ಲರ್‌ಗಳ ಜೊತೆಗೆ ಶಾಮೀಲಾಗುವುದು, ದೂರು ನೀಡಲು ಬಂದವರನ್ನೇ ಶೋಷಿಸುವ ಘಟನೆಗಳು ಸಹಜವೆಂಬಂತೆ ಕರ್ನಾಟಕದಲ್ಲಿ ಜರುಗುತ್ತಿವೆ. ಇದರಿಂದಾಗಿ ನಾಗರಿಕರು ರಕ್ಷಣೆಗಾಗಿ ಠಾಣೆಗೆ ಹೋಗಲು ಹಿಂದೆ–ಮುಂದೆ ನೋಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಪೊಲೀಸ್ ವ್ಯವಸ್ಥೆಯ ಲೋಪದೋಷ ಸರಿಪಡಿಸದಿದ್ದರೆ ಮತ್ತಷ್ಟು ಅರಾಜಕತೆಗೆ ದಾರಿ ಮಾಡಿಕೊಡಲಿದೆ.

ಸುಘೋಷ ಸ. ನಿಗಳೆ, ಬೆಂಗಳೂರು

ಹಿಂದಿ ಕಲಿಕೆ: ಮಕ್ಕಳಿಗೆ ಅನಗತ್ಯ ಹೊರೆ

'ತ್ರಿಭಾಷಾ ಸೂತ್ರವು ನೆಹರೂ ಕನಸಾಗಿತ್ತು' ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಹೇಳಿದ್ದಾರೆ. ಹಾಗೆಂದು ತ್ರಿಭಾಷಾ ಸೂತ್ರ ಇಂದಿಗೆ ಎಷ್ಟು ಸರಿ? ನೆಹರೂ ಕೂಡ ಹಿಂದಿ ಭಾಷಿಕರೇ ಆಗಿದ್ದರಿಂದ ಹಿಂದಿಯನ್ನು ಇತರೆ ರಾಜ್ಯಗಳ ಮೇಲೆ ಹೇರಲು ಹವಣಿಸಿರುವುದನ್ನು ದಕ್ಷಿಣದ ರಾಜ್ಯಗಳು ಅಂದೇ ವಿರೋಧಿಸಿವೆ. ರಾಷ್ಟ್ರಕವಿ ಕುವೆಂಪು ಅವರು, ನೆಹರೂ ಅವರ ಇತರೆ ವೈಜ್ಞಾನಿಕ ವಿಚಾರಗಳ ಬಗ್ಗೆ ಮೆಚ್ಚುಗೆ ಸೂಚಿಸಿರುವುದು ನಿಜವಾದರೂ ತ್ರಿಭಾಷಾ ಸೂತ್ರವನ್ನು ಸ್ಪಷ್ಟವಾಗಿ ವಿರೋಧಿಸಿದ್ದಾರೆ. ಹಿಂದಿಯು ದೇಶದಲ್ಲಿರುವ ಅನೇಕ ಭಾಷೆಗಳಂತೆಯೇ ಒಂದು ಭಾಷೆಯಷ್ಟೆ. ಅದು ಅನೇಕ ರಾಜ್ಯಗಳ ಜನರಿಗೆ ಅಪರಿಚಿತ ಭಾಷೆಯೂ ಹೌದು. ಹೀಗಾಗಿ, ಅದರ ಕಲಿಕೆ ವಿದ್ಯಾರ್ಥಿಗಳಿಗೆ ಅನಗತ್ಯ ಹೊರೆಯಾಗಿ ಶೈಕ್ಷಣಿಕ ಪ್ರಗತಿಗೆ ತೊಡರಾಗಿದೆ. ಅಂಕದ ಬದಲು ಗ್ರೇಡ್ ನೀಡುವುದು ವಿದ್ಯಾರ್ಥಿಗಳಲ್ಲಿನ ಆತಂಕಗಳನ್ನು ಬಗೆಹರಿಸುವ ಕ್ರಮವಾಗಿದೆ. ಹಿಂದಿ ಅಗತ್ಯವೆನ್ನುವವರು ಅದನ್ನು ಒಂದು ಭಾಷೆಯಾಗಿ ಕಲಿಯುವುದಕ್ಕೆ ಯಾರ ಅಡ್ಡಿಯೂ ಇಲ್ಲ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ



ನಮ್ಮದು ಅಪಾರ ಕೀರ್ತಿ!

ನಮ್ಮ ತಲೆಮಾರಿನ ಕೀರ್ತಿ, ಹೆಮ್ಮೆ ಅಪಾರ. ಕೆಲವು ಸಾಧನೆಗಳು ಇಗೋ ಇಲ್ಲಿ: ಬೆಂಗಳೂರಿನ ತಾಪಮಾನ ಎತ್ತರಕ್ಕೇರಿಸಿದ್ದು, ಕೆರೆಗಟ್ಟಲೆ ನೀರು ಕುಡಿದು ಕೆರೆ ಖಾಲಿ ಮಾಡಿದ್ದು, ಮರಗಳನ್ನು ಕಡಿದು ನುಂಗಿಹಾಕಿದ್ದು, ಮಳೆ ನೀರು ನೆಲಕ್ಕೆ ಸೇರದಂತೆ ವೈಟ್ ಟಾಪಿಂಗ್ ಮಾಡಿದ್ದು… ಬೆಂಗಳೂರನ್ನು ಮರುಭೂಮಿಯಾಗುವತ್ತ ಕೊಂಡೊಯ್ಯುತ್ತಿರುವುದು… ಒಂದೇ ಎರಡೇ…

ರಮೇಶ್ ಗುರುರಾಜರಾವ್, 'ಫೇಸ್‌ಬುಕ್'ನಿಂದ



ಕಿಡಿನುಡಿ

ರಾಜ್ಯದಲ್ಲಿ 3,000ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳು ಶಿಥಿಲಾವಸ್ಥೆ ತಲುಪಿವೆ, ಕಟ್ಟಡಗಳು ಕುಸಿಯುವ ಸ್ಥಿತಿಯಲ್ಲಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಾತ್ರ ಮೈಸೂರಿನ ಮೈಲಾರಿ ಹೋಟೆಲ್ ದೋಸೆ, ದಾವಣಗೆರೆ ಬೆಣ್ಣೆದೋಸೆ ಸವಿಯುತ್ತಾ ಮಜಾ ಮಾಡುತ್ತಿದ್ದಾರೆ.

ಆರ್. ಅಶೋಕ, ವಿಧಾನಸಭಾ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಭಾನುವಾರ, 8-4-2001

• ಲಂಚ ಪ್ರಕರಣ: ಕೌಜಲಗಿ ರಾಜೀನಾಮೆ

ನವದೆಹಲಿ, ಏ. 7– ಲಂಚ ಸ್ವೀಕರಿಸಿರುವ ಆರೋಪಕ್ಕೊಳಗಾದ ವೀರಣ್ಣ ಎಸ್. ಕೌಜಲಗಿ ಅವರು ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ನೀಡಿರುವ ರಾಜೀನಾಮೆಯನ್ನು ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಇಂದು ಅಂಗೀಕರಿಸಿದ್ದಾರೆ. ಕೌಜಲಗಿ ಅವರು ಇಂದು ಬೆಳಗ್ಗೆ ಫ್ಯಾಕ್ಸ್ ಮೂಲಕ ರಾಜೀನಾಮೆ ಪತ್ರವನ್ನು ಸೋನಿಯಾ ಗಾಂಧಿ ಅವರಿಗೆ ಕಳುಹಿಸಿದ್ದರು.

75 ವರ್ಷಗಳ ಹಿಂದೆ

ಕಚೇರಿಗೆ ಬಿಡುವು

7-4-1951ರ ಶನಿವಾರ 'ಪ್ರಜಾವಾಣಿ' ಕಾರ್ಯಾಲಯಕ್ಕೆ ರಜೆ ನೀಡಿದ್ದರಿಂದ 8-4-1951ರ ಭಾನುವಾರದ ಸಂಚಿಕೆ ಪ್ರಕಟವಾಗಿಲ್ಲ.

ಚುರುಮುರಿ

ಬೈ ಎಲೆಕ್ಷನ್ ಬೈಗುಳ

• ಮಣ್ಣೆ ರಾಜು

ಬೈ ಎಲೆಕ್ಷನ್ ಪ್ರಚಾರ ಮುಗಿಸಿ ನಾಯಕರು ದಣಿದು ಬಂದಿದ್ದರು. ವೇದಿಕೆ ಹತ್ತಿಳಿದು ಮೈ–ಕೈ ನೋವು, ಭಾಷಣ ಮಾಡಿ ಗಂಟಲು ನೋವು ಶುರುವಾಗಿತ್ತು. ಫ್ಯಾಮಿಲಿ ಡಾಕ್ಟರ್ ಸಲಹೆಯಂತೆ 'ಬೆಡ್ ರೆಸ್ಟ್'ನಲ್ಲಿದ್ದರು.

'ಉಪ ಚುನಾವಣೆಯ ರಣರಂಗದಲ್ಲಿ ನಿಮ್ಮ ಹೋರಾಟ, ಹಾರಾಟ, ಆರ್ಭಟ ರೋಮಾಂಚನಕಾರಿ ಆಗಿತ್ತು…' ಎಂದು ಹೊಗಳುತ್ತಾ ಪತ್ನಿ ಕಾಫಿ ತಂದುಕೊಟ್ಟರು.

'ನನ್ನ ಬೈಗುಳ ಪ್ರತಿಭೆಯಿಂದಲೇ ನಮ್ಮ ಪಕ್ಷ ಹೆಚ್ಚು ಸ್ಥಾನ ಗೆಲ್ಲುತ್ತದೆ ಎಂದು ನಂಬಿ ಪಕ್ಷದ ಹೈಕಮಾಂಡ್ ನನ್ನನ್ನು ಚುನಾವಣೆಯ ಸ್ಟಾರ್ ಪ್ರಚಾರಕ ಎಂದು ಗುರುತಿಸಿದೆ!' ನಾಯಕರು ಅಭಿಮಾನಪಟ್ಟರು.

'ಭಾಷಣಗಳಲ್ಲಿ ಎದುರಾಳಿ ಪಕ್ಷದ ನಾಯಕರನ್ನು ಕೆಟ್ಟದಾಗಿ ಬೈದು ಅವರ ಜನ್ಮ ಜಾಲಾಡುವ ಬೈಯೋಲಜಿ ತಜ್ಞ ನೀವು!'

'ಇನ್ನೂ ಕೆಟ್ಟದಾಗಿ ಬೈಯುವ ಕಲಾಕೌಶಲ ನನಗಿದೆ. ಸಾರ್ವಜನಿಕ ಕಾರ್ಯಕ್ರಮ ಎನ್ನುವ ಕಾರಣಕ್ಕೆ ನಾಲಿಗೆ ನಿಯಂತ್ರಣ ಮಾಡಿಕೊಂಡೆ'.

'ನಿಮ್ಮ ನಾಲಿಗೆ ಕತ್ತಿಗಿಂಥ ಹರಿತ, ಚೂರಿಗಿಂಥ ಇರಿತ!'

'ಹೌದು, ಚುನಾವಣಾ ಯುದ್ಧದಲ್ಲಿ ನಾಲಿಗೆಯೇ ಅಸ್ತ್ರ! ನಾಲಿಗೆಸಜ್ಜಿತನಾಗಿ ಪ್ರಚಾರ ಕಣಕ್ಕಿಳಿದು ವೀರಾವೇಶದಿಂದ ಪ್ರತಿಸ್ಪರ್ಧಿಗಳ ಗ್ರಹಚಾರ ಬಿಡಿಸಿ, ಜನರ ಚಪ್ಪಾಳೆ, ಹೈಕಮಾಂಡ್ ಪ್ರಶಂಸೆ ಗಿಟ್ಟಿಸಿದ್ದೇನೆ' ನಾಯಕರು ಬೀಗಿದರು.

'ಪ್ರತಿಸ್ಪರ್ಧಿ ಪಕ್ಷದ ನಾಯಕರು ನಿಮ್ಮನ್ನೂ ಹೀನಾಮಾನವಾಗಿ ಬೈದು ನಮ್ಮ ಕುಟುಂಬದ ಮಾನಹರಣ ಮಾಡಿಬಿಟ್ಟಿದ್ದಾರೆ ಕಣ್ರೀ…'

'ನಾವು ರಾಜಕಾರಣಿಗಳು ಬಹಿರಂಗದಲ್ಲಿ ಬೈದಾಡ್ತೀವಿ, ಅಂತರಂಗದಲ್ಲಿ ಅನ್ಯೋನ್ಯವಾಗಿರ್ತೀವಿ. ನೀನು ಆತಂಕಪಡಬೇಡ' ಸಮಾಧಾನ ಹೇಳಿದರು.

'ಬೈ ಎಲೆಕ್ಷನ್ ಬಹಿರಂಗ ಪ್ರಚಾರ ಮುಗಿದರೂ ಪ್ರಚಾರ ಸಭೆಗಳಲ್ಲಿ ನೀವು ಬೈದ ಬೈಗುಳಗಳು ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗ್ತಿರೋದು ನಿಂತಿಲ್ಲ. ನಾಲಾಯಕ್ ನಾಯಕ, ಹೀನಸಂಸ್ಕೃತಿ ನಾಯಕ, ಖಳನಾಯಕ… ಇನ್ನೂ ಕೆಟ್ಟದಾಗಿ ಜನ ನಿಮ್ಮನ್ನು ಬೈಯುತ್ತಲೇ ಇದ್ದಾರೆ…' ಬೇಸರಗೊಂಡ ಪತ್ನಿ ಕಾಫಿ ಕಪ್ ತೆಗೆದುಕೊಂಡು ಹೋದರು.

ಸಂಗತ

ನೀರುಪಾಲಾದವರ ಕುಟುಂಬಕ್ಕೆ ನೆರವು ಏಕಿಲ್ಲ?

ನೈಸರ್ಗಿಕ ವಿಕೋಪಗಳಲ್ಲಿ ಸಾವಿಗೀಡಾದವರ ಕುಟುಂಬಗಳಿಗೆ ಪರಿಹಾರ ಲಭ್ಯ ಇರುವಂತೆ, ನೀರಿನಲ್ಲಿ ಮುಳುಗಿ ಸಾಯುವವರ ಕುಟುಂಬಗಳಿಗೂ ದೊರೆಯಲಿ.

• ಸಿದ್ದಯ್ಯ ಹಿರೇಮಠ

ಬೇಸಿಗೆ ಧಗೆಯಿಂದ ಸ್ವಲ್ಪ ಕಾಲವಾದರೂ ತಪ್ಪಿಸಿಕೊಳ್ಳುವ ಉಪಾಯಗಳಲ್ಲಿ ಈಜುವುದೂ ಒಂದು. ಬೇಸಿಗೆ ರಜೆಯಲ್ಲಿ ನಗರ, ಪಟ್ಟಣ ಪ್ರದೇಶಗಳಲ್ಲಿನ ಈಜುಕೊಳಗಳಲ್ಲಿ ಈಜು ತರಬೇತಿಯ ವಿಶೇಷ ಶಿಬಿರಗಳು ನಡೆಯುತ್ತವೆ. ಗ್ರಾಮೀಣ ಪ್ರದೇಶಗಳಲ್ಲಿ ಈ ರೀತಿಯ ಸೌಲಭ್ಯ ಇರುವುದಿಲ್ಲ. ನೈಸರ್ಗಿಕ ಜಲಮೂಲಗಳಲ್ಲೇ ಗ್ರಾಮೀಣರು ಈಜಲು ನೀರಿಗಿಳಿಯುತ್ತಾರೆ. ಆದರೆ, ಹೀಗೆ ನೀರಿಗಿಳಿದ ಕೆಲವರು ನೀರಿನಲ್ಲಿನ ಕೆಸರಿನಲ್ಲಿ ಅಥವಾ ಸುಳಿಯಲ್ಲಿ ಸಿಲುಕಿಕೊಂಡು ಅಥವಾ ಈಜು ಕಲಿಯುವಾಗ ಆಳ ಅರಿಯದೆ ಮುಳುಗಿ ನೀರು ಪಾಲಾಗುವ ಘಟನೆಗಳು ಪ್ರತಿ ವರ್ಷ ನಡೆಯುತ್ತಿವೆ.

ಬೇಸಿಗೆ ರಜೆಯ ವೇಳೆ ರಾಜ್ಯದಾದ್ಯಂತ ಪ್ರವಾಸಿ ತಾಣಗಳಲ್ಲಿನ ಜಲಪಾತಗಳ ಬಳಿಯಲ್ಲಿ, ಗ್ರಾಮೀಣ ಭಾಗದ ಕೆರೆ–ಕಟ್ಟೆಗಳಲ್ಲಿ, ಕೃಷಿ ಹೊಂಡಗಳಲ್ಲಿ, ಸಮುದ್ರದಲ್ಲಿ ಕೆಲವು ನತದೃಷ್ಟರು ನೀರು ಪಾಲಾಗುತ್ತಾರೆ. ಹೀಗೆ ಸಾವಿಗೀಡಾಗುವವರಲ್ಲಿ ಬಹುತೇಕರು ಪ್ರಾಥಮಿಕ, ಪ್ರೌಢಶಾಲೆ, ಕಾಲೇಜುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳು, ಯುವಜನರೇ ಆಗಿದ್ದಾರೆ. ದುಡಿಯುವ ವಯಸ್ಸಿಗೆ ಬಂದ ಅಥವಾ ದುಡಿಯುತ್ತಿರುವ ಮಕ್ಕಳು ಜಲಸಮಾಧಿಯಾದ ದುಃಖದ ಜೊತೆಗೆ, ಇಳಿವಯಸ್ಸಿನಲ್ಲಿ ಆಸರೆ ಆಗುವವರನ್ನು ಕಳೆದುಕೊಂಡ ತಬ್ಬಲಿತನವನ್ನೂ ಕೆಲವು ಪಾಲಕರು ಅನುಭವಿಸುವಂತಾಗಿದೆ. ಇದ್ದ ಒಬ್ಬ ಮಗ ಅಥವಾ ಮಗಳನ್ನು ಅವಘಡಗಳಲ್ಲಿ ಕಳೆದುಕೊಂಡ ಪಾಲಕರು ಮತಿಭ್ರಮಣೆಗೆ ಒಳಗಾಗಿರುವುದೂ ಇದೆ. ನೀರಲ್ಲಿ ಮುಳುಗುತ್ತಿರುವವರ ರಕ್ಷಣೆಗೆ ಧಾವಿಸುವ ಸ್ನೇಹಿತರು, ಪಾಲಕರು ಅಥವಾ ದಾರಿಹೋಕರು ನೀರು ಪಾಲಾಗಿರುವ ನಿದರ್ಶನಗಳೂ ಉಂಟು.

ಸಾಮಾನ್ಯವಾಗಿ, ಅಸಹಜ ಸಾವಿನ ಸಂದರ್ಭಗಳಲ್ಲಿ ಸರ್ಕಾರದಿಂದ ಪರಿಹಾರ ದೊರೆಯುತ್ತದೆ. ಆ ಪರಿಹಾರ, ಸಂತ್ರಸ್ತರ ಕುಟುಂಬದ ದುಃಖ ಕಡಿಮೆ ಮಾಡದಿದ್ದರೂ, ಭವಿಷ್ಯಕ್ಕೆ ಕೊಂಚ ಆಸರೆಯಾಗುತ್ತದೆ. ಆದರೆ, ನೀರಿನಲ್ಲಿ ಮುಳುಗಿ ಸತ್ತವರ ಕುಟುಂಬಗಳಿಗೆ ಸರ್ಕಾರದಿಂದ ಪರಿಹಾರ ಪಡೆಯಲು ಅವಕಾಶವೇ ಇಲ್ಲ.

ಕಳೆದ ವರ್ಷ ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿನ ಭರಮಸಮುದ್ರದ ಕೆರೆಯಲ್ಲಿ ಇಬ್ಬರು ಯುವಕರು ಮುಳುಗಿ ಸಾವಿಗೀಡಾದರು. ಆ ಘಟನೆಗೆ ಒಂದು ವಾರ ಮೊದಲು, ಅದೇ ತಾಲ್ಲೂಕಿನ ಅಣಬೂರು ಗ್ರಾಮದ ಕೆರೆಯಲ್ಲಿ ಎತ್ತುಗಳಿಗೆ ನೀರು ಕುಡಿಸಲು ಹೋಗಿದ್ದ ಯುವಕ ನೀರಿಗೆ ಜಾರಿ ಪ್ರಾಣ ಬಿಟ್ಟಿದ್ದ. ಈ ಯುವಕರ ದುಡಿಮೆಯನ್ನೇ ಅವಲಂಬಿಸಿದ್ದ ವೃದ್ಧ ಪಾಲಕರ ಜೀವನ ಈಗ ಅತಂತ್ರವಾಗಿದೆ.

ಈ ವರ್ಷವೂ ಬೇಸಿಗೆ ತೀವ್ರವಾಗುತ್ತಿರುವಂತೆಯೇ ನೀರು ಪಾಲಾಗುವವರ ಘಟನೆಗಳು ರಾಜ್ಯದ ವಿವಿಧ ಮೂಲೆಗಳಲ್ಲಿ ವರದಿಯಾಗುತ್ತಿವೆ. ಕೃಷಿ ಹೊಂಡ, ಕೆರೆ–ಕಟ್ಟೆ, ಹಳ್ಳ–ಕೊಳ್ಳ, ನದಿಗಳಲ್ಲಿ ಮುಳುಗಿ ಸಾಯುವವರ ಸಂಖ್ಯೆ ಹೆಚ್ಚುತ್ತಲೇ ಇದೆ.

ಮಳೆ, ಸಿಡಿಲು, ಪ್ರವಾಹ, ಭೂಕಂಪ ಮತ್ತಿತರ ನೈಸರ್ಗಿಕ ವಿಕೋಪಗಳಲ್ಲಿ ಜೀವ ಕಳೆದುಕೊಳ್ಳುವವರ ಕುಟುಂಬದ ಸದಸ್ಯರಿಗೆ 'ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ' (ಎನ್‌ಡಿಆರ್‌ಎಫ್) ಮತ್ತು ರಾಜ್ಯ ವಿಪತ್ತು ಪರಿಹಾರ ನಿಧಿ (ಎಸ್‌ಡಿಆರ್‌ಎಫ್) ಅಡಿಯಲ್ಲಿ ಪರಿಹಾರ ದೊರೆಯುತ್ತದೆ. ಆದರೆ, ಕೆರೆ–ಕಟ್ಟೆ, ಹಳ್ಳ–ಕೊಳ್ಳ, ಜಲಪಾತಗಳ ಬಳಿ ಈಜಲು, ಸ್ನಾನ ಮಾಡಲು ಹೋಗಿ ಅಥವಾ ಕಾಲು ಜಾರಿ ನೀರಲ್ಲಿ ಮುಳುಗಿ ಮೃತಪಡುವವರ ಅವಲಂಬಿತರಿಗೆ ಪರಿಹಾರ ನೀಡುವ ನಿಯಮ ಸರ್ಕಾರದಲ್ಲಿಲ್ಲ.

ಅಗ್ನಿ ಅವಘಡ, ಸಾರಿಗೆ ಸಂಸ್ಥೆಯ ಬಸ್–ರೈಲುಗಳ ಅಪಘಾತದ ಸಂದರ್ಭ, ನದಿಗಳಲ್ಲಿ ದೋಣಿ ಮಗುಚಿ ಸಾಮೂಹಿಕವಾಗಿ ಸಾವಿಗೀಡಾಗುವವರ ಕುಟುಂಬ ಸದಸ್ಯರಿಗೆ ಸರ್ಕಾರದಿಂದ ತಕ್ಷಣವೇ ಪರಿಹಾರ ಘೋಷಿಸಲಾಗುತ್ತದೆ. ಕೆಲವೊಮ್ಮೆ ಭೀಕರ ರಸ್ತೆ ಅಪಘಾತಗಳಲ್ಲಿ ಪ್ರಾಣ ಕಳೆದುಕೊಂಡವರ ಅವಲಂಬಿತರಿಗೂ ಸರ್ಕಾರ ಕನಿಷ್ಠ ₹5 ಲಕ್ಷದವರೆಗೆ ಪರಿಹಾರ ಘೋಷಿಸುತ್ತದೆ. ಆದರೆ, ನೀರಿನಲ್ಲಿ ಆಕಸ್ಮಿಕವಾಗಿ ಮುಳುಗಿ ಮೃತಪಟ್ಟಲ್ಲಿ ಪರಿಹಾರ ಸಿಗುವುದಿಲ್ಲ. ನೀರಿನಲ್ಲಿ ಮುಳುಗಿ ಉಂಟಾಗುವ ದುರಂತಗಳನ್ನು ಸಹಾನುಭೂತಿಯಿಂದ ನೋಡುವುದು ಸರ್ಕಾರದ ಕರ್ತವ್ಯ.

ದಾವಣಗೆರೆ ಜಿಲ್ಲೆಯೊಂದರಲ್ಲೇ 2023ರಲ್ಲಿ 5 ಜನ, 2024ರಲ್ಲಿ 5 ಜನ, 2025ರಲ್ಲಿ 9 ಜನ ನೀರಲ್ಲಿ ಮುಳುಗಿ ಪ್ರಾಣ ಕಳೆದುಕೊಂಡಿದ್ದಾಗಿ ಪೊಲೀಸ್ ಇಲಾಖೆ ಮಾಹಿತಿ ನೀಡಿದೆ (ವಾಸ್ತವದಲ್ಲಿ ಈ ಸಂಖ್ಯೆ ಇನ್ನೂ ಹೆಚ್ಚು). ರಾಜ್ಯದ ವಿವಿಧೆಡೆಗಳಲ್ಲಿ ಈ ರೀತಿ ಪ್ರತಿ ವರ್ಷವೂ ನೂರಾರು ಜನ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಆದರೆ, ರಾಜ್ಯ ಅಪರಾಧ ಪ್ರಕರಣ ದಾಖಲೆಗಳ ಬ್ಯೂರೊದಲ್ಲಿ ನೀರಿನಲ್ಲಿ ಆಕಸ್ಮಿಕವಾಗಿ ಮುಳುಗಿ ಎಷ್ಟು ಜನ ಮೃತಪಟ್ಟಿದ್ದಾರೆ ಎಂಬ ಮಾಹಿತಿಯೇ ಲಭ್ಯವಿಲ್ಲ.

ಸಾವು ಯಾರನ್ನು ಯಾವಾಗ ಎಲ್ಲಿ ಕಾದು ಕುಳಿತಿರುತ್ತದೋ ಬಲ್ಲವರಿಲ್ಲ. ಆದರೆ, ಕಾಲು ಜಾರಿ ನೀರಿಗೆ ಬಿದ್ದೋ, ಈಜುವಾಗ ಕೆಸರಲ್ಲಿ ಸಿಲುಕಿಯೋ, ಸಮುದ್ರದಲ್ಲಿ ಅಲೆಗಳ ರಭಸಕ್ಕೆ ಸಿಲುಕಿಯೋ, ನದಿಯಲ್ಲಿ ಸೆಳವಿಗೆ ಸಿಗುವಂಥ ಪ್ರಕರಣಗಳಲ್ಲಿ ಜೀವ ಕಳೆದುಕೊಳ್ಳುವ ವ್ಯಕ್ತಿಯ ಅವಲಂಬಿತರ ಬಗ್ಗೆ ಸಹಾನುಭೂತಿ ಅಗತ್ಯ. ಅವರಿಗೆ ಎದುರಾಗುವ ನೋವನ್ನಂತೂ ಭರಿಸಲಾಗದು; ಕಡೆಯ ಪಕ್ಷ ಸರ್ಕಾರ ಅಂಥವರ ಭವಿಷ್ಯಕ್ಕೆ ಆಸರೆಯಾಗಲು ಅಗತ್ಯ ಪರಿಹಾರವನ್ನಾದರೂ ಒದಗಿಸುವ ನಿಯಮವನ್ನು ರೂಪಿಸುವ ಮೂಲಕ ಅವರ ನೆರವಿಗೆ ಬರಬೇಕಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ದಕ್ಷಿಣದ ಜನಸಂಖ್ಯೆ ಕುಸಿತ: ಸಣ್ಣದಲ್ಲ ಈ ಸವಾಲು

• ಎಸ್‌ಎನ್‌ವಿ ಸುಧೀರ್

ಹೆಚ್ಚು ಮಕ್ಕಳನ್ನು ಹೊಂದಲು ಪೋಷಕರನ್ನು ಪ್ರೋತ್ಸಾಹಿಸುವ ಸಂಬಂಧ ಕಾನೂನು ರೂಪಿಸುವ ಬಗ್ಗೆ ಚಿಂತನೆ ನಡೆಸುತ್ತಿರುವುದಾಗಿ ಇತ್ತೀಚೆಗೆ ಆಂಧ್ರ ಪ್ರದೇಶದ ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಅವರು ಹೇಳಿದ್ದಾರೆ. ಅದು ರಾಜಕೀಯ ಘೋಷಣೆಯಂತೆ ಕಾಣಬಹುದು. ಆದರೆ, ವಾಸ್ತವವಾಗಿ ಅದು ಆಪತ್ಕಾಲದ ಕೂಗು; ಭಾರತದಲ್ಲಿ ಆರ್ಥಿಕ ಬೆಳವಣಿಗೆ ಸಾಧಿಸಿರುವ ದಕ್ಷಿಣ ರಾಜ್ಯಗಳಲ್ಲಿ ಸದ್ದಿಲ್ಲದೇ ಘಟಿಸುತ್ತಿರುವ ಜನಸಂಖ್ಯೆ ಕುಸಿತದ ಸವಾಲನ್ನು ಬಹಿರಂಗವಾಗಿ ಒಪ್ಪಿಕೊಂಡ ಹೇಳಿಕೆಯಾಗಿದೆ.

ಮಹಿಳಾ ಸಾಕ್ಷರತೆ, ಮಹಿಳಾ ಸಬಲೀಕರಣ ಮತ್ತು ಕುಟುಂಬ ಕಲ್ಯಾಣ ಕಾರ್ಯಕ್ರಮಗಳನ್ನು ದಶಕಗಳವರೆಗೆ ದಕ್ಷತೆಯಿಂದ ಅನುಷ್ಠಾನ ಮಾಡುವ ಮೂಲಕ ಕೇರಳ, ತಮಿಳುನಾಡು, ಕರ್ನಾಟಕ, ಆಂಧ್ರ ಪ್ರದೇಶ ಮತ್ತು ತೆಲಂಗಾಣ ಪ್ರತಿ ಮಹಿಳೆಗೆ 2.1 ಮಕ್ಕಳಂತೆ ಬದಲಿ (ಜನಸಂಖ್ಯೆಯ ಪ್ರಮಾಣವನ್ನು ಕಾಯ್ದುಕೊಳ್ಳಲು ಅಗತ್ಯವಾದ) ಫಲವಂತಿಕೆಯ ಮಟ್ಟ ಮುಟ್ಟಿದ್ದವು.

ಆದರೆ, ಕಷ್ಟಪಟ್ಟು ಸಾಧಿಸಿದ ಈ ಜನಸಂಖ್ಯಾ ನಿಯಂತ್ರಣವು ಈಗ ತೀವ್ರ ಆರ್ಥಿಕ ಆತಂಕವಾಗಿ ಬದಲಾಗುತ್ತಿದೆ. ಇದು ಮಕ್ಕಳ ಜನನದ ವಿಚಾರ ಮಾತ್ರವಾಗಿರದೇ ಕಾರ್ಮಿಕರ ಪೂರೈಕೆ, ಪ್ರಗತಿ, ಸಾರ್ವಜನಿಕ ಹಣಕಾಸಿನ ವಿಚಾರವೂ ಆಗಿದೆ. ಜತೆಗೆ, ಒಂದು ಕಾಲದಲ್ಲಿ ತಾವು ಹಿಂದಿಕ್ಕಿದ ಉತ್ತರದ ರಾಜ್ಯಗಳನ್ನೇ ದಕ್ಷಿಣದ ರಾಜ್ಯಗಳು ಅವಲಂಬಿಸಬೇಕಾಗಿದೆ.

ಮಾದರಿ ನೋಂದಣಿ ವ್ಯವಸ್ಥೆಯ (ಎಸ್‌ಆರ್‌ಎಸ್) 2021ರ ಹೊಸ ದತ್ತಾಂಶವು ಜನಸಂಖ್ಯಾ ಸ್ವರೂಪದಲ್ಲಿನ ಬದಲಾವಣೆಯ ತೀವ್ರತೆಯನ್ನು ತೋರುತ್ತಿದೆ. ದಕ್ಷಿಣದ ಎಲ್ಲ ಐದು ರಾಜ್ಯಗಳ ಒಟ್ಟು ಫಲವಂತಿಕೆ ದರ (ಟಿಎಫ್‌ಆರ್) ಪ್ರತಿ ಮಹಿಳೆಗೆ 1.5 ಮತ್ತು 1.6 ಮಕ್ಕಳ ನಡುವೆ ಇದ್ದು, ಇದು ಇತ್ತೀಚಿನ ಅಂದಾಜುಗಳಿಗಿಂತಲೂ ಕಡಿಮೆ ಇದೆ. ಈ ರೀತಿ ಪ್ರತಿ ತಲೆಮಾರಿನ ಗಾತ್ರವೂ ತನ್ನ ಹಿಂದಿನ ತಲೆಮಾರಿಗಿಂತ ಸುಮಾರು ಶೇ 25ರಷ್ಟು ಕಡಿಮೆ ಆಗುತ್ತಿದ್ದು, ಇದು ಸಮುದಾಯಗಳು ಕುಗ್ಗುತ್ತಿರುವುದನ್ನು ಸೂಚಿಸುತ್ತಿದೆ. ಜತೆಗೆ, ಇದು ಕಾರ್ಮಿಕ ಮಾರುಕಟ್ಟೆಯಲ್ಲಿ ಕೊರತೆ ಸೃಷ್ಟಿಸಿ, ಕಾಲಾಂತರದಲ್ಲಿ ಸಾರ್ವಜನಿಕ ಹಣಕಾಸಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ.

ಉತ್ತರ ಭಾರತದಲ್ಲಿ ಪರಿಸ್ಥಿತಿ ತದ್ವಿರುದ್ಧವಾಗಿದೆ. ಬಿಹಾರವು ಟಿಆರ್‌ಎಫ್‌ನಲ್ಲಿ ಅಗ್ರಸ್ಥಾನದಲ್ಲಿದ್ದರೆ (3.0), ಉತ್ತರ ಪ್ರದೇಶದಲ್ಲಿ 2.7 ಮತ್ತು ಮಧ್ಯಪ್ರದೇಶದಲ್ಲಿ 2.6 ಇದ್ದು, ದಕ್ಷಿಣದ ರಾಜ್ಯಗಳಿಗಿಂತ ಎರಡರಷ್ಟಿದೆ. ಬಿಹಾರದಲ್ಲಿ ಪ್ರತಿ 1,000 ಮಂದಿಗೆ ಶಿಶು ಜನನ ಪ್ರಮಾಣವು 25.6ರಷ್ಟು ಇದ್ದರೆ, ಕೇರಳದಲ್ಲಿ 12.9ರಷ್ಟು ಇದೆ. ಇವು ಕೇವಲ ಅಲ್ಪ ವ್ಯತ್ಯಾಸಗಳಲ್ಲ; ‘ಎರಡು ಭಾರತಗಳು’ ಜನಸಂಖ್ಯೆಯ ಸ್ವರೂಪದಲ್ಲಿ ವಿರುದ್ಧ ದಿಕ್ಕಿನಲ್ಲಿ ಮತ್ತು ಸಂಘರ್ಷದ ಹಾದಿಯಲ್ಲಿ ಸಾಗುತ್ತಿರುವುದನ್ನು ಇವು ಸೂಚಿಸುತ್ತಿವೆ.

ವಲಸೆ ಮತ್ತು ಅಭಿವೃದ್ಧಿಯ ಅಂತರರಾಷ್ಟ್ರೀಯ ಸಂಸ್ಥೆ ಮತ್ತು ಭಾರತದ ಜನಸಂಖ್ಯಾ ಫೌಂಡೇಷನ್‌ನ ಮುನ್ನೋಟ ವರದಿಯು ಜನಸಂಖ್ಯಾಶಾಸ್ತ್ರಜ್ಞರು ಈ ಬಗ್ಗೆ ಹಿಂದೆಯೇ ನೀಡಿದ್ದ ಎಚ್ಚರಿಕೆಯನ್ನು ದೃಢಪಡಿಸಿದೆ. ದಕ್ಷಿಣದ ರಾಜ್ಯಗಳಲ್ಲಿ 2041ರ ನಂತರ ಜನಸಂಖ್ಯೆಯಲ್ಲಿ ತೀವ್ರ ಕುಸಿತ ಆರಂಭವಾಗುವ ಸಾಧ್ಯತೆಯಿದೆ ಎಂದು ಅವರು ಎಚ್ಚರಿಕೆ ನೀಡಿದ್ದರು.

‘ನೇಚರ್’ ಪತ್ರಿಕೆಯಲ್ಲಿ ಪ್ರಕಟವಾದ ಸಂಶೋಧನೆಯ ಪ್ರಕಾರ, 1981 ಮತ್ತು 2021ರ ನಡುವೆ ಭಾರತದ ಜಿಡಿಪಿಗೆ ಜನಸಂಖ್ಯೆಯು ವಾರ್ಷಿಕವಾಗಿ ಶೇ 1.9ರಷ್ಟು ಕೊಡುಗೆ ನೀಡಿದೆ. ಉತ್ಪಾದನಾ ಸಾಮರ್ಥ್ಯ ಹೆಚ್ಚಿರುವ ದೇಶದ ಅತ್ಯಂತ ಪ್ರಮುಖ ರಾಜ್ಯಗಳಲ್ಲಿ ದುಡಿಯುವ ವಯಸ್ಸಿನ ಜನರ ಕೊರತೆಯುಂಟಾದರೆ, ಜನಸಂಖ್ಯೆಯಿಂದ ಆಗುತ್ತಿದ್ದ ಪ್ರಯೋಜನಗಳು ಹಿಮ್ಮುಖವಾಗಬಹುದು.

ಭಾರತದ ಅಗ್ರಗಣ್ಯ ಜನಸಂಖ್ಯಾಶಾಸ್ತ್ರಜ್ಞರಲ್ಲಿ ಒಬ್ಬರಾದ ಎಸ್.ಇರುದಯ ರಾಜನ್ ಅವರು ಟಿಎಫ್‌ಆರ್ ಪ್ರವೃತ್ತಿಯ ಬಗ್ಗೆ ಮಾತನಾಡಿದ್ದು, ಫಲವಂತಿಕೆ ನಿಯಂತ್ರಿಸಲು ದಶಕಗಳ ಕಾಲ ರಾಜಕೀಯ ಬದ್ಧತೆ ತೋರಿದ್ದರ ಅನಿವಾರ್ಯ ಫಲಿತಾಂಶ ಇದು ಎಂದಿದ್ದಾರೆ. 1970ರ ದಶಕದಲ್ಲಿ ಕೇರಳದಲ್ಲಿ ನಡೆದ ಒಂದು ಅಭಿಯಾನದತ್ತ ಅವರು ಗಮನ ಸೆಳೆಯುತ್ತಾರೆ. ಆಗ ಸರ್ಕಾರದ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ಅಭಿಯಾನವನ್ನು ಸಾರ್ವಜನಿಕ ಉತ್ಸವದಂತೆ ನಡೆಸಲಾಗಿತ್ತು.

ಯುವಜನರು, ಹಿರಿಯರು ಎಲ್ಲಿ, ಎಷ್ಟು?



‘ಈಗ ಅವರು ಹೆಚ್ಚು ಮಕ್ಕಳನ್ನು ಹೊಂದುವಂತೆ ಒತ್ತಾಯಿಸುತ್ತಿದ್ದಾರೆ. ಕಡಿಮೆ ಮಕ್ಕಳನ್ನು ಹೊಂದುವ ದಿಸೆಯಲ್ಲಿ ಸರ್ಕಾರವು ಸಣ್ಣ ಕುಟುಂಬಗಳಿಗೆ ಪ್ರೋತ್ಸಾಹ ನೀಡಿದಾಗ, ಜನರು ಅದನ್ನು ಅನುಸರಿಸಿದ್ದರು. ಆದರೆ, ಹೆಚ್ಚಿನ ಮಕ್ಕಳನ್ನು ಹೊಂದುವಂತೆ ಸರ್ಕಾರ ನೀಡುತ್ತಿರುವ ಪ್ರೋತ್ಸಾಹವನ್ನು ಜನ ಅದೇ ರೀತಿಯಲ್ಲಿ ಸ್ವೀಕರಿಸದೇ ಇರಬಹುದು. ಇಂದಿನ ತಲೆಮಾರು ಕೂಡ ತಮ್ಮ ಪೋಷಕರು ಹುಟ್ಟುಹಾಕಿದ ಮಾದರಿಯನ್ನೇ ಅನುಸರಿಸುವ ಸಾಧ್ಯತೆಯಿದೆ. ಮುಂದಿನ ಪೀಳಿಗೆಯು ವಿಭಿನ್ನವಾಗಿ ಯೋಚಿಸಬಹುದೇನೋ. ಆದರೆ, ಅದು 30 ರಿಂದ 40 ವರ್ಷಗಳನ್ನು ತೆಗೆದುಕೊಳ್ಳಬಹುದು’ ಎಂದು ಅವರು ಹೇಳುತ್ತಾರೆ.

ಪ್ರೋತ್ಸಾಹ ಧನದ ನೀಡುವಂತಹ ಕ್ರಮಗಳಿಗಿಂತ ನೀತಿಯ ಮಟ್ಟದಲ್ಲಿ ಬದಲಾವಣೆ ತರುವುದು ಉತ್ತಮ ಎನ್ನುವುದು ರಾಜನ್ ಅವರ ಅನಿಸಿಕೆ. ಮಕ್ಕಳನ್ನು ಪಡೆದ ನಂತರ ಮತ್ತೆ ಕೆಲಸಕ್ಕೆ ಹಿಂದಿರುಗುವ ಬಗ್ಗೆ ಮಹಿಳೆಯರಿಗೆ ಖಾತರಿ ಬೇಕು’ ಎಂದು ಅವರು ಹೇಳುತ್ತಾರೆ.

ಅಂತರರಾಷ್ಟ್ರೀಯ ಪುರಾವೆಗಳೂ ರಾಜನ್ ಅವರ ನಿಲುವನ್ನು ಸಮರ್ಥಿಸುತ್ತವೆ. ಹೆಚ್ಚು ಮಕ್ಕಳನ್ನು ಹೆರುವಂತೆ ಉತ್ತೇಜಿಸುವ ಚೀನಾದ (ಪ್ರೋನಾಟಲಿಸ್ಟ್) ಕಾರ್ಯಕ್ರಮವು ಫಲವಂತಿಕೆ ಕುಸಿತವನ್ನು ಹಿಮ್ಮೆಟ್ಟಿಸುವಲ್ಲಿ ವಿಫಲವಾಗಿದೆ ಎಂದು ರ್‍ಯಾಂಡ್ ಕಾರ್ಪೊರೇಷನ್ 2025 ನವೆಂಬರ್‌ನಲ್ಲಿ ನಡೆಸಿದ ಮೌಲ್ಯಮಾಪನ ವರದಿಯಲ್ಲಿ ತಿಳಿಸಿದೆ.

ರಾಜನ್ ಅವರ ಪ್ರಕಾರ, ಮಕ್ಕಳನ್ನು ಹೊಂದು ಬಗೆಗಿನ ಮೂಲಭೂತ ಲೆಕ್ಕಾಚಾರವು ತಲೆಕೆಳಗಾಗಿದೆ. ‘ಮೊದಲು ಮಕ್ಕಳನ್ನು ಆಸ್ತಿ ಎಂದು ಪರಿಗಣಿಸಲಾಗುತ್ತಿತ್ತು. ಈಗ ಅವರು ಹೊಣೆಗಾರಿಕೆಗಳಂತೆ ಆಗಿದ್ದಾರೆ’ ಎಂದು ಅವರು ಹೇಳುತ್ತಾರೆ.

ಗ್ರಹಿಕೆಯಲ್ಲಿನ ಬದಲಾವಣೆಯು ಜೀವನದ ವಿವಿಧ ಹಂತಗಳಲ್ಲಿ ಗೋಚರಿಸುತ್ತಿದೆ. ಒಂದು ಕಾಲದಲ್ಲಿ ಮನೆಗಳಲ್ಲಿಯೇ ಮಕ್ಕಳ ಜನನ ಆಗುತ್ತಿತ್ತು. ಆದರೆ, ಈಗ ಹೆಚ್ಚಿನ ಹೆರಿಗೆಗಳು ಖಾಸಗಿ ಆಸ್ಪತ್ರೆಗಳಲ್ಲಿ ಆಗುತ್ತಿದ್ದು, ಅದಕ್ಕೆ ದುಬಾರಿ ವೆಚ್ಚ ಭರಿಸಬೇಕು. ಸಣ್ಣ ಕುಟುಂಬಗಳು ನಗರಕ್ಕೆ ವಲಸೆ ಬರುವ ಪ್ರವೃತ್ತಿ ಹೆಚ್ಚಾಗಿದ್ದು, ಮಕ್ಕಳ ಅನೌಪಚಾರಿಕ ಪಾಲನೆ ಕಣ್ಮರೆಯಾಗಿದೆ. ಇದರಿಂದ ಮಹಿಳೆಯರು ಹೆಚ್ಚುವರಿ ಸವಾಲನ್ನು ಎದುರಿಸಬೇಕಾಗಿ ಬಂದಿದೆ. ಮಕ್ಕಳ ಪಾಲನೆಗಾಗಿ ವೃತ್ತಿಜೀವನದ ಮಧ್ಯೆ ಬಿಡುವು ಪಡೆಯುವ ಅವರಿಗೆ ನಂತರ ಕೆಲಸಕ್ಕೆ ಹಿಂದಿರುಗುವ ಅವಕಾಶಗಳು ಸೀಮಿತವಾಗುತ್ತವೆ.

ಇದೆಲ್ಲದರ ಪರಿಣಾಮವಾಗಿ ಫಲವಂತಿಕೆ ಪ್ರಮಾಣವು ಕುಸಿದಿದ್ದು, ಅದು ಹೆಚ್ಚಾಗುವ ಯಾವುದೇ ಸೂಚನೆ ಪ್ರಸ್ತುತ ಕಾಣುತ್ತಿಲ್ಲ. ರಾಜನ್ ಅವರು ಹೇಳುವಂತೆ, ಇದು ವೈಯಕ್ತಿಕ ಬೆಳವಣಿಗೆಯ ಮಾನದಂಡವಾಗಿ ರೂಢಿಗೆ ಬಂದಿದ್ದು, ‘ಸಾಮಾಜಿಕ ಪದ್ಧತಿ’ಯಾಗಿ ಮಾರ್ಪಟ್ಟಿದೆ; ಜ್ಞಾನದ ರೀತಿಯಲ್ಲಿಯೇ ವ್ಯಕ್ತಿಯಿಂದ ವ್ಯಕ್ತಿಗೆ ಹರಡುತ್ತಿದೆ.

ವಲಸಿಗರನ್ನು ಆಧರಿಸಿದ ಆರ್ಥಿಕತೆ

ಜನಸಂಖ್ಯೆಯ ಸ್ವರೂಪದಲ್ಲಿ ಆಗುವ ಬದಲಾವಣೆಯಿಂದಾಗಿ ಅತ್ಯಂತ ಹೆಚ್ಚು ಪರಿಣಾಮವಾಗುವುದು ವಲಸೆ ಮತ್ತು ವಿದೇಶದಲ್ಲಿರುವ ಭಾರತೀಯರು ತಾಯ್ನಾಡಿಗೆ ಕಳುಹಿಸುವ ಹಣದ ಆರ್ಥಿಕತೆಯ ಮೇಲೆ. ಈ ಆರ್ಥಿಕತೆಯೇ ದಕ್ಷಿಣ ಭಾರತದ ರಾಜ್ಯಗಳನ್ನು ದೀರ್ಘ ಸಮಯದಿಂದ ಪೋಷಿಸುತ್ತಾ ಬಂದಿದೆ. ಕರ್ನಾಟಕ, ಕೇರಳ, ತಮಿಳುನಾಡು ಮತ್ತು ಆಂಧ್ರ ಪ್ರದೇಶ ದಶಕಗಳಿಂದ ಕೌಶಲ ಮತ್ತು ಅರೆಕೌಶಲ ಹೊಂದಿರುವ ಕಾರ್ಮಿಕರನ್ನು ಕೊಲ್ಲಿ ಮತ್ತು ಬೇರೆ ರಾಷ್ಟ್ರಗಳಿಗೆ ಕಳುಹಿಸುತ್ತಾ ಬಂದಿವೆ.

ವಿದೇಶಗಳಲ್ಲಿರುವ ಭಾರತೀಯರು ತಾಯ್ನಾಡಿಗೆ ಕಳುಹಿಸುತ್ತಿರುವ ಹಣದಲ್ಲಿ ಕೇರಳದ ಪಾಲು 2017ರಲ್ಲಿ ಶೇ 19ರಷ್ಟು ಇದ್ದದ್ದು, 2024ರ ಹೊತ್ತಿಗೆ ಶೇ 19.7ಕ್ಕೆ ಏರಿಕೆಯಾಗಿತ್ತು. ತಮಿಳುನಾಡಿನ ಪಾಲು ಶೇ 8ರಿಂದ ಶೇ 10.4ಕ್ಕೆ ಏರಿಕೆ ಕಂಡಿತ್ತು. ಕೇರಳದ ಬ್ಯಾಂಕುಗಳಲ್ಲಿ ಅನಿವಾಸಿ ಭಾರತೀಯರು (ಎನ್‌ಆರ್‌ಐ) ಇರಿಸಿರುವ ಠೇವಣಿ ಮೊತ್ತ ₹3 ಲಕ್ಷ ಕೋಟಿ.

ಕೇರಳದಿಂದ ಕೊಲ್ಲಿ ರಾಷ್ಟ್ರಗಳಿಗೆ ಉದ್ಯೋಗಕ್ಕಾಗಿ ವಲಸೆ ಹೋಗುತ್ತಿರುವುದು ಇತ್ತೀಚಿನ ವರ್ಷಗಳಲ್ಲಿ ಕಡಿಮೆಯಾಗಿದೆ. ಸ್ಥಳೀಯವಾಗಿ ಕೌಶಲ ಮಟ್ಟ ಹೆಚ್ಚಾಗುತ್ತಿರುವುದು ಮತ್ತು ಉತ್ತಮ ಸಂಬಳ ಸಿಗುತ್ತಿರುವುದರಿಂದ ವಿದೇಶದಲ್ಲಿ ಕಡಿಮೆ ಸಂಬಳದ ಕೆಲಸಕ್ಕೆ ಹೋಗಲು ಜನರು ಹಿಂದೇಟು ಹಾಕುತ್ತಿರುವುದು ಇದಕ್ಕೆ ಭಾಗಶಃ ಕಾರಣ. ಇದರ ನಡುವೆಯೇ, ಉತ್ತರ ಪ್ರದೇಶ ಮತ್ತು ಬಿಹಾರ ರಾಜ್ಯಗಳಿಂದ ಕಡಿಮೆ ಮತ್ತು ಅರೆಕೌಶಲ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಕಟ್ಟಡ ನಿರ್ಮಾಣ, ಆತಿಥ್ಯ ಮತ್ತು ಸೇವಾ ಕ್ಷೇತ್ರಗಳಲ್ಲಿ ಕೆಲಸ ಅರಸಿಕೊಂಡು ಕೊಲ್ಲಿ ರಾಷ್ಟ್ರಗಳಿಗೆ ಹೋಗಲು ಆರಂಭಿಸಿದ್ದಾರೆ.

‘ವಿದೇಶಗಳಲ್ಲಿರುವ ಕೇರಳದ ಕಾರ್ಮಿಕರು ಈಗ ಕೌಶಲಯುಕ್ತ ಉದ್ಯೋಗಗಳನ್ನು ಬಯಸುತ್ತಿದ್ದಾರೆ. ರಾಜ್ಯದಲ್ಲಿ ಸುಲಭವಾಗಿ ಶಿಕ್ಷಣ ಸಿಗುತ್ತಿರುವುದರಿಂದ ಇದು ಸಾಧ್ಯವಾಗಿದೆ’ ಎಂದು ಹೇಳುತ್ತಾರೆ ಕೇರಳದ ವಲಸೆ ಮತ್ತು ಎಲ್ಲರನ್ನೊಳಗೊಂಡ ಅಭಿವೃದ್ಧಿ ಕೇಂದ್ರದ ಕಾರ್ಯನಿರ್ವಾಹಕ ನಿರ್ದೇಶಕ ಬಿನೋಯ್ ಪೀಟರ್ ಹೇಳುತ್ತಾರೆ.

‘ಆದರೆ, ಈಗ ಹೆಚ್ಚಿನ ಮಲಯಾಳಿಗಳು ಅದರಲ್ಲೂ ಹೆಚ್ಚಾಗಿ ವಿದ್ಯಾರ್ಥಿಗಳು ಯುರೋಪ್, ಕೆನಡಾ ಮತ್ತು ಆಸ್ಟ್ರೇಲಿಯಾಕ್ಕೆ ಹೋಗುತ್ತಿದ್ದು, ಭವಿಷ್ಯದಲ್ಲಿ ಅಲ್ಲಿಯೇ ಅವರು ನೆಲಸುವ ಸಾಧ್ಯತೆ ಇದೆ. ಹೀಗಾದರೆ, ತಾಯ್ನಾಡಿಗೆ ಬರುವ ಹಣ ಕಡಿಮೆಯಾಗುತ್ತದೆ’ ಎನ್ನುತ್ತಾರೆ ಅವರು.

ಜನಸಂಖ್ಯೆ ಕುಸಿತದ ಸವಾಲನ್ನು ನೀತಿ ನಿರೂಪಕರು ಹೇಗೆ ನಿಭಾಯಿಸುತ್ತಾರೆ ಎಂಬುದರ ಮೇಲೆ ಮುಂದಿನ ದಶಕಗಳಲ್ಲಿ ದಕ್ಷಿಣ ಭಾರತದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಯು ಹೊಸ ರೂಪ ಪಡೆಯಲಿದೆ

ಪೂರಕ ಮಾಹಿತಿ: ಅರ್ಜುನ್ ರಘುನಾಥ್

ಫಲವಂತಿಕೆ ದರ ಕುಸಿತ ದಕ್ಷಿಣ ಭಾರತ ಮುಂದು

ರಾಜ್ಯಗಳು	2003	2008	2013	2018	2023
ಆಂಧ್ರ ಪ್ರದೇಶ	2.2	1.8	1.8	1.6	1.5
ಕರ್ನಾಟಕ	2.3	2	1.9	1.7	1.5
ಕೇರಳ	1.8	1.7	1.8	1.7	1.5
ತಮಿಳುನಾಡು	1.9	1.7	1.7	1.6	1.3
ತೆಲಂಗಾಣ	-	-	1.6	1.6	1.5
ಬಿಹಾರ	4.2	3.9	3.4	3.2	2.8
ಛತ್ತೀಸಗಢ	-	3	2.6	2.4	2.2
ಜಾರ್ಖಂಡ್	-	3.2	2.7	2.5	2.1
ಮಧ್ಯ ಪ್ರದೇಶ	3.8	3.3	2.9	2.7	2.4
ರಾಜಸ್ಥಾನ	3.8	3.3	2.8	2.5	2.3
ಉತ್ತರ ಪ್ರದೇಶ	4.4	3.8	3.1	2.9	2.6
ಭಾರತ	3	2.6	2.3	2.2	1.9

* ಒಟ್ಟು ಫಲವಂತಿಕೆ ದರ (ಟಿಎಫ್‌ಆರ್) ಎಂದರೆ, ಮಹಿಳೆಯೊಬ್ಬರು ತಮ್ಮ ಜೀವಮಾನದಲ್ಲಿ ಪಡೆಯುವ ಮಕ್ಕಳ ಸರಾಸರಿ ಸಂಖ್ಯೆ

ಫಲವಂತಿಕೆ ಕುಸಿತದ ಪರಿಣಾಮ

ಇನ್ನೊಂದು ಕಡೆ, ದಕ್ಷಿಣದ ರಾಜ್ಯಗಳಲ್ಲಿ ಕಡಿಮೆಯಾಗುತ್ತಿರುವ ಜನನ ಪ್ರಮಾಣವು ಈ ಪ್ರದೇಶದ ಕಾರ್ಮಿಕರ ಚಿತ್ರಣಕ್ಕೆ ಹೊಸ ರೂಪ ನೀಡುತ್ತಿದೆ. ಬಿಹಾರ, ಉತ್ತರ ಪ್ರದೇಶ, ಜಾರ್ಖಂಡ್, ಒಡಿಶಾ, ಪಶ್ಚಿಮ ಬಂಗಾಳ ಮತ್ತು ಮಧ್ಯಪ್ರದೇಶದಿಂದ ವಲಸೆ ಬಂದಿರುವ ಕಾರ್ಮಿಕರು ಕರ್ನಾಟಕ, ಕೇರಳ, ತಮಿಳುನಾಡಿನಾದ್ಯಂತ ಕಟ್ಟಡ ನಿರ್ಮಾಣ, ಕೈಗಾರಿಕೆ, ಮೀನುಗಾರಿಕಾ ಬಂದರು ಮತ್ತು ಮನೆಗಳ ಅಡುಗೆ ಕೋಣೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

‘ದಕ್ಷಿಣ ಭಾರತದ ರಾಜ್ಯಗಳಲ್ಲಿ ಒಟ್ಟು ಫಲವಂತಿಕೆ ದರ ಕುಸಿದಿರುವುದು ಉತ್ತರದಿಂದ ದಕ್ಷಿಣದೆಡೆಗೆ ಆಂತರಿಕ ವಲಸೆ ಹೆಚ್ಚಾಗುತ್ತಿರುವುದಕ್ಕೆ ನೇರ ಕಾರಣ’ ಎಂಬುದು ಪಾಪ್ಯುಲೇಷನ್ ಫೌಂಡೇಷನ್ ಆಫ್ ಇಂಡಿಯಾದ ಹಿರಿಯ ರಿಸರ್ಚ್ ಫೆಲೋ ರತ್ನಕುಮಾರ್ ಅವರ ಸ್ಪಷ್ಟ ಅಭಿಪ್ರಾಯ.

‘ಇದರ ತಕ್ಷಣದ ಪರಿಣಾಮವೇ ಕಾರ್ಮಿಕರ ಕೊರತೆ. ಭವಿಷ್ಯದಲ್ಲಿ ಇದು ಇನ್ನಷ್ಟು ಹೆಚ್ಚಾಗಲಿದೆ’ ಎಂದು ಹೇಳುತ್ತಾರೆ ಅವರು.

ಇದರ ಇನ್ನೊಂದು ಪರಿಣಾಮ ಏನೆಂದರೆ, ಯುವಜನರ ಸಂಖ್ಯೆ ಕಡಿಮೆಯಾಗಿ ವಯಸ್ಕರ, ವೃದ್ಧರ ಸಂಖ್ಯೆ ಹೆಚ್ಚಾಗುತ್ತಿರುವುದು. ಇದಕ್ಕೆ ಕೇರಳದ ಪಟ್ಟಣಂತಿಟ್ಟದ ಉದಾಹರಣೆಯನ್ನು ರತ್ನಕುಮಾರ್ ಕೊಡುತ್ತಾರೆ. ಈ ಜಿಲ್ಲೆಯು ದೇಶದಲ್ಲೇ ಅತ್ಯಂತ ಕಡಿಮೆ ಫಲವಂತಿಕೆ ದರವನ್ನು ಹೊಂದಿದೆ. ಇಲ್ಲಿನ ಜನಸಂಖ್ಯೆಯಲ್ಲಿ ವಯಸ್ಸಾದವರೇ ಹೆಚ್ಚಿದ್ದಾರೆ. ಮಕ್ಕಳ ಸಂಖ್ಯೆ ಕಡಿಮೆ ಇರುವುದರಿಂದ ಶಾಲೆಗಳು ಮುಚ್ಚುತ್ತಿವೆ. ಯುವ ಗ್ರಾಹಕರನ್ನು ಅವಲಂಬಿಸಿದ ವ್ಯಾಪಾರಕ್ಕೂ ಧಕ್ಕೆಯಾಗುತ್ತಿದೆ. ಇದು ಈ ಜಿಲ್ಲೆ ಒಂದರ ಕಥೆಯಲ್ಲ, ಭವಿಷ್ಯದಲ್ಲಿ ಇಡೀ ದಕ್ಷಿಣ ಭಾರತದಲ್ಲಿ ಇಂತಹ ಸ್ಥಿತಿ ನಿರ್ಮಾಣವಾಗಬಹುದು ಎಂಬುದು ಅವರ ಕಳವಳ.

ಹಣಕಾಸಿನ ಒತ್ತಡ

ಫಲವಂತಿಕೆ ಕುಸಿತದಿಂದ ಕಾರ್ಮಿಕ ಬಲಕ್ಕೆ ಸೇರ್ಪಡೆಗೊಳ್ಳುವ ಯುವಜನರ ಸಂಖ್ಯೆ ಕಡಿಮೆಯಾಗುತ್ತಿದ್ದು, ಅವಲಂಬನೆ ಅನುಪಾತ ಹೆಚ್ಚಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಉದ್ಯೋಗ ಮಾಡುವ ಪ್ರತಿ ವಯಸ್ಕನೂ ಹಿರಿಯ ನಾಗರಿಕರಿಗೆ ಬೆಂಬಲವಾಗಿ ನಿಲ್ಲಬೇಕಾಗುತ್ತದೆ. ದಕ್ಷಿಣದ ರಾಜ್ಯಗಳು ಉದಾರವಾಗಿರುವಂತಹ ಜನಕಲ್ಯಾಣ ಯೋಜನೆಗಳನ್ನು ಜಾರಿ ಮಾಡಿವೆ. ಆದರೂ, ಇದು ದೀರ್ಘಾವಧಿಯಲ್ಲಿ ಸರ್ಕಾರದ ಮೇಲಿನ ಹಣಕಾಸಿನ ಹೊರೆ ಹೆಚ್ಚಿಸುತ್ತದೆ. ಮುಂದಿನ ಎರಡು ದಶಕಗಳಲ್ಲಿ ದಕ್ಷಿಣದ ರಾಜ್ಯಗಳ ಜನಸಂಖ್ಯಾ ಸ್ವರೂಪದಲ್ಲಿ ಬದಲಾವಣೆ ಆರಂಭವಾಗುವ ನಿರೀಕ್ಷೆ ಇದೆ. ಯುವಜನರ ಸಂಖ್ಯೆ ಕುಸಿದು, ಹಿರಿಯರ ಸಂಖ್ಯೆ ಹೆಚ್ಚಾಗಲಿರುವುದರಿಂದ ಕಾರ್ಮಿಕ ಮತ್ತು ಸಾಮಾಜಿಕ ನೀತಿಗಳು ಹೊಸ ಪರಿಸ್ಥಿತಿಗೆ ಹೊಂದಿಕೊಳ್ಳಬೇಕಾದ ಅಗತ್ಯವಿದೆ. ಮಹಿಳೆಯರು ಕಾರ್ಮಿಕಬಲದಲ್ಲಿ ತೊಡಗಿಕೊಳ್ಳುವುದಕ್ಕೆ ಪ್ರೋತ್ಸಾಹ ನೀಡುವುದು, ಹಿರಿಯ ಕಾರ್ಮಿಕರ ಸಾಮರ್ಥ್ಯವನ್ನು ಬಳಸಿಕೊಳ್ಳುವುದು, ವಲಸೆ ಕಾರ್ಮಿಕರನ್ನು ಪರಿಣಾಮಕಾರಿಯಾಗಿ ಸಂಯೋಜಿಸುವುದು ಮತ್ತು ಬದಲಾಗುತ್ತಿರುವ ಜನಸಂಖ್ಯೆಯ ಸ್ವರೂಪಕ್ಕೆ ಅನುಗುಣವಾಗಿ ಸಾರ್ವಜನಿಕ ವೆಚ್ಚವನ್ನು ಮರುಮಾಪನಕ್ಕೆ ಒಳಪಡಿಸುವುದು... ಮುಂತಾದ ಪ್ರಮುಖ ವಿಷಯಗಳತ್ತ ಸರ್ಕಾರ ಗಮನ ಹರಿಸಬೇಕಾಗಿದೆ.

ಹೆಚ್ಚುತ್ತಿದೆ ಅಸಮಾನತೆ

- ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ 20ರಷ್ಟು ಜನಸಂಖ್ಯೆಯನ್ನು ಹೊಂದಿರುವ ದಕ್ಷಿಣದ ರಾಜ್ಯಗಳು ಹೆಚ್ಚು ಅಭಿವೃದ್ಧಿ ಹೊಂದಿದವು. ಆರ್ಥಿಕವಾಗಿ ಸಮೃದ್ಧವಾಗಿರುವಂಥವು. ರಾಷ್ಟ್ರೀಯ ಸರಾಸರಿಗೆ ಹೋಲಿಸಿದರೆ ಈ ರಾಜ್ಯಗಳ ಫಲವಂತಿಕೆ ದರ ಮತ್ತು ಜನಸಂಖ್ಯೆ ಬೆಳವಣಿಗೆ ದರ ಕಡಿಮೆ
- ದೇಶದ ಹೆಚ್ಚು ಅಭಿವೃದ್ಧಿ ಹೊಂದಿದ ಮತ್ತು ಪ್ರಗತಿಯಲ್ಲಿ ಹಿಂದೆ ಬಿದ್ದಿರುವ ರಾಜ್ಯಗಳ ನಡುವೆ ಜನಸಂಖ್ಯೆ ಮತ್ತು ಆರ್ಥಿಕ ಸ್ಥಿತಿಗತಿಯಲ್ಲಿನ ಅಂತರ ಹೆಚ್ಚಾಗುತ್ತಿರುವುದು ದಕ್ಷಿಣ ಭಾರತದಲ್ಲಿ ನೀತಿ ನಿರೂಪಣೆ ಮತ್ತು ಆರ್ಥಿಕತೆಯ ಕುರಿತು ಆತಂಕ ಆರಂಭವಾಗಿದೆ
- 2026ರ ಅಂದಾಜು ಜನಸಂಖ್ಯೆಯ ಆಧಾರದಲ್ಲಿ ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆ ಮಾಡಿದರೆ ದಕ್ಷಿಣದ ರಾಜ್ಯಗಳು ರಾಜಕೀಯ ಪ್ರಾತಿನಿಧ್ಯವನ್ನು ಕಳೆದುಕೊಳ್ಳುವ ಭೀತಿಯನ್ನು ಎದುರಿಸುತ್ತಿವೆ

ಭಾರತದ ವಲಸೆ ಪ್ರವೃತ್ತಿ

ಕಾರ್ಮಿಕಬಲದಲ್ಲಿ ವಲಸಿಗ ಕಾರ್ಮಿಕರ ಪ್ರಮಾಣ



ವಿದೇಶದ ಹಣ: ದಕ್ಷಿಣದ ಪಾಲು ಹೆಚ್ಚು

- ವಿದೇಶದಲ್ಲಿರುವ ಭಾರತೀಯರು ತವರಿಗೆ ಕಳುಹಿಸುವ ಹಣದಲ್ಲಿಗಣನೀಯವಾಗಿ ಹೆಚ್ಚಳವಾಗಿದೆ. 2010–11ರಲ್ಲಿ ಈ ಮೊತ್ತ 5,560 ಕೋಟಿ ಡಾಲರ್ (ಆಗ ಇದ್ದ ರೂಪಾಯಿ ಮೌಲ್ಯದಲ್ಲಿ ಅಂದಾಜು ₹2.57 ಲಕ್ಷ ಕೋಟಿ) ಇದ್ದರೆ, 2023–24ರಲ್ಲಿ 11,870 ಕೋಟಿ ಡಾಲರ್‌ಗೆ (ಆಗಿನ ರೂಪಾಯಿ ಮೌಲ್ಯದಲ್ಲಿ ಅಂದಾಜು ₹10.16 ಲಕ್ಷ ಕೋಟಿ) ಹೆಚ್ಚಳವಾಗಿದೆ.
- ಕರ್ನಾಟಕ ಸೇರಿದಂತೆ ದಕ್ಷಿಣದ ರಾಜ್ಯಗಳು ಈ ಹಣವನ್ನೇ ಹೆಚ್ಚು ಅವಲಂಬಿಸಿವೆ
- ಜಗತ್ತಿನ ಅಭಿವೃದ್ಧಿಹೊಂದಿದ ರಾಷ್ಟ್ರಗಳಲ್ಲಿರುವ ಭಾರತೀಯರು ತವರಿಗೆ ಕಳುಹಿಸುವ ಹಣದ ಪ್ರಮಾಣದಲ್ಲಿ ಗಣನೀಯವಾಗಿ ಹೆಚ್ಚಳವಾಗಿದ್ದು, ಇದುವರೆಗೂ ಕೊಲ್ಲಿ ರಾಷ್ಟ್ರಗಳಲ್ಲಿದ್ದವರು ಕಳುಹಿಸುತ್ತಿದ್ದ ಹಣವನ್ನು ಮೀರಿದೆ
- ಭಾರತೀಯ ವಲಸಿಗರು ಯುಎಇನಲ್ಲಿ ಹೆಚ್ಚು ಶ್ರಮ ಬೇಡುವ ಕೆಲಸದಲ್ಲಿದ್ದಾರೆ (ಬ್ಲೂ ಕಾಲರ್ ಜಾಬ್), ಅಮೆರಿಕದಲ್ಲಿರುವ ಭಾರತೀಯ ವಲಸಿಗರು ಕಚೇರಿಯಲ್ಲಿ ಮಾಡುವ ಉದ್ಯೋಗದಲ್ಲಿದ್ದಾರೆ (ವೈಟ್ ಕಾಲರ್ ಜಾಬ್). ಹೀಗಾಗಿ ಯುಎಇಗಿಂತಲೂ ಹೆಚ್ಚು ಹಣ ಅಮೆರಿಕದಿಂದ ಭಾರತಕ್ಕೆ ಬರುತ್ತದೆ

ಬದುಕು ಇಬ್ಬದಿ

ನುಡಿ ಬೆಳಗು

ವಾಸುದೇವ ನಾಡಿಗ್

ಅವನ ಹಿಂದಿ ಭಾಷೆಯನ್ನು ಕೇಳಿದರೆ ಬಹುತೇಕ ಉತ್ತರ ಪ್ರದೇಶದವನೆಂದು ಗೊತ್ತಾಗಿಬಿಡುತ್ತದೆ. ಎಗ್ಗುಸಿಗ್ಗು ಸಂಕೋಚವಿರದೆ ಜೋರಾಗಿ ಫೋನ್‌ನಲ್ಲಿ ಕೂಗ್ತಾ ಮಾತಾಡುತ್ತಿದ್ದ. ‘ಮಾ ಮುಝೆ ನೌಕರಿ ಮಿಲ್‌ಗಯಾ’ ಅಂತ ವಿವರಿಸ್ತಾ ಇದ್ದ. ಕಾಂಕ್ರೀಟಿನ ಬೈಪಾಸ್ ರೋಡು ರಾಚುವ ಧಗೆ ಮಧ್ಯೆಯೂ ವಿವರಿಸ್ತಾ ಇದ್ದ. ವಾತಾವರಣ ಬಹಳ ಆರಾಮ್ ಇದೆ; ಬಿಸಿಲು ಇಲ್ಲ ಧಗೆ ಇಲ್ಲ, ಏಕ್‌ದಂ ಕೂಲ್ ಅಂತ ತಾನು ಸಪ್ಲೈಯರ್ ಆಗಿ ಕೆಲಸಕ್ಕೆ ಸೇರಿದ ವಿಶಾಲವಾದ ಗಾರ್ಡನ್ ಹೋಟೆಲ್ ಮತ್ತು ಅದರ ಅಂದಚೆಂದವನ್ನು ತನ್ನ ತಾಯಿಗೆ ಬಣ್ಣಿಸುತ್ತಿದ್ದ. ಹಿಂದಿ ಅರ್ಥವಾಗುತ್ತಿದ್ದ ಕೆಲವರು ಅವನ ಮಾತನ್ನು ಕೇಳಿಸಿಕೊಂಡು ಬೆವರು ಒರೆಸಿಕೊಳ್ತಾ ಧಗೆಗೆ ಹಿಡಿಶಾಪ ಹಾಕ್ತಾ ಕೂಲ್ ಡ್ರಿಂಕ್ಸ್ ಕುಡಿಯುತ್ತಿದ್ದರು. ಇವನು ನೋಡಿದರೆ ಕಾಶ್ಮೀರಕ್ಕೆ ಬಂದರೀತಿ ಸಂಭ್ರಮ ಪಡ್ತಾ ಇದಾನೆ. ‘ಸಂಬಳಕ್ಕೇನೂ ಚಿಂತೆ ಇಲ್ಲ. ಹಣ ಕಳಿಸ್ತೀನಿ. ನಿನ್ನನ್ನೂ ಒಮ್ಮೆ ಇಲ್ಲಿಗೆ ಕರೆದುಕೊಂಡೂ ಬರ್ತೀನಿ’ ಅಂತ ಹೇಳುತ್ತ ಭಾವುಕನಾಗೇ ಮಾತು ಮುಗಿಸಿದ.

ಬಿಸಿಲು ಬೆಳದಿಂಗಳು, ಬೆಳದಿಂಗಳು ಬಿಸಿಲು ಈ ಬಾಳಿನಾಟ. ಐವತ್ತು ನೂರು ಕಿಲೋಮೀಟರ್‌ಗಳ ಅಂತರದಲ್ಲೂ ಬದಲಾಗುವ ಈ ವಾತಾವರಣ ನಮ್ಮ ಮನಃಸ್ಥಿತಿ ಮತ್ತು ಬಾಳನ್ನು ನಿರ್ಧರಿಸಿಬಿಡುತ್ತದೆ. ಶೆಡ್‌ಗಳಲ್ಲೇ ತಾತ್ಕಾಲಿಕ ಬಾಳನ್ನು ಕಟ್ಟಿಕೊಂಡ ಅನೇಕ ಹೆಣ್ಣುಮಕ್ಕಳು ಹವಾನಿಯಂತ್ರಣ ವ್ಯವಸ್ಥೆಯ ರೂಮ್ ಇರುವ ಮನೆಗಳಲ್ಲಿ ಕೆಲಸಕ್ಕೆ ಬರುತ್ತಿರುತ್ತಾರೆ. ಪಾತ್ರೆ ಮುಸುರೆ ನೆಲ ಅಂತ ತ್ರಾಣ ಬಸಿದುಹೋಗುತ್ತಾರೆ. ಇಲ್ಲಿ ಹವಾನಿಯಂತ್ರಣ ವ್ಯವಸ್ಥೆ ನಡುವೆಯೂ ಸಿಡಿಮಿಡಿ ಮಾಡುವ, ಅಚಾನಕ್ ಕರೆಂಟ್ ಹೋದರೆ ಗ್ರಾಚಾರ ಬಿಡಿಸುವ ಹಾಗೆ ಬೈಯುವ ಜನರೆದುರು, ಆ ಶೆಡ್ ಮನೆಯ ಕುಟುಂಬದ ಬಾಳು ಬವಣೆ ಊಹೆಗೂ ಸಿಗುವುದಿಲ್ಲ. ಆ ಶೆಡ್ಡಿನ ಬಿಸಿ ಹಬೆಯಲ್ಲೇ ಓದಿ ಖಾಸಗಿ ಕೋಣೆ ಇರದೆ ಅಲ್ಲೇ ಮಲಗಿ ಅರೆನಿದ್ದೆ ಬೆವೆತು ಶಾಲೆಗೆ ಹೋಗುವ ಮಕ್ಕಳ ಎದುರು ಮಹಲುಗಳಲ್ಲಿನ ಮಕ್ಕಳು ನಿಲ್ಲಲಾರರು. ದಂಡಿಯಾಗಿ ನೀರು ಸುರಿಯುತ್ತಿದ್ದರೂ ಕೈ ತೊಳೆಯಲಾರದೆ ಚಮಚಾಗಳಲ್ಲಿ ಊಟ ಮಾಡುವ ಜನ ಮತ್ತು ನೀರಿಗೆ ತತ್ವಾರ ಇದ್ದರೂ ಬೆರಳು ತಟ್ಟೆಗಳನ್ನು ನೆಕ್ಕಿ ನೆಕ್ಕಿ ಊಟ ಮಾಡುವ ಜನರ ಕತೆ ಇದು. ಹಬೆಯ ಬೆವರೇ ರೋಗನಿರೋಧಕ ಔಷಧವಾದವರ ಬಾಳಿನಲ್ಲಿ ಚಮಚಾ ಗ್ಲೌಸ್ ಟಿಶ್ಯೂಗಳು ನಗೆಪಾಟಲಿನ ವಸ್ತು ಬಿಡಿ.

ಮತ್ತದೇ ಮಾತು ನೆನಪಾಗುತ್ತದೆ. ‘ಮಾ ಮುಝೆ ನೌಕರಿ ಮಿಲ್ ಗಯಾ. ಆಪ್ಕೋ ಭೀ ಯಹಾ ಲೇ ಕರ್ ಆವೂಂಗಾ!’ ಅಮೆರಿಕ ಜರ್ಮನ್ ಸ್ಪೇನ್ ಸ್ವೀಡನ್ ಸ್ವಿಸ್ ಇತ್ಯಾದಿ ಕಡೆಗೆ ಹೋದ ಮಗ ಅಥವಾ ಮಗಳು ಅಪ್ಪ ಅಮ್ಮ ಫೋನ್ ಮಾಡಿದಾಗ ಇಲ್ಲಸಲ್ಲದ ಹಣಕಾಸಿನ ವಾತಾವರಣ, ಬಾರದ ಅರಿಯರ್ಸ್, ಕಟ್ಟಬೇಕಾದ ಮಾಸಿಕ ಕಂತುಗಳ ಗೋಳನ್ನೇ ಹೇಳಿಕೊಳ್ಳುವ ಸಂಗತಿಗಳೂ ನೆನಪಾಗುತ್ತವೆ. ಇದ್ದುದರಲ್ಲೇ ಖುಷಿ ಪಡುವ ಒಂದು ವರ್ಗ ಮತ್ತು ಏನೆಲ್ಲ ಇದ್ದರೂ ಸದಾ ಪರಿತಪಿಸುವ ಇನ್ನೊಂದು ವರ್ಗದ ನಿತ್ಯನಿರಂತರ ಮಥನ ಇದು. ಜೀವನದ ತಾತ್ವಿಕತೆ ವ್ಯಾಖ್ಯಾನಕ್ಕೆ ಸಿಗದೆ ನುಣುಚಿಕೊಳ್ಳುತ್ತದೆ. ❖

ಪದಬಂಧ 6367

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ನೆನಪಿನಿಂದ ಮಾಸದ ತಿಂಗಳು (2)
5.ಪೂರ್ತಿ ಹಿಡಿಯದ ಗ್ರಹಣ (5)
6.ಪರಾಜಿತನು ಹಿಡಿದಿರುವ ಅಗಲವಾದ ತಟ್ಟೆ (3)
7.ಓದುವಿಕೆಯನ್ನು ಹೀಗೆನ್ನಿ (3)
8.ಸಂಗೀತ ಕೃತಿಗಳನ್ನು ರಚಿಸುವವನು (5)
9.ಸತ್ತವರನ್ನು ಹೂಳುವ ಜಾಗ (3)
10.ಒಳ್ಳೆಯ ಅದೃಷ್ಟ (3)
13.ಆನಂದವನ್ನುಂಟುಮಾಡುವುದು (5)
14.ಇದು ಸೋವಿಯಾದುದು (2)

ಮೇಲಿಂದ ಕೆಳಕ್ಕೆ
1.ಅತಿಯಾದ ದುಃಖ (4)
2.ಗ್ರಹ ಕೊನೆಗಿದ್ದಾಗಿನ ಹತೋಟಿ (3)
4.ನೆಮ್ಮದಿ ಹೀಗೆ ಬಂದಿದೆ (4)
5.ಖಂಡತುಂಡವಾಗಿ ಮಾತನಾಡುವವನು (5)
7.ಈತ ಹಕ್ಕುದಾರ (5)
9.ಅತಿಯಾದ ಆನಂದ (4)
11.ಮಳೆಗಾಲವನ್ನು ಹೀಗೆನ್ನಿ (4)
12.ದನಕ್ಕಾಗಿ ನಡೆದ ಹೋರಾಟ (3)

6366ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಹೂಮಂಚ 3.ಸುಧಾರಕ 5.ಘಟ 6.ದರವೇಶಿ 7.ಅತಿಕ್ರಮ ಪ್ರವೇಶ 10.ಸುಮಬಾಣ 11.ಶುಕ 13.ಗಬ್ಬುನಾತ 14.ದಮಡಿ

ಮೇಲಿಂದ ಕೆಳಕ್ಕೆ:
1.ಹೂಟ 2.ಚರಟ 4.ಕಕ್ಷಿ 5.ಘನಅ 6.ದಮಾಪ್ರ 8.ಕ್ರಮೇಣ 9.ಶತಕ 10.ಸುಭಗ 11.ಶುಭದ 12.ಗಡಿ

ಸುಡೊಕು 6750

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

		4			1			3
	7	1				6		
5			8		9		4	7
		5	4			3		
	6						7	
3					8	5		9
4	1			8			3	5
		2	7		4	9		1
7		9		3			2	

6749 ಸುಡೊಕು

2	4	8	3	7	1	5	6	9
9	5	6	4	8	2	3	7	1
7	3	1	9	5	6	2	8	4
6	9	4	1	3	8	7	5	2
5	7	2	6	4	9	1	3	8
8	1	3	7	2	5	9	4	6
3	6	7	2	1	4	8	9	5
4	2	5	8	9	3	6	1	7
1	8	9	5	6	7	4	2	3

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

08 ಏಪ್ರಿಲ್ 2026 ಬುಧವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ಷಷ್ಠಿ ಗಂ. 19-02 ನಕ್ಷತ್ರ: ಜ್ಯೇಷ್ಠ ಗಂ 5-54 ಯೋಗ: ವರಿಯಾನ್ ಗಂ. 17-10 ಮೀನ ಮಾಸದ 25 ನೇ ದಿನ. ಮಳೆ ನಕ್ಷತ್ರ : ರೇವತಿ 3 ನೇ ಪಾದ. ರಾಹುಕಾಲ : ಮಧ್ಯಾಹ್ನ 12-00 - 01-30, ಸೂರ್ಯೋದಯ : 06-26 ಸೂರ್ಯಾಸ್ತ : 06-39 ಮುಸ್ಲಿಂ ದಿನಾಂಕ : 19 ಶವ್ವಾಲ್, ಅದೃಷ್ಟ ಸಂಖ್ಯೆ : 9, 12

ಮೇಷ: ಕೋರ್ಟು ಕಚೇರಿ ವಿವಾದಗಳಲ್ಲಿ ಸತ್ಯವನ್ನು ಬಿಟ್ಟುಹೋಗುವುದು ಸರಿಯಲ್ಲ. ನೆರೆಯವರೊಂದಿಗಿನ ಸಂಬಂಧಗಳು ಮತ್ತಷ್ಟು ಸುಧಾರಿಸಲಿವೆ. ಖರ್ಚು ವೆಚ್ಚಗಳ ಮೇಲೆ ಬಿಗಿ ಹಿಡಿತ ಅನಿವಾರ್ಯ.

ವೃಷಭ: ನಿರ್ದಿಷ್ಟ ಕೆಲಸಗಳಿಗೆ ಗಮನ ಕೊಡಿ. ಸಮಯದ ಅಭಾವ ಎದುರಾಗಲಿದೆ. ವೈದ್ಯರು ವೃತ್ತಿಯಲ್ಲಿ ಜಾಗ್ರತೆ ವಹಿಸಿ. ಸತ್ಯನಾರಾಯಣನ ಅನುಗ್ರಹಕ್ಕಾಗಿ ಪ್ರಾರ್ಥಿಸಿರಿ.

ಮಿಥುನ: ಮಗನ ನೂತನ ಕೆಲಸದ ವಿಚಾರವನ್ನು ಗೌಪ್ಯವಾಗಿ ಕಾಪಾಡಿಕೊಳ್ಳಿ. ಕೆಟ್ಟ ಜನರ ಕೆಟ್ಟ ದೃಷ್ಟಿ ದೋಷಕ್ಕೆ ಬೀಳುವ ಸಾಧ್ಯತೆ ಇರುತ್ತದೆ. ದೈನಂದಿನ ಕೆಲಸ ಕಾರ್ಯಗಳಲ್ಲಿ ಹೆಚ್ಚಿನ ಬದಲಾವಣೆ ಇರುವುದಿಲ್ಲ.

ಕರ್ಕಾಟಕ: ನೆರೆಯವರ ಸಹಾಯದಿಂದ ಮಗಳ ಮದುವೆ ನಿಶ್ಚಯವಾಗಲಿದೆ. ಹಿರಿಯರ ಮಾತಿನಂತೆ ನಡೆದುಕೊಳ್ಳುವ ನಿರ್ಧಾರ ಶುಭಪ್ರದ. ಆಫೀಸಿನಲ್ಲಿ ಕೆಲಸ ಕಾರ್ಯಗಳು ಹೆಚ್ಚಲಿವೆ. ಹೊಸ ಒಪ್ಪಂದಗಳಿಂದ ಲಾಭ ಇರಲಿದೆ.

ಸಿಂಹ: ದೈಹಿಕ ಕೆಲಸವನ್ನು ಮಾಡಿ ದುಡಿಮೆ ಮಾಡುತ್ತಿರುವವರಿಗೆ ವಿಶ್ರಾಂತಿ ಬೇಕು. ಸಂಸ್ಥೆಯೊಂದರ ಸಲಹೆಗಾರರಾಗಿರುವವರಿಗೆ ಒತ್ತಡ ಮತ್ತು ಸಂದಿಗ್ಧ ಪರಿಸ್ಥಿತಿ ಎದುರಾಗುತ್ತದೆ.

ಕನ್ಯಾ: ಶತ್ರುಗಳ ಉಪಟಳ ಎದುರಿಸುವ ಸಾಮರ್ಥ್ಯ ಭಗವಂತ ನೀಡಲಿದ್ದಾನೆ. ಕಿರುತೆರೆ ಕಲಾವಿದರಿಗೆ ವಿಪುಲ ಅವಕಾಶಗಳು ಒದಗಲಿವೆ. ನಾಟ್ಯ, ಬರಹ, ಲಲಿತ ಕಲೆಗಳಲ್ಲಿ ಸಫಲತೆಯ ದಾರಿಗಳು ಒದಗಲಿವೆ.

ತುಲಾ: ಮಕ್ಕಳ ಜೊತೆ ಸಂತೋಷದಿಂದ ಕಾಲ ಕಳೆಯುವ ದಿಕ್ಕಿನಲ್ಲಿ ಕೆಲ ನಿರ್ಧಾರಗಳನ್ನು ಕೈಗೊಳ್ಳಬೇಕಾಗುವುದು. ನ್ಯಾಯವಾದಿಗಳಿಗೆ ಜಯ ಪ್ರಾಪ್ತಿಯಾಗಲು ಸತ್ಯ ಮಾರ್ಗದಲ್ಲಿದ್ದರಷ್ಟೇ ಸಾಧ್ಯ.

ವೃಶ್ಚಿಕ: ಮಾಹಿತಿ ತಂತ್ರಜ್ಞಾನದಲ್ಲಿ ಕೆಲಸ ಮಾಡುವವರಿಗೆ ಆದಾಯ ಕಾಣಲಿದೆ. ದೇವತಾನುಗ್ರಹದಿಂದ ಸಾಂಸಾರಿಕ ಸೌಖ್ಯ ಅಧಿಕವಾಗಿ ಪ್ರಾಪ್ತಿ. ಬಂಗಾರ ವ್ಯಾಪಾರಿಗಳು ವ್ಯಾಪಾರದಲ್ಲಿ ತಾಳ್ಮೆ ಕಳೆದುಕೊಳ್ಳಬೇಡಿ.

ಧನು: ಕೌಟುಂಬಿಕವಾಗಿ ಸರ್ವ ಸದಸ್ಯರ ಜತೆಯಲ್ಲಿ ಪೂಜಾ ಸಮಾರಂಭದಲ್ಲಿ ಸಂಭ್ರಮಿಸುವ ಸಮಯವಿದು. ದೈವಬಲ ಇರುವುದರಿಂದ ಪ್ರಯತ್ನ ಕಾರ್ಯಗಳೆಲ್ಲ ಶುಭ ಫಲಗಳನ್ನೇ ನೀಡಲಿವೆ. ಗೃಹೋಪಕರಣದ ಖರೀದಿಗೆ ಶುಭದಿನ.

ಮಕರ: ಎಲ್ಲಾ ವಿಚಾರಗಳಲ್ಲೂ ಸಾವಧಾನವಾಗಿ ಮುಂದುವರಿಯಿರಿ. ಕಾರ್ಯಕ್ಷೇತ್ರದಲ್ಲಿ ಸಹೋದ್ಯೋಗಿಗಳಿಂದ ಕಿರುಕುಳ ತೋರಿಬಂದೀತು. ಕಬ್ಬಿಣ, ತಾಮ್ರದ ಮಾರಾಟಗಾರರಿಗೆ ಉದ್ಯೋಗದಲ್ಲಿ ಬಿಡುವಿಲ್ಲದಂತಾಗುತ್ತದೆ.

ಕುಂಭ: ನಿರೀಕ್ಷಿತ ಸ್ಥಾನ, ಆದರ, ಆತಿಥ್ಯ ಪ್ರಾಪ್ತಿ. ಅಧಿಕ ಪ್ರಯಾಣಗಳು ಜತೆಯಲ್ಲಿ ದೇಹಾಯಾಸ ಕಂಡು ಬಂದರೂ ಕಾರ್ಯಾನುಕೂಲವಾಗಿ ಧನ ಲಾಭ. ಧಾರ್ಮಿಕ ಕೆಲಸ ಕಾರ್ಯಗಳಲ್ಲಿ ಆಸಕ್ತಿ ಹೆಚ್ಚಿಸಿಕೊಳ್ಳಿ.

ಮೀನ: ಖರ್ಚುಗಳಿಗೆ ತಕ್ಕಂತೆ ಆದಾಯವಿರುವುದರಿಂದ ಸಮಾಧಾನಕರ ವಾತಾವರಣ ಇರಲಿದೆ. ಯಾವುದೇ ತಪ್ಪುಗಳು ಸಂಭವಿಸದಂತೆ ಗಮನಹರಿಸಿ. ಕಾನೂನಿಗೆ ಗೌರವ ಕೊಡುವುದನ್ನು ಮರೆಯದಿರಿ.

ಗುಂಡಣ್ಣ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 22,968
ಇಂದಿನ ಅಂತ್ಯ: 23,123
ದಿನದ ಕನಿಷ್ಠ: 22,719
155

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹455
12 ಕ್ಕೆ ₹72
ಮೈಸೂರು: 100 ಕ್ಕೆ ₹460

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹465-760
ದ್ವಿತಳಿ (ಬಿ.ವಿ) ₹375-845

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹225
ಆರ್‌ಎಸ್‌ಎಸ್-5 ₹219
ಗುಡ್ ಲಾಟ್ ₹198

ಮುದ್ರೆ-ಮನೆ ಕಾಫಿ (50 ಕೆಜಿಗೆ)
ಎಪಿ ₹23,500
ಎಸಿ ₹14,150
ಆರ್‌ಪಿ ₹18,000
ಆರ್‌ಸಿ ₹9,825

ಉದ್ದಿಮೆಗಳಿಗೆ ಸಾಲ ಖಾತರಿ ಯೋಜನೆ?

ಎಂಎಸ್‌ಎಂಇ ಉದ್ಯಮ ಗುರಿಯಾಗಿಸಿ ಯೋಜನೆ ರೂಪಿಸಲು ಕೇಂದ್ರ ಒಲವು

ಮುಖ್ಯಾಂಶಗಳು
- ಕೇಂದ್ರ ಸರ್ಕಾರದಿಂದ ₹100 ಕೋಟಿವರೆಗೆ ಸಾಲ ಖಾತರಿ
- ₹2.5 ಲಕ್ಷ ಕೋಟಿ ಮೊತ್ತದ ಸಾಲ ಖಾತರಿ ಯೋಜನೆ
- ಕೋವಿಡ್ ಕಾಲದಲ್ಲಿ ಯಶಸ್ಸು

ನವದೆಹಲಿ (ಪಿಟಿಐ): ಉದ್ಯಮ ವಲಯಕ್ಕೆ ನೆರವು ಒದಗಿಸುವ ಉದ್ದೇಶದಿಂದ ₹2.5 ಲಕ್ಷ ಕೋಟಿ ಮೊತ್ತದ ಸಾಲ ಖಾತರಿ ಯೋಜನೆ ರೂಪಿಸಲು ಕೇಂದ್ರ ಸರ್ಕಾರ ಆಲೋಚಿಸುತ್ತಿದೆ ಎಂದು ಮೂಲಗಳು ಹೇಳಿವೆ.

ಅದರಲ್ಲೂ ಮುಖ್ಯವಾಗಿ ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಕಾರಣದಿಂದಾಗಿ ತೊಂದರೆಗೆ ಒಳಗಾಗಿರುವ ಎಂಎಸ್‌ಎಂಇ (ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ) ಉದ್ಯಮಗಳಿಗೆ ನೆರವು ನೀಡಲು ಈ ಯೋಜನೆ ಜಾರಿಗೆ ತರುವ ಚಿಂತನೆ ನಡೆದಿದೆ.

ಈ ಯೋಜನೆಯ ಅಡಿಯಲ್ಲಿ, ಅಮೆರಿಕ-ಇರಾನ್ ನಡುವಿನ ಸಂಘರ್ಷದ ಪರಿಣಾಮವಾಗಿ ಉದ್ಯಮಗಳು ಸಾಲ ಮರುಪಾವತಿಯಲ್ಲಿ ವಿಫಲವಾದಲ್ಲಿ ಸಾಲದ ಶೇಕಡ 90ರಷ್ಟು ಮೊತ್ತದವರೆಗಿನ ಅಥವಾ ಗರಿಷ್ಠ ₹100 ಕೋಟಿವರೆಗಿನ ಮೊತ್ತಕ್ಕೆ ಕೇಂದ್ರ ಸರ್ಕಾರವು ಖಾತರಿ ಒದಗಿಸಲಿದೆ.

ಕೇಂದ್ರ ಸರ್ಕಾರದ ಪೂರ್ಣ ಮಾಲೀಕತ್ವದ 'ರಾಷ್ಟ್ರೀಯ ಸಾಲ ಖಾತರಿ ಟ್ರಸ್ಟಿ ಕಂಪನಿ'ಯು (ಎನ್‌ಸಿಜಿಟಿಸಿ) ಬ್ಯಾಂಕ್ ಸಾಲಗಳಿಗೆ ಈ ಬಗೆಯ ಖಾತರಿಯನ್ನು ಒದಗಿಸಲಿದೆ. ಯೋಜನೆಗಾಗಿ ಕೇಂದ್ರ ಸರ್ಕಾರವು ಗರಿಷ್ಠ ₹18 ಸಾವಿರ ಕೋಟಿವರೆಗೆ ಹಣ ಒದಗಿಸಬೇಕಾಗುತ್ತದೆ.

ಈ ಯೋಜನೆಯು ಕೋವಿಡ್-19 ಸಾಂಕ್ರಾಮಿಕದ ಸಂದರ್ಭದಲ್ಲಿ ಬಹಳ ದೊಡ್ಡ ಯಶಸ್ಸು ಸಾಧಿಸಿತ್ತು. ಇದು ವಿವಿಧ ವಲಯಗಳ ಹಲವು ಉದ್ದಿಮೆಗಳು ತಮ್ಮ ಸಾಲ ತೀರಿಸಲು ನೆರವಾಯಿತು ಎಂದು ಮೂಲಗಳು ವಿವರಿಸಿವೆ.

ಕೋವಿಡ್-19 ಸಾಂಕ್ರಾಮಿಕದಿಂದಾಗಿ ತೊಂದರೆಗೆ ಒಳಗಾದ ಉದ್ದಿಮೆಗಳಿಗೆ ಪುನಃ ವಹಿವಾಟು ಆರಂಭಿಸಲು ನೆರವಾಗುವ ಉದ್ದೇಶದೊಂದಿಗೆ ಕೇಂದ್ರ ಸರ್ಕಾರವು 2020ರ ಮೇ ತಿಂಗಳಲ್ಲಿ 'ತುರ್ತು ಸಾಲ ಖಾತರಿ ಯೋಜನೆ' (ಇಸಿಎಲ್‌ಜಿಎಸ್) ಆರಂಭಿಸಿತು. ಎಂಎಸ್‌ಎಂಇ ವಲಯದ ಅರ್ಹ ಉದ್ದಿಮೆಗಳಿಗೆ ಇದು ನೆರವು ಒದಗಿಸಿತು.

ಈ ಯೋಜನೆಯು ಅರ್ಥವ್ಯವಸ್ಥೆಯ ಬಹುತೇಕ ಎಲ್ಲ ವಲಯಗಳಿಗೆ ಅನ್ವಯ ಆಗುವಂತಿತ್ತು. ಯೋಜನೆಯ ಅಡಿಯಲ್ಲಿ ಅರ್ಹ ಉದ್ಯಮಗಳಿಗೆ ನೀಡಿದ ಸಾಲಕ್ಕೆ ಶೇ 100ರಷ್ಟು ಖಾತರಿ ಒದಗಿಸಲಾಗಿತ್ತು.

ಯೋಜನೆಯ ಅಡಿಯಲ್ಲಿ ನೀಡುವ ಸಾಲದ ಬಡ್ಡಿಗೆ ಮಿತಿ ನಿಗದಿ ಮಾಡಲಾಗಿತ್ತು. ಅಲ್ಲದೆ, ಸಾಲದ ವೆಚ್ಚವನ್ನು ತಗ್ಗಿಸುವ ಉದ್ದೇಶದಿಂದ ಪ್ರಕ್ರಿಯಾ ಶುಲ್ಕಗಳನ್ನು ಮನ್ನಾ ಮಾಡಲಾಗಿತ್ತು, ಅವಧಿಗೆ ಮೊದಲೇ ಸಾಲ ಮರುಪಾವತಿ ಮಾಡಿದಲ್ಲಿ ಅದಕ್ಕೆ ಶುಲ್ಕ ವಿಧಿಸುತ್ತಿರಲಿಲ್ಲ. ಈ ಯೋಜನೆಯು 2023ರ ಮಾರ್ಚ್ 31ರವರೆಗೆ ಚಾಲ್ತಿಯಲ್ಲಿತ್ತು.

ಅಮೆರಿಕ ಮತ್ತು ಇಸ್ರೇಲ್ ಜೊತೆಯಾಗಿ ಇರಾನ್ ವಿರುದ್ಧ ಸಮರ ಆರಂಭಿಸಿದ ನಂತರದಲ್ಲಿ ಕಚ್ಚಾ ತೈಲದ ಬೆಲೆಯು ಸರಿಸುಮಾರು ಶೇ 50ರಷ್ಟು ಜಾಸ್ತಿಯಾಗಿದೆ. ಹೊರ್ಮುಜ್ ಜಲಸಂಧಿಯಲ್ಲಿ ಸರಕು ಸಾಗಣೆಗೆ ಅಡಚಣೆ ಉಂಟಾಗಿದೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಚಂದ್ರಕಾಂತ್ ಎಸ್, ವಿಜಯನಗರ, ಬೆಂಗಳೂರು

- **ಪ್ರಶ್ನೆ: ನಾನು ಬೆಂಗಳೂರಿನ ಖಾಸಗಿ ಕಂಪನಿಯೊಂದರಲ್ಲಿ ಉದ್ಯೋಗದಲ್ಲಿದ್ದು, ಹಳೆಯ ತೆರಿಗೆ ಪದ್ಧತಿಯ ಅನ್ವಯ ವಿವರ ಸಲ್ಲಿಸುತ್ತಿದ್ದೇನೆ. ಬಲ್ಲ ಮಾಹಿತಿ ಪ್ರಕಾರ ಸೆಕ್ಷನ್ 10ರ ಅಡಿ ಮನೆ ಬಾಡಿಗೆ ಪಾವತಿಗೆ ವಿನಾಯಿತಿ ಇದೆ. ನನ್ನ ಪ್ರಶ್ನೆ ಏನೆಂದರೆ, ನನ್ನ ಹುಟ್ಟೂರಲ್ಲಿ ನಾನು ಮನೆ ಕಟ್ಟಿಸುತ್ತಿದ್ದೇನೆ. ಇದನ್ನು ಬ್ಯಾಂಕ್ ಸಾಲದ ನೆರವಿನೊಂದಿಗೆ ಕಟ್ಟಲಾಗುತ್ತಿದೆ. ಆದರೆ ಮನೆ ಬಾಡಿಗೆ ವಿನಾಯಿತಿ ಪಡೆಯುತ್ತಿರುವಾಗ ಹೆಚ್ಚುವರಿ ಗೃಹಸಾಲದ ಬಡ್ಡಿಯನ್ನೂ ವಿನಾಯಿತಿಗೆ ಬಳಸುವುದು ಸರಿಯಲ್ಲ ಎನ್ನುವ ಅಭಿಪ್ರಾಯ ನನ್ನ ಸ್ನೇಹಿತರಿಂದ ಬಂದಿದೆ. ಇದು ಹೌದಾದಲ್ಲಿ ನನ್ನ ತೆರಿಗೆಯ ಹೊರೆ ಹೆಚ್ಚಲಿದೆ. ಈ ವಿಚಾರದಲ್ಲಿ ಅಧಿಕೃತ ಮಾಹಿತಿ ನೀಡಬೇಕಾಗಿ ಕೋರಿಕೆ.**

ಉತ್ತರ: ಆದಾಯ ತೆರಿಗೆ ಕಾಯ್ದೆಯ ನಿಯಮಗಳ ಪ್ರಕಾರ, ಒಬ್ಬ ಉದ್ಯೋಗಿ ಒಂದೇ ಆರ್ಥಿಕ ವರ್ಷದಲ್ಲಿ ಮನೆ ಬಾಡಿಗೆ ಭತ್ಯೆ ಮತ್ತು ಗೃಹಸಾಲದ ಮರುಪಾವತಿಯ ಮೇಲಿನ ತೆರಿಗೆ ವಿನಾಯಿತಿಯನ್ನು ಏಕಕಾಲದಲ್ಲಿ ಪಡೆಯಲು ಅವಕಾಶವಿದೆ. ನೀವು ಬೆಂಗಳೂರಿನಲ್ಲಿ ಉದ್ಯೋಗದಲ್ಲಿದ್ದು ಇಲ್ಲಿ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದೀರಿ ಮತ್ತು ನಿಮ್ಮ ಮನೆ ಬೇರೊಂದು ಊರಿನಲ್ಲಿ (ಹುಟ್ಟೂರಿನಲ್ಲಿ) ನಿರ್ಮಾಣ ಆಗುತ್ತಿರುವುದರಿಂದ, ಈ ಎರಡೂ ವಿನಾಯಿತಿಗಳನ್ನು ಪಡೆಯಲು ನೀವು ಸಂಪೂರ್ಣವಾಗಿ ಅರ್ಹರು.

ನೀವು ಹಳೆಯ ತೆರಿಗೆ ಪದ್ಧತಿಯನ್ನು ಅನುಸರಿಸುತ್ತಿರುವುದರಿಂದ ಈ ಪ್ರಯೋಜನ ನಿಮಗೆ ಲಭ್ಯವಿದೆ. ಆದಾಯ ತೆರಿಗೆ ಕಾಯ್ದೆಯ ಅಡಿಯಲ್ಲಿ [ಹೊಸ ನಿಯಮದ ಸೆಕ್ಷನ್ 11(11)] ನೀವು ಬೆಂಗಳೂರಿನಲ್ಲಿ ಪಾವತಿಸುತ್ತಿರುವ ಮನೆ ಬಾಡಿಗೆಗೆ ವಿನಾಯಿತಿ ಪಡೆಯಬಹುದು. ಹುಟ್ಟೂರಿನಲ್ಲಿರುವ ಮನೆಗಾಗಿ ನೀವು ಪಡೆಯುತ್ತಿರುವ ಗೃಹಸಾಲದ ಬಡ್ಡಿ ಪಾವತಿಗೆ ಹೊಸ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 22(2) ಅನ್ವಯ ಗರಿಷ್ಠ ₹2 ಲಕ್ಷದವರೆಗೆ ವಿನಾಯಿತಿ ಪಡೆಯಲು, ಮನೆ ಕಟ್ಟಿದ ಐದು ವರ್ಷಗಳವರೆಗೆ ಅವಕಾಶವಿದೆ.

ರಾಜೇಶ್ ನಾಯ್ಕ, ಮಂಗಳೂರು

- **ಪ್ರಶ್ನೆ: ಈ ತಿಂಗಳಿನಿಂದ ಅನ್ವಯಿಸುವಂತೆ ಪ್ಯಾನ್ ಸಂಬಂಧಿತ ಅನೇಕ ನಿಯಮಗಳು ಬದಲಾಗಿವೆ ಎಂದು ಸುದ್ದಿ ಮಾಧ್ಯಮಗಳ ಮೂಲಕ ತಿಳಿದಿದ್ದೇನೆ. ಬ್ಯಾಂಕ್, ಅಂಚೆ ಕಚೇರಿಗಳಲ್ಲಿ ಪ್ಯಾನ್ ನಮೂದಿಸುವ ಮಿತಿ ಬದಲಾಯಿಸಿದ್ದಾರೆಯೇ ಎಂಬುದು ನನ್ನ ಸಂದೇಹ. ಇದು ಹೊಸ ಆದಾಯ ತೆರಿಗೆ ನಿಯಮದ ಅನ್ವಯ ಜಾರಿಗೊಂಡಿದೆಯೇ? ಇದು ನಮ್ಮ ನಗದು ಅಥವಾ ಇತರ ಬ್ಯಾಂಕ್ ವರ್ಗಾವಣೆಗೆ ಸಂಬಂಧಿಸಿದ ವ್ಯವಹಾರಗಳ ಮೇಲೆ ಪರಿಣಾಮ ಬೀರಲಿದೆಯೇ?**

ಉತ್ತರ: ಹಣಕಾಸು ವ್ಯವಹಾರಗಳಲ್ಲಿ ಪ್ಯಾನ್ ನಮೂದಿಸುವುದು ವ್ಯವಹರಿಸುವ ವ್ಯಕ್ತಿಯ ಗುರುತಿನ ಉಲ್ಲೇಖವಲ್ಲದೆ, ದೇಶದ ತೆರಿಗೆ ವ್ಯವಸ್ಥೆಯ ಪಾರದರ್ಶಕತೆ ಮತ್ತು ಅನೇಕ ಆರ್ಥಿಕ ವ್ಯವಹಾರಗಳ ಜಾಲವನ್ನು ಪತ್ತೆಹಚ್ಚುವಲ್ಲಿ ನಿರ್ಣಾಯಕ ಪಾತ್ರ ನಿರ್ವಹಿಸುತ್ತದೆ. ಇದು ವೈಯಕ್ತಿಕವಾಗಿ ಅಘೋಷಿತ ಆದಾಯವನ್ನು ಪತ್ತೆಹಚ್ಚುವಲ್ಲಿ ಹಾಗೂ ತೆರಿಗೆ ವಂಚನೆ ನಿಯಂತ್ರಿಸುವಲ್ಲೂ ನೆರವಾಗುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಹೊಸ ಆದಾಯ ತೆರಿಗೆ ಕಾನೂನಿನ ಸೆಕ್ಷನ್ 159ನ್ನು (ಹಳೆಯ ಸೆಕ್ಷನ್ 114ಬಿ) ಪರಿಷ್ಕೃತ ದರಗಳೊಡನೆ ರೂಪಿಸಲಾಗಿದೆ. ನಮ್ಮ ನಿತ್ಯದ ಆರ್ಥಿಕ ವ್ಯವಹಾರಗಳ ಮೇಲೆ ಪರಿಣಾಮ ಬೀರುವ ಕೆಲವು ಪ್ರಮುಖ ಬದಲಾವಣೆಗಳನ್ನು ಈ ಕೆಳಗೆ ಕೊಡಲಾಗಿದೆ.

1.ಬ್ಯಾಂಕ್, ಅಂಚೆ ಕಚೇರಿ ಖಾತೆಯಿಂದ ನಗದು ಹಿಂಪಡೆಯುವಿಕೆ: ಬ್ಯಾಂಕ್ ಖಾತೆ ಅಥವಾ ಅಂಚೆ ಕಚೇರಿ ಖಾತೆಯಿಂದ ನಗದು ಹಿಂಪಡೆಯುವ ಸಂದರ್ಭಗಳಲ್ಲಿ ಪ್ಯಾನ್ ಮಾಹಿತಿ ಸಲ್ಲಿಸುವ ಮಿತಿಯನ್ನು ಹೊಸ ನಿಯಮಗಳ ಪ್ರಕಾರ ವಾರ್ಷಿಕ ₹20 ಲಕ್ಷದಿಂದ ₹10 ಲಕ್ಷಕ್ಕೆ ಕಡಿತಗೊಳಿಸಲಾಗಿದೆ.

2.ಬ್ಯಾಂಕ್, ಅಂಚೆ ಕಚೇರಿ ಖಾತೆಗೆ ನಗದು ಜಮಾ: ಹಳೆಯ ನಿಯಮದ ಪ್ರಕಾರ, ಬ್ಯಾಂಕ್ ಅಥವಾ ಅಂಚೆ ಕಚೇರಿ ಖಾತೆಗೆ ಒಂದು ದಿನದಲ್ಲಿ ₹50,000 ಮೀರಿದ ನಗದು ಜಮಾ ಮಾಡುವ ಸಂದರ್ಭದಲ್ಲಿ ಪ್ಯಾನ್ ಕಡ್ಡಾಯವಾಗಿತ್ತು. ಆದರೆ ನೂತನ ನಿಯಮಗಳ ಪ್ರಕಾರ, ದಿನದ ಮಿತಿಯ ಬದಲಿಗೆ ವಾರ್ಷಿಕ ಒಟ್ಟು ಮಿತಿಗೆ ಮಹತ್ವ ನೀಡಲಾಗಿದೆ. ಅಂದರೆ, ಒಂದು ಹಣಕಾಸು ವರ್ಷದಲ್ಲಿ ಒಟ್ಟು ₹10 ಲಕ್ಷ ಮೀರಿದ ನಗದು ಜಮಾ ಮಾಡಿದಾಗ ಪ್ಯಾನ್ ಕಡ್ಡಾಯವಾಗುತ್ತದೆ. ಇದರಿಂದ, ಪ್ರತಿ ದಿನ ₹50,000ಕ್ಕಿಂತ ತುಸು ಕೆಳಗಿನ ಮೊತ್ತ ಜಮಾ ಮಾಡುವ ತಂತ್ರ ಅಳವಡಿಸಿದರೂ ವಾರ್ಷಿಕ ಮೊತ್ತ ₹10 ಲಕ್ಷ ಮೀರಿದಾಗ ಪ್ಯಾನ್ ನಮೂದು ಅನಿವಾರ್ಯವಾಗುತ್ತದೆ.

3. ಸ್ಥಿರಾಸ್ತಿ ವ್ಯವಹಾರ: ಯಾವುದೇ ಸ್ಥಿರಾಸ್ತಿ ವ್ಯವಹಾರ ಕೈಗೊಳ್ಳುವಾಗ ಹಳೆಯ ತೆರಿಗೆ ನಿಯಮದ ಪ್ರಕಾರ ₹10 ಲಕ್ಷ ಮೀರಿದ ವ್ಯವಹಾರಗಳಿಗೆ ಪ್ಯಾನ್ ಕಡ್ಡಾಯ, ಹೊಸ ನಿಯಮದಲ್ಲಿ ಈ ಮಿತಿಯನ್ನು ₹20 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಈ ಸಡಿಲಿಕೆಯನ್ನು ಹಣದುಬ್ಬರ ಹಾಗೂ ಆಸ್ತಿ ಮೌಲ್ಯದಲ್ಲಾದ ಒಟ್ಟಾರೆ ಹೆಚ್ಚಳವನ್ನು ಗಮನಿಸಿ ಮಾಡಲಾಗಿದೆ.

4. ವಾಹನ ಖರೀದಿ, ಮಾರಾಟ: ಹಳೆಯ ನಿಯಮದಲ್ಲಿ ಬಹುತೇಕ ಎಲ್ಲ ಮೋಟಾರು ವಾಹನ ಖರೀದಿಗೆ ಪ್ಯಾನ್ ಕಡ್ಡಾಯವಾಗಿತ್ತು. ಆದರೆ ಹೊಸ ನಿಯಮದ ಅಡಿ ₹5 ಲಕ್ಷ ಮೀರಿದ ವ್ಯವಹಾರಗಳಿಗೆ ಮಾತ್ರ ಪ್ಯಾನ್ ಅನಿವಾರ್ಯ ಮಾಡಲಾಗಿದೆ. ಕೃಷಿಗೆ ಬಳಸುವ ಟ್ರ್ಯಾಕ್ಟರ್‌ಗಳನ್ನು ಈ ವ್ಯಾಪ್ತಿಯಿಂದ ಹೊರಗಿಡಲಾಗಿದೆ.

5. ಹೋಟೆಲ್, ಲಾಡ್ಜ್ ಪಾವತಿ: ಉಪಾಹಾರ ಕೇಂದ್ರ, ವಸತಿಗೃಹ, ಯಾವುದೇ ಸಮಾವೇಶ ಕೇಂದ್ರಗಳ ಪಾವತಿ, ಸಮಾರಂಭ ನಿರ್ವಹಣಾ ಸಂಸ್ಥೆಗಳಿಗೆ ಮಾಡುವ ಪಾವತಿ - ಇತ್ಯಾದಿಗಳಿಗೂ ನಗದು ಪಾವತಿ ಮಿತಿಯನ್ನು ₹50,000ದಿಂದ ₹1 ಲಕ್ಷಕ್ಕೆ ಹೆಚ್ಚಿಸಲಾಗಿದೆ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಇರಾನ್ ವಿರುದ್ಧದ ಯುದ್ಧ 2ನೇ ತಿಂಗಳಿಗೆ ಕಾಲಿಟ್ಟಿರುವುದು ಅಮೆರಿಕದ ಕಾರ್ಯತಂತ್ರದ ವೈಫಲ್ಯವೇ?

ಹೌದು ಅಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಅಡಿಕೆ ಧಾರಣೆ

ಪುತ್ತೂರು	
ಕೋಕ	20000-34500
ಹೊಸತು	30000-50000
ಹಳತು	50000-55500

ಸಾಗರ	
ಬಿಳಿಗೋಟು	28989-33299
ಚಾಲಿ	38799-43630
ಕೋಕ	26989-30699
ಕೆಂಪುಗೋಟು	32999-35499
ರಾಶಿ	46009-50599
ಸಿಪ್ಪೆಗೋಟು	20189-22899

ಶಿವಮೊಗ್ಗ	
ಸರಕು	75896-75896
ರಾಶಿ	46129-55509
ಗೊರಬಲು	20000-38779

ಸಿದ್ದಾಪುರ	
ಬಿಳಿಗೋಟು	27289-39689
ಚಾಲಿ	42509-49599
ಕೋಕ	22699-34219
ಕೆಂಪುಗೋಟು	30900-39099
ರಾಶಿ	48619-53899
ತಟ್ಟಿಬೆಟ್ಟೆ	37700-50119

ಶಿರಸಿ	
ಬೆಟ್ಟೆ	30501-51200
ಬಿಳಿಗೋಟು	29009-39399
ಚಾಲಿ	45000-50299
ಕೆಂಪುಗೋಟು	22101-45099
ರಾಶಿ	48000-53711

ಯಲ್ಲಾಪುರ	
ಆಪಿ	64811-64811
ಬಿಳಿಗೋಟು	16899-40711
ಚಾಲಿ	38629-50099
ಕೋಕ	13000-34969
ಕೆಂಪುಗೋಟು	21069-37969
ರಾಶಿ	48899-58259
ತಟ್ಟಿಬೆಟ್ಟೆ	38969-51315

ಚನ್ನಗಿರಿ	
ರಾಶಿ	50099-55500

ಮುಂಬೈ ಧಾರಣೆ (ಶೇಂಗಾ)

07-04-2026	
ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9700-9800
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1760 (1780)
ಒಂದು ವಾರದ ಡೆಲಿವರಿ	1755 (1775)
ಪಾಮ್ ವಾರದ ಡೆಲಿವರಿ	1508 (1598)
ಸೂರ್ಯಕಾಂತಿ ಎಣ್ಣೆ ಕಚ್ಚಾ	1590 (1595)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,46,400 (1,48,400)
ಬೆಳ್ಳಿ ಕೆ.ಜಿಗೆ	2,29,000 (2,34,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಮುಂಬೈ ಖಾದ್ಯ ತೈಲ
(ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1750 (1770)
ಸೋಯಾ (ರಿಫೈನ್ಡ್)	₹1550 (1590)
ಸೂರ್ಯಕಾಂತಿ (ರಿಫೈನ್ಡ್)	₹1700 (1700)
ಪಾಮೋಲಿನ್	₹1510 (1500)

ಕಾಸ್ಮೋಸ್ ಬ್ಯಾಂಕ್ ವಹಿವಾಟು ಏರಿಕೆ

ಬೆಂಗಳೂರು: ಮಾರ್ಚ್ 31ಕ್ಕೆ ಕೊನೆಗೊಂಡ ಹಣಕಾಸು ವರ್ಷದಲ್ಲಿ ಕಾಸ್ಮೋಸ್ ಬ್ಯಾಂಕ್‌ನ ಠೇವಣಿಗಳ ಮೊತ್ತವು ₹3,215 ಕೋಟಿಯಷ್ಟು ಹೆಚ್ಚಳ ಕಂಡಿದೆ ಎಂದು ಬ್ಯಾಂಕ್‌ನ ಅಧ್ಯಕ್ಷ ಪ್ರಲ್ಹಾದ ಕೋಕರೆ ತಿಳಿಸಿದ್ದಾರೆ.

ಇದೇ ಅವಧಿಯಲ್ಲಿ ಬ್ಯಾಂಕ್ ನೀಡಿರುವ ಸಾಲಗಳ ಮೊತ್ತವು ₹2,151 ಕೋಟಿಯಷ್ಟು ಹೆಚ್ಚಳವಾಗಿದೆ. ಸಾಲವಾಗಿ ನೀಡಿರುವ ಒಟ್ಟು ಮೊತ್ತವು ₹17,878 ಕೋಟಿಗೆ ತಲುಪಿದೆ ಎಂದು ಬ್ಯಾಂಕ್‌ನ ಪ್ರಕಟಣೆ ಹೇಳಿದೆ.

ಕಾಸ್ಮೋಸ್ ಬ್ಯಾಂಕ್ ನೀಡಿರುವ ಸಾಲಗಳಲ್ಲಿ ಸಣ್ಣ ಸಾಲಗಳ ಪ್ರಮಾಣ ಶೇ 52.52ರಷ್ಟು ಇದೆ ಎಂದು ಪ್ರಕಟಣೆ ತಿಳಿಸಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಶಿವಗಣಾರಾಧನೆ
ದಿನಾಂಕ: 1-04-2026ರಂದು ಇವರು ಲಿಂಗೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ. 11ನೇ ದಿನದ ಕಾರ್ಯಕ್ರಮವು ಏಪ್ರಿಲ್ 11, 2026 (ಶನಿವಾರ) ರಂದು ಮಧ್ಯಾಹ್ನ 12 ಗಂಟೆಗೆ ನಮ್ಮ ನಿವಾಸದಲ್ಲಿ ನಡೆಯಲಿದೆ. ಅಗಲಿದ ಆತ್ಮಕ್ಕೆ ವಿದಾಯ ಹೇಳಲು ಮತ್ತು ಅವರ ಜೀವನದ ಪಯಣವನ್ನು ಸಂಸ್ಮರಿಸಲು ದಯವಿಟ್ಟು ನಮ್ಮೊಂದಿಗೆ ಕೈಜೋಡಿಸಿ.
ಇಂತಿ ದುಃಖತಪ್ತರು:
ಡಾ. ಟಿ.ಕೆ. ನಾಗಭೂಷಣ, ಶ್ರೀಮತಿ ರಶ್ಮಿ ಸ್ವಾಮಿ, ಶ್ರೀ ಸ್ವರೂಪ್ ಭೂಷಣ್, ಚಿ. ಸಿದ್ಧಾರ್ಥ ಸ್ವಾಮಿ, ಕು. ನಿಟಾತಾ ಸ್ವಾಮಿ, ಚಿ. ಅನಿರುದ್ಧ ಸ್ವಾಮಿ, ಕು. ರಿಯಾ ಭೂಷಣ್, ಕು. ಮೈರಾ ಭೂಷಣ್
ಶ್ರೀಮತಿ ಪುಷ್ಪ ನಾಗಭೂಷಣ
ಜನ್ಮ ದಿನಾಂಕ: 27-11-1954
ನಿವಾಸದ ವಿಳಾಸ: #674/ಬಿ, 10ನೇ ಕ್ರಾಸ್, 5ನೇ ಮೇನ್, 2ನೇ ಹಂತ, ವೆಸ್ಟ್ ಆಫ್ ಕಾರ್ಡ್ ರೋಡ್ (WCR), ಮಹಾಲಕ್ಷ್ಮಿಪುರಂ, ಬೆಂಗಳೂರು-560086
Phone: 9611642057, 8951447727

ವಾಷಿಂಗ್ಟನ್‌ಗೆ ಮಿಸ್ರಿ 3 ದಿನ ಭೇಟಿ

ವಿಕ್ರಮ್ ಮಿಸ್ರಿ

ನವದೆಹಲಿ (ಪಿಟಿಐ): ದ್ವಿಪಕ್ಷೀಯ ವ್ಯಾಪಾರ ಮತ್ತು ರಕ್ಷಣಾ ಸಂಬಂಧಗಳನ್ನು ಪರಾಮರ್ಶಿಸಲು ಹಾಗೂ ಪಶ್ಚಿಮ ಏಷ್ಯಾದಲ್ಲಿ ಉಲ್ಬಣಗೊಂಡಿರುವ ಬಿಕ್ಕಟ್ಟಿನ ಬಗ್ಗೆ ಚರ್ಚಿಸಲು ಭಾರತದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಅವರು ಅಮೆರಿಕದ ವಾಷಿಂಗ್ಟನ್ ಡಿಸಿಗೆ ಮೂರು ದಿನಗಳ ಭೇಟಿಯನ್ನು ಬುಧವಾರದಿಂದ ಪ್ರಾರಂಭಿಸಲಿದ್ದಾರೆ.

'ಏಪ್ರಿಲ್ 8ರಿಂದ 10ರವರೆಗಿನ ಮಿಸ್ರಿ ಅವರ ಭೇಟಿಯು ಭಾರತ ಮತ್ತು ಅಮೆರಿಕ ನಡುವಿನ ದ್ವಿಪಕ್ಷೀಯ ಸಂಬಂಧಗಳ ಸ್ವರೂಪವನ್ನು ಮರು ಪರಿಶೀಲಿಸಲು, ಪ್ರಮುಖ ಕ್ಷೇತ್ರಗಳಲ್ಲಿ ನಡೆಯುತ್ತಿರುವ ಸಹಕಾರವನ್ನು ಮತ್ತಷ್ಟು ವೃದ್ಧಿಸಲು ಅವಕಾಶ ಕಲ್ಪಿಸಲಿದೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ಅಮೆರಿಕವು ಭಾರತದ ಮೇಲೆ ಪ್ರತಿಸುಂಕ ವಿಧಿಸಿದ ನಂತರ ಮತ್ತು ಕಳೆದ ವರ್ಷದ ಮೇ ತಿಂಗಳಿನಲ್ಲಿ ಭಾರತ-ಪಾಕಿಸ್ತಾನ ಸೇನಾ ಘರ್ಷಣೆಯನ್ನು ತಗ್ಗಿಸುವಲ್ಲಿ ಅಮೆರಿಕದ ಪಾತ್ರದ ಬಗ್ಗೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿವಾದಾತ್ಮಕ ಹೇಳಿಕೆಗಳನ್ನು ನೀಡಿದ ನಂತರ ಉಭಯ ದೇಶಗಳ ನಡುವಿನ ಸಂಬಂಧಗಳು ಹದಗೆಟ್ಟಿದ್ದವು.

ಮಿಸ್ರಿ ಅವರ ಪ್ರವಾಸದ ಸಮಯದಲ್ಲಿ ಪ್ರಸ್ತಾವಿತ ದ್ವಿಪಕ್ಷೀಯ ವ್ಯಾಪಾರ ಒಪ್ಪಂದವನ್ನು ಮುಂದುವರಿಸುವ ಬಗ್ಗೆ ಎರಡೂ ಕಡೆಯವರು ಚರ್ಚಿಸುವ ಸಾಧ್ಯತೆಯಿದೆ.

ಇರಾನ್ ಸಂಹಾರ: ಟ್ರಂಪ್ ಅಬ್ಬರ

ಒಂದನೇ ಪುಟದಿಂದ....

'ಅಮೆರಿಕ ಹಾಗೂ ಇಸ್ರೇಲ್ ಪಡೆಗಳು ಖಾರ್ಗ್ ದ್ವೀಪದ ಮೇಲೆ ನಡೆಸಿದ ದಾಳಿಯಲ್ಲಿ, ಅಲ್ಲಿನ ಮೂಲ ಸೌಕರ್ಯಗಳಿಗೆ ಹಾನಿಯಾಗಿಲ್ಲ' ಎಂದು ಇರಾನ್ ಹೇಳಿಕೊಂಡಿದೆ.

ಸಾವು: 'ಟೆಹರಾನ್ ಬಳಿಯ ಅಲ್‌ಬೋರ್ಜ್ ಪ್ರಾಂತ್ಯದ ವಸತಿ ಪ್ರದೇಶಗಳನ್ನು ಗುರಿಯಾಗಿಸಿ ನಡೆದ ದಾಳಿಗಳಲ್ಲಿ ಇಬ್ಬರು ಮಕ್ಕಳು ಸೇರಿ 18 ಜನರು ಮೃತಪಟ್ಟಿದ್ದು, ಇತರ 24 ಮಂದಿ ಗಾಯಗೊಂಡಿದ್ದಾರೆ' ಎಂದು ಅಲ್‌ಬೋರ್ಜ್ ಪ್ರಾಂತ್ಯದ ಡೆಪ್ಯುಟಿ ಗವರ್ನರ್ ಅವರ ಹೇಳಿಕೆ ಉಲ್ಲೇಖಿಸಿ ಮಿಜಾನ್ ಆನ್‌ಲೈನ್ ಜಾಲತಾಣ ಹಾಗೂ ಫಾರ್ಸ್ ಸುದ್ದಿಸಂಸ್ಥೆ ವರದಿ ಮಾಡಿವೆ.

ಇಸ್ರೇಲ್ ಹಾಗೂ ಸೌದಿ ಅರೇಬಿಯಾ ಮೇಲೆ ಇರಾನ್ ಪ್ರತಿ ದಾಳಿ ನಡೆಸಿದೆ.

'ಇರಾನ್ ಪಡೆಗಳು ಏಳು ಬ್ಯಾಲಿಸ್ಟಿಕ್ ಕ್ಷಿಪಣಿಗಳಿಂದ ಸೌದಿ ಅರೇಬಿಯಾ ಮೇಲೆ ದಾಳಿ ನಡೆಸಿವೆ. ಈ ಕ್ಷಿಪಣಿಗಳನ್ನು ಹೊಡೆದುರುಳಿಸಿದ್ದು, ಅವುಗಳ ಅವಶೇಷಗಳು ಇಂಧನ ಮೂಲಸೌಕರ್ಯಗಳ ಬಳಿ ಬಿದ್ದಿವೆ. ಇದರಿಂದ ಆಗಿರುವ ಹಾನಿ ಕುರಿತು ಪರಿಶೀಲನೆ ನಡೆಸಲಾಗುತ್ತಿದೆ' ಎಂದು ಸೌದಿ ಅರೇಬಿಯಾ ರಕ್ಷಣಾ ಸಚಿವಾಲಯ ವಕ್ತಾರ ಮೇಜರ್ ಜನರಲ್ ತುರ್ಕಿ ಅಲ್-ಮಲ್ಕಿ ಹೇಳಿದ್ದಾರೆ.

ಈ ದಾಳಿಯ ಬೆನ್ನಲ್ಲೇ, ಬಹರೇನ್‌ಗೆ ಸಂಪರ್ಕ ಕಲ್ಪಿಸುವ 'ಕಿಂಗ್ ಫಾಹ್ದ್ ಕಾಸ್‌ವೇ' ಸೇತುವೆಯನ್ನು ಸೌದಿ ಅರೇಬಿಯಾ ತಾತ್ಕಾಲಿಕವಾಗಿ ಮುಚ್ಚಿದೆ. 25 ಕಿ.ಮೀ. ಉದ್ದದ ಈ ಸೇತುವೆ ಸೌದಿ ಅರೇಬಿಯಾ ಮತ್ತು ಬಹರೇನ್ ನಡುವೆ ಸಂಪರ್ಕ ಕಲ್ಪಿಸುವ ಏಕೈಕ ಮಾರ್ಗವಾಗಿದೆ. ಇಸ್ರೇಲ್ ರಾಜಧಾನಿ ಟೆಲ್ ಅವೀವ್ ಹಾಗೂ ಏಲಟ್ ನಗರದ ಮೇಲೂ ಇರಾನ್ ದಾಳಿ ನಡೆಸಿದೆ.

ವಿಮಾನ ನಿಲ್ದಾಣಗಳ ಮೇಲೆ ದಾಳಿ: ಟೆಹರಾನ್‌ನ ಮೂರು ವಿಮಾನ ನಿಲ್ದಾಣಗಳನ್ನು ಗುರಿಯಾಗಿಸಿ ಸೋಮವಾರ ತಡರಾತ್ರಿ ದಾಳಿ ನಡೆಸಿದ್ದಾಗಿ ಇಸ್ರೇಲ್ ಸೇನೆ ಹೇಳಿದೆ.

ಬಹ್ರಾಮ್, ಮೆಹ್ರಾಬಾದ್ ಹಾಗೂ ಅಜಮಯೇಸ್ ವಿಮಾನನಿಲ್ದಾಣಗಳ ಮೇಲೆ ದಾಳಿ ನಡೆಸಿದ್ದು, ಇರಾನ್ ಸೇನೆಗೆ ಸೇರಿದ ಹಲವು ಹೆಲಿಕಾಪ್ಟರ್‌ಗಳು ಹಾಗೂ ಯುದ್ಧವಿಮಾನಗಳಿಗೆ ಹಾನಿ ಆಗಿದೆ ಎಂದೂ ಇಸ್ರೇಲ್ ಹೇಳಿದೆ.

ಬೈರೂತ್‌ನ ಪೂರ್ವ ಭಾಗದ ಏನ್ ಸಾದೇಹ್ ಪಟ್ಟಣದ ಅಪಾರ್ಟ್‌ಮೆಂಟ್ ಗುರಿಯಾಗಿಸಿ ನಡೆಸಿದ ದಾಳಿಯಲ್ಲಿ ಲೆಬನಾನ್ ಸೇನೆಯ ಪ್ರಮುಖ ಅಧಿಕಾರಿಯೊಬ್ಬರು ಹತರಾಗಿದ್ದಾರೆ ಎಂದು ಮೂಲಗಳು ಹೇಳಿವೆ.

ರೈಲ್ವೆ, ಸೇತುವೆ ಮೇಲೆ ದಾಳಿ: ಬೆಂಜಮಿನ್ ನೆತನ್ಯಾಹು

ಜೆರುಸಲೇಂ (ಎಎಫ್‌ಪಿ): 'ಇರಾನ್‌ನ ರೆವಲ್ಯೂಷನರಿ ಗಾರ್ಡ್ ಕೋರ್ (ಐಆರ್‌ಜಿಸಿ) ಬಳಸುತ್ತಿದ್ದ ರೈಲು ಮಾರ್ಗ ಹಾಗೂ ಸೇತುವೆಗಳ ಮೇಲೆ ದಾಳಿ ನಡೆಸಲಾಗಿದೆ' ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಮಂಗಳವಾರ ಹೇಳಿದ್ದಾರೆ.

ಇದನ್ನು ದೃಢಪಡಿಸಿರುವ ಇರಾನ್ ಅಧಿಕಾರಿಗಳು, ಇಸ್ರೇಲ್ ನಡೆಸಿದ ದಾಳಿಯಲ್ಲಿ ಕನಿಷ್ಠ ಎರಡು ಸೇತುವೆ, ರೈಲ್ವೆ ಮೂಲಸೌಕರ್ಯಕ್ಕೆ ಹಾನಿಯಾಗಿದೆ ಎಂದಿದ್ದಾರೆ.

'ಇರಾನ್‌ನ ಭಯೋತ್ಪಾದಕ ಆಡಳಿತವನ್ನು ಮಟ್ಟ ಹಾಕುತ್ತೇವೆ. ಇಸ್ರೇಲ್ ಯೋಧರು ನಿನ್ನೆ ಇರಾನ್‌ನ ಸರಕು ಸಾಗಣೆ ಯುದ್ಧವಿಮಾನಗಳು ಹಾಗೂ ಹತ್ತಕ್ಕೂ ಅಧಿಕ ಹೆಲಿಕಾಪ್ಟರ್‌ಗಳನ್ನು ಹೊಡೆದು ಹಾಕಿದ್ದರು. ಇಂದು ಐಆರ್‌ಜಿಸಿ ಬಳಸುವ ರೈಲು ಮಾರ್ಗ ಹಾಗೂ ಸೇತುವೆಗಳನ್ನು ಧ್ವಂಸ ಮಾಡಿದ್ದಾರೆ' ಎಂದು ನೆತನ್ಯಾಹು ಅವರು ವಿಡಿಯೊವೊಂದರಲ್ಲಿ ಹೇಳಿದ್ದಾರೆ.

ಇದಕ್ಕೂ ಮುನ್ನ, 'ಸುರಕ್ಷತೆ ದೃಷ್ಟಿಯಿಂದ ಇರಾನ್ ಜನರು ರೈಲುಗಳಲ್ಲಿ ಸಂಚರಿಸಬಾರದು' ಎಂದು ಇಸ್ರೇಲ್ ಸೇನೆ ಎಚ್ಚರಿಸಿತ್ತು.

'ರೈಲುಗಳಲ್ಲಿ ಹಾಗೂ ರೈಲು ಹಳಿಗಳ ಬಳಿ ಇರುವುದು ನಿಮ್ಮ ಜೀವಕ್ಕೆ ಅಪಾಯಕಾರಿ ಎನಿಸಲಿದೆ' ಎಂದು ಇಸ್ರೇಲ್ ಸೇನೆಯು ಸಾಮಾಜಿಕ ಜಾಲತಾಣದಲ್ಲಿ ಪರ್ಷಿಯನ್ ಭಾಷೆಯಲ್ಲಿ ಬರೆದುಕೊಂಡಿತ್ತು.

ಸ್ವತ್ತುಗಳ ರಕ್ಷಣೆ: ಜನರೇ ಗುರಾಣಿ

ಅಮೆರಿಕ-ಇಸ್ರೇಲ್ ಪಡೆಗಳ ದಾಳಿಯಿಂದ ದೇಶದ ಮೂಲಸೌಕರ್ಯಗಳನ್ನು ರಕ್ಷಿಸಲು ಜನರನ್ನೇ ಗುರಾಣಿಯನ್ನಾಗಿ ಬಳಸಲು ಇರಾನ್ ಮುಂದಾಗಿದೆ.

'ದೇಶದ ಯುವ ಜನರು ಮಾನವ ಸರಪಳಿ ನಿರ್ಮಿಸುವ ಮೂಲಕ ವಿದ್ಯುತ್ ಸ್ಥಾವರಗಳು ಸೇರಿ ಮೂಲಸೌಕರ್ಯಗಳ ರಕ್ಷಣೆಗೆ ಮುಂದಾಗಬೇಕು' ಎಂದು ಇರಾನ್‌ನ ಅಧಿಕಾರಿಗಳು ಕರೆ ನೀಡಿದ್ದಾರೆ.

'ಅಮೆರಿಕ-ಇಸ್ರೇಲ್ ವಿರುದ್ಧದ ಈ ಯುದ್ಧದಲ್ಲಿ ದೇಶವನ್ನು ರಕ್ಷಿಸುವುದಕ್ಕಾಗಿ 1.4 ಕೋಟಿ ಇರಾನಿಯರು ಪ್ರಾಣತ್ಯಾಗ ಮಾಡುವುದಕ್ಕೆ ಸಿದ್ಧರಾಗಿದ್ದಾರೆ' ಎಂದು ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

> **ಅಮೆರಿಕ, ಇಸ್ರೇಲ್ ಪಡೆಗಳ ಗುರಿಯಾಗಿರುವ ಸ್ಥಳಗಳ ರಕ್ಷಣೆಗೆ ಪಾಲಕರು ತಮ್ಮ ಮಕ್ಕಳನ್ನು ಕಳುಹಿಸಿ ಕೊಡಬೇಕು**
> **ಐಆರ್‌ಜಿಸಿ**

ಕದನ ವಿರಾಮ ಒಪ್ಪಂದಕ್ಕೆ ಸಮ್ಮತಿಸದಿದ್ದಲ್ಲಿ ಇರಾನ್‌ನ ವಿದ್ಯುತ್ ಸ್ಥಾವರಗಳು, ಸೇತುವೆಗಳನ್ನು ನಾಶಪಡಿಸಲಾಗುವುದು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ ಬೆನ್ನಲ್ಲೇ ಅವರು ಈ ಪೋಸ್ಟ್ ಮಾಡಿದ್ದು, 'ಇರಾನ್ ರಕ್ಷಣೆಗಾಗಿ ನಾನು ಕೂಡ ಪ್ರಾಣ ತ್ಯಾಗಕ್ಕೆ ಸಿದ್ಧನಿದ್ದೇನೆ' ಎಂದಿದ್ದಾರೆ.

ಭಾರತೀಯರಿಗೆ ಸಲಹೆ

ನವದೆಹಲಿ (ಪಿಟಿಐ): 'ಇರಾನ್‌ನಲ್ಲಿರುವ ಭಾರತೀಯರು 48 ಗಂಟೆ ತಾವು ಇರುವ ಸ್ಥಳದಲ್ಲೇ ಇರಬೇಕು' ಎಂದು ಭಾರತ ಮಂಗಳವಾರ ಸಲಹೆ ನೀಡಿದೆ.

ಇರಾನ್‌ನಲ್ಲಿರುವ ಭಾರತದ ರಾಯಭಾರ ಕಚೇರಿ ಈ ತುರ್ತು ಸಲಹೆ ನೀಡಿದ್ದು, 'ಭಾರತೀಯರು ಮನೆಯ ಒಳಗಡೆಯೇ ಇರಬೇಕು. ಅಲ್ಲಿನ ಸೇನಾ ನೆಲೆಗಳು, ವಿದ್ಯುತ್ ಮೂಲಸೌಕರ್ಯಗಳ ಬಳಿ ಹೋಗಬಾರದು. ಬಹುಮಹಡಿ ಕಟ್ಟಡಗಳ ಮೇಲೆ ಹೋಗಬಾರದು' ಎಂದು ಸಲಹೆ ನೀಡಿದೆ.

'ರಾಯಭಾರ ಕಚೇರಿ ಬಾಡಿಗೆಗೆ ಪಡೆದಿರುವ ಹೋಟೆಲ್‌ಗಳಲ್ಲಿ ಉಳಿದುಕೊಂಡಿರುವವರು ಹೊರಗಡೆ ಬರಕೂಡದು. ಕಚೇರಿಯ ಸಿಬ್ಬಂದಿಯೊಂದಿಗೆ ನಿರಂತರ ಸಂಪರ್ಕ ಹೊಂದಿರಬೇಕು' ಎಂದು ಹೇಳಿದೆ.

ಏರ್ ಇಂಡಿಯಾ ಸಿಇಒ ವಿಲ್ಸನ್ ರಾಜೀನಾಮೆ


ಕ್ಯಾಂಪ್‌ಬೆಲ್ ವಿಲ್ಸನ್

ಮುಂಬೈ (ಪಿಟಿಐ): ಟಾಟಾ ಸಮೂಹದ ಒಡೆತನದಲ್ಲಿರುವ ಏರ್ ಇಂಡಿಯಾದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸ್ಥಾನಕ್ಕೆ ಕ್ಯಾಂಪ್‌ಬೆಲ್ ವಿಲ್ಸನ್ ಅವರು ರಾಜೀನಾಮೆ ಸಲ್ಲಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಟರ್ಕಿಶ್ ಏರ್‌ಲೈನ್ಸ್ ಮುಖ್ಯಸ್ಥ ಇಲ್ಕರ್ ಆಯ್ಸಿ ಅವರು ಜವಾಬ್ದಾರಿ ವಹಿಸಿಕೊಳ್ಳಲು ನಿರಾಕರಿಸಿದ್ದರಿಂದ ವಿಲ್ಸನ್ ಅವರು ಸಿಇಒ ಮತ್ತು ಎಂಡಿ ಹುದ್ದೆ ವಹಿಸಿಕೊಂಡಿದ್ದರು.

'ವಿಲ್ಸನ್ ಅವರು ಆಡಳಿತ ಮಂಡಳಿ ಗಮನಕ್ಕೆ ತಂದು ರಾಜೀನಾಮೆ ಸಲ್ಲಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ. 'ವಿಲ್ಸನ್ ಅವರು ಹಲವು ವಿಭಾಗಗಳಲ್ಲಿ ಪ್ರಗತಿ ತಂದುಕೊಟ್ಟಿದ್ದರು' ಎಂದು ಟಾಟಾ ಸನ್ಸ್‌ನ ಮುಖ್ಯಸ್ಥ ಎನ್.ಚಂದ್ರಶೇಖರನ್ ತಿಳಿಸಿದ್ದಾರೆ.

2027ರವರೆಗೆ ವಿಲ್ಸನ್ ಅವರ ಐದು ವರ್ಷದ ಸೇವಾವಧಿ ಇತ್ತು. 2026ರ ಆರಂಭದಲ್ಲೇ ಟಾಟಾ ಸಮೂಹವು ಏರ್ ಇಂಡಿಯಾ ಮುನ್ನಡೆಸುವ ಸಮರ್ಥರಿಗೆ ಹುಡುಕಾಟ ಆರಂಭಿಸಿತ್ತು. ಇದೀಗ ನೂತನ ಸಿಇಒ ಸಮಿತಿ ರಚಿಸಿದೆ.

ಕಳೆದ ವರ್ಷ ಜೂನ್ 12ರಂದು ಅಹಮದಾಬಾದ್‌ನಲ್ಲಿ ಏರ್ ಇಂಡಿಯಾ ವಿಮಾನ ಪತನಗೊಂಡು 242 ಮಂದಿ ಮೃತಪಟ್ಟ ನಂತರ ವಿಲ್ಸನ್ ಅವರು ಟೀಕೆಗೆ ಗುರಿಯಾಗಿದ್ದರು.

ಏರ್ ಇಂಡಿಯಾದ ಅಂಗಸಂಸ್ಥೆ ಏರ್ ಇಂಡಿಯಾ ಎಕ್ಸ್‌ಪ್ರೆಸ್‌ಗೂ ಮಾರ್ಚ್‌ನಿಂದ ಮುಖ್ಯಸ್ಥರಿಲ್ಲ. ವ್ಯವಸ್ಥಾಪಕ ನಿರ್ದೇಶಕ ಸ್ಥಾನಕ್ಕೆ ಅಲೋಕ್ ಸಿಂಗ್ ಅವರು ಐದು ವರ್ಷದ ಅವಧಿ ಮುಗಿದ ಹಿನ್ನೆಲೆಯಲ್ಲಿ ರಾಜೀನಾಮೆ ನೀಡಿದ್ದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Engg/ Production Technical

WANTED
FOR A PHARMA COMPANY IN Bidadi, Ramanagara, Bangalore South.
Fresh B. Sc / M. Sc. with Chemistry background required for Production Department
For details contact:
98456 34607
73384 64607

Part-Time Jobs

ತಕ್ಷಣ ಬೇಕಾಗಿದ್ದಾರೆ ಕಂಪನಿಗಳಿಗೆ ಮನೆಯಿಂದಲೇ ಕೆಲಸ ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ, ವಯಸ್ಕರಿಗೆ ಮೊದಲ ಆದ್ಯತೆ 19,000-25,000 ಸಂಪಾದಿಸಿ ಕೊರಿಯರ್ ಸೌಲಭ್ಯವಿದೆ. 9964322833.

General

ತಕ್ಷಣ ಬೇಕಾಗಿದ್ದಾರೆ: ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ. ಬೆಂಗಳೂರು-76 ಸಂಬಳ: 17,000/- ರಿಂದ 25,000/- ತಕ್ಷಣ ಸಂಪರ್ಕಿಸಿ: 9008835841, 9148525233

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಬೆಂಗಳೂರಿನಲ್ಲಿರುವ ಕುಟುಂಬಕ್ಕೆ ಮನೆಗೆಲಸಕ್ಕೆ ಮಹಿಳೆಯರು, ಗಾರ್ಡನ್ ಕೆಲಸಕ್ಕೆ ಪುರುಷರು, ಅಡುಗೆ ಕೆಲಸಕ್ಕೆ ಮಹಿಳೆಯರು ಹಾಗೂ ಡ್ರೈವರ್ ಬೇಕಾಗಿದ್ದಾರೆ. ಆಕರ್ಷಕ ಸಂಬಳದೊಂದಿಗೆ ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ: 9019455516

Wanted

ಬೇಕಾಗಿದ್ದಾರೆ. ಬೆಂಗಳೂರಿನ ಪ್ರತಿಷ್ಠಿತ ಕಂಪನಿಗೆ ಸೇರಿದ ಮಂಡ್ಯ ಜಿಲ್ಲೆ, ಕೆ.ಆರ್.ಎಸ್ ಗ್ರಾಮದ ಹತ್ತಿರವಿರುವ ಶ್ರೀ. ವೇಣುಗೋಪಾಲ ಸ್ವಾಮಿ ದೇವಸ್ಥಾನದ ಭದ್ರತೆಗಾಗಿ ನಿವೃತ್ತ ARMY/ BSF/ CRPF/ CISF (ವಯಸ್ಸು 50 ವರ್ಷದೊಳಗಿನ) ಅಭ್ಯರ್ಥಿಗಳು ಬೇಕಾಗಿದ್ದು, 22000/- (ಇಎಸ್‌ಐ, ಪಿಎಫ್ ಸೌಲಭ್ಯ ಸೇರಿ) ಸಂಬಳದೊಂದಿಗೆ ಆಹಾರ ಭತ್ಯೆ ದಿನಕ್ಕೆ ರೂ. 125/- ಇರುತ್ತದೆ. ಸಂಪರ್ಕಿಸಿ: 9901466827

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

Walk-in

ತಕ್ಷಣ ನೇಮಕಾತಿ! ಕಂಪನಿ: ಕೊಲ್‌ಮನ್ ಸರ್ವಿಸಸ್ ಸ್ಥಳ: ಮಲ್ಲೇಶ್ವರಂ ಶೈಕ್ಷಣಿಕ ಅರ್ಹತೆ: ಕನಿಷ್ಠ 10ನೇ ತರಗತಿ ಪಾಸ್ ಹಾಗೂ ಹೆಚ್ಚಿನವರು ಖಾಲಿ ಹುದ್ದೆಗಳು: ಟೆಲಿಕಾಲರ್ ಸಂಬಳ: Rs.15,000 + ಆಕರ್ಷಕ ಪ್ರೋತ್ಸಾಹ ಧನ ಫೀಲ್ಡ್ ಎಕ್ಸಿಕ್ಯೂಟಿವ್ ಸಂಬಳ: Rs.20,000 + ಆಕರ್ಷಕ ಪ್ರೋತ್ಸಾಹ ಧನ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಸ್ನೇಹಾ-7019616511 ಹರೀಶ್ - 9066648367 ಯೋಗೇಶ್-9620123125 ಸತೀಶ್ - 8747855804

ಪ್ರವಾಸ

Travel

11.06.2026 13/17ದಿನಗಳು ಕೇದಾರನಾಥ,ಬದರಿನಾಥ್, ಯಮುನೋತ್ರಿ,ಗಂಗೋತ್ರಿ (Subsidy_20000) 38000/, 12.07.2026 13/17ದಿನಗಳು ಅಮರನಾಥ್ ವೈಷ್ಣೋದೇವಿ ಕಾಶ್ಮೀರ್ ಅಮೃತಸರ್ ಅಗ್ರ ದೆಹಲಿ 38000/ 11.05.2026 6ದಿನ ಕಾಶಿ,ಅಯೋಧ್ಯ ಪ್ರಯಾಗರಾಜ್ ''ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್'' 9739847429/ 9845560219

ಭಾರತಪರಂಪರ ದರ್ಶನ: 23.4.2026 5ದಿನ ಮಂತ್ರಾಲಯ,ಶ್ರೀಶೈಲಂ, ನವನಾರಸಿಂಹ ಅಹೋಬಿಲಂ. 18.5.2026 13ದಿನ ಚಾರ್ ಧಾಮ್. 6.6.2026 11ದಿನ ಮುಕ್ತಿನಾಥ್,ಕಾಶಿಸಹಿತ ನೇಪಾಳಯಾತ್ರೆ. 2.7.2026 ಅಮರನಾಥ್,ವೈಷ್ಣೋದೇವಿ. ಪ್ರಕಾಶ್ ಹೆಬ್ಬಾರ್: 9448792891.

ದಕ್ಷಿಣ ಧ್ರುವದಲ್ಲಿ ಮಾನವ ಹೆಜ್ಜೆ ಇಡುವ ಪ್ರಯತ್ನಕ್ಕೆ ಮುನ್ನುಡಿ

ಚಂದ್ರನ ಪರಿಭ್ರಮಣ ನಡೆಸಿದ 'ಆರ್ಟೆಮಿಸ್-2'

ನಾಸಾ ಬಿಡುಗಡೆ ಮಾಡಿರುವ ಆರ್ಟೆಮಸ್-2 ಸೆರೆ ಹಿಡಿದಿರುವ ಭೂಮಿ ಮತ್ತು ಚಂದ್ರನ ದೃಶ್ಯ ಎಎಫ್‌ಪಿ ಚಿತ್ರ

ಆರ್ಟೆಮಸ್-2 ಗಗಯಾನಿಗಳು

ಹೂಸ್ಟನ್ (ಎಪಿ): ನಾಸಾದ ಮಹತ್ವಾಕಾಂಕ್ಷೆಯ 'ಆರ್ಟೆಮಿಸ್-2'ನ ಓರಿಯೋನ್ ಕೋಶವು ಸೋಮವಾರ ರಾತ್ರಿ ಚಂದ್ರನ ಸುತ್ತ ಐತಿಹಾಸಿಕ ಪರಿಭ್ರಮಣ ನಡೆಸಿದೆ.

ನಾಲ್ವರು ಗಗನಯಾನಿಗಳಿದ್ದ ಅಮೆರಿಕದ ಓರಿಯೊನ್ ಕೋಶವು ಚಂದ್ರನ ಸುತ್ತ ಏಳು ಗಂಟೆ ಪರಿಭ್ರಮಣ ಮಾಡಿದ ವೇಳೆ ಭೂಮಿಗೆ ಗೋಚರಿಸದ, ಚಂದ್ರನ ಇನ್ನೊಂದು ಬದಿಯ ಈ ಹಿಂದೆ ಕಂಡಿರದ ಹಲವು ಚಿತ್ರಗಳನ್ನು ಸೆರೆಹಿಡಿದು ನಾಸಾಗೆ ಕಳುಹಿಸುತ್ತಿದೆ.

ಐದು ದಶಕಗಳ ಬಳಿಕ ಚಂದ್ರನ ಕಕ್ಷೆಗೆ ನಾಸಾ, ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಗಗನಯಾನಿಗಳನ್ನು ಕಳುಹಿಸಿತ್ತು. ಈ ಪರಿಭ್ರಮಣವು 'ಅಪೋಲೊ ಯುಗ'ದ ನಂತರ ಚಂದ್ರನಲ್ಲಿ ನಾಸಾದ ಮೊದಲ ಪಯಣವಾಗಿದೆ. ಮುಂದಿನ 2 ವರ್ಷಗಳಲ್ಲಿ ದಕ್ಷಿಣ ಧ್ರುವದಲ್ಲಿ ಮಾನವ ಹೆಜ್ಜೆ ಇಡುವ ಪ್ರಯತ್ನಕ್ಕೆ ಇದು ಮುನ್ನುಡಿ ಬರೆದಿದೆ.

1972ರಲ್ಲಿ 'ಅಪೋಲೊ-13' ತಂಡವು ಚಂದ್ರನಲ್ಲಿಗೆ ಪಯಣಿಸಿತ್ತು. 2,48,655 ಮೈಲಿ (4,00,171 ಕಿಲೋಮೀಟರ್) ದೂರ ಕ್ರಮಿಸಿದ್ದ ಅಪೋಲೊದ ದಾಖಲೆಯನ್ನು 'ಆರ್ಟೆಮಿಸ್-2' ಮೀರಿದೆ.

'ಚಂದ್ರನನ್ನು ಈಗ ಬರಿಗಣ್ಣಿನಲ್ಲಿ ನೋಡಬಹುದು ಎಂದು ನನ್ನ ಮನಸ್ಸಿಗೆ ಅನ್ನಿಸಿತು. ಇದು ನಂಬಲಸಾಧ್ಯವಾದುದು. ಈ ಪೀಳಿಗೆ ಮತ್ತು ಮುಂದಿನ ಪೀಳಿಗೆ ಈ ದಾಖಲೆಯನ್ನು ಬೇಗ ಮುರಿಯಬೇಕು' ಎಂದು ಕೆನಡಾದ ಗಗನಯಾನಿ ಜೆರೆಮಿ ಹ್ಯಾನ್ಸನ್ ಅವರು ರೇಡಿಯೊ ಸಂದೇಶ ರವಾನಿಸಿದ್ದಾರೆ.

'ಅಪೋಲೊ 13'ರ ದಾಖಲೆಯನ್ನು ಅಳಿಸಿಹಾಕಿದ ನಂತರ ಈ ಗಗನಯಾನಿಗಳು ಈಗಾಗಲೇ ಗುರ್ತಿಸಿರುವ ಚಂದ್ರನ ಎರಡು ಹೊಸ ಕುಳಿಗಳಿಗೆ ಹೆಸರು ಇಡಲು ಅನುಮತಿ ಕೋರಿದರು. ತಾವು ತೆರಳಿದ್ದ ಕೋಶದ ಹೆಸರು ಮತ್ತು 2020ರಲ್ಲಿ ಕ್ಯಾನ್ಸರ್‌ನಿಂದ ಮೃತಪಟ್ಟಿದ್ದ ಕಮಾಂಡರ್ ರೀಡ್ ವೈಸ್‌ಮನ್ ಅವರ ಪತ್ನಿಯ ಹೆಸರನ್ನು ನಾಮಕರಣ ಮಾಡುವುದಾಗಿ ಹೇಳಿದರು.

ಈ ಮನವಿಯಿಂದ ವೈಸ್‌ಮನ್ ಅವರ ಕಣ್ಣಾಲಿಗಳಲ್ಲಿ ನೀರು ತುಂಬಿ ಬಂದವು. ನಾಲ್ವರೂ ಗಗನಯಾನಿಗಳು ಭಾವುಕರಾದರು. ಇಡೀ ದೃಶ್ಯವನ್ನು ಚಿತ್ರಗಳ ರೂಪದಲ್ಲಿ ರೇಡಿಯೊದಲ್ಲಿ ಪ್ರಸಾರ ಮಾಡಲಾಯಿತು.

ಚಂದ್ರ ಮತ್ತು ಭೂಮಿಯನ್ನು ಒಂದೇ ಬಾರಿಗೆ ಸೆರೆಹಿಡಿದಿರುವುದಾಗಿ ಗಗನಯಾನಿಗಳು ಹೂಸ್ಟನ್‌ನಲ್ಲಿರುವ ವಿಜ್ಞಾನಿಗಳಿಗೆ ವಿವರಣೆ ನೀಡಿದರು.

'ಕೆಲವು ಶಿಖರಗಳು ಹೊಳೆಯುತ್ತಿದ್ದವು. ಹಿಮದಿಂದ ಆವೃತ್ತವಾಗಿದ್ದರೂ ಅವು ಗೋಚರಿಸಿದವು' ಎಂದು ಪೈಲಟ್ ವಿಕ್ಟರ್ ಗ್ಲೋವರ್ ಅವರು ಹೇಳಿದರು.

ನಿಕಾನ್ ಕ್ಯಾಮೆರಾದ ಮೂಲಕ ಚಿತ್ರ ಸೆರೆಹಿಡಿಯಲಾಗಿದೆ. ಕೆಲವು ಚಿತ್ರಗಳನ್ನು ಸೆರೆಹಿಡಿಯಲು ಗಗನಯಾನಿಗಳು ತಮ್ಮ ಐಫೋನ್‌ಗಳನ್ನೂ ಬಳಸಿದರು.

ಅಮೆರಿಕದ ರೀಡ್ ವೈಸ್‌ಮನ್, ವಿಕ್ಟರ್ ಗ್ಲೋವರ್, ಕ್ರಿಸ್ಟಿನಾ ಕೋಚ್ ಹಾಗೂ ಕೆನಡಾದ ಜೆರೆಮಿ ಹ್ಯಾನ್ಸನ್ ತಂಡದಲ್ಲಿದ್ದರು. 54 ವರ್ಷಗಳ ಬಳಿಕ ಚಂದ್ರನನ್ನು ಮನುಷ್ಯ ಮತ್ತೊಮ್ಮೆ ಹತ್ತಿರದಿಂದ ನೋಡಿದ ದಾಖಲೆಯನ್ನು ಈ ತಂಡ ಬರೆದಿದೆ.

ತೆರೆಯಲ್ಲಿ ಮತ್ತೆ ಅಕ್ಷಯ್–ಟಬು


ಟಬು, ಅಕ್ಷಯ್ ಕುಮಾರ್

'ತು ಚೋರ್ ಮೇ ಸಿಪಾಯಿ', ಪ್ರಿಯದರ್ಶನ್ ನಿರ್ದೇಶನದ 'ಹೇರ ಫೇರಿ' ಸಿನಿಮಾದಲ್ಲಿ ಜೊತೆಯಾಗಿ ನಟಿಸಿದ್ದ ಅಕ್ಷಯ್ ಕುಮಾರ್ ಹಾಗೂ ಟಬು 25 ವರ್ಷಗಳ ಬಳಿಕ ಮತ್ತೆ ತೆರೆಯಲ್ಲಿ ಒಂದಾಗಿ ಕಾಣಿಸಿಕೊಳ್ಳಲಿದ್ದಾರೆ.

ಅಕ್ಷಯ್ ನಟನೆಯ ಹೊಸ ಸಿನಿಮಾ 'ಭೂತ್ ಬಂಗ್ಲ' ಏ.17ರಂದು ತೆರೆಕಾಣುತ್ತಿದ್ದು, ಇತ್ತೀಚೆಗೆ ಸಿನಿಮಾದ ಟ್ರೇಲರ್ ಬಿಡುಗಡೆಯಾಯಿತು. 'ಹೇರ ಫೇರಿ', 'ಹಂಗಾಮ', 'ಹಲ್‌ಚಲ್', 'ಗರಂಮಸಾಲ', 'ಭಾಗಂಭಾಗ್', 'ಭೂಲ್‌ಭುಲ್ಲಯ್ಯ', 'ಖಟ್ಟಮೀಟ' ಮುಂತಾದ ಹಿಟ್ ಸಿನಿಮಾಗಳನ್ನು ನಿರ್ದೇಶಿಸಿರುವ ಪ್ರಿಯದರ್ಶನ್ ಈ ಸಿನಿಮಾಗೆ ಆ್ಯಕ್ಷನ್ ಕಟ್ ಹೇಳಿದ್ದಾರೆ. 'ಹೇರ ಫೇರಿ'ಯ ಯಶಸ್ಸಿನಲ್ಲಿ ಪ್ರಮುಖ ಪಾತ್ರವಹಿಸಿದ್ದ ಪರೇಶ್ ರಾವಲ್ ಕೂಡಾ ಈ ಸಿನಿಮಾದಲ್ಲಿ ನಟಿಸಿದ್ದಾರೆ.

ಈ ವೇಳೆ ಮಾತನಾಡಿದ ಅಕ್ಷಯ್, '39 ವರ್ಷಗಳಿಗೂ ಅಧಿಕ ಸಮಯದಿಂದ ನಾನು ಟಬುವನ್ನು ಬಲ್ಲೆ. ನನ್ನ ಸ್ನೇಹಿತೆ ಆಕೆ. ನಾನು ಈ ಚಿತ್ರರಂಗಕ್ಕೆ ಬಂದು 35 ವರ್ಷಗಳಾಯಿತು. ನಾನು ಹಾಗೂ ಟಬು ಅದಕ್ಕಿಂತ ಮೊದಲಿನಿಂದಲೂ ಡಾನ್ಸ್ ಅಕಾಡೆಮಿಗೆ ಜೊತೆಯಾಗಿ ಹೋಗುತ್ತಿದ್ದೆವು. ಈ 25 ವರ್ಷಗಳಲ್ಲಿ ಟಬು ಹಾಗೂ ಪ್ರಿಯದರ್ಶನ್ ಅವರು ತಮ್ಮ ತಮ್ಮ ಕ್ಷೇತ್ರದಲ್ಲೇ ತೊಡಗಿಸಿಕೊಂಡಿದ್ದರು. ನಾನು ನನ್ನ ಸಿನಿಮಾಗಳಲ್ಲೇ ತಲ್ಲೀನನಾಗಿದ್ದೆ. ಈ ಸಿನಿಮಾ ನಾನು ಹಾಗೂ ಟಬು ಜೊತೆಯಾಗಿ ತೆರೆ ಮೇಲೆ ಬರಲು ಸೂಕ್ತವಾಗಿತ್ತು' ಎಂದರು.

ಹಾರರ್ ಕಾಮಿಡಿ ಜಾನರ್‌ನಲ್ಲಿ 'ಭೂತ್ ಬಂಗ್ಲ' ಸಿನಿಮಾವಿದ್ದು, ಅಕ್ಷಯ್ ಕುಮಾರ್, ಶೋಭಾ ಕಪೂರ್ ಹಾಗೂ ಏಕ್ತಾ ಆರ್.ಕಪೂರ್ ನಿರ್ಮಾಣ ಮಾಡಿದ್ದಾರೆ. 14 ವರ್ಷಗಳ ಬಳಿಕ ಪ್ರಿಯದರ್ಶನ್ ಅವರ ಸಿನಿಮಾದಲ್ಲಿ ಅಕ್ಷಯ್ ಕುಮಾರ್ ನಟಿಸಿದ್ದಾರೆ. ಈ ಸಿನಿಮಾವಲ್ಲದೆ ಇನ್ನೆರಡು ಪ್ರಾಜೆಕ್ಟ್‌ಗಳಲ್ಲಿ ಪ್ರಿಯದರ್ಶನ್ ಅವರ ಜೊತೆ ಅಕ್ಷಯ್ ನಟಿಸಲಿದ್ದಾರೆ. 'ಹೈವಾನ್'ನಲ್ಲಿ ಸೈಫ್ ಅಲಿ ಖಾನ್ ಜೊತೆಗೆ ಹಾಗೂ 'ಹೇರ ಫೇರಿ–3'ರಲ್ಲಿ ಅಕ್ಷಯ್ ಬಣ್ಣಹಚ್ಚಲಿದ್ದಾರೆ.

ರಂಗಾಯಣ ರಘು, ಎಸ್.ಕೆ.ರಾವ್

ಗೋವಾದಲ್ಲಿ 'ಕ್ಲಾಸ್ ಆಫ್ ಮೈಸೂರು'!

'ಯಥಾಭವ' ಸಿನಿಮಾ ನಿರ್ಮಿಸಿ, ನಿರ್ದೇಶಿಸಿದ್ದ ಗೌತಂ ಬಸವರಾಜು ನಿರ್ದೇಶನದ 'ಕ್ಲಾಸ್ ಆಫ್ ಮೈಸೂರು' ಚಿತ್ರದ ಮೊದಲ ಹಂತದ ಚಿತ್ರೀಕರಣ ಪೂರ್ಣಗೊಂಡಿದೆ.

ಗೋವಾ ಮತ್ತು ಗೋಕರ್ಣದ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದ್ದು, ನಟರಾದ ರಂಗಾಯಣ ರಘು, ದತ್ತಣ್ಣ, ಶರತ್ ಲೋಹಿತಾಶ್ವ, ಮಹಾಂತೇಶ್, ತಬಲನಾಣಿ, ಬಿರಾದಾರ್ ಮುಂತಾದವರು ಭಾಗವಹಿಸಿದ್ದರು. ಸಿನಿಮಾವು ಹಾಸ್ಯಭರಿತ ಚಿತ್ರವಾಗಿದ್ದು ಸಂಸ್ಕೃತಿ ಮತ್ತು ಭಾವನೆಗಳನ್ನು ಒಟ್ಟುಗೂಡಿಸಿದ ಕಥೆ ಹೊಂದಿದೆ ಎಂದಿದೆ ಚಿತ್ರತಂಡ. ಗೌತಂ ಅವರೇ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದಿದ್ದಾರೆ. ಮಾಕ್ಸ್ ಎಂಟರ್‌ಟೈನ್‌ಮೆಂಟ್ಸ್ ಬ್ಯಾನರ್ ಅಡಿಯಲ್ಲಿ ಅವರೇ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ತಾರಾ ಅನುರಾಧ ಅವರೂ ಚಿತ್ರದ ತಾರಾ ಬಳಗದಲ್ಲಿದ್ದಾರೆ. ಜೋ ಕೋಸ್ಟಾ ಸಂಗೀತ, ಎಸ್.ಕೆ.ರಾವ್ ಛಾಯಾಚಿತ್ರಗ್ರಹಣ, ನಾಗಾರ್ಜುನ ಶರ್ಮ ಸಾಹಿತ್ಯ, ಮಾಸ್ತಿ ಸಂಭಾಷಣೆ ಚಿತ್ರಕ್ಕಿದೆ.

ಮೇ 8ಕ್ಕೆ 'ಆಖ್ರಿ ಸವಾಲ್'

ಸಂಜಯ್ ದತ್

ಸಂಜಯ್ ದತ್ ನಟನೆಯ 'ಆಖ್ರಿ ಸವಾಲ್' ಸಿನಿಮಾ ಮೇ 15ರ ಬದಲಾಗಿ ಮೇ 8ರಂದೇ ಚಿತ್ರಮಂದಿರಗಳಲ್ಲಿ ತೆರೆಕಾಣಲಿದೆ.

'ದೇಜಾ ವು', 'ಪ್ರೇಮ್ ಪ್ರಥಾ ದುಮ್‌ಶಾನ್' ಸಿನಿಮಾಗಳನ್ನು ನಿರ್ದೇಶಿಸಿದ್ದ ಅಭಿಜಿತ್ ಮೋಹನ್ ವಾರಂಗ್ ಈ ಸಿನಿಮಾ ನಿರ್ದೇಶಿಸಿದ್ದಾರೆ.

ಈ ಸಿನಿಮಾವು 1925ರಲ್ಲಿ ಸ್ಥಾಪನೆಗೊಂಡ ರಾಷ್ಟ್ರೀಯ ಸ್ವಯಂ ಸೇವಕ ಸಂಘದ 100 ವರ್ಷಗಳ ಪಯಣವನ್ನು ಆಧರಿಸಿದೆ. ಸಿನಿಮಾವನ್ನು ನಿಖಿಲ್ ನಂದ ಹಾಗೂ ಧನ್‌ರಾಜ್ ನಥ್ವಾನಿ ಪ್ರಸ್ತುತಪಡಿಸಿದ್ದು, ನಿಖಿಲ್ ನಂದ ಹಾಗೂ ಸಂಜಯ್ ದತ್ ನಿರ್ಮಾಣ ಮಾಡಿದ್ದಾರೆ. ಉತ್ಕರ್ಷ್ ನೈಥಾನಿ ಸಿನಿಮಾದ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಬರೆದಿದ್ದಾರೆ.

ಸಿನಿ ಸಮ್ಮಾನಕ್ಕೆ ಸಿನಿಮಾಗಳ ಆಹ್ವಾನ

4ನೇ ಆವೃತ್ತಿ

'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'- ಇದು ಚಂದನವನದ ಪ್ರತಿಭೆಗಳನ್ನು ಗುರುತಿಸುವ ಹಾಗೂ ನಮ್ಮ ಶ್ರೀಮಂತ ಸಿನಿಮಾ ಪರಂಪರೆಯನ್ನು ಆಚರಿಸುವ, ಸಂಭ್ರಮಿಸುವ, ಬೆಸೆಯುವ ವೇದಿಕೆ. ಇಂತಹ ವೇದಿಕೆ ಇದೀಗ ನಾಲ್ಕನೇ ಆವೃತ್ತಿಯನ್ನು ಆಯೋಜಿಸಲು ಸಜ್ಜಾಗುತ್ತಿದೆ.

ಅಸಾಧಾರಣ ಪ್ರತಿಭೆಗಳನ್ನು ಪ್ರಶಂಸಿಸಿ, ಕನ್ನಡ ಚಿತ್ರರಂಗದ ಬೆಳವಣಿಗೆಗೆ ಉತ್ತೇಜನ ನೀಡುತ್ತಾ ಕಳೆದ ಮೂರು ಆವೃತ್ತಿಗಳಲ್ಲಿ ಎಲ್ಲರೂ ಮೆಚ್ಚುವಂತಹ ವರ್ಣರಂಜಿತ, ಅದ್ದೂರಿ, ಅರ್ಥಗರ್ಭಿತ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ನಾಲ್ಕನೇ ಆವೃತ್ತಿಗೆ 2025ರಲ್ಲಿ ತೆರೆಕಂಡ ಸಿನಿಮಾಗಳನ್ನು ಪರಿಗಣಿಸಲಾಗುವುದು. ಇಲ್ಲಿ ನೀಡಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ಚಿತ್ರತಂಡಗಳು ನೋಂದಣಿ ಮಾಡಿಕೊಂಡು ಸಿನಿಮಾಗಳನ್ನು ಸಲ್ಲಿಸಬಹುದಾಗಿದೆ. ನೋಂದಣಿಗೆ ಏಪ್ರಿಲ್ 10 ಕೊನೆಯ ದಿನ. ಒಟ್ಟು 26 ವಿಭಾಗಗಳಲ್ಲಿ ಪ್ರಶಸ್ತಿಗಳು ಇರಲಿವೆ.

ಮೂರನೇ ಆವೃತ್ತಿಯಲ್ಲಿ ನಟಿಯರಾದ ಖುಷಿ ರವಿ ಹಾಗೂ ಚಂದನ ಅನಂತಕೃಷ್ಣ ನೃತ್ಯ ಕಾರ್ಯಕ್ರಮ

ಪ್ರಶಸ್ತಿ ಸುತ್ತಿಗೆ ಮೀನಾಕ್ಷಿ, ಜೈಸ್ಮಿನ್ ಲಗ್ಗೆ

ಏಷ್ಯಾ ಬಾಕ್ಸಿಂಗ್ ಚಾಂಪಿಯನ್‌ಷಿಪ್: ವಿಶ್ವನಾಥ್, ಸಚಿನ್ ಫೈನಲ್‌ಗೆ ಮುನ್ನಡೆ

ಉಲಾನ್‌ಬಾತರ್ (ಮಂಗೋಲಿಯಾ, ಪಿಟಿಐ): ಹಾಲಿ ಚಾಂಪಿಯನ್‌ಗಳಾದ ಜೈಸ್ಮಿನ್ ಲಂಬೊರಿಯಾ ಹಾಗೂ ಮೀನಾಕ್ಷಿ ಹೂಡಾ ಅವರು ಏಷ್ಯಾ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಮಂಗಳವಾರ ಫೈನಲ್ ಪ್ರವೇಶಿಸಿದರು. ಪುರುಷರ ವಿಭಾಗದಲ್ಲಿ ವಿಶ್ವನಾಥ್ ಸುರೇಶ್ ಹಾಗೂ ಸಚಿನ್ ಸಿವಾಚ್ ಅವರೂ ಅಮೋಘ ಪ್ರದರ್ಶನದೊಂದಿಗೆ ಪ್ರಶಸ್ತಿ ಸುತ್ತಿಗೆ ಲಗ್ಗೆ ಇಟ್ಟರು.

ಅದರೊಂದಿಗೆ, ಭಾರತದ ಎಂಟು ಬಾಕ್ಸರ್‌ಗಳು (ಆರು ಮಹಿಳೆಯರು, ಇಬ್ಬರು ಪುರುಷರು) ಚಿನ್ನದ ಪದಕಕ್ಕಾಗಿ ಹೋರಾಡಲು ಅಣಿಯಾದರು. ಆದರೆ, ಆಕಾಶ್, ಲೋಕೇಶ್, ನರೇಂದ್ರ ಬರ್ವಾಲ್ ಹಾಗೂ ಹರ್ಷ್ ಚೌಧರಿ ಅವರು ತಮ್ಮ ತಮ್ಮ ವಿಭಾಗದ ಸೆಮಿಫೈನಲ್ ಪಂದ್ಯಗಳಲ್ಲಿ ಸೋತು, ಕಂಚಿನ ಪದಕ ಪಡೆದರು. ಮಹಿಳೆಯರ ವಿಭಾಗದ ಫೈನಲ್ ಪಂದ್ಯಗಳು ಗುರುವಾರ ಹಾಗೂ ಪುರುಷರ ಫೈನಲ್ ಪಂದ್ಯಗಳು ಶುಕ್ರವಾರ ನಡೆಯಲಿವೆ.

ಹರಿಯಾಣದ 24 ವರ್ಷ ವಯಸ್ಸಿನ ಮೀನಾಕ್ಷಿ ಅವರು ಮಹಿಳೆಯರ 48 ಕೆ.ಜಿ. ವಿಭಾಗದ ಸೆಮಿಫೈನಲ್‌ನಲ್ಲಿ 4–1ರಿಂದ ಥಾಯ್ಲೆಂಡ್‌ನ ತಿಪ್ಪಾಟ್ಟ ಯೊದ್ವಾರಿ ಅವರನ್ನು ಮಣಿಸಿದರು. ಚಿನ್ನದ ಪದಕಕ್ಕಾಗಿ ನಡೆಯುವ 'ಬೌಟ್'ನಲ್ಲಿ ಅವರು ಸ್ಥಳೀಯ ನೆಚ್ಚಿನ ತಾರೆ ನೊಮುಂದರಿ ಎಂಖ್–ಅಂಗಲನ್ ಅವರೊಂದಿಗೆ ಸೆಣಸಲಿದ್ದಾರೆ.

ಸಚಿನ್

ವಿಶ್ವನಾಥ್

ಜೈಸ್ಮಿನ್ ಅವರು 57 ಕೆ.ಜಿ.ಯೊಳಗಿನ ಮಹಿಳೆಯರ ನಾಲ್ಕರ ಘಟ್ಟದಲ್ಲಿ 3–2ರಿಂದ ಉಜ್ಬೇಕಿಸ್ತಾನದ ನಿಗಿನಾ ಉತ್ಕಮೊವಾ ವಿರುದ್ಧ ರೋಚಕ ಜಯ ಸಾಧಿಸಿದರು. 2022ರ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಕಂಚು ಗೆದ್ದಿರುವ ಜೈಸ್ಮಿನ್ ಅವರು ಫೈನಲ್‌ನಲ್ಲಿ ಥಾಯ್ಲೆಂಡ್‌ನ ಪುನ್ರವೀ ರೆನ್ರೊಸ್ ಎದುರು ಹೋರಾಡಲಿದ್ದಾರೆ.

ಅಮೋಘ ಆಟ ಮುಂದುವರಿಸಿರುವ ವಿಶ್ವನಾಥ್ ಅವರು ಪುರುಷರ 75 ಕೆ.ಜಿ. ವಿಭಾಗದ ಸೆಮಿಫೈನಲ್‌ನಲ್ಲಿ 5–0 ಅಂತರದ ಸರ್ವಾನುಮತದ ತೀರ್ಪಿನಿಂದ ಜೋರ್ಡಾನ್‌ನ ಹುಥೈಫಾ ಇಶಿಶ್ ಅವರನ್ನು ಸೋಲಿಸಿದರು. ತಮಿಳುನಾಡಿನ ವಿಶ್ವನಾಥ್ ಅವರು ವಿಶ್ವದ ಅಗ್ರಮಾನ್ಯ ಬಾಕ್ಸರ್, ಕಜಾಕಸ್ತಾನದ ಸಂಝಾರ್ ತಾಷ್ಕೆಂಬೆ ಅವರಿಗೆ ಕ್ವಾರ್ಟರ್‌ಫೈನಲ್‌ನಲ್ಲಿ ಆಘಾತ ನೀಡಿದ್ದರು.


ಫೈನಲ್ ಪ್ರವೇಶಿಸಿದ ಭಾರತದ ಜೈಸ್ಮಿನ್ ಲಂಬೊರಿಯಾ

ಪುರುಷರ 60 ಕೆ.ಜಿ. ವಿಭಾಗದಲ್ಲಿ ಕಣಕ್ಕಿಳಿದಿರುವ ಸಚಿನ್ ಅವರು 4–1ರಿಂದ ಥಾಯ್ಲೆಂಡ್‌ನ ಸಕ್ದಾ ರುವಾಂಥನ್ ವಿರುದ್ಧ ಸುಲಭವಾಗಿ ಗೆದ್ದರು. ಆದರೆ, ಆಕಾಶ್ (75 ಕೆ.ಜಿ.) 1–4ರಿಂದ ಉಜ್ಬೇಕಿಸ್ತಾನದ ಜಾವೊಖಿರ್ ಅಬ್ದುರಖಿಮೊವ್ ವಿರುದ್ಧ ಪರಾಭವಗೊಂಡರು.

ಉಜ್ಬೇಕಿಸ್ತಾನದ ಜಸುರ್ಬೆಕ್ ಯುಲ್ದೊಶೆವ್ ಅವರು 5–0ಯಿಂದ ಲೋಕೇಶ್ ಅವರನ್ನು ಏಕಪಕ್ಷೀಯವಾಗಿ ಮಣಿಸಿದರು. ಏಷ್ಯನ್ ಗೇಮ್ಸ್ ಕಂಚು ವಿಜೇತ ನರೇಂದ್ರ ಅವರು 1–4ರಿಂದ ಚೀನಾದ ಬಯಿಕೆವುಝಿ ಡನಬೀಕೆ ಎದುರು ಪರಾಭವಗೊಂಡರು. ಹರ್ಷ್ ಅವರೂ ಇದೇ ಅಂತರದಲ್ಲಿ ತಾಜಿಕಿಸ್ತಾನದ ಪರ್ವಿಝ್ ಕಾರಿಮೊವ್ ಅವರಿಗೆ ಮಣಿದರು.

ಅಗ್ರ ಶ್ರೇಯಾಂಕದ ಬಾಕ್ಸರ್ ಅಲ್ಫಿಯಾ ಪಠಾಣ್ ಅವರು ಮಹಿಳೆಯರ 80+ ಕೆ.ಜಿ. ವಿಭಾಗದಲ್ಲಿ ನೇರವಾಗಿ ಫೈನಲ್‌ಗೆ ಪ್ರವೇಶ ಪಡೆದಿದ್ದಾರೆ. ಅವರು ಸ್ವರ್ಣದ ಪದಕಕ್ಕಾಗಿ ಕಜಾಕಸ್ತಾನದ ಡೀನಾ ಇಸ್ಲಾಂಬೆಕೊವಾ ಜೊತೆಗೆ ಕಾದಾಡಲಿದ್ದಾರೆ. ಪ್ರೀತಿ ಪವಾರ್ (54 ಕೆ.ಜಿ.), ಪ್ರಿಯಾ (60 ಕೆ.ಜಿ.) ಹಾಗೂ ಅರುಂಧತಿ ಚೌಧರಿ (70 ಕೆ.ಜಿ.) ಅವರು ಸೋಮವಾರ ಫೈನಲ್ ಪ್ರವೇಶಿಸಿದ್ದರು.

ಭಾರತ– ತೈವಾನ್ ಪಂದ್ಯ ಇಂದು

ಪಥುಮ್ ಥಾನಿ (ಥಾಯ್ಲೆಂಡ್), (ಪಿಟಿಐ): ಭಾರತ ತಂಡವು, ಎಎಫ್‌ಸಿ 20 ವರ್ಷದೊಳಗಿನವರ ಮಹಿಳಾ ಏಷ್ಯನ್ ಕಪ್ ಫುಟ್‌ಬಾಲ್ ಟೂರ್ನಿಯ ಸಿ ಗುಂಪಿನ ಪಂದ್ಯದಲ್ಲಿ ತೈವಾನ್ ತಂಡವನ್ನು ಎದುರಿಸಲಿದೆ. ಬುಧವಾರ ನಡೆಯಲಿರುವ ಈ ಪಂದ್ಯದಲ್ಲಿ ದೊಡ್ಡ ಅಂತರದಲ್ಲಿ ಗೆದ್ದರೆ ಮಾತ್ರ ಭಾರತದ ಕ್ವಾರ್ಟರ್ ಫೈನಲ್ ಅವಕಾಶ ಜೀವಂತವಾಗಿ ಉಳಿಯಲಿದೆ.

ಭಾರತ ಮತ್ತು ತೈವಾನ್– ಈ ಎರಡೂ ತಂಡಗಳು ತಮ್ಮ ಮೊದಲ ಎರಡು ಪಂದ್ಯಗಳಲ್ಲಿ ಜಪಾನ್ ಮತ್ತು ಆಸ್ಟ್ರೇಲಿಯಾ ಎದುರು ಸೋಲನುಭವಿಸಿವೆ. ಹೀಗಾಗಿ ತಮ್ಮ ಆಸೆ ಜೀವಂತವಾಗಿಡಲು ಉಭಯ ತಂಡಗಳಿಗೆ ಈ ಪಂದ್ಯ ನಿರ್ಣಾಯಕವಾಗಿದೆ. ಗೋಲು ವ್ಯತ್ಯಾಸದಲ್ಲಿ ಭಾರತ (–11), ತೈವಾನ್‌ಗಿಂತ (–7) ಹಿಂದಿದೆ.

ಭಾರತ ತಂಡದ ಸುಲಂಜನಾ ರವೂಲ್

ಕರ್ನಾಟಕ ಗೃಹ ಮಂಡಳಿ
ಸಮುದಾಯ ನಿರ್ಮಾಣದತ್ತ

ಕರ್ನಾಟಕ ಗೃಹ ಮಂಡಳಿ
ಗೃಹ ಆಯುಕ್ತರವರ ಕಛೇರಿ, 3ನೇ ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009.

ಸಂಖ್ಯೆ: ಕಗೃಮಂ/ಕಾ/ಹಂಚಿಕೆ/ಪ.ಪ್ರ/2026–27 ದಿನಾಂಕ: 02–04–2026

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿ ವತಿಯಿಂದ ಧಾರವಾಡ ಜಿಲ್ಲೆ, ಹಿರೇಮಲ್ಲಿಗೆವಾಡ ಬಡಾವಣೆಯಲ್ಲಿ ಅಭಿವೃದ್ಧಿಪಡಿಸಿರುವ ನಿವೇಶನಗಳನ್ನು ಈಗಾಗಲೇ ಹಂಚಿಕೆ ಮಾಡಲಾಗಿದೆ. ಹಂಚಿಕೆ ನಂತರ ಖಾಲಿ ಉಳಿದಿರುವ ಹಾಗೂ ಬಿಡಿ (Stray) ನಿವೇಶನಗಳನ್ನು ವಿಲೇವಾರಿ ಮಾಡಲು ಆನ್‌ಲೈನ್ ಮುಖಾಂತರ ಸಾರ್ವಜನಿಕರಿಂದ ನೋಂದಣಿ ಶುಲ್ಕ ಹಾಗೂ ಆರಂಭಿಕ ಠೇವಣಿಯೊಂದಿಗೆ ಹೊಸದಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಸಾರ್ವಜನಿಕರು e-payment ಮೂಲಕ ನೋಂದಣಿ ಶುಲ್ಕ ಹಾಗೂ ಆರಂಭಿಕ ಠೇವಣಿ ಹಣವನ್ನು ಪಾವತಿ ಮಾಡಿ ದಿನಾಂಕ: 08–04–2026 ರಿಂದ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 28–04–2026 ಆಗಿರುತ್ತದೆ.

ಸ್ಥಳ ಮತ್ತು ಜಿಲ್ಲೆ	ವರ್ಗ	ಹಂಚಿಕೆಗೆ ಲಭ್ಯವಿರುವ ಅಂದಾಜು ಸ್ವತ್ತುಗಳು	ನೊಂದಣಿ ಶುಲ್ಕ (ರೂ.ಗಳಲ್ಲಿ)	ಆರಂಭಿಕ ಠೇವಣಿ (ರೂ.ಗಳಲ್ಲಿ)	ಮಂಡಳಿ ದರ (ಪ್ರತಿ ಚದರಡಿಗೆ ರೂ.ಗಳಲ್ಲಿ)
ಧಾರವಾಡ ಜಿಲ್ಲೆ, ಹಿರೇಮಲ್ಲಿಗೆವಾಡ ಬಡಾವಣೆ	EWS	22	300/-	5,000/-	650/-
	LIG	52	500/-	10,000/-	1,300/-
	MIG	148	1000/-	40,000/-	
	HIG-I	49	1,500/-	50,000/-	

ನೊಂದಣಿ ಶುಲ್ಕ ಮತ್ತು ಆರಂಭಿಕ ಠೇವಣಿ ಹಣವನ್ನು e-payment ಮೂಲಕ ಪಾವತಿಸಿ ಅರ್ಜಿ ಸಲ್ಲಿಸಲು ಹಾಗೂ ನಿಯಮ ಮತ್ತು ಷರತ್ತುಗಳ ಪೂರ್ಣ ವಿವರಗಳಿಗಾಗಿ ಮಂಡಳಿಯ ವೆಬ್‌ಸೈಟ್ https://www.khb.karnataka.gov.in ಸಂಪರ್ಕಿಸುವುದು.
ಹೆಚ್ಚಿನ ಮಾಹಿತಿಗಾಗಿ ಹುಬ್ಬಳ್ಳಿ ಜಿಲ್ಲಾ ಯೋಜನಾ ಕಛೇರಿಯ ಕಂದಾಯ ಅಧಿಕಾರಿಗಳು ಮೊಬೈಲ್ ಸಂಖ್ಯೆ: 9916350888 ಹಾಗೂ ಕೇಂದ್ರ ಕಛೇರಿಯ ಕಂದಾಯ ಅಧಿಕಾರಿಗಳು ದೂರವಾಣಿ ಸಂಖ್ಯೆ: 080–22273511 ext.306/307/308/309 ಸಂಪರ್ಕಿಸುವುದು.

ಸಹಿ/– ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.

ವಾಸಾಸಂಇ/ಬೆ/ನಂ.100–04/ಝೇಂಕಾರ್/2026–27

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಧಾರವಾಡ
ಸ್ಥಾಪನೆ–1947
ಮುರುಘಾಮಠದ ಹತ್ತಿರ, ಸವದತ್ತಿ ರಸ್ತೆ, ಧಾರವಾಡ–580 008.
ಇ–ಮೇಲ್: apmcdharwad@rediffmail.com ದೂರವಾಣಿ: 0836–2448157, 2970324

ಸಂ:ಕೃಮಾಇ:ಕೃಉಮಾಸ(ಧಾ):07 :2026–27 ದಿನಾಂಕ: 06–04–2026

ಸಂಕ್ಷಿಪ್ತ ಇ-ಟೆಂಡರ್ ಪ್ರಕಟಣೆ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಧಾರವಾಡ ವತಿಯಿಂದ ಈ ಕೆಳಕಂಡಂತೆ https://kppp.Karnataka.gov.in ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 22/04/2026 ಆಗಿರುತ್ತದೆ. ಹೆಚ್ಚಿನ ನಿಯಮ ಹಾಗೂ ಮಾಹಿತಿಗಾಗಿ ಕರ್ನಾಟಕ ಸರ್ಕಾರದ https://kppp.Karnataka.gov.in ವೆಬ್‌ಸೈಟ್‌ನಲ್ಲಿ ಮತ್ತು ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಕ್ರ ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ / ದಿನಾಂಕ	ಇಂಡೆಂಟ್ ಸಂಖ್ಯೆ	ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಜಿ.ಎಸ್.ಟಿ. ಹೊರತುಪಡಿಸಿ) (ರೂ.ಗಳಲ್ಲಿ)
1	ದಿನಾಂಕ: 25/03/2026 ರ ಕೃಉಮಾಸ(ಧಾ) :ಟೆಂ.ಪ್ರ; 954 : 2025–26	APMC/2025-26 / WO / WORK_INDENT_916 (ಸಾಮಾನ್ಯ ವರ್ಗ)	ರೂ. 54,13,212–00
2	ದಿನಾಂಕ: 25/03/2026 ರ ಕೃಉಮಾಸ(ಧಾ) :ಟೆಂ.ಪ್ರ; 953 : 2025–26	APMC/2025-26 / WO / WORK_INDENT_915 (ಸಾಮಾನ್ಯ ವರ್ಗ)	ರೂ. 9,16,488–00
3	ದಿನಾಂಕ: 25/03/2026 ರ ಕೃಉಮಾಸ(ಧಾ) : ಟೆಂ.ಪ್ರ; 952 : 2025–26	APMC/2025-26 / SE0835	ರೂ. 17,24,396–96

ಸಹಿ/–
(ಎ. ಪಿ. ಪಾಟೀಲ)
ಕಾರ್ಯದರ್ಶಿ(ಪ್ರ),
ಕೃ. ಉ. ಮಾ. ಸ., ಧಾರವಾಡ

ಸಹಿ/–
(ಕೆ. ಹೆಚ್. ಗುರುಪ್ರಸಾದ)
ಆಡಳಿತಾಧಿಕಾರಿಗಳು
ಕೃ. ಉ. ಮಾ. ಸ., ಧಾರವಾಡ

ವಾ.ಸಾ.ಇ./ಧಾರವಾಡ/31/2026–27/ದೇಶಪಾಂಡೆಪಬ್ಲಿಸಿಟಿ

ಕಾನೂನಾತ್ಮಕ ಪರಾಮರ್ಶೆ ನಡೆಸಲಾಗದು ಸುಪ್ರೀಂಕೋರ್ಟ್‌ಗೆ ಮಾಹಿತಿ

'ಶಬರಿಮಲೆ: ಸ್ತ್ರೀಯರ ನಿರ್ಬಂಧ–ಕೇಂದ್ರದ ಬೆಂಬಲ'

ನವದೆಹಲಿ (ಪಿಟಿಐ): 'ಧಾರ್ಮಿಕ ನಂಬಿಕೆಯಿಂದಾಗಿ ಶಬರಿಮಲೆ ದೇಗುಲಕ್ಕೆ ಅಲ್ಲಿನ ಸರ್ಕಾರ ಮಹಿಳೆಯರಿಗೆ ಪ್ರವೇಶ ನೀಡುತ್ತಿಲ್ಲ. ಇಂತಹ ವಿಷಯಗಳು ನ್ಯಾಯಾಂಗ ಪರಿಶೀಲನೆಯ ವ್ಯಾಪ್ತಿಯನ್ನು ಮೀರಿವೆ' ಎಂದು ಸುಪ್ರೀಂ ಕೋರ್ಟ್ ಎದುರು ಕೇಂದ್ರ ಸರ್ಕಾರ ಹೇಳಿದೆ.

ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ 9 ನ್ಯಾಯಮೂರ್ತಿಗಳನ್ನು ಒಳಗೊಂಡ ಸಾಂವಿಧಾನಿಕ ಪೀಠದ ಮುಂದೆ ಕೇಂದ್ರ ಸರ್ಕಾರದ ಪರವಾಗಿ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಒಂದೊಮ್ಮೆ ಅವೈಜ್ಞಾನಿಕ ಎಂದು ಕಂಡುಬಂದರೆ, ಇದಕ್ಕೆ ಶಾಸಕಾಂಗದಲ್ಲಿ ಪರಿಹಾರವಿದೆ' ಎಂದು ತಿಳಿಸಿದ್ದಾರೆ.

'ನಾವು ಪ್ರತಿಯೊಂದು ಪಂಗಡದ ಆಚರಣೆಯನ್ನೂ ಗೌರವಿಸಬೇಕು. ಎಲ್ಲವೂ ಘನತೆ ಹಾಗೂ ದೈಹಿಕ ಸಾಮರ್ಥ್ಯಕ್ಕೆ ಸಂಬಂಧಿಸಿದ್ದಲ್ಲ. ನಾನು ಮಜಾರ್ ಅಥವಾ ಗುರುದ್ವಾರಕ್ಕೆ ತೆರಳಿದರೆ, ತಲೆಗೆ ಬಟ್ಟೆ ಕಟ್ಟಿಕೊಳ್ಳಬೇಕು. ಅದನ್ನು ಘನತೆ, ಹಕ್ಕು ಅಥವಾ ಆಯ್ಕೆ ಎಂದು ಹೇಳುವಂತಿಲ್ಲ' ಎಂದು ಮೆಹ್ತಾ ಅವರು ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ, ಎಂ.ಎಂ.ಸುಂದರೇಶ್, ಅಹ್ಸಾನುದ್ದೀನ್ ಅಮಾನುಲ್ಲಾ, ಅರವಿಂದ್ ಕುಮಾರ್, ಆಗಸ್ಟೀನ್ ಜಾರ್ಜ್, ಪ್ರಸನ್ನ ವಿ.ವರಾಳೆ, ಆರ್. ಮಹದೇವನ್, ಜಾಯಾಮಾಲ್ಯಾ ಬಾಗ್ಚಿ ಪೀಠದ ಮುಂದೆ ತಿಳಿಸಿದರು.

'ಯಾರಾದರೂ ಧಾರ್ಮಿಕ ಆಚರಣೆಯ ಹೆಸರಿನಲ್ಲಿ ಮಾನವನ ಬಲಿದಾನ ಅಗತ್ಯ ಎಂದು ಪ್ರತಿಪಾದಿಸಿದರೆ, ಆಗ ಅವರು ಸಂವಿಧಾನದ 32ರ ಅಡಿಯಲ್ಲಿ ನ್ಯಾಯಾಲಯದಲ್ಲಿ ಪ್ರಶ್ನಿಸಬಹುದಾಗಿದೆ. ಆಗ ನ್ಯಾಯಾಲಯವು ಧಾರ್ಮಿಕವಾಗಿ ಅದು ಅಗತ್ಯವೇ ಎಂದು ಪ್ರಶ್ನಿಸಬೇಕಿಲ್ಲ. ಜನರ ಆರೋಗ್ಯ, ಸಾರ್ವಜನಿಕ ಸುರಕ್ಷತೆ ಆಧರಿಸಿ ನೇರವಾಗಿ ತಿರಸ್ಕರಿಸಬಹುದಾಗಿದೆ' ಗಮನಸೆಳೆದಿದ್ದಾರೆ.

'ಮಹಿಳೆಯರನ್ನು 3 ದಿನ ಅಸ್ಪೃಶ್ಯರಂತೆ ಕಾಣಬೇಡಿ'

'ಸಂವಿಧಾನದ 17ನೇ ವಿಧಿಯು ಮಹಿಳೆಯರು ಮುಟ್ಟಾಗುವ ಮೂರು ದಿನಗಳು ಅನ್ವಯವಾಗುವುದಿಲ್ಲ. ನಾಲ್ಕನೆಯ ದಿನ ಈ ಅಸ್ಪೃಶ್ಯತೆ ಇಲ್ಲವಾಗಿಬಿಡುತ್ತದೆ' ಎಂದು ನ್ಯಾಯಮೂರ್ತಿ ಬಿ.ವಿ. ನಾಗರತ್ನ ಅವರು ಮಾರ್ಮಿಕವಾಗಿ ಹೇಳಿದರು. ಒಬ್ಬ ಮಹಿಳೆಯಾಗಿ ಈ ಮಾತನ್ನು ಹೇಳುತ್ತಿರುವುದಾಗಿಯೂ ಅವರು ಉಲ್ಲೇಖಿಸಿದರು.

'ಅಸ್ಪೃಶ್ಯತೆಗೆ ತನ್ನದೇ ಆದ ಇತಿಹಾಸವಿದೆ. ಅದರಿಂದ ಹೊರಬರಲು ಸಂವಿಧಾನದ 17ನೇ ವಿಧಿ ಮೂಲಭೂತ ಹಕ್ಕನ್ನು ನೀಡಿದೆ. ಮಹಿಳೆಯರು ಮುಟ್ಟಾಗುವ ದಿನಗಳಲ್ಲಿ ಇದು ಅನ್ವಯವಾಗದೆ, ನಾಲ್ಕನೆಯ ದಿನ ಜಾರಿಗೆ ಬಂದುಬಿಡುತ್ತದೆ' ಎಂದು ವ್ಯಂಗ್ಯದ ಧಾಟಿಯಲ್ಲಿ ಹೇಳಿದರು.

ಕೇಂದ್ರ ಸರ್ಕಾರದ ಪರವಾಗಿ ವಾದ ಮಂಡಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, 'ದೇವಸ್ಥಾನಕ್ಕೆ ಪ್ರವೇಶ ಕಲ್ಪಿಸದೆ ಮಹಿಳೆಯರನ್ನು ಅಸ್ಪೃಶ್ಯರಂತೆ ಕಾಣುತ್ತಿದ್ದಾರೆ ಎನ್ನುವುದು ಒಂದು ಅನಿಸಿಕೆ. ಆದರೆ, ಭಾರತವು ಅಷ್ಟೇನೂ ಪುರುಷ ಪ್ರಧಾನವಾಗಿಲ್ಲ' ಎಂದು ಹೇಳಿದ್ದಕ್ಕೆ ಪ್ರತಿಕ್ರಿಯಾತ್ಮಕವಾಗಿ ನಾಗರತ್ನ ಅವರು ಆ ರೀತಿ ಅಭಿಪ್ರಾಯ ವ್ಯಕ್ತಪಡಿಸಿದರು.

ಪಲಕ್ (ಎಡ) ಹಾಗೂ ಮುಕೇಶ್

ಪಲಕ್–ಮುಕೇಶ್ ವಿಶ್ವದಾಖಲೆ

ಗ್ರೆನೆಡಾ (ಸ್ಪೇನ್), (ಪಿಟಿಐ): ಭಾರತದ ಶೂಟರ್‌ಗಳಾದ ಪಲಕ್ ಮತ್ತು ಮುಕೇಶ್ ನೆಲವಲ್ಲಿ ಜೋಡಿ, ಐಎಸ್‌ಎಸ್‌ಎಫ್ ವಿಶ್ವ ಕಪ್ ಶೂಟಿಂಗ್ ಚಾಂಪಿಯನ್‌ಷಿಪ್‌ನ 10 ಮೀ. ಏರ್ ಪಿಸ್ತೂಲ್ ಮಿಶ್ರ ತಂಡ ವಿಭಾಗದಲ್ಲಿ ಮಂಗಳವಾರ ಚಿನ್ನ ಗೆದ್ದುಕೊಂಡಿತು. ಆ ಹಾದಿಯಲ್ಲಿ ವಿಶ್ವ ದಾಖಲೆಯನ್ನೂ ಬರೆಯಿತು.

ಭಾರತದ ಜೋಡಿ ಫೈನಲ್‌ನಲ್ಲಿ 487.7 ಸ್ಕೋರ್ ಗಳಿಸಿತು. ಇದು ಜೂನಿಯರ್ ವಿಶ್ವ ದಾಖಲೆ ಕೂಡ. ಅರ್ಹತಾ ಸುತ್ತಿನಲ್ಲೇ ಉತ್ತಮ ಗುರಿ ಪ್ರದರ್ಶಿಸಿ 581 ಅಂಕ ದಾಖಲಿಸಿತ್ತು.

ಚೀನಾದ ಕ್ವಿಯಾನ್‌ಷುನ್ ಯಾವೊ ಮತ್ತು ಕಯ್ ಹು ಜೋಡಿ 484.8 ಸ್ಕೋರ್‌ನೊಡನೆ ಬೆಳ್ಳಿ ಗೆದ್ದಿತು. ಹಂಗೆರಿಯ ವೆರೋನಿಕಾ ಮೇಜರ್ ಮತ್ತು ಅಕೋಸ್ ಕರೋಲಿ ಜೋಡಿ (414.9) ಕಂಚಿನ ಪದಕ ಗಳಿಸಿತು.

ಭಾರತದ ಪರ ಫೈನಲ್‌ನಲ್ಲಿ ಪಲಕ್ 243 ಮತ್ತು ಮುಕೇಶ್ 244 .7 ಸ್ಕೋರ್ ದಾಖಲಿಸಿದರು. ಕ್ವಾಲಿಫಿಕೇಷನ್ ಸುತ್ತಿನಲ್ಲಿ ಭಾರತದ ಜೋಡಿ ಎರಡನೇ ಸ್ಥಾನದಲ್ಲಿತ್ತು.

18 ವರ್ಷ ವಯಸ್ಸಿನ ಪಲಕ್, 2023ರ ಏಷ್ಯನ್ ಕ್ರೀಡೆಗಳ 10 ಮೀ. ಏರ್ ಪಿಸ್ತೂಲ್ ವೈಯಕ್ತಿಕ ಚಿನ್ನ ಮತ್ತು ತಂಡ ವಿಭಾಗದಲ್ಲಿ ಬೆಳ್ಳಿ ಗೆಲ್ಲುವ ಮೂಲಕ ಪ್ರವರ್ಧಮಾನಕ್ಕೆ ಬಂದಿದ್ದರು.

ಕುಸ್ತಿ: ಲಲಿತ್‌ಗೆ ಬೆಳ್ಳಿ, ಸುನಿಲ್‌ಗೆ ಕಂಚು

ಬಿಷ್ಕೆಕ್ (ಕಿರ್ಗಿಸ್ಥಾನ), (ಪಿಟಿಐ): ಅನುಭವಿ ಪೈಲ್ವಾನ್ ಲಲಿತ್ ಅವರು ಸೀನಿಯರ್ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನ 55 ಕೆ.ಜಿ. ವಿಭಾಗದ ಗ್ರೀಕೊ ರೋಮನ್ ಸ್ಪರ್ಧೆಯಲ್ಲಿ ಮಂಗಳವಾರ ಬೆಳ್ಳಿ ಪದಕ ಗೆದ್ದರು. ಇದು ಚಾಂಪಿಯನ್‌ಷಿಪ್‌ನಲ್ಲಿ ಭಾರತಕ್ಕೆ ಮೊದಲ ಪದಕ ಎನಿಸಿತು.

ಭಾರತದ ನಿತೇಶ್ 97 ಕೆ.ಜಿ. ವಿಭಾಗದಲ್ಲಿ ಪ್ರಶಸ್ತಿ ಸುತ್ತನ್ನು ಪ್ರವೇಶಿಸಿದರು.

23 ವರ್ಷದೊಳಗಿನವರ ಮಾಜಿ ಏಷ್ಯನ್ ಕಂಚಿನ ಪದಕ ವಿಜೇತರಾದ ಲಲಿತ್ ಸೆಮಿಫೈನಲ್‌ನಲ್ಲಿ ಚೀನಾದ ಹುವೊಯಿಂಗ್ ಶಿ ಅವರನ್ನು ಸೋಲಿಸಿದ್ದರು. ಫೈನಲ್‌ನಲ್ಲಿ ಉಜ್ಬೇಕಿಸ್ತಾನದ ಇಕ್ತಿಯಾರ್ ಬೊಟಿರೋವ್ ಎದುರು ಪ್ರತಿರೋಧ ತೋರಿದರೂ 0–9 ರಿಂದ ಸೋತರು.

87 ಕೆ.ಜಿ. ವಿಭಾಗದಲ್ಲಿ ಕಂಚಿನ ಪದಕಕ್ಕೆ ನಡೆದ ಹಣಾಹಣಿಯಲ್ಲಿ ಮಾಜಿ ಚಾಂಪಿಯನ್ ಸುನಿಲ್ ಕುಮಾರ್ ಅವರು ಮೊದಲ ಸುತ್ತಿನಲ್ಲಿ 0–4 ಹಿನ್ನಡೆಯಿಂದ ಅಮೋಘವಾಗಿ ಚೇತರಿಸಿ ಉಜ್ಬೇಕಿಸ್ತಾನದ ಮುಖಮದ್‌ಕೊದಿರ್ ರಸುಲೋವ್ ಅವರನ್ನು 5–4 ರಿಂದ ಸೋಲಿಸಿದರು. ಇದು ಅವರಿಗೆ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಸತತ ಎರಡನೇ ಕಂಚು ಎನಿಸಿತು.


ನಿತೇಶ್

ಲಲಿತ್

ಇದಕ್ಕೆ ಮೊದಲು, 23 ವರ್ಷ ವಯಸ್ಸಿನ ನಿತೇಶ್ 97 ಕೆ.ಜಿ. ಗ್ರೀಕೊ ರೋಮನ್ ಕೆಟಗರಿಯಲ್ಲಿ ಫೈನಲ್ ತಲುಪಿದರು. ಕಳೆದ ವರ್ಷ ಕಂಚಿನ ಪದಕ ಗೆದ್ದುಕೊಂಡಿದ್ದ ಅವರು ಈ ಬಾರಿ ಸುಧಾರಿತ ಫಲಿತಾಂಶ ಕಾಣುವುದು ಖಚಿತವಾಯಿತು. ನಿತೇಶ್ ಸೆಮಿಫೈನಲ್‌ನಲ್ಲಿ ಹಾಲಿ ಚಾಂಪಿಯನ್ ಮೊಹಮ್ಮದ್‌ಹದಿ ಸರವಿ (ಇರಾನ್) ಅವರನ್ನು ಸೋಲಿಸಿದರು.

82 ಕೆ.ಜಿ. ಗ್ರೀಕೊ ರೋಮನ್ ಸ್ಪರ್ಧೆಯಲ್ಲಿ ಪ್ರಿನ್ಸ್ ಅವರು ಕಂಚಿನ ಪದಕಕ್ಕಾಗಿ ನಡೆಯುವ ಸೆಣಸಾಟದಲ್ಲಿ ತುರ್ಕಮೆನಿಸ್ತಾನದ ದಿದಾರ್ ಅಮ್ಮಾನಝುರೋವ್ ಅವರನ್ನು ಎದುರಿಸಲಿದ್ದಾರೆ. 20 ವರ್ಷ ವಯಸ್ಸಿನ ಪ್ರಿನ್ಸ್ ಸೆಮಿಫೈನಲ್‌ನಲ್ಲಿ ಇರಾನ್‌ನ ಮೊಹಮ್ಮದಮಿನ್ ಹುಸೇನಿ ಅವರಿಗೆ ಮಣಿದಿದ್ದರು.

ಅಮನ್‌ಗೆ ಹಿನ್ನಡೆ: ಆದರೆ ಭಾರತದ ಪ್ರಮುಖ ಸ್ಪರ್ಧಿ ಅಮನ್ ಅವರಿಗೆ ಒಂದು ಪಾಯಿಂಟ್ ಅಂತರದಿಂದ ಹಿನ್ನಡೆಯಾಯಿತು. 77 ಕೆ.ಜಿ. ಗ್ರೀಕೊ ರೋಮನ್ ಕೆಟಗರಿಯಲ್ಲಿ ಕಂಚಿನ ಪದಕಕ್ಕೆ ನಡೆದ ಸೆಣಸಾಟದಲ್ಲಿ ಅವರು ದಕ್ಷಿಣ ಕೊರಿಯಾದ ಯೊನ್ಗಮ್ ನ್ಹೊ ಅವರಿಗೆ 14–15ರಲ್ಲಿ ಸೋತರು.

ಸಚಿನ್ ಸಹ್ರಾವತ್ (67 ಕೆ.ಜಿ. ಗ್ರೀಕೊ ರೋಮನ್) ಅವರು ಕಂಚಿನ ಪದಕಕ್ಕೆ ಸೆಣಸುವ ಅರ್ಹತೆ ಪಡೆದರು. ಅವರು ಬುಧವಾರ ರೆಪೆಷಾಜ್ ಸುತ್ತಿನಲ್ಲಿ ಚೀನಾದ ಜಿ ಪೆಂಗ್ ವಿರುದ್ಧ ಅಖಾಡಕ್ಕಿಳಿಯಲಿದ್ದಾರೆ.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನೀಯರ ರವರ ಕಚೇರಿ
ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ, ಬೆಳಗಾವಿ ಜಿಲ್ಲೆ–591302

ಸಂಖ್ಯೆ. ಕನೀನಿನಿ/ಕಯೋವಿ/ಖಾ/ಪಿಬಿ/ಅ.ಟೆಂ.ಪ್ರ/2026–27/43–45 ದಿನಾಂಕ: 06.04.2026.

"ಅಲ್ಪಾವಧಿ ಶೇಕಡಾವಾರು ಟೆಂಡರ್ ಪ್ರಕಟಣೆ"
(ಕೆಪಿಪಿ–ಪೋರ್ಟಲ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ್, ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ, ಬೆಳಗಾವಿ ಕಚೇರಿ ಅಡಿಯಲ್ಲಿ ಬರುವ ಈ ಕೆಳಗಿನ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರ್‌ಗಳನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಕೆಪಿಪಿ–ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ.

ಕ್ರ ಸಂ.	ಕಾಮಗಾರಿಯ ಹೆಸರು	ಟೆಂಡರ್‌ಗೆ ಇಟ್ಟ ಮೊತ್ತ ಜಿ.ಎಸ್.ಟಿ. ಹೊರತುಪಡಿಸಿ (ರೂ. ಲಕ್ಷಗಳಲ್ಲಿ)	ಅರ್ಹ ಗುತ್ತಿಗೆದಾರರ ದರ್ಜೆ
1	Improvements to road from Beejagarni village to Janewadi village in Belagavi Taluka. **(W.I. No. KNNL/2025-26/RD/WORK_INDENT4176/Call-2)**	338.81	ದರ್ಜೆ 2 ಮತ್ತು ಮೇಲ್ಪಟ್ಟು
2	Improvements to road from Belavatti village to Karle-Kawalewadi Main road in Belagavi Tulaka. **(W.I. No. KNNL/2025-26/RD/WORK_INDENT4177/Call-2)**	422.48	ದರ್ಜೆ 2 ಮತ್ತು ಮೇಲ್ಪಟ್ಟು
3	Improvements to road from Kudaremani Village main road to Shinoli-Surute main road and Shinoli-Surute main road Sonoli Village limits in Belagavi Taluka. **(W.I. No. KNNL/2025-26/RD/WORK_INDENT4178/ Call-2)**	338.84	ದರ್ಜೆ 2 ಮತ್ತು ಮೇಲ್ಪಟ್ಟು

https://kppp.karnataka.gov.in ನಲ್ಲಿ ಅರ್ಜಿ ಡೌನಲೋಡ ಮಾಡಿಕೊಳ್ಳಬಹುದು/ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ **ದಿನಾಂಕ: 15.04.2026ರಂದು ಸಂಜೆ 4.00 ಗಂಟೆ ವರೆಗೆ** ಸಲ್ಲಿಸಬಹುದು. ಪ್ರಿ–ಬಿಡ್ ಸಭೆಯನ್ನು **ದಿನಾಂಕ: 10.04.2026ರಂದು ಮುಂಜಾನೆ 11.00 ಗಂಟೆಗೆ** ಕಾರ್ಯನಿರ್ವಾಹಕ ಇಂಜಿನೀಯರ, ಕನೀನಿನಿ, ಕಳಸಾ ಯೋಜನಾ ವಿಭಾಗ, ಖಾನಾಪೂರ ಕಚೇರಿಯಲ್ಲಿ ಆಯೋಜಿಸಲಾಗಿದೆ. ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 16.04.2026 ಸಂಜೆ 4.30 ಗಂಟೆಗೆ.** ಪೂರ್ವಾರ್ಹತೆ ಕುರಿತಂತೆ ಇ.ಎಂ.ಡಿ. ವಿವರ, ಟೆಂಡರ್ ಷರತ್ತುಗಳು ಹಾಗೂ ಇತರೆ ವಿವರಗಳನ್ನು **ಕೆಪಿಪಿ–ಪೋರ್ಟಲ್** ಮುಖಾಂತರ https://kppp.karnataka.gov.in ಪಡೆಯಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ **ಸಂಖ್ಯೆ: 08336–222163** ಸಂಪರ್ಕಿಸುವದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರ
ಕನೀನಿನಿ, ಕಳಸಾ ಯೋಜನೆ ವಿಭಾಗ,
ಖಾನಾಪೂರ, ಬೆಳಗಾವಿ

ವಾ.ಸಾ.ಇ./ಬೆಳಗಾವಿ/52/2026–27/ದೇಶಪಾಂಡೆಪಬ್ಲಿಸಿಟಿ

ರಾಯಲ್ಸ್‌ಗೆ ಹ್ಯಾಟ್ರಿಕ್ ಗೆಲುವು

ರಿಯಾನ್ ಪಡೆಯ ಆಲ್‌ರೌಂಡ್ ಆಟ • ವೈಭವ್– ಜೈಸ್ವಾಲ್ ಮಿಂಚು

ಗುವಾಹಟಿ (ಪಿಟಿಐ): ಬ್ಯಾಟಿಂಗ್ ಹಾಗೂ ಬೌಲಿಂಗ್ ಎರಡರಲ್ಲೂ ಪಾರಮ್ಯ ಮೆರೆದ ರಾಜಸ್ಥಾನ ರಾಯಲ್ಸ್ ತಂಡವು ಮಂಗಳವಾರ ನಡೆದ ಐಪಿಎಲ್ ಪಂದ್ಯದಲ್ಲಿ 27 ರನ್‌ಗಳಿಂದ ಮುಂಬೈ ಇಂಡಿಯನ್ಸ್ ತಂಡವನ್ನು ಮಣಿಸಿತು. ಹ್ಯಾಟ್ರಿಕ್ ಗೆಲುವಿನೊಂದಿಗೆ ಅಂಕಪಟ್ಟಿಯಲ್ಲಿ ಮತ್ತೆ ಅಗ್ರಸ್ಥಾನಕ್ಕೇರಿತು.

ಮಳೆಯಿಂದಾಗಿ ಸುಮಾರು ಎರಡೂವರೆ ಗಂಟೆ ತಡವಾಗಿ ಆರಂಭವಾದ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ತಂಡದ ಆರಂಭಿಕರಾದ ಯಶಸ್ವಿ ಜೈಸ್ವಾಲ್ ಹಾಗೂ ವೈಭವ್ ಸೂರ್ಯವಂಶಿ ಅಬ್ಬರಿಸಿದರು. ಈ ಜೋಡಿಯ ಮಿಂಚಿನ ಆಟದ ಬಲದಿಂದ ರಿಯಾನ್ ಪರಾಗ್ ಪಡೆ 11 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 150 ರನ್ ಗಳಿಸಿತು.

ಕಠಿಣ ಗುರಿ ಬೆನ್ನಟ್ಟಿದ ಮುಂಬೈ ತಂಡದ ಆಟಗಾರರು ಒತ್ತಡಕ್ಕೆ ಸಿಲುಕಿದರು. ಅದರ ಲಾಭ ತೆಗೆದುಕೊಂಡ ರಾಯಲ್ಸ್ ಬೌಲರ್‌ಗಳು, ನಿಯಮಿತವಾಗಿ ವಿಕೆಟ್ ಗಳಿಸಿದರು. ಹಾರ್ದಿಕ್ ಪಾಂಡ್ಯ ಪಡೆ 9 ವಿಕೆಟ್‌ಗಳಿಗೆ 123 ರನ್ ಗಳಿಸಿ, ಓವರ್ ಪೂರೈಸಿತು.

ಮಧ್ಯಮ ಕ್ರಮಾಂಕದಲ್ಲಿ ನಮನ್ ಧೀರ್ (25; 13ಎ) ಹಾಗೂ ಶೆರ್ಫೇನ್ ರುದರ್‌ಫೋರ್ಡ್ (25; 8ಎ) ಹೋರಾಟ ತೋರಿದರಾದರೂ, ಗುರಿ ದೂರವಿತ್ತು.

ಇದಕ್ಕೆ ಮೊದಲು, ಟಾಸ್ ಗೆದ್ದ ಮುಂಬೈ ಇಂಡಿಯನ್ಸ್ ನಾಯಕ ಹಾರ್ದಿಕ್, ರಾಯಲ್ಸ್ ತಂಡವನ್ನು ಬ್ಯಾಟಿಂಗ್‌ಗೆ ಇಳಿಸಿದರು. ಜೈಸ್ವಾಲ್ ಹಾಗೂ ವೈಭವ್ ಮೊದಲ ವಿಕೆಟ್‌ಗೆ 5 ಓವರ್‌ಗಳಲ್ಲಿ 80 ರನ್ ಗಳಿಸಿ, ರಾಯಲ್ಸ್‌ಗೆ ಭದ್ರ ಬುನಾದಿ ಹಾಕಿಕೊಟ್ಟರು.

ಜೈಸ್ವಾಲ್ 32 ಎಸೆತಗಳಲ್ಲಿ ಅಜೇಯ 77 ರನ್ ಸಿಡಿಸಿದರು. ಅವರ ಇನಿಂಗ್ಸ್‌ನಲ್ಲಿ ಹತ್ತು ಬೌಂಡರಿ ಹಾಗೂ ನಾಲ್ಕು ಸಿಕ್ಸರ್ ಇದ್ದವು. ಯುವತಾರೆ ವೈಭವ್ 14 ಎಸೆತಗಳಲ್ಲಿ ಒಂದು ಬೌಂಡರಿ, 5 ಸಿಕ್ಸರ್ ಸಹಿತ 39 ರನ್ ಗಳಿಸಿದರು. ಕೊನೆಯಲ್ಲಿ, ನಾಯಕ ಪರಾಗ್ (20; 10ಎ, 4x1, 6x2) ಅವರೂ ಬಿರುಸಿನ ಆಟವಾಡಿದರು. ಹೀಗಾಗಿ ರಾಯಲ್ಸ್ ತಂಡವು 150ರ ಗಡಿ ಮುಟ್ಟಿತು.

ನಾಯಕ ಹಾರ್ದಿಕ್ ಪಾಂಡ್ಯ, ಅಫ್ಗಾನಿಸ್ತಾನದ ಸ್ಪಿನ್ನರ್ ಅಲ್ಲಾ ಘಜನಫರ್ (21ಕ್ಕೆ2) ಹೊರತುಪಡಿಸಿ ಮುಂಬೈ ತಂಡದ ಎಲ್ಲ ಬೌಲರ್‌ಗಳು ದುಬಾರಿಯಾದರು. ಮಳೆಯ ಅಡಚಣೆಯಿಂದಾಗಿ ಪಂದ್ಯವನ್ನು 11 ಓವರ್‌ಗಳಿಗೆ ಕಡಿತಗೊಳಿಸಲಾಗಿತ್ತು.

ಅರ್ಧಶತಕ ಗಳಿಸಿ ಸಂಭ್ರಮಿಸಿದ ಯಶಸ್ವಿ ಜೈಸ್ವಾಲ್ ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ರಾಜಸ್ಥಾನ ರಾಯಲ್ಸ್: 3 ವಿಕೆಟ್‌ಗೆ 150 (11 ಓವರುಗಳಲ್ಲಿ)
ಯಶಸ್ವಿ ಜೈಸ್ವಾಲ್ ಔಟಾಗದೇ 77 (32ಎ, 4x10, 6x4)
ವೈಭವ್ ಸಿ ವರ್ಮಾ ಬಿ ಠಾಕೂರ್ 39 (14ಎ, 4x1, 6x5)
ಜುರೆಲ್ ಎಲ್‌ಬಿಡಬ್ಲ್ಯು ಬಿ ಘಜನ್‌ಫರ್ 2 (3ಎ)
ಪರಾಗ್ ಸಿ ವರ್ಮಾ ಬಿ ಘಜನ್‌ಫರ್ 20 (10ಎ, 4x1, 6x2)
ಶಿಮ್ರನ್ ಹೆಟ್ಮೆಯರ್ ಔಟಾಗದೇ 6 (7ಎ)
ಇತರೆ: 6 (ವೈಡ್ 6)
ವಿಕೆಟ್ ಪತನ: 1–80 (ವೈಭವ ಸೂರ್ಯವಂಶಿ, 4.6), 2–84 (ಧ್ರುವ್ ಜುರೇಲ್, 5.4), 3–121 (ರಿಯಾನ್ ಪರಾಗ್, 8.5)
ಬೌಲಿಂಗ್: ದೀಪಕ್ ಚಾಹರ್ 1–0–22–0; ಜಸ್‌ಪ್ರೀತ್ ಬೂಮ್ರಾ 3–0–32–0; ಟ್ರೆಂಟ್ ಬೌಲ್ಟ್ 1–0–22–0; ಹಾರ್ದಿಕ್ ಪಾಂಡ್ಯ 2–0–17–0; ಶಾರ್ದೂಲ್ ಠಾಕೂರ್ 2–0–36–1; ಅಲ್ಲಾ ಘಜನಫರ್ 2–0–21–2

ಮುಂಬೈ ಇಂಡಿಯನ್ಸ್: 11 ಓವರ್‌ಗಳಲ್ಲಿ 9 ವಿಕೆಟ್‌ಗೆ 123
ರಿಕೆಲ್ಟನ್ ಸಿ ಜುರೆಲ್ ಬಿ ಆರ್ಚರ್ 8 (4ಎ, 6x1)
ರೋಹಿತ್ ಎಲ್‌ಬಿಡಬ್ಲ್ಯು ಬಿ ಸಂದೀಪ್ 5 (6ಎ)
ಸೂರ್ಯಕುಮಾರ್ ಸಿ ಆರ್ಚರ್ ಬಿ ಬರ್ಗರ್ 6 (3ಎ, 6x1)
ತಿಲಕ್ ಸಿ ಹೆಟ್ಮೆಯರ್ ಬಿ ಬಿಷ್ಣೋಯಿ 14 (10ಎ, 4x2)
ಹಾರ್ದಿಕ್ ಸಿ ಜೈಸ್ವಾಲ್ ಬಿ ಬಿಷ್ಣೋಯಿ 9 (6ಎ, 4x2)
ನಮನ್ ಸಿ ಬಿಷ್ಣೋಯಿ ಬಿ ಬರ್ಗರ್ 25 (13ಎ, 4x3, 6x1)
ರುದರ್‌ಫೋರ್ಡ್ ಸಿ ಸಂದೀಪ್ ಬಿ ತುಷಾರ್ 25 (8ಎ, 4x2, 6x2)
ಶಾರ್ದೂಲ್ ಸಿ ಜುರೆಲ್ ಬಿ ಸಂದೀಪ್ 8 (7ಎ, 4x1)
ದೀಪಕ್ ಚಾಹರ್ ಔಟಾಗದೇ 6 (5ಎ, 4x1)
ಬೌಲ್ಟ್ ರನೌಟ್ ಆರ್ಚರ್ 1 (2ಎ)
ಬೂಮ್ರಾ ಔಟಾಗದೇ 5 (4x1)
ಇತರೆ: 11 (ಬೈ1, ಲೆಗ್‌ಬೈ 4, ವೈಡ್ 6)
ವಿಕೆಟ್ ಪತನ: 1–10 (ರಿಯಾನ್ ರಿಕಲ್ಟನ್, 0.6), 2–20 (ಸೂರ್ಯಕುಮಾರ್ ಯಾದವ್, 1.4), 3–22 (ರೋಹಿತ್ ಶರ್ಮಾ, 2.3), 4–41 (ಹಾರ್ದಿಕ್ ಪಾಂಡ್ಯ, 4.3), 5–46 (ತಿಲಕ್ ವರ್ಮಾ, 4.6), 6–93 (ಶರ್ಫೇನ್ ರುದರ್‌ಫೋರ್ಡ್, 7.5), 7–103 (ನಮನ್ ಧೀರ್, 8.5), 8–111 (ಶಾರ್ದೂಲ್ ಠಾಕೂರ್, 9.4), 9–116 (ಟ್ರೆಂಟ್ ಬೌಲ್ಟ್, 10.1)
ಬೌಲಿಂಗ್: ಜೋಫ್ರಾ ಆರ್ಚರ್ 2–0–17–1; ನಾಂಡ್ರೆ ಬರ್ಗರ್ 2–0–21–2; ಸಂದೀಪ್ ಶರ್ಮಾ 3–0–26–2; ತುಷಾರ್ ದೇಶಪಾಂಡೆ 2–0–29–1; ರವಿ ಬಿಷ್ಣೋಯಿ 2–0–25–2
ಪಂದ್ಯದ ಆಟಗಾರ: ಯಶಸ್ವಿ ಜೈಸ್ವಾಲ್.

ಐಪಿಎಲ್: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಆರ್‌ಆರ್	3	3	0	0	6	2.403
ಪಿಬಿಕೆಎಸ್	3	2	0	1	5	0.637
ಆರ್‌ಸಿಬಿ	2	2	0	0	4	2.501
ಡಿಸಿ	2	2	0	0	4	1.170
ಎಸ್‌ಆರ್‌ಎಚ್	3	1	2	0	2	0.275
ಎಲ್‌ಎಸ್‌ಜಿ	2	1	1	0	2	- 0.542
ಎಂಐ	3	1	2	0	2	-0.715
ಕೆಕೆಆರ್	3	0	2	1	1	-1.964
ಜಿಟಿ	2	0	2	0	0	-0.424
ಸಿಎಸ್‌ಕೆ	3	0	3	0	0	-2.517

ಆರೇಂಜ್ ಕ್ಯಾಪ್–ಸಮೀರ್ ರಿಜ್ವಿ, ಡಿಸಿ (160 ರನ್)
ಪರ್ಪಲ್ ಕ್ಯಾಪ್–ರವಿ ಬಿಷ್ಣೋಯಿ, ಆರ್‌ಆರ್ (7 ವಿಕೆಟ್)

ಬ್ಯಾಟರ್‌ಗಳಿಂದ ಕೊಡುಗೆ ನಿರೀಕ್ಷಿಸಿರುವ ಅಕ್ಷರ್ ಪಟೇಲ್ ಪಡೆ

ಕ್ಯಾಪಿಟಲ್ಸ್‌ಗೆ ಟೈಟನ್ಸ್ ಸವಾಲು

ನವದೆಹಲಿ (ಪಿಟಿಐ): ಡೆಲ್ಲಿ ಕ್ಯಾಪಿಟಲ್ಸ್ ತಂಡವು ಬುಧವಾರ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ತಂಡವನ್ನು ಎದುರಿಸಲಿದ್ದು, ಗೆಲುವಿನ ಓಟ ಮುಂದುವರಿಸುವ ವಿಶ್ವಾಸದಲ್ಲಿದೆ. ಆದರೆ ಡೆಲ್ಲಿ ತಂಡವು ಅನುಭವಿ ಕೆ.ಎಲ್.ರಾಹುಲ್ ಸೇರಿದಂತೆ ಪ್ರಮುಖ ಬ್ಯಾಟರ್‌ಗಳಿಂದ ಹೆಚ್ಚಿನ ರನ್ನುಗಳನ್ನು ನಿರೀಕ್ಷಿಸುತ್ತಿದೆ.

ಡೆಲ್ಲಿ ಬೌಲರ್‌ಗಳು ಈ ಬಾರಿ ಉತ್ತಮ ಪ್ರದರ್ಶನ ನೀಡಿದ್ದಾರೆ. ಆದರೆ 22 ವರ್ಷ ವಯಸ್ಸಿನ ಸಮೀರ್ ರಿಜ್ವಿ ಅವರನ್ನು ಬಿಟ್ಟರೆ ಅನುಭವಿ ಬ್ಯಾಟರ್‌ಗಳು ನಿರೀಕ್ಷಿತ ಬ್ಯಾಟಿಂಗ್ ಪ್ರದರ್ಶಿಸಿಲ್ಲ. ಅವರಿಂದ ಹೆಚ್ಚಿನ ಕೊಡುಗೆ ಬಂದರೆ ತಂಡದ ಬಲ ಹೆಚ್ಚಲಿದೆ. ಮೂರನೇ ಕ್ರಮಾಂಕದಲ್ಲಿ ಆಡುವ ಅವಕಾಶ ಪಡೆದಿರುವ ನಿತೀಶ್ ರಾಣಾ ಅವರ ಮೇಲೆ ಹೆಚ್ಚಿನ ಒತ್ತಡವಿದೆ.

ಪಥುಮ್ ನಿಸಾಂಕ ಈ ಹಿಂದಿನ ಪಂದ್ಯದಲ್ಲಿ ಲಯ ಕಂಡುಕೊಂಡಿದ್ದು, ಟೈಟನ್ಸ್‌ನ ವೇಗಿಗಳಾದ ಕಗಿಸೊ ರಬಾಡ ಮತ್ತು ಮೊಹಮ್ಮದ್ ಸಿರಾಜ್ ಅವರನ್ನು ಎದುರಿಸಲು ವಿಶ್ವಾಸ ನೀಡಲಿದೆ.

ಕಳೆದ ವರ್ಷದ ಐಪಿಎಲ್‌ನ ಕೊನೆಯ ಪಂದ್ಯ ಸೇರಿದಂತೆ ಸತತ ಮೂರು ಅರ್ಧ ಶತಕಗಳನ್ನು ಬಾರಿಸಿರುವ ರಿಜ್ವಿ ಈ ಬಾರಿಯ ಐಪಿಎಲ್‌ನಲ್ಲಿ ಗಮನಸೆಳೆದ ಬ್ಯಾಟರ್‌ಗಳಲ್ಲಿ ಅಗ್ರಗಣ್ಯರಾಗಿದ್ದಾರೆ. ಅವರಿಗೆ ಗುಣಮಟ್ಟದ ಬೌಲರ್‌ಗಳ ಎದುರು ಆಡುವ ಸವಾಲು ಇದೆ.

ಮುಂಬೈ ಇಂಡಿಯನ್ಸ್ ವಿರುದ್ಧ ಆರಂಭದಲ್ಲಿ ಅಳೆದೂತೂಗಿ ಆಡಿದ ಅವರು ನಂತರ ಅಬ್ಬರಿಸಿದ್ದರು. ತಂಡ ಅವರ ಆಟದಿಂದ ಜಯಗಳಿಸಿತು. ಮುಕೇಶ್ ಕುಮಾರ್ ಬೌಲಿಂಗ್‌ನಲ್ಲಿ ಪ್ರಭಾವಿ ಎನಿಸಿದ್ದಾರೆ. ಅಕ್ಷರ್ ಪಟೇಲ್ ಅವರು ಪವರ್‌ಪ್ಲೆ ಮತ್ತು ಮಧ್ಯಮ ಹಂತದಲ್ಲಿ ಪರಿಣಾಮಕಾರಿ ಎನಿಸಿದ್ದಾರೆ. ಎನ್‌ಗಿಡಿ ಕೂಡ ಹೆಗಲು ನೀಡಿದ್ದಾರೆ.

ಆದರೆ ಗುಜರಾತ್ ತಂಡ ಈ ಬಾರಿ ಅರಂಭದಲ್ಲಿ ಎಡವಿದೆ. ರಾಜಸ್ಥಾನ ರಾಯಲ್ಸ್ ವಿರುದ್ಧ 205 ರನ್‌ಗಳ ಗುರಿ ಎದುರಿಸುವಾಗ ಉತ್ತಮ ಆರಂಭ ಮಾಡಿತು. ಆದರೆ ಪ್ರಬಲ ಮಧ್ಯಮ ಕ್ರಮಾಂಕ ಎಡವಿತು. ಸಾಯಿ ಸುದರ್ಶನ್ ಒದಗಿಸಿದ ಉತ್ತಮ ಆರಂಭ ಫಲ ನೀಡಿರಲಿಲ್ಲ. ಗ್ಲೆನ್ ಫಿಲಿಪ್ಸ್, ವಾಷಿಂಗ್ಟನ್ ಸುಂದರ್ ಮತ್ತು ರಾಹುಲ್ ತೆವಾಟಿಯಾ ಅವರು ಒತ್ತಡ ನಿಭಾಯಿಸಬೇಕಾಗಿದೆ.

ನಾಯಕ ಶುಭಮನ್ ಗಿಲ್ ಅವರು ಸ್ನಾಯುಸೆಳೆತದಿಂದಾಗಿ ಈ ಹಿಂದಿನ ಪಂದ್ಯ ಕಳೆದುಕೊಂಡಿದ್ದರು. ಡೆಲ್ಲಿ ವಿರುದ್ಧ ಅವರು ಲಭ್ಯರಾಗಲಿದ್ದಾರೆ ಎಂದು ಹಂಗಾಮಿ ನಾಯಕ ರಶೀದ್ ಖಾನ್ ತಿಳಿಸಿದ್ದಾರೆ.

ಎರಡೂ ಪಂದ್ಯಗಳನ್ನು ಸೋತಿರುವ ಟೈಟನ್ಸ್ ತಂಡ ಬೌಲಿಂಗ್‌ನಲ್ಲೂ ಹೆಚ್ಚು ವೃತ್ತಿಪರತೆ ತೋರಿಸಬೇಕಾಗಿದೆ. ಮೊಹಮ್ಮದ್ ಸಿರಾಜ್ ಮತ್ತು ಕಗಿಸೊ ರಬಾಡ ಕೊಂಚ ದುಬಾರಿಯಾಗಿದ್ದರು. ಪ್ರಸಿದ್ಧಕೃಷ್ಣ ಸ್ಥಿರ ಪ್ರದರ್ಶನ ನೀಡಬೇಕಾಗಿದೆ.

ರಶೀದ್ ಖಾನ್ ಲಯ ಕಂಡುಕೊಂಡಿರುವುದು ಸಮಾಧಾನಕರ ಅಂಶ. ಆದರೆ ವರ್ಚಸ್ಸು ಮೂಡಿಸಿದವರು 23 ವರ್ಷ ವಯಸ್ಸಿನ ವೇಗಿ ಅಶೋಕ್ ಶರ್ಮಾ.

ಗುಜರಾತ್ ಟೈಟನ್ಸ್ ತಂಡದ ನಾಯಕ ಶುಭಮನ್ ಗಿಲ್ ಹಾಗೂ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಕೆ.ಎಲ್. ರಾಹುಲ್

ಸಮೀರ್ ರಿಜ್ವಿ

ಇಂದಿನ ಪಂದ್ಯ

ಡೆಲ್ಲಿ ಕ್ಯಾಪಿಟಲ್ಸ್ V/s ಗುಜರಾತ್ ಜೈಂಟ್ಸ್
ತಾಣ: ದೆಹಲಿ, ಆರಂಭ: ರಾತ್ರಿ 7.30
ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಬಲಾಬಲ	
ಒಟ್ಟು ಪಂದ್ಯ	7
ಗುಜರಾತ್ ಜಯ	4
ಡೆಲ್ಲಿ ಗೆಲುವು	3

ಧ್ರುವ್–ತನಿಶಾ ಜೋಡಿ ಮುನ್ನಡೆ

ನಿಂಗ್ಬೊ (ಚೀನಾ), (ಪಿಟಿಐ): ಭಾರತದ ಅನುಭವಿಗಳಾದ ಧ್ರುವ್ ಕಪಿಲ– ತನಿಶಾ ಕ್ರಾಸ್ಟೊ ಜೋಡಿ ಮೂರು ಗೇಮ್‌ಗಳ ಹಣಾಹಣಿಯಲ್ಲಿ ಥಾಯ್ಲೆಂಡ್‌ನ ಜೋಡಿಯನ್ನು ಸೋಲಿಸಿ ಬ್ಯಾಡ್ಮಿಂಟನ್ ಏಷ್ಯಾ ಚಾಂಪಿಯನ್‌ಷಿಪ್‌ನ ಮಿಶ್ರ ಡಬಲ್ಸ್ ಪ್ರಿಕ್ವಾರ್ಟರ್‌ಫೈನಲ್‌ಗೆ ತಲುಪಿತು. ಆದರೆ ಭಾರತದ ಇನ್ನೆರಡು ಜೋಡಿಗಳು ಮೊದಲ ಸುತ್ತಿನಲ್ಲೇ ಹೊರಬಿದ್ದವು.

ನಿಂಗ್ಬೊ ಒಲಿಂಪಿಕ್ ಸೆಂಟರ್‌ನಲ್ಲಿ ನಡೆದ 32ರ ಸುತ್ತಿನ ಪಂದ್ಯದಲ್ಲ ಧ್ರುವ್ ಕಪಿಲಾ– ತನಿಶಾ ಕ್ರಾಸ್ಟೊ ಜೋಡಿ 21–14, 11–21, 21–15 ರಿಂದ ಥಾಯ್ಲೆಂಡ್‌ನ ಪಿ.ಹೊರ್ಬಿನ್‌ಲ್ಯುಕಿಟ್– ಬೆನ್ಯಪಾ ಏಮ್‌ಸಾರ್ಡ್ ಜೋಡಿಯನ್ನು ಸೋಲಿಸಿತು.

ಆದರೆ ರೋಹನ್ ಕಪೂರ್ ಮತ್ತು ಋತ್ವಿಕಾ ಶಿವಾನಿ ಗದ್ದೆ ಜೋಡಿ 13–21, 19–21 ರಲ್ಲಿ ಎಂಟನೇ ಶ್ರೇಯಾಂಕದ ಗೊ ಸೂನ್ ಹುವಾತ್ –ಲೈ ಶೆವೊನ್ ಜೇಮಿ ಅವರಿಗೆ ಮಣಿಯಿತು. ಮಲೇಷ್ಯಾದ ಜೋಡಿ 34 ನಿಮಿಷಗಳಲ್ಲಿ ಜಯಗಳಿಸಿತು.

ಭಾರತದ ಜೋಡಿ ಮೊದಲ ಗೇಮ್‌ನಲ್ಲಿ ಲಯ ಕಂಡುಕೊಳ್ಳಲು ಪರದಾಡಿತು. ಎರಡನೇ ಗೇಮ್‌ನಲ್ಲಿ ಸ್ವಲ್ಪ ಪ್ರತಿರೋಧ ತೋರಿದರೂ, ಅನುಭವಿ ಮಲೇಷ್ಯಾದ ಜೋಡಿ ಅಂತಿಮವಾಗಿ ಮೇಲುಗೈ ಸಾಧಿಸಿ ಜಯಗಳಿಸಿತು.

ಇನ್ನೊಂದು ಪಂದ್ಯದಲ್ಲಿ ಅಶಿತ್ ಸೂರ್ಯ– ಅಮೃತಾ ಪ್ರಮುಥೇಶ್ ಜೋಡಿ 16–21, 15–21ರಲ್ಲಿ ಮಲೇಷ್ಯಾದ ವಾಂಗ್ ತಿಯೆನ್ ಸಿ–ಲಿಮ್ ಚಿಯೆ ಸಿಯೆನ್ ಅವರಿಗೆ 31 ನಿಮಿಷಗಳಲ್ಲಿ ಮಣಿಯಿತು. ಬುಧವಾರ ಸಿಂಗಲ್ಸ್ ಪಂದ್ಯಗಳು ಆರಂಭವಾಗಲಿದ್ದು, ಭಾರತದ ಅಗ್ರ ತಾರೆಗಳು ಅಭಿಯಾನ ಆರಂಭ ಮಾಡಲಿದ್ದಾರೆ.

ವಾಂಖೆಡೆ ಸ್ಟ್ಯಾಂಡ್‌ಗೆ ರವಿಶಾಸ್ತ್ರಿ ಹೆಸರು



ಮುಂಬೈ (ಪಿಟಿಐ): ಮುಂಬೈ ಕ್ರಿಕೆಟ್ ಸಂಸ್ಥೆಯು ವಾಂಖೆಡೆ ಕ್ರೀಡಾಂಗಣದ ಸ್ಟ್ಯಾಂಡ್‌ವೊಂದಕ್ಕೆ ಭಾರತದ ತಂಡದ ಮಾಜಿ ತಾರೆ ರವಿಶಾಸ್ತ್ರಿ ಅವರ ಹೆಸರನ್ನು ಗುರುವಾರ ಇಡಲಿದೆ. ಇದೇ ವೇಳೆ ವಿವಿಧ ಗೇಟ್‌ಗಳಿಗೆ ದಿಲೀಪ್ ಸರ್ದೇಸಾಯಿ, ಏಕನಾಥ ಸೋಳ್ಕರ್ ಮತ್ತು ಡಯಾನಾ ಎಡುಲ್ಜಿ ಅವರ ಹೆಸರನ್ನಿಟ್ಟು ಗೌರವಿಸಲು ನಿರ್ಧರಿಸಿದೆ.

ದೀರ್ಘಾವಧಿ ಭೋಗ್ಯಕ್ಕೆ ಜಮೀನು ಬೇಕಾಗಿದೆ
ಒಂದು ಪ್ರತಿಷ್ಠಿತ ಲಾಜಿಸ್ಟಿಕ್ಸ್ ಕಂಪನಿಗೆ ಚಿಕ್ಕಬಳ್ಳಾಪುರ– ದೇವನಹಳ್ಳಿ ಹೆದ್ದಾರಿ ಬದಿಯಲ್ಲಿ ಅಥವಾ 40 ಅಡಿ ರಸ್ತೆ ಪಕ್ಕದಲ್ಲಿ, ಸಮತಟ್ಟಾಗಿರುವ (ಚೌಕ / ಆಯತ ಆಕಾರದಲ್ಲಿನ ಸ್ಪಷ್ಟ ಹಕ್ಕು ಪತ್ರ ಹೊಂದಿರುವ, ಸಮರ್ಪಕ ವಿದ್ಯುತ್ ಹಾಗೂ ನೀರಿನ ಸಂಪರ್ಕ ಹೊಂದಿರುವ, 2 ಎಕರೆ ಕೃಷಿಯೇತರ ಜಮೀನು 10 ವರ್ಷಕ್ಕೆ ಭೋಗ್ಯಕ್ಕೆ ಬೇಕಾಗಿದೆ.
ಆಸಕ್ತಿಯುಳ್ಳ ಜಮೀನು ಮಾಲೀಕರು ದಯವಿಟ್ಟು ಸಂಪರ್ಕಿಸಿ:
63049 01302